email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

BETHANY INSTITUTIONS
Require suitably qualified, trained and experienced candidates for the Academic Year 2022-23 for the following posts:

JUNIOR COLLEGE 6th Block, Koramangala [Std. XI & XII]
- English Teacher
- Accounts Teacher

HIGH SCHOOL 6th Block, Koramangala [Std. VIII, IX & X]
- History & Civics Teacher
- Chemistry & Biology Teacher

MIDDLE SCHOOL 6th Block, Koramangala [Std. VI & VII]
- Kannada Teacher

PRIMARY 6th Block, Koramangala [Std. II to V]
- Dance Teacher
- English Teacher

PRE PRIMARY 6th Block, Koramangala [Pre Nursery to Std. I]
Qualified Teachers / Assistant Teachers for ages 3 to 6

LEAP & LEARNING LAB 6th Block, Koramangala
- Special Educators

JUNIOR SCHOOL HSR Layout [Pre Nursery to Std. III]
Class Teachers for Std. II & III

SPECIAL SCHOOL S.T.Bed, Koramangala
- Special Educator

BETHANY HIGH SCHOOL Kommasandra, Sarjapur Road, Bangalore [Pre Nursery to Std. X]
- Class Teacher for Std. IV
- English Teacher for Middle School
- Chemistry Teacher for Middle School
- Mathematics Teacher for High School
- History & Civics Teacher for High School
- Physical Education Teacher
- Student Counselor
- Librarian

Interested candidates may apply through the link given below: https://forms.gle/KErAueAWxvETzbhN7 within 7 days from the date of this release OR Post hard copies of the resume to:
The Principal
BETHANY HIGH SCHOOL
CA -12, 20th Main, 6th Block, Koramangala, Bangalore - 560 095.

ST SOPHIA Convent School (CBSE) Nagarabhavi requires trained experienced Female Academic Coordinators and Teachers for the academic year 2022-23 to subjects Mathematics, Science, Social Science, English, Kannada and Hindi for primary and High school. Walk-in interview scheduled on Saturday 5th February 2022 principal@stsophiaconvent.org Contact: 9243031872

FRESH ENGINEERING Graduates to work for CBSE School. Good salary. Walk-in with originals. 9449835744, 9535601743.

GOLDEN PALM ARMY PRE PRIMARY SCHOOL
Dickenson Road Bangalore - 560 042 Contact No. 91792 96886
JOB OPPORTUNITIES TEACHING ADHOC

Sl.	Post	Qualification Required	Experience
1	Principal	Graduate/Post Graduate with B.Ed./ NTT	Min-3 yrs
2	Teacher	Graduate/Post Graduate with B.Ed./ NTT	Min-2 yrs
3	Accountant	B.Com with knowledge of accounts	Min-2 yrs
4	Ayah	5th Class	
5	Gardener	5th Class	

Eligibility: (a) Computer Literacy is mandatory for all the posts. (b) Selection Process - through interview only for short listed candidates. c.) No TA/DA admissible for interview (d) Salary is as per AWES norms. (e) No Application will be accepted via email. Submit filled in applied for ("APPLICATION FOR THE POST") along with all documents by Courier / Registered post only addressed to the HQK&K Sub Area GS(EDN) Cubbon Road Bangalore - 560 001 on or before 16th February 2022. For any clarification Contact No. 91792 96886

HOLY ANGEL'S High School #2, 5th Main,4th Cross, R.P.C Layout, Vijayanagar, Bengaluru-560104. Phone:23404465, 23405556, 23202042. E-mail: holyangels.highschoolrpclayout@gmail.com Requires Experienced Teachers to handle Hindi, English, Kannada,Social-Science, Computer-Science& Mathematics for Primary, Higher Primary & High School for Academic year 2022-2023 STATE & ICSE. Qualification: B.A/B.Sc.,M.A/M.Sc., B.ED/M.Ed and BCA/MCA. Only English medium candidates need apply.

Advertising Agency

WANTED OFFICE Boys (Field Work), DTP Operator, for advt. agency near Hanumathnagar- 41618530, 9243402739

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Engg/ Production Technical

45 YEAR OLD BANGALORE ENGINEERING SALES-COMPANY, Fraser Town are dealing with multiple imported products like Fuel. Oil Transfer and Adblue Pumps, Dispensers and Meters. Propellor Shafts, Railway Brake Cables, Slewing Rings and Spare Parts needs TECHNICAL SALES OFFICER, 40 to 45 years. To be technically and commercially experienced with ability to meet Senior OEM officials and Dealers, make presentations, close business, generate new business, prepare targets. Should know Word, Excel, Power Point. Report to Sales Manager. Job involves Traveling across India. Salary Rs.19,000 to 25,000 plus 2-Wheeler allowance. Apply with details to- officestaffblr@gmail.com

LEADING-ELECTRICAL Consultancy Firm From Bangalore North at Jakkur Requires, Experienced DEEE/ BE Electrical Design Engineers with AutoCAD, Receptionist Cum Accountant for their Office with 2 wheeler. Contact: 9845164910, Email: info@secaconsultants.co.in

REQUIRED: CIVIL SITE ENGINEER, STRUCTURAL ENGINEER, ACCOUNTS ASSISTANT. Minimum 4+ Years Experience. Email Resume: turnkeyce.jobs@gmail.com Phone: 080- 26600669.

DIPLOMA IN MECHANICAL, Experience: not above 3 to 5 years.'VINUMAC', 205A, Peenya 3rd phase, Bangalore-58. Contact: 080-28391959.28394512 admin@vinumac.com

Graphic Designers

GRAPHIC DESIGNER with 2 years Experience with knowledge of Coreldraw, Photoshop. Vasan Publications, Cottonpet, 9448889270/ vasanpublications@gmail.com

WANTED DTP Operator/ Graphic Designer Corel Draw Illustrator & Photoshop for a Pvt Limited Company in around Rajajinagar Contact: 23307910/ 9108458798

General

CMG CORPORATE Management Group, Urgently Required Boys/ Girls, 10th, 2nd PUC (Pass or Fail) Any Degree (Room/ Food Available) Contact: 7338404970/ 9916331164

OPPORTUNITY FOR Retired Officials, Bankers, NRI, Teachers, Professionals, Homemakers, CAs. Earn salary + Incentives. 8095301555

LOOKING FOR 10 years + experienced English or Hindi speaking Goldsmiths for Baby ear piercing in Bengaluru. Contact mysunar 9920074091

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

IDLTEK VOICE DATA VIDEO
Pioneers in Telecom | Surveillance | Audio/ Video | Access Control | FTTH of all MNC Brands requires
1) Service Engineer
2) Marketing Executives
3) Tele Marketing (F)
4) Technicians
2 Wheeler must for 1 & 2. Minimum 1 - 2 years of Work exp. for all above posts.
kamath@idltek.com
Ph : +91 98450 49796

WALK IN interview (1)HR admin Qualification any degree Experience 10-15years Salary 25000/-. (2)Marketing Executives For Petroleum Products Qualification any degree Experience 5-10years Salary 30000/-. (3)Apartment Maintenance Supervisor Qualification diploma-in civil Experience 5-10years Salary 25000/- Call:7338084555 9880727889 080-25207889 glprojects7889@gmail.com

Hospital & Medical Jobs

WANTED PAEDIATRICIAN, GYNAECOLOGIST, PHYSICIAN, DERMATOLOGIST with MBBS MD, NEUROLOGIST, GASTROENTROLOGIST with MBBS MD DM. Apply immediately to Medical Superintendent, C.S.I. Hospital, #2, H.K.P. Road, Bangalore-560051. Ph.No. 22861103/ 04. Email: msofficeben@mail.com

Multiple Vacancy

REQUIRED 1) Front office executive 2) Accountant 3) Sales executive with suitable degree, 3- 5 yrs exp, good communication skills for an Office in HSR Layout, Bangalore. Age: within 35 yrs. Salary as per experience and market standards. Send CV to jobsrequirement2022@gmail.com, Contact -9945148485

LOOKING FOR Business Development Manager & Presales cumTech support Manager for IT & Mobility firm. Location Bangalore Call: 9880291601/ 08026728048 email: sales@anaghaindia.in

Part-Time Jobs

REPUTED MNC Company Will Provide Work From Home, Earn 30 to 35K Malleswaram 7019215243/ 9886641282

Wanted

WANTED STAFF for a dry cleaning showroom in Jayanagar. Age 18 years to 40 years only. People residing in and around Jayanagar, Bangalore can only apply. Salary: 10,000 to 13,000. Call- 9880266007

SPOKEN ENGLISH Trainers required for a training institute in BTM layout, Marathahalli and Electronic city. Trainers with experience in spoken English training may only contact 8050666007

Marketing & Sales

LEADING GENERAL Insurance Company Wanted SALES OFFICER, Age from 18 to 35. Attractive Salary with Incentives. Contact: Suresh- 9886812224.

TOYOTA
Job Openings for Sales Officers @ RAVINDU TOYOTA
Bangalore, Tumkur, Kolar
KARNATAKA'S leading authorised TOYOTA DEALER
We provide excellent growth opportunities with best in industry remuneration
Minimum 1 year Automobile (2 wheeler/ 4 wheeler) experience must
Assured ₹30,000 on achieving minimum targets
Candidates must have desire to excel and be result oriented
Freshers may also apply
Interested Candidates can send your resume to
OR 63648 65153, 99000 76155
career@ravindu.co.in

RENTAL PROPERTIES

Accommodation Available

Commercial

COMMERCIAL SPACE YOU OCCUPY - WE PAY
The Best Deal For Educational Institutions Only
Tie up / Revenue Share / Collaboration
Address : # 10, 1st Block, Near BDA Complex, Opp. Unity Lifeline Hospital, Nagarabhavi 2nd Stage, Bengaluru - 560 072.
Mob. : 6362427344 / 9972445157 / 8660702065

FOR RENT Office Space 1300 sft Fully Furnished behind Shivaji Nagar Bus Stand, Park Road. Contact: 9632121146/ 9980525250

NEWLY BUILT commercial independent building 12300 Sqft , G plus 3 with basement on 19th main HSR Sec 1 Please 8217427621

REAL ESTATE BUYING

Commerical

General

WANTED INDEPENDENT house in upcoming areas in Bangalore preferably on Main Road or corner plot. Immediate settlement Contact 9741900909

REAL ESTATE SELLING

Flat

Jayanagar

2013 BUILT, 3 BHK, 1800 sqft, semi furnished, duplex flat, B Khatha, Jayanagar 8th block, Bengaluru, Rs. 1.50 crores. Call: +919901429794

House

Anjanapura

600 SFT, East facing BDA Property is for Sale at Anjanapura. Brokers Excuse. Contact on 6362961311/ 9901050888.

BTM Layout

BTM 2ND Stage North Facing Semi Commercial 60x90 (old house) Clear Titles Contact Reddy: 9880226644.

EXCELLENT COMMERCIAL 50x80 North (old house) dollars Layout Near vega City Mall Suraj Estates: 9845232711.

Magadi Road

3,200 SFT, West Facing Residential Property is for Sale at Magadi Road Housing Board. Contact- 6362961311/ 9901050888

Vijayanagar

2,655 SQ.FT, West Facing Property is for Sale at Industries & Commerce Layout, Vijayanagar. Contact 7829388595/ 9901050888

Industrial & Factory

Mysore

FOR SALE
14.20 ACRES INDUSTRIAL LAND
Mysore - Ooty Highway
Near Nanjangud
Contact : 99805 57991

BUSINESS

Business to Business

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

Business Offers

Finance

NRI'S INVESTMENTS And Finance Available On Low Interest Against Properties, Land& Buildings, Finance Sites, Flats, Converted and Agriculture Lands. Also Introducing Luxury Cars Finance @ Very Low Interest Call: 7411265189

WANTED INVESTER We Are Manufacturer, Pure Silk Sarees, Invester Get Good Profit in-our Business, 7899356649

MAHAVEER FINANCE Loan Avail @ 3.5% per Annum Personal, Business, Housing Project takeover all types loan in 5 days. Call & whatsApp ::8826494700.

FINANCE AGAINST Land & Building Properties Industries Schools Hospitals Projects &NRIFunds 7358729820

EDUCATIONAL

Admission

BECOME A GRADUATE, Upgrade to MBA. Direct/ Private SSLC, PUC. NTT, AMIIE, DMIIE etc. 9341273990.

OTHERS

For Sale

FRIDGE, SOFA, Cott, Bed, Teapoy For Sale in J.P.Nagar 2nd Phase, Bangalore. Kindly Contact 9341273990.

PERSONAL

Change of Name

I, SERVICE No. JC310832N. Sub. MAJ. MYLARALINGA .NL S/o Late N.M. Lingappa, aged 50 years R/a. H.No. B-13-182 Parandhama Alur, BDA Flats, Alur Village and Post, Dasanapura Hobli, Bengaluru- 560123. Have changed my daughter's name from PRAKRUTHI to S.M. PRAKRUTHI vide affidavit dated 06.12.2021 XVII Additional Chief Metropolitan Magistrate, Bengaluru City.

I, MOHAMED ZAHID residing at No.448/207/52/2C, Yarab Nagar, 2nd Block, P.S.V Nagar, Ramanagaram-562159, Karnataka have changed my name to MOHAMMED ZAHID vide affidavit dated 28/01/2022 sworn before notary B.Chitra, Bangalore

I, NO 14487543K Ex Naik Basavaraj Yakkundi, Residing at No. 351, BEML Nagar, KGF, Distt- Kolar, Karnataka, In my Army Service Record Change the Following My Wife name Survarna changed to SUVARNA .B. YAKKUNDI and My Wife Date of birth 26/01/1969 Changed to 26.01.1973 and My Marriage date 25/05/1989 changed to 25.05.1993, vide affidavit dated 28/01/2022 sworn before Notary V.B. Prasad, Bangarpet

I, SERVICE No. JC310832N. Sub. MAJ. MYLARALINGA .NL S/o Late N.M. Lingappa, aged 50 years R/a. H.No. B-13-182 Parandhama Alur, BDA Flats, Alur Village and Post, Dasanapura Hobli, Bengaluru- 560123 Have changed my Wife's name from SHIVAKUMARI to SHIVAKUMARI .T. and Date of Birth is From 18.01.1975 to 08.01.1966 vide affidavit dated 07.12.2021 Addl City Civil and Sessions Judge, City Civil Court, Bengaluru.

I, SUNINA KAPOOR D/o. (Late) Shri Rama Kant Paliwal, W/o. Ishan Kapoor, R/O #105/3, GTOC, Cambridge RD Gowthamapuram, Jogupalya, Bengaluru- 560007. After Marriage Have Changed My Name From SUNINA PALIWAL to SUNINA KAPOOR vide Affidavit Dated: 01.02.2022 Before Notary S. Ramesh, Bengaluru.

I, RAJENDRA Mohan aged about 65 Years S/o Late Rathan Lal, Residing at No. A201, Vaishnavi Terrace Apartment, 4th Stage, Dollars Colony, J.P.Nagar, Bangalore 560078. Have Changed my name from Rajendra Mohan to RAJENDRA MOHAN PACHISIA vide affidavit dated 31.01.2022 before Notary L. Shankaranarayan, Bangalore.

WE, SHAILESH Devrajbhai Gajera & Chandrika Shailesh Gajera, Residing at No 33, 38, 2nd Main, Munireddy Layout, Horamavu Main Road, Bangalore 560043. have changed our Minor Son's Name From KRISHANG TO KRISHANG GAJERA vide affidavit dated 01.02.2022 before notary Uday Kumar K, Bengaluru.

I, JASMINE Mary Peter D/o. Peter George, aged 37 years, #796, 12th Cross, MCECHS Layout, Shivarama Karanth Nagar, Hegde Nagar, Bangalore-77, have changed my name from Nivedita Shetty to Jasmine Mary Peter vide Affidavit dated 01-02-2022 sworn before Notary Manohar Jeerige, Bangalore.

PAGEE KULDEEP BHAI KASU BHAI, Brother/o, 6504029N, SEP/ MT, PAGEE JAYDEEPBHAI KASUBHAI, Vill- Navagam, Bordi, Dahod, Gujarat have changed name from PAGEE KULDEEP BHAI KASU BHAI to PAGI KULDEEPBHAI KASUBHAI , 17/09/2021, Notary K.V. Mani, Bangalore

I, SIDDNAGOUWDA s/o Basanagouwda aged 37 No. 20 Thimmapur, Budugumpa, Budugumpa, Koppal 583229 have changed my name to Siddana Gowda S/o Basavana Gowda vide affidavit dated 01/02/2022 before notary MS. Shree

PUBLIC NOTICE

ELCITA
ELECTRONICS CITY INDUSTRIAL TOWNSHIP AUTHORITY (ELCITA), BANGALORE

Tender Number	ELCITA/UDD/ 2021-22/Electro mechanical 2201
Tender published website	eProcurement (karnataka.gov.in)
Browser	Internet Explorer
Tender Title	Tender Title Design, Supply, Erection, commissioning of Electromechanical works for 16 TPD/Shift capacity Material Recovery Facility (MRF) facility including Trial Runs for 3 Months and E&M Operation support for 9 Months at Electronic City Industrial Township Authority
Contact Email	Sust.mgr@elcita.in
Contact No	9972463299
Online Prebid meeting	09/02/2022 11:00:00
For meeting Link	Write to sust.mgr@ELCITA.IN
Last Date & Time for Tender Queries/ Clarifications	21/02/2022 17:00:00
Last Date & Time for receipt of tenders	28/02/2022 17:00:00

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ 'ಅಖಿಲ ಭಾರತ ವಿದ್ಯಾರ್ಥಿ ಪರಿಷತ್' (ಎಬಿವಿಪಿ) ಸದಸ್ಯರು ಬೆಂಗಳೂರು ವಿಶ್ವವಿದ್ಯಾಲಯದ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ/ ರಂಜು ಪಿ

ವಿಶ್ವವಿದ್ಯಾಲಯದಲ್ಲಿ ಮುಂದುವರಿದ ಚಕಮಕಿ

‘ಎಬಿವಿಪಿ’ ವಿರುದ್ಧ ‘ಒಕ್ಕೂಟ’ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಕೆಂಗೇರಿ: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಎರಡು ಗುಂಪುಗಳ ನಡುವಿನ ಚಕಮಕಿ ತಪ್ಪಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ ಬೆನ್ನಲ್ಲೇ, ಮಂಗಳವಾರವೂ ಎರಡು ಗುಂಪಿನವರು ಪ್ರತ್ಯೇಕ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನಡೆಸುವ ವಿಚಾರವಾಗಿ ಸೋಮವಾರ ಚಕಮಕಿ ನಡೆದಿತ್ತು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಮಾಡಿದ್ದರು. ಕೆಲ ವಿದ್ಯಾರ್ಥಿಗಳು ಗಾಯಗೊಂಡಿದ್ದರು. ಹೀಗಾಗಿ, ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ಬಿಗಿ ಭದ್ರತೆ ಕೈಗೊಂಡಿದ್ದರು.

‘ಕೋರ್ಸ್‌ಗಳ ಫಲಿತಾಂಶ ಪ್ರಕಟಿಸಬೇಕು. ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಬೇಕು’ ಎಂದು ಒತ್ತಾಯಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಎಬಿವಿಪಿ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದ ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು, ‘ವಿಶ್ವವಿದ್ಯಾಲಯದೊಳಗೆ ಅಕ್ರಮವಾಗಿ ಪ್ರವೇಶಿಸಿ ನಮ್ಮ ಹೋರಾಟ ಹತ್ತಿಕ್ಕಲು ಯತ್ನಿಸಿದ ಎಬಿವಿಪಿ ಕಾರ್ಯಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ಸ್ನಾತಕೋತ್ತರ ಹಾಗೂ ಸಂಶೋಧನಾ ವಿದ್ಯಾರ್ಥಿಗಳ ಒಕ್ಕೂಟದ ಸದಸ್ಯರು, ವಿಶ್ವವಿದ್ಯಾಲಯದ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು

'ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನು ಬಲವಂತವಾಗಿ ತೆರವುಗೊಳಿಸಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ 3 ಮೂರು ದಿನದಿಂದ ಪ್ರತಿಭಟನೆ ನಡೆಸಲಾಗುತ್ತಿತ್ತು. ಇದೇ ಸಂದರ್ಭದಲ್ಲೇ ಎಬಿವಿಪಿ ಕಾರ್ಯಕರ್ತರು, ಅನುಮತಿ ಇಲ್ಲದೇ ವಿಶ್ವವಿದ್ಯಾಲಯ ಆವರಣಕ್ಕೆ ನುಗ್ಗಿದ್ದರು. ಇದು ಕಾನೂನು ಬಾಹಿರ. ಇದರ ವಿರುದ್ಧ ಕುಲಪತಿಯವರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಬೇಕು’ ಎಂದೂ ಒತ್ತಾಯಿಸಿದರು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಎರಡೂ ಗುಂಪಿನ ನಡುವೆ ವೈಮನಸ್ಸು ಉಂಟಾಗಿದ್ದು, ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದಾರೆ. ವಿಶ್ವವಿದ್ಯಾಲಯದ ಆವರಣದಲ್ಲಿ ಪೊಲೀಸರ ಗಸ್ತು ಹೆಚ್ಚಿಸಲಾಗಿದ್ದು, ಹೆಚ್ಚುವರಿ ಸಿಬ್ಬಂದಿಯನ್ನೂ ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

24 ಗಂಟೆಗಳ ಅವಧಿಯಲ್ಲಿ 14,366 ಮಂದಿಗೆ ಸೋಂಕು

ರಾಜ್ಯದಲ್ಲಿ ಕೋವಿಡ್ ಪ್ರಕರಣ ಗಣನೀಯ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯ ಇಳಿಕೆಯಾಗಿದೆ. 24 ಗಂಟೆಗಳಲ್ಲಿ 14,366 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಈ ಸಂಖ್ಯೆ ಕಳೆದ ತಿಂಗಳು 50 ಸಾವಿರದ ಗಡಿ ದಾಟಿತ್ತು. ವಾರದಿಂದ ಹೊಸ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದೆ. 2.25 ಲಕ್ಷಕ್ಕೆ ಏರಿದ್ದ ಪರೀಕ್ಷೆಗಳ ಸಂಖ್ಯೆಯೂ ಇಳಿಕೆಯಾಗಿದೆ. ಒಂದು ದಿನದಲ್ಲಿ 1.06 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 13.45ರಷ್ಟಿದೆ. ಒಟ್ಟು ಪ್ರಕರಣಗಳ ಸಂಖ್ಯೆ 38.23 ಲಕ್ಷಕ್ಕೆ ಏರಿಕೆಯಾಗಿದೆ.

21 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮೂರು ಅಂಕಿ, ಏಳು ಜಿಲ್ಲೆಗಳಲ್ಲಿ ಎರಡು ಅಂಕಿಯಲ್ಲಿ ಇದೆ. ಬೆಂಗಳೂರಿನಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿದಿದ್ದು, 6,685 ಮಂದಿ ಸೋಂಕಿತರಾಗಿದ್ದಾರೆ. ಬೆಳಗಾವಿಯಲ್ಲಿ 1,081, ಮೈಸೂರಿನಲ್ಲಿ 777, ಧಾರವಾಡದಲ್ಲಿ 633, ತುಮಕೂರಿನಲ್ಲಿ 573 ಹಾಗೂ ಉತ್ತರ ಕನ್ನಡದಲ್ಲಿ 551 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 500ಕ್ಕಿಂತ ಕಡಿಮೆ ಇವೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 35,589 ಮಂದಿ ಸೇರಿದಂತೆ ರಾಜ್ಯದಲ್ಲಿ 60,914 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 35.87 ಲಕ್ಷಕ್ಕೆ ತಲುಪಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 1.97 ಲಕ್ಷಕ್ಕೆ ಇಳಿದಿದೆ. ಬೆಂಗಳೂರಿನಲ್ಲಿ 1.05 ಲಕ್ಷ ಸಕ್ರಿಯ ಪ್ರಕರಣಗಳಿವೆ.

ಸೋಂಕಿತರಲ್ಲಿ 58 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ ಒಂಬತ್ತು ಮಂದಿ, ಮೈಸೂರು, ದಕ್ಷಿಣ ಕನ್ನಡದಲ್ಲಿ ತಲಾ ಏಳು, ಮಂಡ್ಯದಲ್ಲಿ ಐವರು, ಉಡುಪಿಯಲ್ಲಿ ನಾಲ್ವರು, ಶಿವಮೊಗ್ಗದಲ್ಲಿ ಮೂವರು, ಬಾಗಲಕೋಟೆ, ದಾವಣಗೆರೆ, ಹಾಸನ, ಕಲಬುರಗಿ, ಕೋಲಾರ, ರಾಯಚೂರು ಹಾಗೂ ರಾಮನಗರದಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣದರ ಶೇ 0.40ಕ್ಕೆ ಏರಿದೆ. ಮೃತರ ಒಟ್ಟು ಸಂಖ್ಯೆ 39,056ಕ್ಕೆ ತಲುಪಿದೆ.

ವೈಕುಂಠ ಸಮಾರಾಧನೆ
03.02.2022 ರಂದು, 11ನೇ ದಿನದ ಉತ್ತರ ಕ್ರಿಯಾಧಿ

ಶ್ರೀ. ಕೆ.ವಿ.ರೆಡ್ಡಿ
(12.05.1939 – 24.01.2022)

ಇವರು ತಮ್ಮ ಕುಟುಂಬಕ್ಕೆ, ಸ್ನೇಹಿತರಿಗೆ ಮತ್ತು ಸಮುದಾಯಕ್ಕೆ ತಮ್ಮದೇ ಆದ ವಿಶಿಷ್ಟ ಕಾಳಜಿ, ಅದಮ್ಯ ಪ್ರೀತಿ ಮತ್ತು ಎಂದೂ ಮರೆಯದ ಕೊಡುಗೆಗಳನ್ನು ನೀಡುವ ಮೂಲಕ ಅಸಂಖ್ಯಾತ ಹೃದಯಗಳಿಗೆ ಅತ್ಯಂತ ಆಪ್ತರಾಗಿದ್ದರು.

ಕರ್ನಾಟಕ ರಾಜ್ಯ ಕೊ–ಆಪರೇಟಿವ್ ಅಪೆಕ್ಸ್ ಬ್ಯಾಂಕ್‌ನ ನಿವೃತ್ತ ಮುಖ್ಯ ಮಹಾ ಪ್ರಬಂಧಕರು ಮತ್ತು ಶ್ರೀ ವೇಮನ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿಮಿಟೆಡ್‌ನ ಸಂಸ್ಥಾಪಕ ಅಧ್ಯಕ್ಷರು ಆಗಿದ್ದ ಇವರು, ಎರಡೂ ಸಂಸ್ಥೆಗಳನ್ನು ಸಮರ್ಥವಾಗಿ ಮುನ್ನಡೆಸುತ್ತ, ಪ್ರಜ್ಞಾವಂತ ಆಡಳಿತಗಾರಿಕೆಯನ್ನು ಮೆರೆದಿದ್ದರು.

ನ್ಯಾಯ ಮತ್ತು ನೀತಿಗಾಗಿ ಅವಿಶ್ರಾಂತವಾಗಿ ಶ್ರಮಿಸಿದ್ದರು, ಶ್ರೀ ವೇಮನ ಮೆಡಿಕಲ್ ಟ್ರಸ್ಟ್‌ನ ನಿರ್ವಾಹಕ ಟ್ರಸ್ಟೀ ಆಗಿಯೂ ಮತ್ತು ಪ್ರಾಥಮಿಕ ಶಿಕ್ಷಣದಿಂದ ಕಾಲೇಜು ಶಿಕ್ಷಣದವರೆಗೆ ಸಾವಿರಾರು ವಿದ್ಯಾರ್ಥಿಗಳಿಗೆ ಜ್ಞಾನಧಾರೆ ಎರೆದ ವಿಲ್ಸನ್ ಗಾರ್ಡನ್ ಎಜುಕೇಶನ್ ಸೊಸೈಟಿಗೆ ದಶಕಗಳ ಕಾಲ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ.

ನೆರವಿನ ಆಸರೆಗಾಗಿ ಕಾದಿರುವವರಿಗೆ ಸಹಾಯ ನೀಡಲು ಸದಾ ಒಂದು ಮಾರ್ಗ ಕಂಡುಕೊಳ್ಳುತ್ತಿದ್ದರು. ಇವರ ಅಗಲಿಕೆಯಿಂದಾಗಿ ಭರಿಸಲಾಗದ ನಷ್ಟವೊಂದು ಉಂಟಾಗಿದೆ. ಇವರ ಆತ್ಮಕ್ಕೆ ಭಗವಂತ ಚಿರಶಾಂತಿ ದಯಪಾಲಿಸಲೆಂದು ಪ್ರಾರ್ಥನೆ.

ಇಂತಿ ದುಃಖತಪ್ತರು
ಪತ್ನಿ, ಮಕ್ಕಳು, ಕುಟುಂಬ, ಬಂಧುಗಳು ಮತ್ತು ಸ್ನೇಹಿತರು.

ಬುಧವಾರ, ಫೆಬ್ರುವರಿ 2, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 33 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸೀರನ್ನು ಕುಕ್ಕುವ ಮುನ್ನ ಯೋಚಿಸಿ. ಅದು ಸತ್ತರೂ ಅದರ ಅಂಟು ನಿಮ್ಮನ್ನು ಬಿಡದು. ನಿಮ್ಮ ಕುರುಹನ್ನು, ಚರಿತ್ರೆಯನ್ನು ಸಾವಿರಾರು ವರ್ಷಗಳ ಕಾಲ ಕೂಡಿಟ್ಟುಕೊಳ್ಳಬಲ್ಲುದು.

ಕನ್ಹಯ್ಯಾ ಮೇಲೆ ಮಸಿ ದಾಳಿ 11
‘ನೀರಿನ ಪಾಲು ನಿರ್ಧಾರದ ಬಳಿಕ ನದಿ ಜೋಡಣೆಗೆ ಒಪ್ಪಿಗೆ’ 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,862 ▲	17,577 ▲	₹49,680 (ಬೆಂಗಳೂರು) ▲	₹63,500 (ಬೆಂಗಳೂರು) ▲	74.82 ▼

ನಿರೀಕ್ಷೆ ಹುಸಿಯಾಗಿಸಿದ ಕೇಂದ್ರ ಬಜೆಟ್

ಅನುದಾನ: ಯಾವ ಕ್ಷೇತ್ರಕ್ಕೆ ಎಷ್ಟು? ರಕ್ಷಣೆ: ₹5,25,166 ಕೋಟಿ • ರೈಲ್ವೆ: ₹1,40,367 ಕೋಟಿ • ಕೃಷಿ: ₹1,32,513 ಕೋಟಿ • ಶಿಕ್ಷಣ: ₹1,04,277 ಕೋಟಿ

ಕೇಂದ್ರ ಬಜೆಟ್ 2022-23

• ಸಿದ್ದಯ್ಯ ಹಿರೇಮಠ

ನವದೆಹಲಿ: ಕೋವಿಡ್ ಅಲೆಯಿಂದಾಗಿ ಸತತ 3ನೇ ವರ್ಷವೂ ಕುಸಿತದತ್ತಲೇ ಸಾಗಿರುವ ಆರ್ಥಿಕತೆಯನ್ನು ಸರಿದಾರಿಗೆ ತರುವ ಮೂಲಕ ಜನರ ಆಶೋತ್ತರಗಳಿಗೆ ಸ್ಪಂದಿಸಬಹುದು ಎಂಬ ನಿರೀಕ್ಷೆಯ 2022–23ನೇ ಸಾಲಿನ ಕೇಂದ್ರ ಬಜೆಟ್ ಸಂಪೂರ್ಣ ನಿರಾಸೆ ಮೂಡಿಸಿದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದಿಂದ, ಶತಮಾನೋತ್ಸವ ಸಂಭ್ರಮದವರೆಗಿನ 25 ವರ್ಷಗಳ ಅವಧಿಯ ಅಭಿವೃದ್ಧಿಯನ್ನು ಗುರಿಯಾಗಿಸಿ ಅರ್ಥ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಗಳವಾರ ಮಾಡಿದ ಬಜೆಟ್ ಭಾಷಣದಲ್ಲಿ ಬಣ್ಣಿಸಿದರೂ, ನಿರೀಕ್ಷೆಗಳ ಈಡೇರಿಕೆಯತ್ತ ಕಂಡುಬಂದಿಲ್ಲ.

ಉತ್ತರ ಪ್ರದೇಶ, ಉತ್ತರಾಖಂಡ ಒಳಗೊಂಡಂತೆ ಪಂಚ ರಾಜ್ಯಗಳ ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ಮಂಡನೆಯಾಗುತ್ತಿರುವ ಈ ಬಜೆಟ್ ಮೂಲಕ, ‘ಮತ ಸೆಳೆಯಬಹುದಾದ’ ಹತ್ತುಹಲವು ಜನಪ್ರಿಯ ಯೋಜನೆಗಳ ಘೋಷಣೆ ಹೊರಬೀಳಬಹುದು ಎಂಬ ಲೆಕ್ಕಾಚಾರವೂ ತಲೆಕೆಳಗಾಗಿದೆ.

ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡಿಸುವ ವೇಳೆ ದಣಿವಾರಿಸಿಕೊಳ್ಳಲು ತಂಪು ಪಾನೀಯ ಕುಡಿದರು – ಸಂಸತ್ ಟಿ.ವಿ/ಪಿಟಿಐ ಚಿತ್ರ

ವೈಯಕ್ತಿಕ ಆದಾಯ ತೆರಿಗೆ ವ್ಯವಸ್ಥೆಯಲ್ಲಿ ಈ ವರ್ಷವೂ ಯಾವುದೇ ರೀತಿಯ ಬದಲಾವಣೆ ತರದೇ ಕಳೆದ ವರ್ಷದ ವ್ಯವಸ್ಥೆಯನ್ನೇ ಮುಂದುವರಿಸಲಾಗಿದ್ದು, ಕೋವಿಡ್‌ನಿಂದಾಗಿ ಅಧಿಕ ಹಣದುಬ್ಬರ, ವೇತನ ಕಡಿತದಿಂದ ತೊಂದರೆಗೆ ಈಡಾದವರನ್ನು ಮತ್ತೆ ನಿರಾಸೆಗೆ ಈಡು ಮಾಡಿದೆ.

ಆದರೆ, ತೆರಿಗೆ ಪಾವತಿಯ ರಿಟರ್ನ್ ವ್ಯವಸ್ಥೆಗೆ ಹೊಸ ರೂಪ ನೀಡಿ, ತೆರಿಗೆ ಪಾವತಿಯಲ್ಲಿನ ಪ್ರಮಾದ ಸರಿಪಡಿಸಲು 2 ವರ್ಷಗಳವರೆಗೆ ಅವಕಾಶ ಕಲ್ಪಿಸಲಿರುವುದು ವಿಶೇಷ. ಜಾಗತಿಕವಾಗಿ ಕಚ್ಚಾ ತೈಲದ ದರದಲ್ಲಿ ಹೆಚ್ಚಳ ಕಂಡುಬರುತ್ತಿದ್ದರೂ, ತೈಲ ಬೆಲೆ ನಿಯಂತ್ರಣ ಕುರಿತು ಸರ್ಕಾರ ಚಿಂತನೆ ನಡೆಸಿಲ್ಲ.

25,000 ಕಿ.ಮೀ. ಹೆದ್ದಾರಿ ಅಭಿವೃದ್ಧಿ, 3.8 ಕೋಟಿ ಗ್ರಾಮೀಣರ ಮನೆಗೆ ನಲ್ಲಿ ನೀರಿನ ಸಂಪರ್ಕ, ವಸತಿ ಯೋಜನೆಗೆ ಹೆಚ್ಚುವರಿ ನೆರವು ಹಾಗೂ ಈಶಾನ್ಯ ರಾಜ್ಯಗಳ ಅಭಿವೃದ್ಧಿ ಒಳಗೊಂಡ ಮೂಲಸೌಲಭ್ಯ ಅಭಿವೃದ್ಧಿಗೆ ಒಟ್ಟು ₹ 7.50 ಲಕ್ಷ ಕೋಟಿ ಅನುದಾನವನ್ನು ಮೀಸಲಿರಿಸುವ ಪ್ರಸ್ತಾವ ಹೊರಬಿದ್ದಿದೆ.

ಸೌರವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ₹ 19,500 ಕೋಟಿ ಖಾಸಗಿ ಹೂಡಿಕೆಗೆ ಅವಕಾಶ ನೀಡುವ ಮೂಲಕ 2030ರೊಳಗೆ ಈ ವಲಯದ ಮೇಲಿನ ಅವಲಂಬನೆಯನ್ನು ಹೆಚ್ಚಿಸುವ ಗುರಿಯನ್ನೂ ಇರಿಸಿಕೊಳ್ಳಲಾಗಿದೆ.

7ನೇ ಪುಟ ನೋಡಿ

ಸಂಪಾದಕೀಯ 10
ಬಜೆಟ್ ವಿಶೇಷ ಪುಟಗಳು 4,5,6,7 ಮತ್ತು 7A

ತುಟ್ಟಿ
- ಆಮದು ಮಾಡಿಕೊಂಡ ಸ್ಪೀಕರ್, ಹೆಡ್‌ಫೋನ್ ಮತ್ತು ಇಯರ್‌ಫೋನ್
- ಕ್ಷಕಿರಣ ಯಂತ್ರಗಳು
- ಛತ್ರಿಗಳು
- ಅನ್‌ಬ್ಲೆಂಡೆಡ್ ಇಂಧನ
- ಕೃತಕ ಆಭರಣಗಳು

ಅಗ್ಗ
- ಚಾರ್ಜರ್‌ಗಳು, ಫೋನ್ ಕ್ಯಾಮೆರಾ ಉಪಕರಣಗಳು
- ಕೃಷಿ ಉಪಕರಣಗಳು ಮತ್ತು ಸ್ಮಾರ್ಟ್ ಮೀಟರ್
- ಸ್ಮಾರ್ಟ್ ವಾಚ್
- ಕೋಕೊ ಬೀನ್ಸ್ ಮತ್ತು ಇಂಗು
- ಸಂಸ್ಕರಿಸಿದ ಸ್ಪಿರ್ಟ್
- ಆಮದು ಮಾಡಿಕೊಳ್ಳಲಾದ ಕತ್ತರಿಸಿದ ಮತ್ತು ಪಾಲಿಶ್ ಮಾಡಲಾದ ವಜ್ರ
- ಗುಜರಿ ಉಕ್ಕು-ಕಬ್ಬಿಣ

ರಾಜ್ಯದ ಹೆಗಲಿಗೆ ಅಧಿಕ ಸಾಲದ ಹೊರೆ

• ಅಕ್ರಂ ಮೊಹಮ್ಮದ್

ಬೆಂಗಳೂರು: ಕೋವಿಡ್, ಲಾಕ್‌ಡೌನ್, ಆರ್ಥಿಕ ಹಿಂಜರಿತ ಮತ್ತು ಜಿಎಸ್‌ಟಿ ಪರಿಹಾರ ಸಿಗದ ಕಾರಣ ಇತರ ರಾಜ್ಯಗಳಿಗಿಂತ ಕರ್ನಾಟಕವೇ ಅತಿ ಹೆಚ್ಚು ಸಾಲದ ಹೊರೆಯನ್ನು ಹೊತ್ತಿದೆ.

ಕೇಂದ್ರದ ಬಜೆಟ್‌ನಲ್ಲಿ ಈ ಅಂಶ ವ್ಯಕ್ತವಾಗಿದೆ. ಲಾಕ್‌ಡೌನ್ ಮತ್ತು ಆದಾಯ ಇಲ್ಲದೇ ತತ್ತರಿಸಿದ್ದ ರಾಜ್ಯ ಸರ್ಕಾರಕ್ಕೆ ಕೇಂದ್ರ ₹30,515.91 ಕೋಟಿ ಸಾಲ ನೀಡಿದೆ. ಇದು ಜಿಎಸ್‌ಟಿ ಪರಿಹಾರದ ಶೇ 11 ರಷ್ಟು ಮೊತ್ತ. ಕರ್ನಾಟಕದ ನಂತರದ ಸ್ಥಾನದಲ್ಲಿ ಮಹಾರಾಷ್ಟ್ರವಿದೆ.

ಕೋವಿಡ್‌ನಿಂದಾಗಿ ಜಿಎಸ್‌ಟಿ ಸಂಗ್ರಹ ತೀವ್ರವಾಗಿ ಕುಸಿತವಾಗಿತ್ತು. ಇದರಿಂದಾಗಿ 2020–21 ಮತ್ತು 2021–22 ನೇ ಸಾಲಿಗೆ ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ನೀಡಲು ಸಾಧ್ಯವಾಗದ ಕಾರಣ ಸಾಲ ನೀಡಲು ಕೇಂದ್ರ ಸರ್ಕಾರ ಮುಂದಾಯಿತು. ಆರ್ಥಿಕ ಸಂಕಷ್ಟದಲ್ಲಿದ್ದ ರಾಜ್ಯಗಳು ವಿಶೇಷ ಸಾಲ ಪಡೆಯುವ ಮೂಲಕ ಹಣಕಾಸಿನ ವೆಚ್ಚ ಭರಿಸಿಕೊಳ್ಳಲು ಕೇಂದ್ರ ಸಲಹೆ ನೀಡಿತ್ತು.

ಇದರ ಪರಿಣಾಮ ರಾಜ್ಯ ಸರ್ಕಾರ ಮೂರು ಬಾರಿ ಸಾಲ ಪಡೆಯಿತು. ₹15,489.32 ಕೋಟಿ ಮೊತ್ತದ ಒಂದು ಸಾಲ, ನಂತರ ಎರಡು ಬಾರಿ ತಲಾ ₹6,203.5 ಕೋಟಿ ಮತ್ತು ಇನ್ನೊಂದು ಬಾರಿ ₹2,619.59 ಕೋಟಿ. ಹೀಗೆ 2020–21 ಮತ್ತು 2021–22 ನೇ ಸಾಲಿಗೆ ಒಟ್ಟು ₹30,151.91 ಕೋಟಿ ಸಾಲವನ್ನು ಪಡೆದಿದೆ.

3ನೇ ಪುಟ ನೋಡಿ

ಅಭಿವೃದ್ಧಿ ಕುರಿತು ಹೊಸ ವಿಶ್ವಾಸ



ಇದು ಜನಸ್ನೇಹಿ ಮತ್ತು ಪ್ರಗತಿಪರ ಬಜೆಟ್. ಬಡವರ ಕಲ್ಯಾಣ ವಿಷಯವೇ ಇದರ ಪ್ರಮುಖ ಅಂಶ. ಹೆಚ್ಚಿನ ಹೂಡಿಕೆ, ಮೂಲಸೌಕರ್ಯ ವೃದ್ಧಿ ಮತ್ತು ಉದ್ಯೋಗ ಸೃಷ್ಟಿಯ ಸಾಧ್ಯತೆಗಳನ್ನು ಇದು ಸ್ಪಷ್ಟಪಡಿಸಿದೆ. 100 ವರ್ಷಗಳಲ್ಲಿ ಕಂಡರಿಯದ ವಿಪತ್ತಿನ ನಡುವೆಯೂ (ಕೋವಿಡ್ ಪಿಡುಗು) ಈ ಬಜೆಟ್ ಅಭಿವೃದ್ಧಿ ಕುರಿತು ಹೊಸ ವಿಶ್ವಾಸವನ್ನು ಮೂಡಿಸಿದೆ. ಇದು ದೇಶದ ಆರ್ಥಿಕತೆಯನ್ನು ಬಲಪಡಿಸುವುದರ ಜತೆಗೆ ಸಾಮಾನ್ಯ ಜನರಿಗೆ ಅನೇಕ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ.

ನರೇಂದ್ರ ಮೋದಿ, ಪ್ರಧಾನಿ

ರೈತರ ಕಲ್ಯಾಣಕ್ಕೆ ಪೂರಕ

ಕೋವಿಡ್ ಕಾಲಘಟ್ಟದಿಂದ ಹೊರಬರುತ್ತಿರುವ ದೇಶದ ಆರ್ಥಿಕ ಚಕ್ರಕ್ಕೆ ಕೇಂದ್ರದ ಬಜೆಟ್ ಹೊಸ ಶಕ್ತಿಯನ್ನು ನೀಡುತ್ತದೆ ಮತ್ತು ಅದರ ಸರ್ವತೋಮುಖ ಅಭಿವೃದ್ಧಿಗೆ ಸಹಾಯ ಮಾಡುತ್ತದೆ. ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ಒತ್ತು ನೀಡಲಾಗಿದೆ. ಕೇಂದ್ರದ ಬಿಜೆಪಿ ಸರ್ಕಾರವು ಕೃಷಿ ಅಭಿವೃದ್ಧಿ, ರೈತರ ಕಲ್ಯಾಣ ಮತ್ತು ಅವರ ಆದಾಯವನ್ನು ದ್ವಿಗುಣಗೊಳಿಸಲು ಬದ್ಧವಾಗಿದೆ. ಸಾಮಾಜಿಕ ನ್ಯಾಯ, ಸಮಾನತೆ, ಗೌರವ ಮತ್ತು ಎಲ್ಲರಿಗೂ ಸಮಾನ ಅವಕಾಶ ಎಂಬ ಮೋದಿ ಸರ್ಕಾರದ ದೂರದೃಷ್ಟಿಯನ್ನು ಸಾಕಾರಗೊಳಿಸುವ ಬಜೆಟ್ ಇದಾಗಿದೆ

ಜೆ.ಪಿ.ನಡ್ಡಾ, ಬಿಜೆಪಿ ಅಧ್ಯಕ್ಷ

ಬಡವರ ವಿರೋಧಿ ಬಜೆಟ್

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಬಡವರ ವಿರೋಧಿ ಕಾರ್ಯಸೂಚಿಯನ್ನು ಮುಂದುವರಿಸಿದೆ. 2022ರ ಬಜೆಟ್ ಅದಕ್ಕೆ ನಿದರ್ಶನವಾಗಿದೆ. ಬಿಜೆಪಿಯು ಆಯ್ದ ಉದ್ಯಮಿ (ಕ್ರೋನಿ ಕ್ಯಾಪಿಟಲಿಸ್ಟ್) ಸ್ನೇಹಿತರನ್ನು ಮೆಚ್ಚಿಸಲು ಈ ಬಜೆಟ್ ಅನ್ನು ವಿನ್ಯಾಸಗೊಳಿಸಿದೆ. ದೇಶದ ಶೇ 90ರಷ್ಟು ಜನಸಂಖ್ಯೆ ಇರುವ ಮಧ್ಯಮ ಮತ್ತು ಬಡವರ್ಗದವರ ಅಗತ್ಯಗಳನ್ನು ಇದರಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯ ವಿರೋಧ ಪಕ್ಷದ ನಾಯಕ



ಹೂ ಮಾರಾಟಕ್ಕೆ ಸುಧಾಕರ್ ಅಡ್ಡಿ: ಹೈಕೋರ್ಟ್ ನೋಟಿಸ್

ಬೆಂಗಳೂರು: ‘ಚಿಕ್ಕಬಳ್ಳಾಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ (ಎಪಿಎಂಸಿ) ಕೊರೊನಾ ನೆಪದಲ್ಲಿ ಹೂವು ಬೆಳೆಗಾರರಿಗೆ ಹೂವು ಮಾರಾಟಕ್ಕೆ ಅನುಮತಿ ನೀಡದೆ ಅಡ್ಡಿಪಡಿಸಲಾಗುತ್ತಿದೆ’ ಎಂದು ಆಕ್ಷೇಪಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗಿದೆ.

ಈ ಕುರಿತಂತೆ ಚಿಕ್ಕಬಳ್ಳಾಪುರ ತಿರುಮಲ ಫ್ಲವರ್ ಸ್ಟಾಲ್ ಮಾಲೀಕ ಜಿ.ಎಂ.ಶ್ರೀಧರ ಹಾಗೂ ಕರಿಗನ ಪಾಳ್ಯದ ರಮೇಶ್ ರೆಡ್ಡಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ವಕೀಲ ಎಂ.ಶಿವಪ್ರಕಾಶ್, ‘ಕೊರೊನಾ ಕಾರಣಕ್ಕಾಗಿ ಎರಡು ವರ್ಷಗಳಿಂದ ಎಪಿಎಂಸಿ ಮಾರುಕಟ್ಟೆಯಲ್ಲಿ ಹೂವು ಮಾರಾಟಗಾರರಿಗೆ ನಿರ್ಬಂಧ ಹೇರಲಾಗಿತ್ತು. ಈಗ ನಿರ್ಬಂಧ ಸಡಿಲಿಕೆಯಾಗಿದ್ದರೂ ಸ್ಥಳೀಯ ಶಾಸಕ (ಆರೋಗ್ಯ ಸಚಿವ) ಡಾ.ಕೆ.ಸುಧಾಕರ ಅವರ ರಾಜಕೀಯ ಒತ್ತಡದಿಂದಾಗಿ ಇನ್ನೂ ಮಾರಾಟಕ್ಕೆ ಅನುಮತಿ ನೀಡದೆ ಸತಾಯಿಸಲಾಗುತ್ತಿದೆ’ ಎಂದು ಆಕ್ಷೇಪಿಸಿದರು.

ಈ ಬಗ್ಗೆ ಸರ್ಕಾರಿ ವಕೀಲರು ವಿವರಣೆ ನೀಡುವಂತೆ ತಾಕೀತು ಮಾಡಿದ ನ್ಯಾಯಪೀಠ ವಿಚಾರಣೆಯನ್ನು ಒಂದು ವಾರ ಮುಂದೂಡಿತು. ಪ್ರಕರಣದಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಎಪಿಎಂಸಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಚಿಕ್ಕಬಳ್ಳಾಪುರ ಎಪಿಎಂಸಿ ಕಾರ್ಯದರ್ಶಿ ಹಕೀಂ, ಜಿಲ್ಲಾಧಿಕಾರಿ ಹಾಗೂ ಎಸ್‌ಪಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

3ನೇ ಪುಟ ನೋಡಿ

ನೋಟಾದತ್ತ ಲಖಿಂಪುರ ರೈತರ ಚಿತ್ತ

ಲಖಿಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಕಳೆದ ಅಕ್ಟೋಬರ್‌ನಲ್ಲಿ ಎಸ್‌ಯುವಿ ಹರಿಸಿ ನಾಲ್ವರು ರೈತರ ಹತ್ಯೆ ಪ್ರಕರಣದ ಆಘಾತ ಲಖಿಂಪುರ ಖೇರಿಯ ರೈತರ ಮನಸ್ಸಿನಿಂದ ಇನ್ನೂ ಮಾಸಿಲ್ಲ. ಈ ಪ್ರದೇಶದ ರೈತರು ಈ ಬಾರಿ ನೋಟಾ (ಯಾರಿಗೂ ಮತ ಇಲ್ಲ) ಮತ ಹಾಕುವ ಯೋಚನೆಯಲ್ಲಿ ಇದ್ದಾರೆ. 11

ಒಳ ಪುಟಗಳು

ರಾಸಾಯನಿಕ ಮುಕ್ತ ಕೃಷಿಗೆ ಉತ್ತೇಜನ 4
400 ‘ಒಂದೇ ಭಾರತ್ ರೈಲು’ ಘೋಷಣೆ 5
200 ಟಿ.ವಿ ಚಾನೆಲ್, ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪನೆ 6
ಕ್ರಿಪ್ಟೊಕರೆನ್ಸಿ: ಶೇ 30ರಷ್ಟು ತೆರಿಗೆ 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಖರೀದಿಯ ಬೆಲೆ*	25 ಲಕ್ಷ	50 ಲಕ್ಷ	1 ಕೋಟಿ	5 ಕೋಟಿ	
ಆಪ್ಷನ್ A	1,79,750	3,60,250	7,21,500	36,07,500	ಆಪ್ಷನ್ A: ಜೀವನಪೂರ್ತಿ ಆನ್ಯುಟಿ
ಆಪ್ಷನ್ F	1,46,250	2,93,250	5,87,500	29,37,500	ಆಪ್ಷನ್ F: ಜೀವನಪೂರ್ತಿ ಆನ್ಯುಯಿಟಿ, ಖರೀದಿ ಬೆಲೆಯ ಮರಳಿಸುವಿಕೆ
ಆಪ್ಷನ್ J	1,45,500	2,91,750	5,84,500	29,22,500	ಆಪ್ಷನ್ J: ಜಾಯಿಂಟ್ ಲೈಫ್ ಆನ್ಯುಟಿ, ಸಂಗಡ ಆನ್ಯುಟೆಂಟ್‌ಗಳಲ್ಲಿ ಒಬ್ಬರು ಜೀವಂತವಿರುವ ವರೆಗೆ 100% ಆನ್ಯುಯಿಟಿ ಸಂದಾಯ ಮಾಡಬೇಕಾಗುವ ಅವಕಾಶ ಮತ್ತು ಮೃತರಾಗದೇ ಉಳಿದವರ ಮರಣದ ನಂತರ ಖರೀದಿ ಬೆಲೆಯ ಮರಳಿಸುವಿಕೆ

*ನಿಯಮಾನುಸಾರ ಅನ್ವಯಿಸುವ ತೆರಿಗೆ ಸೇರಿಸಿ ಅಂಕೆಗಳು ರೂಪಾಯಿಗಳಲ್ಲಿ

ಆನ್‌ಲೈನ್‌ನಲ್ಲೂ ಲಭ್ಯ
ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ "MyLIC" ಸಂದರ್ಶಿಸಿರಿ: licindia.in ಕಾಲ್ ಸೆಂಟರ್ ಸರ್ವಿಸ್ : (022) 6827 6827
ಹೆಚ್ಚಿನ ಮಾಹಿತಿಗಾಗಿ, ನಿಮ್ಮ ಏಜಂಟ್ ಅಥವಾ ಸಮೀಪದ ಎಲ್‌ಐಸಿ ಬ್ರಾಂಚನ್ನು ಸಂಪರ್ಕಿಸಿರಿ ಅಥವಾ ನಿಮ್ಮ ನಗರದ ಹೆಸರನ್ನು 56767474ಗೆ ಎಸ್‌ಎಮ್‌ಎಸ್ ಮಾಡಿರಿ
ಕೃತ್ರಿಮ ಫೋನ್ ಕಾಲ್‌ಗಳ ಬಗ್ಗೆ ಮತ್ತು ನಕಲು/ಮೋಸದ ಆಫರ್‌ಗಳ ಬಗ್ಗೆ ಎಚ್ಚರಿಕೆ. ಐಆರ್‌ಡಿಎಐ ಇನ್ಸೂರೆನ್ಸ್ ಪಾಲಿಸಿಗಳ ಮಾರಾಟ, ಬೋನಸ್ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆಗಳಂತ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ. ಇಂಥ ಫೋನ್ ಕಾಲ್‌ಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ನೀಡಬೇಕಾಗಿ ವಿನಂತಿ.
ಅಪಾಯ ಸಾಧ್ಯತೆಗಳು, ನಿಯಮ ಹಾಗೂ ಷರತ್ತುಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಮಾರಾಟ ಪೂರ್ತಿಗೊಳ್ಳುವ ಮೊದಲು ಸೇಲ್ಸ್ ಬ್ರೋಶರ್ ಅನ್ನು ಎಚ್ಚರಿಕೆಯಿಂದ ಓದಿರಿ.
ನಮ್ಮನ್ನು ಫಾಲೋ ಮಾಡಿರಿ : LIC India Forever
IRDAI Regn No.: 512
LIC ಲೈಫ್ ಇನ್ಸೂರೆನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ LIFE INSURANCE CORPORATION OF INDIA
ಪ್ರತಿ ಕ್ಷಣವೂ ನಿಮ್ಮೊಂದಿಗೆ
LIC/PRA/21-22/44/KAN

ಅಂಬೇಡ್ಕರ್‌ಗೆ ಅಗೌರವ ಖಂಡಿಸಿ 'ರಾಯಚೂರು ಚಲೋ'

ಬೆಂಗಳೂರು: 'ಬಿ.ಆರ್.ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಖಂಡಿಸಿ ಫೆಬ್ರುವರಿ ಮೊದಲ ವಾರದಲ್ಲಿ 'ರಾಯಚೂರು ಚಲೋ' ನಡೆಸಲಾಗುವುದು' ಎಂದು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಮಂಗಳವಾರ ಹೇಳಿದರು.

'ನ್ಯಾಯಾಧೀಶ ವಿರುದ್ಧ ಕ್ರಮ ಕೈಗೊಳ್ಳುವಂತೆ ಉಪ್ಪಾರಪೇಟೆ ಠಾಣೆಗೆ ದೂರು ನೀಡಲಾಗಿದೆ. ಆದರೆ, ಈವರೆಗೆ ಎಫ್‌ಐಆರ್ ದಾಖಲಿಸಿಕೊಂಡಿಲ್ಲ' ಎಂದರು. 'ಕಾನೂನು ಮತ್ತು ಗೃಹ ಸಚಿವರಿಗೆ ಬುಧವಾರ (ಫೆ.2) ಘೇರಾವ್ ಹಾಕಲಿದ್ದೇವೆ. ಹೊಸೂರು, ಕೆ.ಆರ್. ಪುರ, ಹೆಬ್ಬಾಳ, ತುಮಕೂರು ರಸ್ತೆ ಸೇರಿದಂತೆ ಪ್ರಮುಖ ಹೆದ್ದಾರಿಗಳನ್ನು ಹಂತ ಹಂತವಾಗಿ ಬಂದ್ ಮಾಡಲಿದ್ದೇವೆ. ಈ ವಾರಾಂತ್ಯದಲ್ಲಿ ಕೋಲಾರದಿಂದ 'ರಾಯಚೂರು ಚಲೋ' ನಡೆಸಲಿದ್ದೇವೆ. 10 ಜಿಲ್ಲೆಗಳ ಮೂಲಕ ರಾಯಚೂರು ತಲುಪಿ, ಅಲ್ಲಿ ಸಮಾವೇಶಗೊಳ್ಳಲಿದ್ದೇವೆ' ಎಂದೂ ಹೇಳಿದರು.

ಹೈಕೋರ್ಟ್ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಹಂಚಿಕೆ

ಆಯುಕ್ತರ ಅನುಮೋದನೆ ಇಲ್ಲದೆಯೇ ಶುದ್ಧ ಕ್ರಯಪತ್ರ ವಿತರಣೆ ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹೈಕೋರ್ಟ್ ಮಧ್ಯಂತರ ಆದೇಶ ಉಲ್ಲಂಘಿಸಿ ಬದಲಿ ನಿವೇಶನ ಹಂಚಿಕೆ
- 'ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ'ದ ಬದಲು 'ಶುದ್ಧ ಕ್ರಯಪತ್ರ' ವಿತರಣೆ
- ಕೆಎಎಸ್ ಅಧಿಕಾರಿ ವಿರುದ್ಧ ದೋಷಾರೋಪ ಪಟ್ಟಿ ಸಿದ್ಧಪಡಿಸಿರುವ ಬಿಡಿಎ

ಪ್ರಜಾವಾಣಿ ವಿಶೇಷ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ಉಪ ಕಾರ್ಯದರ್ಶಿ–1 ಆಗಿದ್ದ ಎಂ.ಎಸ್.ಎನ್.ಬಾಬು ಅವರು ನಿವೇಶನವೊಂದಕ್ಕೆ ಹೈಕೋರ್ಟ್‌ನ ಮಧ್ಯಂತರ ಆದೇಶ ಉಲ್ಲಂಘಿಸಿ ಹಾಗೂ ಆಯುಕ್ತರ ಅನುಮೋದನೆಯನ್ನೇ ಪಡೆಯದೆ ಶುದ್ಧ ಕ್ರಯಪತ್ರ ಮಾಡಿಕೊಟ್ಟ ಆರೋಪ ಎದುರಿಸುತ್ತಿದ್ದು, ಈ ಪ್ರಕರಣವನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ ತನಿಖೆ ನಡೆಸುವುದಕ್ಕೆ ಪ್ರಾಧಿಕಾರದ ಆಯುಕ್ತರು ಶಿಫಾರಸು ಮಾಡಿದ್ದಾರೆ.

ಹೊಸೂರು-ಸರ್ಜಾಪುರ ರಸ್ತೆ (ಎಚ್‌ಎಸ್‌ಆರ್) ಬಡಾವಣೆಯ ಸೆಕ್ಟರ್-6ರಲ್ಲಿ 50x80 ಅಡಿ ವಿಸ್ತೀರ್ಣದ ನಿವೇಶನ (ಸಂಖ್ಯೆ 626/ಸಿ) ಹಾಗೂ ಇತರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಬಿಡಿಎ ನೀಡಿರುವ ಹಂಚಿಕೆ ಪತ್ರಗಳನ್ನು ರದ್ದುಗೊಳಿಸುವಂತೆ ಕೋರಿ ಮೆ.ನಿಖಿಲ್ ಕನ್ಸ್ಟ್ರಕ್ಷನ್ಸ್ ಪ್ರೈ.ಲಿಮಿಟೆಡ್ ಸಂಸ್ಥೆ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ (ಸಂಖ್ಯೆ:4524/2020) ಸಲ್ಲಿಸಿತ್ತು.

ಈ ಪ್ರಕರಣ ಸಂಬಂಧ 2020ರ ಜೂನ್ 26ರಂದು ಮಧ್ಯಂತರ ಆದೇಶ ನೀಡಿದ್ದ ಹೈಕೋರ್ಟ್, 'ಎಚ್‌ಎಸ್‌ಆರ್ ಬಡಾವಣೆಯ ಸೆಕ್ಟರ್ 6ರಲ್ಲಿ ನಿವೇಶನ ಸಂಖ್ಯೆ 626/ಸಿಗೆ ಸಂಬಂಧಪಟ್ಟಂತೆ ಮುಂದಿನ ಆದೇಶದವರೆಗೆ ಬಿಡಿಎ ಯಾವುದೇ ಕ್ರಮಕೈಗೊಳ್ಳುವಂತಿಲ್ಲ' ಎಂದು ಸೂಚಿಸಿತ್ತು.

ಹೈಕೋರ್ಟ್‌ನ ಮಧ್ಯಂತರ ಆದೇಶದ ಹೊರತಾಗಿಯೂ ಉಪಕಾರ್ಯದರ್ಶಿ–1 ವಿಭಾಗದ ಅಧಿಕಾರಿಗಳು ಎಂ.ಬಸವರಾಜ ನಾಯ್ಕ್ ಅವರಿಗೆ ಈ ನಿವೇಶನವನ್ನು ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಿದ್ದರು. ಅದರ ಶುದ್ಧ ಕ್ರಯಪತ್ರವನ್ನು 2020ರ ಮಾರ್ಚ್ 3ರಂದು ನೋಂದಾಯಿಸಿಕೊಟ್ಟಿದ್ದರು. ಇದಕ್ಕೆ ಪ್ರಾಧಿಕಾರದ ಆಯುಕ್ತರ ಅನುಮೋದನೆ ಪಡೆದಿರಲಿಲ್ಲ. ಇದನ್ನು ಪ್ರಶ್ನಿಸಿದ್ದ ಸಂಸ್ಥೆಯವರು ಬಿಡಿಎ ವಿರುದ್ಧ ನ್ಯಾಯಾಂಗ ನಿಂದನಾ ಮೊಕದ್ದಮೆಯನ್ನೂ ದಾಖಲಿಸಿದ್ದರು.

1984ರ ಬಿಡಿಎ (ನಿವೇಶನಗಳ ಹಂಚಿಕೆ) ನಿಯಮ 6 ಮತ್ತು 14(1)ರ ಪ್ರಕಾರ ನಿವೇಶನದಾರರಿಗೆ 'ಗುತ್ತಿಗೆ ಮತ್ತು ಮಾರಾಟ ಒಪ್ಪಂದ ಪತ್ರ'ವನ್ನು ಮೊದಲು ನೋಂದಾಯಿಸಿ ಕೊಡಬೇಕು. 10 ವರ್ಷಗಳ ಗುತ್ತಿಗೆ ಅವಧಿ ಮುಗಿದ ನಂತರವಷ್ಟೇ ಶುದ್ಧ ಕ್ರಯಪತ್ರವನ್ನು ನೋಂದಾಯಿಸಿ ಕೊಡಲು ಅವಕಾಶವಿದೆ. ಆದರೆ, ಉಪಕಾರ್ಯದರ್ಶಿ–1 ವಿಭಾಗದವರು ಸರ್ಕಾರದ ಅನುಮತಿ ಇಲ್ಲದೇ ಹಾಗೂ ಮೇಲಧಿಕಾರಿಗಳ ಅನುಮತಿಯನ್ನೂ ಪಡೆಯದೆಯೇ ನಿವೇಶನದಾರರಿಗೆ ನೇರವಾಗಿ ಶುದ್ಧ ಕ್ರಯ ಪತ್ರ ನೋಂದಾಯಿಸಿಕೊಟ್ಟಿದ್ದರು.

ಈ ಕರ್ತವ್ಯ ಲೋಪಕ್ಕಾಗಿ ಪ್ರಾಧಿಕಾರವು ಉಪಕಾರ್ಯದರ್ಶಿ–1 ಆಗಿದ್ದ ಕೆಎಎಸ್ ಅಧಿಕಾರಿ ಎಂ.ಎಸ್.ಎನ್.ಬಾಬು ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ದೋಷಾರೋಪಣಾ ಪಟ್ಟಿಯೊಂದಿಗೆ ಸರ್ಕಾರಕ್ಕೆ 2021ರ ಡಿ.7ರಂದು ಪ್ರಸ್ತಾವನೆ ಸಲ್ಲಿಸಿದೆ. ಬಿಡಿಎ ಮೇಲ್ವಿಚಾರಕ ಡಿ.ಅಶ್ವತ್ಥನಾರಾಯಣ ರಾವ್ ಮತ್ತು ಪ್ರಥಮದರ್ಜೆ ಸಹಾಯಕ ಎಸ್.ಮಂಜುನಾಥ್ (ನಿವೃತ್ತರಾಗಿದ್ದಾರೆ) ವಿರುದ್ಧವೂ ಪ್ರಾಧಿಕಾರದಲ್ಲಿ ಇಲಾಖಾ ವಿಚಾರಣೆ ನಡೆಸಲು ದೋಷಾರೋಪಣಾ ಪಟ್ಟಿ ಜಾರಿಗೊಳಿಸಲಾಗಿದೆ. ಅವರ ವಿರುದ್ಧದ ಆರೋಪಗಳ ವಿಚಾರಣೆ ನಡೆಸಲು ವಿಚಾರಣಾಧಿಕಾರಿಗಳ ನೇಮಕಕ್ಕೆ ಕ್ರಮ ಕೈಗೊಂಡಿದೆ.

'ಈ ಪ್ರಕರಣದಲ್ಲಿ ಎಂ.ಎಸ್.ಎನ್ ಬಾಬು ಹಾಗೂ ಅವರ ಕಚೇರಿ ಮೇಲ್ವಿಚಾರಕ ಡಿ.ಅಶ್ವತ್ಥನಾರಾಯಣ ರಾವ್ ಹಾಗೂ ಪ್ರಥಮ ದರ್ಜೆ ಸಹಾಯಕರಾಗಿದ್ದ ಎಸ್.ಮಂಜುನಾಥ್ ಅವರು ಕರ್ತವ್ಯ ಲೋಪವೆಸಗಿರುವುದು ಆಂತರಿಕ ತನಿಖೆಯಿಂದ ದೃಢಪಟ್ಟಿದೆ. ಹಾಗಾಗಿ ಅವರನ್ನು ಭ್ರಷ್ಟಾಚಾರ ನಿಗ್ರಹ ದಳದಿಂದ ತನಿಖೆಗೆ ಒಳಪಡಿಸಲು 1988ರ ಭ್ರಷ್ಟಾಚಾರ ತಡೆ ಕಾಯ್ದೆಯ ಕಲಂ 17(ಎ) ರನ್ವಯ ಅನುಮತಿ ನೀಡಬಹುದು' ಎಂದು ಬಿಡಿಎ ಆಯುಕ್ತರು ನಗರಾಭಿವೃದ್ಧಿ ಇಲಾಖೆಗೆ ಬರೆದ ಪತ್ರದಲ್ಲಿ ಶಿಫಾರಸು ಮಾಡಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

IN THE HON'BLE X^th ADDL. DISTRICT AND SESSIONS JUDGE, BENGALURU RURAL DISTRICT, BENGALURU
(Dedicated as Commercial Court)

Execution Case No.176 of 2021
BETWEEN:
Karnataka State Industrial Investment & Development Corporation Ltd.,
...Decree Holder
AND
M/s SSS Spinners and others
...Judgment Debtors

SUMMONS TO JDR NOS, 1, 2, 3, 5, AND 6 UNDER ORDER V RULE 20 OF THE CODE OF CIVIL PROCEDURE, 1908.

1. M/s SSS Spinners
A firm registered under the provisions of Indain Partnership Act & Represented by its partner Smt. M.N. Sudhamani, Having its office at No.689,17th A Cross, 6th Phase, J.P.Nagar, Bengaluru-560078

2. Smt. M.N. Sudhamani
W/o Shri B.S. Nagaraja, Major, Residing at No.689,17th A Cross, 6th Phase, J.P. Nagar, Bengaluru-560078.

3. Shri B.S. Nagaraja
S/o B.S. Siddalingappa Major, Residing at No.689, 17th A Cross, 6th Phase, J.P. Nagar, Bengaluru-560078.

5. Shri B.S. Siddalingappa
S/o. Late Butchappa Major, Residing at 17th A Cross, 6th Phase, J.P. Nagar, Bengaluru-560078.

6. Smt. Vimala Hanumanthaiah
W/o Shri M Hanumanthaiah Major, Residing at No.322/20, 1st Main, 1st Cross, Cambridge road, Combridge Layout, Bengaluru-560008.

PUBLIC NOTICE

Whereas **M/s Karnataka State Industrial Investment & Development Corporation Ltd.** Rep by **Mr. N. Manjunath** has made an application to this court for execution of judgment and decree dated **07.07.2014** passed in Misc No.93/2010. This is to give you notice that you are directed to appear before this court in person or by a pleader on **19.02.2022 at 11.00 a.m.** to show cause as to why the above execution petition should not be executed against you failing which the above execution petition will be dealt in your absence.

Given under my hand and seal of this Court, on this **11th January, 2022.**

IMMOVABLE PROPERTY

All that piece and parcel of the agricultural land bearing Sy No. 30/1, measuring 26 guntas, situated within the village limits of Minapura Thyamagondlu Hobli, Nelamangala Taluk, Bengaluru District, bounded towards: East by: Sy No.29 and border of Byranahalli village, West by: Government road leading to Jakkanahalli village, North by: Portion of land in Sy No.30/1, South by: Portion of land in Sy No.30/1 belonging to B.N. Byregowda and Late Veerappa.

Sd/-
By Order of the Court
Sheristedar
X^th Addl, District & Sessions Court,
Bengaluru Rural District,
Bengaluru.

Vivek Yavagal
Advocate for the DHR, Veeksha Law LLP No.1 Palace View Building, 2nd Floor, V.S. Raju Road, Kumara Park West, Bengaluru-560020.

DIPR/DDU/SHIRDISAI/3133/2021-22

ಅನಧಿಕೃತ ಜಾಹೀರಾತು ತೆರವು ಜನರ ನೆರವು ಕೋರಿದ ಪಾಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮತ್ತೆ ತಲೆ ಎತ್ತುತ್ತಿರುವ ಅನಧಿಕೃತ ಜಾಹೀರಾತುಗಳ ತೆರವಿಗೆ ಅಭಿಯಾನ ಹಮ್ಮಿಕೊಳ್ಳಲು ಬಿಬಿಎಂಪಿ ಮುಂದಾಗಿದೆ. ಈ ಅಭಿಯಾನದಲ್ಲಿ ಕೈ ಜೋಡಿಸುವಂತೆ ಸಾರ್ವಜನಿಕರನ್ನು ಬಿಬಿಎಂಪಿ ಕೋರಿದೆ.

'2018ರ ಬಿಬಿಎಂಪಿ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶಗಳ ಬೈಲಾಗಳ ಪ್ರಕಾರ ಅಂಗಡಿ ಮುಂಗಟ್ಟುಗಳ ಜಾಹೀರಾತುಗಳು, ವಾಹನಗಳಲ್ಲಿನ ಸ್ವ-ಜಾಹೀರಾತುಗಳು ಹಾಗೂ ಇತರ ಸಣ್ಣಪುಟ್ಟ ಜಾಹೀರಾತುಗಳನ್ನು ಸೀಮಿತ ಅವಧಿಗೆ ಹಾಗೂ ಸೀಮಿತ ಅಳತೆಯಲ್ಲಿ (ಖಾಸಗಿ ಸಹಭಾಗಿತ್ವದ ಸರ್ಕಾರಿ ಯೋಜನೆಗಳು ಸೇರಿ) ಅಳವಡಿಸುವುದಕ್ಕೆ ಮಾತ್ರ ಅನುಮತಿ ನೀಡಲಾಗುತ್ತದೆ. ಇವುಗಳನ್ನು ಹೊರತುಪಡಿಸಿ, ಬಿಬಿಎಂಪಿ ವ್ಯಾಪ್ತಿಯ ಯಾವುದೇ ವಸತಿ ಪ್ರದೇಶಗಳಲ್ಲಿ, ಖಾಸಗಿ ಸ್ವತ್ತುಗಳಲ್ಲಿ ಅನಧಿಕೃತವಾಗಿ ಜಾಹೀರಾತು ಫಲಕಗಳು, ಶುಭಾಶಯ ಕೋರುವ ಜಾಹೀರಾತುಗಳು, ಸಭೆ ಸಮಾರಂಭಗಳ ಜಾಹೀರಾತುಗಳು, ಎಲ್‌ಇಡಿ ಜಾಹೀರಾತುಗಳು, ಸೈಕಲ್ ಜಾಹೀರಾತುಗಳು, ವಾಹನ ಜಾಹೀರಾತುಗಳು ಮತ್ತು ಫ್ಲೆಕ್ಸ್, ಬ್ಯಾನರ್‌ಗಳು, ಬಂಟಿಂಗ್ಸ್, ಬಾವುಟಗಳು ಮೊದಲಾದ ಮುದ್ರಿತ ಜಾಹೀರಾತುಗಳನ್ನು ಅಳವಡಿಸುವುದನ್ನು ನಿಷೇಧಿಸಲಾಗಿದೆ. ಅವುಗಳನ್ನು ತೆರವುಗೊಳಿಸಲು ಜನರು ಬಿಬಿಎಂಪಿ ಜೊತೆ ಕೈಜೋಡಿಸಬೇಕು' ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಕೋರಿದ್ದಾರೆ.

'ಇಂತಹ ನಿಷೇಧಿತ ಜಾಹೀರಾತುಗಳ ಅಳವಡಿಕೆಯಿಂದ ನಗರದ ಸೌಂದರ್ಯವು ಹಾಳಾಗುತ್ತಿದೆ. ಕೆಲವೊಮ್ಮೆ ಇವು ಸುಗಮ ಸಂಚಾರಕ್ಕೂ ಅಡ್ಡಿಪಡಿಸುತ್ತಿವೆ. ಇವು ಪರಿಸರಕ್ಕೂ ಮಾರಕವಾಗಿವೆ. ಇಂತಹ ಜಾಹೀರಾತು ಕಂಡು ಬಂದರೆ ಬಿಬಿಎಂಪಿಯ ಗಮನಕ್ಕೆ ತರಬೇಕು. ಇದನ್ನು ಅಳವಡಿಸಿದವರಿಗೆ ದಂಡ ವಿಧಿಸಿ, ಅವುಗಳನ್ನು ತೆರವುಗೊಳಿಸಲು ಪಾಲಿಕೆ ಕ್ರಮ ಕೈಗೊಳ್ಳಲಿದೆ. ಈ ಅಭಿಯಾನ ಯಶಸ್ವಿಗೊಳಿಸಲು ಜನ ಬೆಂಬಲ ಅಗತ್ಯ' ಎಂದು ಅವರು ತಿಳಿಸಿದ್ದಾರೆ.

ಅನಧಿಕೃತ ಜಾಹೀರಾತು ತೆರವು– ಸಹಾಯವಾಣಿಗಳು	
ಕೇಂದ್ರ ಕಚೇರಿ	080-22221188, 22975595, 22100031/32/33/34/35
ಐಪಿಪಿ ನಿಯಂತ್ರಣ ಕೊಠಡಿ	22660000
ಪೂರ್ವ ವಲಯ	22975803
ಪಶ್ಚಿಮ ವಲಯ	23561692/23463366
ದಕ್ಷಿಣ ವಲಯ	26566362
ಆರ್.ಆರ್.ನಗರ	28600954, 28601851
ಬೊಮ್ಮನಹಳ್ಳಿ	25735642, 25732447
ಮಹದೇವಪುರ	28512300, 28512301
ಯಲಹಂಕ	23636671, 22975936
ದಾಸರಹಳ್ಳಿ	28394909, 28393688

ಡಾ.ಅರುಣ್ ಸೋಮಣ್ಣ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಿಸಿದರು. ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥಗೌಡ, ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಉಪಾಧ್ಯಕ್ಷ ಸೋಮಶೇಖರ್, ಮುಖಂಡರಾದ ಕೆ.ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ವಾಗೀಶ್, ರಾಜಪ್ಪ, ಎಚ್.ರಮೇಶ್, ಸಿದ್ಧಾರ್ಥ ಹಾಗೂ ಶ್ರೀಧರ್ ಇದ್ದರು.

ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೌರ ಕಾರ್ಮಿಕರು ನಾಗರಿಕರ ಜೀವ ಹಾಗೂ ಜೀವನದ ರಕ್ಷಕರು' ಎಂದು ವಸತಿ ಸಚಿವ ವಿ.ಸೋಮಣ್ಣ ಬಣ್ಣಿಸಿದರು.

ಯಶಸ್ವಿನಿ ಫೌಂಡೇಷನ್ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಡಾ.ರಾಜ್‌ಕುಮಾರ್ ವಾರ್ಡ್‌ನ ಪೌರ ಕಾರ್ಮಿಕರಿಗೆ ಸಮವಸ್ತ್ರ ವಿತರಿಸಿ ಮಂಗಳವಾರ ಮಾತನಾಡಿದರು.

'ಕೋವಿಡ್‌ನಿಂದಾಗಿ ಜನಜೀವನ ತತ್ತರಗೊಂಡಿತ್ತು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಪೌರ ಕಾರ್ಮಿಕರು ತಮ್ಮ ಜೀವದ ಹಂಗು ತೊರೆದು ನಗರದ ಸ್ವಚ್ಛತೆಗೆ ಹಗಲಿರುಳು ಶ್ರಮಿಸಿದ್ದರು. ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದರು. ಅವರ ಕಾರ್ಯವನ್ನು ಯಾರೂ ಮರೆಯುವಂತಿಲ್ಲ' ಎಂದರು.

ಭೌತಿಕ ತರಗತಿ ಆರಂಭಕ್ಕೆ ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳು, ಘಟಕ ಕಾಲೇಜುಗಳು, ರಾಮನಗರ ಸ್ನಾತಕೋತ್ತರ ಕೇಂದ್ರ ಹಾಗೂ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ಆರಂಭಿಸುವಂತೆ ಕುಲಸಚಿವರು ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

'ಶಾಲೆ, ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ನಡೆಸಲು ಸರ್ಕಾರವು ಅನುಮತಿ ನೀಡಿದೆ. ಎಲ್ಲಾ ಕಾಲೇಜುಗಳು ಕೋವಿಡ್ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಭೌತಿಕ ತರಗತಿಗಳನ್ನು ಆರಂಭಿಸಬೇಕು' ಎಂದು ಸೂಚಿಸಲಾಗಿದೆ.

ಹಲ್ಲೆ: ಆರೋಪಿ ಜಾಮೀನು ತಿರಸ್ಕೃತ

ಬೆಂಗಳೂರು: ವ್ಯಕ್ತಿಯೊಬ್ಬರನ್ನು ಅಪಹರಿಸಿ ಹಲ್ಲೆ ನಡೆಸಿ ಅವರ ನಗ್ನ ಫೋಟೋಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟು ಬಳಿಕ ಅಮೆರಿಕಕ್ಕೆ ಪರಾರಿಯಾಗಿರುವ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಬಂಧನದ ಭೀತಿ ಎದುರಿಸುತ್ತಿರುವ ನಗರದ ಎನ್‌ಆರ್‌ಐ ಲೇಔಟ್ 2ನೇ ಹಂತದ ನಿವಾಸಿ ಎನ್. ಮಂಜುನಾಥ ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

ಪ್ರಕರಣವೇನು?: 'ಎರಡು ಲಕ್ಷ ರೂಪಾಯಿ ವಿಚಾರವಾಗಿ ನನ್ನ ಪತಿಯನ್ನು ಅಪಹರಿಸಿ, ಅವರ ನಗ್ನ ಫೋಟೊಗಳನ್ನು ಸೆರೆ ಹಿಡಿದು ಜಾಲತಾಣದಲ್ಲಿ ಹರಿಬಿಡಲಾಗಿದೆ' ಎಂದು ಟಿ.ಸಿ. ಪಾಳ್ಯದ ನಿವಾಸಿ ಸುಜಾತ ಎಂಬುವರು ಕೆ.ಆರ್.ಪುರ ಠಾಣೆ ಪೊಲೀಸರಿಗೆ 2021ರ ನ. 13ರಂದು ದೂರು ನೀಡಿದ್ದರು. ಈ ದೂರಿನನ್ವಯ ಎನ್. ಮಂಜುನಾಥ ವಿರುದ್ಧ ಪ್ರಕರಣ ದಾಖಲಿಸಿದ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಟಿಪ್ಪರ್ ಲಾರಿಗಳ ಪರವಾನಗಿ ವಿಸ್ತರಿಸಿ'

ಬೆಂಗಳೂರು: 'ಕಾರ್ಖಾನೆಗಳಿಗೆ ಕಬ್ಬಿಣದ ಅದಿರು ಸಾಗಿಸುವ ಟಿಪ್ಪರ್ ಲಾರಿಗಳಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ನೀಡುವ ಪರವಾನಗಿ ಅವಧಿಯನ್ನು 24 ಗಂಟೆಗಳಿಗೆ ವಿಸ್ತರಿಸಬೇಕು' ಎಂದು ಸಂಡೂರು ತಾಲ್ಲೂಕು ಗಣಿ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜೆ.ಬಾಬು ನಾಯ್ಕ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ನಡೆಸಿ ಆಗ್ರಹಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 7ನೇ ಮಹಡಿ, ಪಿ.ಯು. ಕಟ್ಟಡ, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560 001.
ಸಂಖ್ಯೆ: ಕಾಪಾಅ(ಸರ್ವಜ್ಞನಗರ)/ಟೆಂಡರ್/12/2021–22 ದಿನಾಂಕ: 31.01.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಎನ್‌ಐಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಸರ್ವಜ್ಞನಗರ ವಿಭಾಗ), ಪೂರ್ವ ವಲಯ, ಇವರು, ಬೃ.ಬೆಂ.ಮ.ಪಾ/ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ವಾರ್ಡ್ ಸಂಖ್ಯೆಗಳು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ ಮೊತ್ತ (₹. ಗಳಲ್ಲಿ)	ಕಾಮಗಾರಿಗಳ ಸಂಖ್ಯೆ
1	30 (ಪ.ಪಂಗಡಕ್ಕೆ)	20.00	25,000/-	01
2	49 (ಪ.ಜಾತಿಗೆ)	10.00 ರಿಂದ 25.00	12,500/- ರಿಂದ 25,000/-	03
3	49	7.77 ರಿಂದ 25.00	19,425/- ರಿಂದ 50,000/-	05
4	23	6.50 ರಿಂದ 50.00	16,250/- ರಿಂದ 1,00,000/-	04
5	23 (ಪ.ಪಂಗಡಕ್ಕೆ)	20.00 ರಿಂದ 50.00	25,000/- ರಿಂದ 50,000/-	02
6	23 (ಪ.ಜಾತಿಗೆ)	7.00 ರಿಂದ 27.77	8,750/- ರಿಂದ 27,770/-	02
7	30	10.00 ರಿಂದ 17.77	25,000/- ರಿಂದ 44,425/-	03
8	24	5.00 ರಿಂದ 12.77	12,500/- ರಿಂದ 31,925/-	05
9	24 (ಪ.ಜಾತಿಗೆ)	8.50 ರಿಂದ 10.00	10,625/- ರಿಂದ 12,500/-	02
10	59	7.77 ರಿಂದ 20.00	19,425/- ರಿಂದ 50,000/-	04
11	59 (ಪ.ಪಂಗಡಕ್ಕೆ)	20.00	25,000/-	01
12	59 (ಪ.ಜಾತಿಗೆ)	15.00	18,750/-	01
13	59 (4ನೇ ಕರೆ)	15.00	37,500/-	01
14	27	8.50 ರಿಂದ 20.00	21,250/- ರಿಂದ 50,000/-	04
15	27 (ಪ.ಜಾತಿಗೆ)	7.77 ರಿಂದ 20.00	9,713/- ರಿಂದ 25,000/-	02
16	27 (ಪ.ಪಂಗಡಕ್ಕೆ)	40.00	40,000/-	01
17	28	7.77 ರಿಂದ 20.00	19,425/- ರಿಂದ 50,000/-	03
18	29	20.00 (ಪ್ರತಿ ಕಾಮಗಾರಿಗೆ)	50,000/- (ಪ್ರತಿ ಕಾಮಗಾರಿಗೆ)	02
19	29 (ಪ.ಜಾತಿಗೆ)	7.77	9,713/-	01
20	59	50.00	1,00,000/-	01
			ಒಟ್ಟು ಕಾಮಗಾರಿಗಳ ಸಂಖ್ಯೆ	48

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: 05.02.2022ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 14.02.2022ರ ಸಂಜೆ 4:00 ಗಂಟೆಯವರೆಗೆ. (3) ಟೆಂಡರ್‌ಗಳನ್ನು ದಿನಾಂಕ 15.02.2022 ರ ಸಂಜೆ 4:30 ಗಂಟೆಯ–ವರೆಗೆ. ರಂದು ಸಾಧ್ಯವಾದಲ್ಲಿ ತೆರೆಯಲಾಗುವುದು ಅಥವಾ ಮುಂದಿನ ಕೆಲಸದ ದಿನದಂದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು – ಸರ್ವಜ್ಞನಗರ ವಿಭಾಗ

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

JAWAHAR NAVODAYA VIDYALAYA
BAGALUR - 562149 [Near Yelahanka], Bangalore Urban District, Karnataka
Ministry of Education (Dept of School Education & Literacy, Government of India)

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ 2021-22ನೇ ಸಾಲಿಗಾಗಿ ಈ ಕೆಳಕಂಡ ಕೆಲಸ/ಸಾಮಾನುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ.
1) Fabrication work at Truss work
2) Supply & fixing of Aluminium Door with Mesh
3) Furniture
4) Solar Water Heater 500 LPD
5) Disposal of Unservisable Articles

ಇದಕ್ಕೆ ಸಂಬಂಧಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: 03–02–2022 ರಿಂದ 12–02–2022 ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಚೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9–00 ಗಂಟೆಯಿಂದ ಸಾಯಂಕಾಲ 4–00 ಗಂಟೆಯವರೆಗೆ ವಿತರಿಸಲಾಗುವುದು. ಸದರಿ ಫಾರಂಗಳ ಬೆಲೆ ರೂಪಾಯಿ 200/–ರೂ. ಆಗಿದ್ದು ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ಅಥವಾ ವಿದ್ಯಾಲಯದ ವೆಬ್‌ಸೈಟ್ https://www.navodaya.gov.in/nvs/nvs-school/BANGALOREURBAN/en/home/ ಅಥವಾ ಸಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ: 14–02–2022 ರ ಸಂಜೆ 4–00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಂಚೆ ಮೂಲಕ ಅಥವಾ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ಮೂಲಕ ವಿದ್ಯಾಲಯಕ್ಕೆ ಕಳುಹಿಸತಕ್ಕದ್ದು. ಸೀಲು ಮಾಡಿದ ಲಕೋಟೆಗಳನ್ನು ಪ್ರಾಂಶುಪಾಲರ ಕೊಠಡಿ, ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು–562 149, ಬೆಂಗಳೂರು ನಗರ ಜಿಲ್ಲೆಯಲ್ಲಿ ದಿನಾಂಕ: 15–02–2022 ರಂದು ಬೆಳಿಗ್ಗೆ 11–00 ಗಂಟೆಗೆ ತೆರೆಯಲಾಗುವುದು.

ಸಹಿ/- ಪ್ರಾಂಶುಪಾಲರು

ಜಿಗಣಿ ಪುರಸಭಾ ಕಾರ್ಯಾಲಯ
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560 105
ದೂರವಾಣಿ ಸಂಖ್ಯೆ : 080-27825780/29760400, Email :- itstaff_ulb_jigani@yahoo.com
ಕ್ರ.ಸಂ:ಜಿಪು/ಆ.ಶಾ/ಪ್ರಕಟಣೆ/38/2020–21 ದಿನಾಂಕ: 31/01/2022

ಸಾರ್ವಜನಿಕ ಪ್ರಕಟಣೆ

ಜಿಗಣಿ ಪುರಸಭಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಬಹುಮಹಡಿ ಕಟ್ಟಡಗಳು ಮತ್ತು ಕಾರ್ಖಾನೆಗಳ ಮಾಲೀಕರುಗಳಿಗೆ ಮತ್ತು ಸಾರ್ವಜನಿಕರುಗಳಿಗೆ ತಿಳಿಯಪಡಿಸುವುದೇನೆಂದರೆ ತಲೆ ಮೇಲೆ ಮಲ ಹೊರುವ ಅನಿಷ್ಟ ಪದ್ಧತಿಯನ್ನು ಘನ ಸರ್ವೋಚ್ಚ ನ್ಯಾಯಾಲಯ ಮತ್ತು ಎಂಪ್ಲಾಯ್‌ಮೆಂಟ್ ಆಫ್ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಅಂಡ್ ಕನ್‌ಸ್ಟ್ರಕ್ಷನ್ (ಪ್ರಾಹಿಬಿಷನ್) ಆಕ್ಟ್ 1993 ಮತ್ತು 2013 ರ ರೀತ್ಯಾ ನಿಷೇದಿಸಿದೆ. ಈ ನಿಯಮದ ಅನುಸಾರ ಮ್ಯಾನ್ಯುಯಲ್ ಸ್ಕ್ಯಾವೆಂಜಿಂಗ್ ಆಚರಣೆಗೆ ಕಾರಣರಾದವರು ಮತ್ತು ಈ ಪದ್ಧತಿಯನ್ನು ಮಾಡಿಸುತ್ತಿರುವವರು ಅಪರಾಧಿಗಳಾಗುತ್ತಾರೆ. ಸದರಿ ನಿಯಮದನ್ವಯ ಒಣ ಶೌಚಾಲಯಗಳನ್ನು ಹೊಂದಿರುವುದಾಗಲಿ, ತಲೆ ಮೇಲೆ ಮಲ ಹೊರುವುದಾಗಲಿ ಹಾಗೂ ಮಲ ಹೋರುವ ಪದ್ಧತಿಗೆ ಪ್ರಚೋದನೆ ನೀಡುವುದನ್ನು ನಿಷೇಧಿಸಿದೆ. ಪುರಸಭಾ ವ್ಯಾಪ್ತಿಯಲ್ಲಿ ಶೌಚಾಲಯದ ಗುಂಡಿಗಳನ್ನು ಯಾವ ವ್ಯಕ್ತಿಗಳೂ ಸಹ ಸ್ವಚ್ಛ ಮಾಡದೆ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರದ ಮೂಲಕವೇ ಸ್ವಚ್ಛಗೊಳಿಸತಕ್ಕದ್ದು. ಸುತ್ತ ಮುತ್ತ ಲಭ್ಯ ವಿರುವ ಸಕ್ಕಿಂಗ್ ಮತ್ತು ಜೆಟ್ಟಿಂಗ್ ಯಂತ್ರಗಳ ಸಹಾಯದಿಂದಲೇ ಸ್ವಚ್ಛಗೊಳಿಸತಕ್ಕದ್ದು ಹಾಗೂ ಶೌಚಾಲಯದ ಪೈಪ್‌ಲೈನ್ ಸಂಪರ್ಕವನ್ನು ಮಳೆನೀರು ಚರಂಡಿಗೆ ಬಿಡುವುದನ್ನು ನಿಷೇಧಿಸಿದೆ ತಪ್ಪಿದ್ದಲ್ಲಿ ಈ ಬಗ್ಗೆ the employment of Manual Scavengers and Construction of Dry Latrines (Prohibition) Act 1993 and 2013 ರನ್ವಯ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುವುದು. ಎಂದು ಸಮಸ್ತ ನಾಗರೀಕರಿಗೆ ಈ ಮೂಲಕ ತಿಳಿಸಿದೆ. ಹಾಗೂ ಈ ನಿಟ್ಟಿನಲ್ಲಿ ಯಾವುದೇ ಅನಾಹುತಕ್ಕೆ ಆಸ್ಪದ ನೀಡದಂತೆ ಎಚ್ಚರಿಕೆ ವಹಿಸುವಂತೆಯೂ ಸಹ ತಿಳಿಯಪಡಿಸಲಾಗಿದೆ.

ಸಹಿ/– ಮುಖ್ಯಾಧಿಕಾರಿ, ಪುರಸಭೆ ಜಿಗಣಿ
ಸಹಿ/– ಆಡಳಿತಾಧಿಕಾರಿಗಳು, ಪುರಸಭೆ ಜಿಗಣಿ
ವಾ.ಸಾ.ಸಂ.ಇ/ಬೆಂ.ನಗರ/ಶಿರಡಿ ಸಾಯಿ/3152/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಐಎಂಎ: ಇ.ಡಿ ದೂರು ಪ್ರಶ್ನಿಸಿದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐ ಮಾನಿಟರಿ ಅಡ್ವೈಸರಿ' (ಐಎಂಎ) ಬಹುಕೋಟಿ ಕಂಪನಿಯ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಸಹಾಯಕ ನಿರ್ದೇಶಕ ಬಸವರಾಜ್ ಆರ್. ಮಗ್ದುಮ್ ಅವರ ದೂರು ದಾಖಲಿಸುವ ಅಧಿಕಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

'ನನ್ನ ವಿರುದ್ಧ ಅಧಿಕಾರಿ ಮಗ್ದುಮ್ ಅವರಿಗೆ ಪ್ರಕರಣ ದಾಖಲಿಸುವ ಅಧಿಕಾರ ವ್ಯಾಪ್ತಿ ಇಲ್ಲ' ಎಂದು ಆಕ್ಷೇಪಿಸಿ ಆರೋಪಿ ಅಬ್ಬಾಸ್ ಮಹಮ್ಮದ್ ಖಾನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. 'ದೂರು ರದ್ದುಪಡಿಸುವ ಅಥವಾ ಈ ವಿಚಾರದಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಡಿ.ಕೆ. ಸುರೇಶ್ ಬೇಜವಾಬ್ದಾರಿ ಟ್ವೀಟ್: ಸಚಿವ ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸರ್ಕಾರದ ಶಾಲಾ ಪಠ್ಯಪುಸ್ತಕದಲ್ಲಿ ಮಲೆಯಾಳಿ ನಟ ಕುಂಚಾಬೋ ಬಾಬನ್ ಚಿತ್ರ ಮುದ್ರಿಸಲಾಗಿದೆ ಎಂದು ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಮಾಡಿರುವ ಟ್ವೀಟ್ ಅತ್ಯಂತ ಬೇಜವಾಬ್ದಾರಿತನದಿಂದ ಕೂಡಿದೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದ್ದಾರೆ.

'ಸರ್ಕಾರದ ಸಂಸ್ಥೆಯಾಗಿರುವ ಕರ್ನಾಟಕ ಪಠ್ಯ ಪುಸ್ತಕ ಸಂಘವು ಇಂತಹ ತಪ್ಪು ಮಾಡಿಲ್ಲ. ಯಾವುದೋ ಟ್ವೀಟ್ ಉಲ್ಲೇಖಿಸಿ ಟ್ವೀಟ್ ಮಾಡಿರುವ ಸುರೇಶ್ ಅವರು, ಶಿಕ್ಷಣದ ವಿಷಯದಲ್ಲಿ ರಾಜಕಾರಣ ಮಾಡಲು ಹೊರಟಿರುವುದು ಸರಿಯಲ್ಲ. ತಪ್ಪು ಮಾಹಿತಿ ನೀಡುವ ಇಂತಹ ಟ್ವೀಟ್‌ಗಳಿಂದಾಗಿ ಸರ್ಕಾರಿ ಶಾಲೆಗಳ ಮೇಲೆ ಪೋಷಕರು, ಮಕ್ಕಳು ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆಯಾಗಲಿದೆ. ಇಂತಹ ಸೂಕ್ಷ್ಮ ವಿಚಾರಗಳಲ್ಲಿ ರಾಜಕಾರಣ ಮಾಡುವುದನ್ನು ಅವರು ಬಿಡಲಿ' ಎಂದು ಅವರ ಸಲಹೆ ನೀಡಿದ್ದಾರೆ.



ಬಿ.ಸಿ. ನಾಗೇಶ್

ದಾರಿ ತಪ್ಪಿದ ಸಂಸದ: ಡಿ.ಕೆ. ಸುರೇಶ್‌ಗೆ ಸ್ಪಷ್ಟನೆ ನೀಡಿರುವ ಮಾಜಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್, ಪಠ್ಯ ಪುಸ್ತಕದಲ್ಲಿ 'ಅಂಚೆಯಣ್ಣ' ಎಂಬ ಶೀರ್ಷಿಕೆಗೆ ಮಲಯಾಳಂ ಚಲನಚಿತ್ರ ನಟರ ಫೋಟೋ ಹಾಕಿರುವುದನ್ನು ಬಿಜೆಪಿ ಸರ್ಕಾರದ ಕಾರ್ಯ ಎಂದು ಬಣ್ಣಿಸಿ ಇದು ಯಾರ ನಿರ್ದೇಶನದಲ್ಲಿ ಮಾಡಿರುವುದು ಎಂದು ಕೇಳಿರುವ ಡಿ.ಕೆ.ಸುರೇಶ್ ಅವರ ಅವಸರದ ಆರೋಪದಲ್ಲಿ ಯಾವುದೇ ಸತ್ಯವಿಲ್ಲ ಎಂದಿದ್ದಾರೆ.

'ಸುರೇಶ್ ರವರೇ, ಅಷ್ಟು ಧಾವಂತ ಬೇಡ. ಅವಸರ ವಿವೇಚನೆ ಕಸಿದುಕೊಳ್ಳುತ್ತದೆ. ನಿಮ್ಮ ಗ್ರಹಿಕೆ ಸಂಪೂರ್ಣವಾಗಿ ತಪ್ಪು. ಇದು ಶಿಕ್ಷಣ ಇಲಾಖೆ ಪ್ರಕಟಿಸಿರುವ ಅಧಿಕೃತ ಪಠ್ಯ ಪುಸ್ತಕವಲ್ಲ. ಇದೊಂದು ಖಾಸಗಿ ಪ್ರಕಾಶನದ ಪುಸ್ತಕ. ಅದನ್ನೇ ಬಿಜೆಪಿ ಸರ್ಕಾರದ ಶಾಲಾ ಪಠ್ಯದ ಕೇಸರೀಕರಣವೆಂದು ಬಣ್ಣಿಸುವ ನಿಮ್ಮ ಪ್ರಯತ್ನಕ್ಕೆ ಅರ್ಥವಿಲ್ಲ. ದಾರಿ ತಪ್ಪಿಸುವ ಕೆಲಸವೆಂದರೆ ಇದೇ ಇರಬೇಕು ಅಥವಾ ನೀವೇ ದಾರಿ ತಪ್ಪಿರಬೇಕು' ಎಂದು ಅವರು ಟೀಕಿಸಿದ್ದಾರೆ.

'ಪಠ್ಯಪುಸ್ತಕದಲ್ಲಿ ಮಲೆಯಾಳಿ ನಟನ ಚಿತ್ರ ಮುದ್ರಿಸಿಲ್ಲ': 'ಕರ್ನಾಟಕ ಸರ್ಕಾರದ ಶಾಲಾ ಪಠ್ಯಪುಸ್ತಕದಲ್ಲಿ ಮಲೆಯಾಳಿ ಚಿತ್ರನಟ ಕುಂಚಾಕೋ ಬಾಬನ್ ಅವರ ಚಿತ್ರವನ್ನು ಅಂಚೆಯಣ್ಣನ ಶೀರ್ಷಿಕೆ ಜೊತೆ ಪ್ರಕಟಿಸಿಲ್ಲ' ಎಂದು ಕರ್ನಾಟಕ ಪಠ್ಯಪುಸ್ತಕ ಸಂಘ ಸ್ಪಷ್ಟನೆ ನೀಡಿದೆ.

'1ರಿಂದ 10ನೇ ತರಗತಿವರೆಗಿನ ಯಾವುದೇ ವಿಷಯದ ಪಠ್ಯಪುಸ್ತಕಗಳಲ್ಲೂ ಬಾಬನ್ ಅವರ ಚಿತ್ರ ಮುದ್ರಿಸಿಲ್ಲ. ಪಠ್ಯಪುಸ್ತಕ ಸಂಘದಿಂದ ಮುದ್ರಿತವಾಗಿರುವ ಪಠ್ಯಪುಸ್ತಕಗಳಲ್ಲಿಯೂ ಸದರಿ ಚಿತ್ರ ಇಲ್ಲ' ಎಂದು ಹೇಳಿದೆ.

ಮಾಧುಸ್ವಾಮಿ ಮರು ನೇಮಕಕ್ಕೆ ಒತ್ತಾಯ

ಬೆಂಗಳೂರು: ಕಾನೂನು ಮತ್ತು ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಅವರನ್ನು ತುಮಕೂರು ಜಿಲ್ಲೆ ಉಸ್ತುವಾರಿಯಿಂದ ಕೈಬಿಟ್ಟಿರುವ ಪರಿಣಾಮ ಚಾಲ್ತಿಯಲ್ಲಿರುವ ಜಿಲ್ಲೆಯ ಅಭಿವೃದ್ಧಿ ಕಾರ್ಯಗಳಿಗೆ ತೀವ್ರ ಹಿನ್ನಡೆಯಾಗಲಿದೆ ಎಂದು ವಿಶ್ವಗುರು ಬಸವಣ್ಣ ಬ್ರಿಗೇಡ್ ಹೇಳಿದೆ.

ಮಾಧುಸ್ವಾಮಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನೀರಾವರಿ, ರಸ್ತೆಗಳ ಅಭಿವೃದ್ಧಿ, ಕುಡಿಯುವ ನೀರು ಯೋಜನೆಗಳನ್ನು ಅನುಷ್ಠಾನಗೊಳಿಸಲು ಶ್ರಮಿಸುತ್ತಿದ್ದರು. ಸಮರೋಪಾದಿಯಲ್ಲಿ ನಡೆಯುತ್ತಿದ್ದ ಯೋಜನೆಗಳಿಗೆ ಇನ್ನು ಕಡಿವಾಣ ಬೀಳುತ್ತದೆ. ಈ ಯೋಜನೆಗಳು ಪೂರ್ಣಗೊಳ್ಳುವವರೆಗೆ ಮುಂದುವರಿಸಬೇಕಿತ್ತು ಎಂದು ಸಂಘಟನೆಯ ಕಾರ್ಯಾಧ್ಯಕ್ಷ ಜ್ಞಾನಮೂರ್ತಿ, ರಾಜ್ಯ ಘಟಕದ ಅಧ್ಯಕ್ಷ ಬಸವರಾಜ ಮತ್ತು ಗೌರವಾಧ್ಯಕ್ಷ ಎಚ್.ಮಹೇಶ್ ಹೇಳಿದ್ದಾರೆ.

ಜಿಲ್ಲಾ ಉಸ್ತುವಾರಿಯನ್ನಾಗಿ ಮಾಧುಸ್ವಾಮಿ ಅವರನ್ನೇ ಮರುನೇಮಕ ಮಾಡಬೇಕು ಎಂದು ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದ್ದಾರೆ.

ಸ್ಪ್ಯಾನಿಶ್ ದಂತಕಥೆ 21 ನೇ ಗ್ರ್ಯಾಂಡ್ ಸ್ಲಾಮ್ ಜಯಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ!

ಗ್ರಂಥಸ್ವಾಮ್ಯ ಹಕ್ಕು ಉಲ್ಲಂಘನೆ ಆರೋಪ: ಓಲಾ ಕ್ಯಾಬ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ರಂಥಸ್ವಾಮ್ಯ ಕಾಯ್ದೆ ಉಲ್ಲಂಘನೆ ಆರೋಪದಡಿ ಲಹರಿ ಆಡಿಯೊ ಸಂಸ್ಥೆ ನಮ್ಮ ಕಂಪನಿ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರದ್ದುಗೊಳಿಸಬೇಕು' ಎಂದು ಕೋರಿ ಓಲಾ ಕ್ಯಾಬ್ (ಎನ್‌ಎಐ ಖಾಸಗಿ ಕಂಪನಿ) ಪ್ರತಿನಿಧಿಗಳು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಕಂಪನಿ ಪ್ರತಿನಿಧಿ ಎ.ಎಂ.ಇಕ್ತಿಯಾರ್ ಉದ್ದೀನ್ ಸೇರಿದಂತೆ ಮೂವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ, 'ದೂರು ಆಧರಿಸಿ ಎಫ್‌ಐರ್ ದಾಖಲು ಮಾಡಿರುವ ಪೊಲೀಸರ ಕ್ರಮ ಸರಿಯಾಗಿಯೇ ಇದೆ. ಇದರಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ' ಎಂದು ವಿಲೇವಾರಿ ಮಾಡಿದೆ.

ಪ್ರಕರಣವೇನು?: ಓಲಾ ಕ್ಯಾಬ್‌ಗಳಲ್ಲಿ ಟಿವಿ ಮತ್ತು ಡಿಸ್‌ಪ್ಲೇ ಸೆಟ್‌ಗಳನ್ನು ಅಳವಡಿಸಲಾಗಿತ್ತು. ಅವುಗಳಲ್ಲಿ ಜನಪ್ರಿಯ ಚಿತ್ರಗೀತೆಗಳ ವಿಡಿಯೊ ಮತ್ತು ಆಡಿಯೊ ಪ್ರಸಾರ ಮಾಡಲಾಗಿತ್ತು.

'ಓಲಾ ಕಂಪನಿ ನಮ್ಮ ಅನುಮತಿ ಪಡೆಯದೆ, ನಮ್ಮ ಗ್ರಂಥಸ್ವಾಮ್ಯದ ಹಾಡುಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಂಡಿದೆ. ಇದು ಗ್ರಂಥಸ್ವಾಮ್ಯ ಕಾಯ್ದೆ-1957ರ ಉಲ್ಲಂಘನೆ' ಎಂದು ಆರೋಪಿಸಿ ಲಹರಿ ರೆಕಾರ್ಡಿಂಗ್ ಕಂಪನಿ 2017ರ ಮೇ 13ರಂದು ಪೊಲೀಸರಿಗೆ ದೂರು ನೀಡಿತ್ತು. ಇದರನ್ವಯ ಹೆಚ್ಚುವರಿ ಪೊಲೀಸ್ ಆಯುಕ್ತರು ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶಿಸಿದ್ದರು. ಇದನ್ನು ಪ್ರಶ್ನಿಸಿ ಓಲಾ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು.

ರಾಜ್ಯದ ಹೆಗಲಿಗೆ ಅಧಿಕ ಸಾಲದ ಹೊರೆ

ಒಂದನೇ ಪುಟದಿಂದ

ಕರ್ನಾಟಕದ ನಂತರ ಅತಿ ಹೆಚ್ಚು ಸಾಲ ಮಾಡಿರುವ ರಾಜ್ಯ ಮಹಾರಾಷ್ಟ್ರ ₹25,759 ಕೋಟಿ, ಗುಜರಾತ್ ₹22,262.21 ಕೋಟಿ. ಈ ಅವಕಾಶ ಬಳಸಿ ವಿವಿಧ ರಾಜ್ಯಗಳು ಮಾಡಿರುವ ಒಟ್ಟು ಸಾಲದ ಮೊತ್ತ ₹2.69 ಲಕ್ಷ ಕೋಟಿ.

ಜಿಎಸ್‌ಟಿ ಪಾಲು ಸುಧಾರಣೆ: ಈಗ ದೇಶದ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ ಆಗಿರುವುದರಿಂದ ಕೇಂದ್ರ ಸರ್ಕಾರ ರಾಜ್ಯಗಳಿಗೆ ನೀಡಿದ ವಾಗ್ದಾನದಂತೆ ತೆರಿಗೆ ಪಾಲಿನ ಹಂಚಿಕೆಯಲ್ಲಿ ಅಲ್ಪ ಪ್ರಮಾಣದ ಹೆಚ್ಚಳ ಮಾಡಿದೆ.

ಆ ಪ್ರಕಾರ ರಾಜ್ಯಕ್ಕೆ ₹29,000 ಕೋಟಿ ಸಿಗಲಿದೆ. ಕಳೆದ ಬಾರಿ ₹26,000 ಕೋಟಿ ಸಿಕ್ಕಿತ್ತು. ಸದ್ಯದ ಅಂದಾಜಿನ ಪ್ರಕಾರ ಕಳೆದ ವರ್ಷಕ್ಕಿಂತ ₹3,000 ಕೋಟಿ ಹೆಚ್ಚು ಸಿಗಲಿದೆ. 15 ನೇ ಹಣಕಾಸು ಆಯೋಗದ ಶಿಫಾರಸು ಜಾರಿ ಆದ ಬಳಿಕ ರಾಜ್ಯಕ್ಕೆ ನಿರೀಕ್ಷಿತ ಪ್ರಮಾಣದಲ್ಲಿ ತೆರಿಗೆ ಪಾಲು ಸಿಗಲಿಲ್ಲ. 2019-20 ರಲ್ಲಿ ಒಟ್ಟು ತೆರಿಗೆ ಸಂಗ್ರಹದಿಂದ ಕರ್ನಾಟಕದ ಪಾಲು ₹39,000 ಕೋಟಿ ಸಿಗಬೇಕಿತ್ತು, 2020-21ರಲ್ಲಿ ಅದು ₹28,000 ಕೋಟಿಗೆ ಕುಸಿತವಾಯಿತು. ಆದರೆ, ಎಲ್ಲ ರಾಜ್ಯಗಳೂ ಆರ್ಥಿಕ ಸಂಕಷ್ಟದ ಸುಳಿಗೆ ಸಿಲುಕಿದ್ದವು.

ಹೂ ಮಾರಾಟಕ್ಕೆ ಸುಧಾಕರ್ ಅಡ್ಡಿ: ಹೈಕೋರ್ಟ್ ನೋಟಿಸ್

ಒಂದನೇ ಪುಟದಿಂದ

'ರಾಜಕೀಯ ಒತ್ತಡವೇ ಕಾರಣ': 'ಎಪಿಎಂಸಿ ಮಾರುಕಟ್ಟೆಯಲ್ಲಿ ಈಗಾಗಲೇ ತರಕಾರಿ ಮಾರಾಟಗಾರರಿಗೆ ಅನುವು ಮಾಡಿಕೊಡಲಾಗಿದೆ. ಆದರೆ, ಹೂವು ಬೆಳೆಗಾರರಿಗೆ ಮಾತ್ರ ರಾಜಕೀಯ ಕಾರಣಗಳಿಗೆ ವ್ಯಾಪಾರ ನಡೆಸಲು ಅವಕಾಶ ನೀಡುತ್ತಿಲ್ಲ. ಆದ್ದರಿಂದ, ಕೂಡಲೇ ಹೂವು ಮಾರಾಟಗಾರರಿಗೂ ಅವಕಾಶ ನೀಡುವಂತೆ ನಿರ್ದೇಶಿಸಬೇಕು' ಎಂದು ಅರ್ಜಿಯಲ್ಲಿ ಕೋರಲಾಗಿದೆ.

*T&C Apply. All prices are inclusive of taxes. Offers valid only for today and till stocks last. Images used are for representative purposes only and may differ from the actual products. FreshToHome is only a brand name or trade mark and does not represent its true nature.

Postgraduate Programmes 2022

Admissions Open!

Azim Premji University

M.A.
- Development
- Economics
- Education
- Public Policy & Governance

LL.M.
- Law & Development

Apply at azimpremjiuniversity.edu.in/postgraduate
Last date to apply: Feb 28, 2022

Email: admissions@apu.edu.in | Azim Premji University, Sarjapura, Bengaluru

ರಿಸರ್ವ್ ಬ್ಯಾಂಕ್ - ಏಕೀಕೃತ ಲೋಕಪಾಲ ಯೋಜನೆ

ಆರ್‌ಬಿಐ ನಿಯಂತ್ರಿತ ಘಟಕಗಳ ವಿರುದ್ಧ ದೂರುಗಳ ಪರಿಹಾರಕ್ಕಾಗಿ ಏಕೈಕ ಸೌಲಭ್ಯ

30 ದಿನಗಳೊಳಗೆ ದೂರಿಗೆ ಪರಿಹಾರ ಸಿಗದಿದ್ದರೆ, ಅಥವಾ ಆರ್‌ಬಿಐ ಮುಖೇನ ನಿಯಮಿತ ಬ್ಯಾಂಕ್/ಎನ್‌ಬಿಎಫ್‌ಸಿ/ಸಿಸ್ಟಮ್ ಪಾರ್ಟಿಸಿಪೆಂಟ್ ಮುಖೇನ ತೃಪ್ತಿದಾಯಕ ಪರಿಹಾರ ಸಿಗದಿದ್ದರೆ ನೀವು ಲೋಕಪಾಲ/ಒಂಬುಡ್ಸ್‌ಮನ್‌ಗೆ ಅವರ ದೂರನ್ನು ಸಲ್ಲಿಸಬಹುದು

https://cms.rbi.org.inನಲ್ಲಿ ಆನ್‌ಲೈನ್‌ನಲ್ಲಿ ದೂರುಗಳನ್ನು ಸಲ್ಲಿಸಿ ಅಥವಾ ಇಮೇಲ್ ಮೂಲಕ email: crpc@rbi.org.inಗೆ ಅಥವಾ ಪೋಸ್ಟ್ ಮೂಲಕ ಸೆಂಟ್ರಲೈಜ್ಡ್ ರಿಸಿಪ್ಟ್‌ಗೆ ಸಲ್ಲಿಸಿ ಮತ್ತು ಪ್ರೊಸೆಸಿಂಗ್ ಸೆಂಟರ್ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಚಂಡಿಗಢ-160017

ಸೇವಾನ್ಯೂನ್ಯತೆಗೆ ಸಂಬಂಧಿಸಿದ ದೂರುಗಳಿಗೂ ಅನ್ವಯ (ಪಟ್ಟಿಯಲ್ಲಿ ಇಲ್ಲದ ದೂರುಗಳನ್ನು ಹೊರತುಪಡಿಸಿ)

ಕಂಪ್ಲೈಂಟ್ ಮ್ಯಾನೇಜ್‌ಮೆಂಟ್ ಸಿಸ್ಟಮ್‌ನಲ್ಲಿ (https://cms.rbi.org.in)ನಿಮ್ಮ ದೂರಿನ ಸ್ಥಿತಿಯನ್ನು ಟ್ರ್ಯಾಕ್ ಮಾಡಿ

ಹೆಚ್ಚಿನ ಮಾಹಿತಿಗಾಗಿ **14448**ಗೆ ಕರೆ ಮಾಡಿ. ದೂರು ಸಲ್ಲಿಸಲು **https://cms.rbi.org.in**ಗೆ ಭೇಟಿ ನೀಡಿ

ಆರ್‌ಬಿಐ ಹೇಳುತ್ತೆ... ಜಾಣರಾಗಿರಿ, ಜಾಗರೂಕರಾಗಿರಿ!

ಹೆಚ್ಚಿನ ಮಾಹಿತಿಗಾಗಿ **https://rbikehtahai.rbi.org.in**ಗೆ ಭೇಟಿ ನೀಡಿ / ಫೀಡ್‌ಬ್ಯಾಕ್ ನೀಡಲು **rbikehtahai@rbi.org.in**ಗೆ ಬರೆಯಿರಿ

ಸಾರ್ವಜನಿಕರ ಹಿತಾಸಕ್ತಿಗಾಗಿ ಜಾರಿಗೊಳಿಸುವವರು
ಭಾರತೀಯ ರಿಸರ್ವ್ ಬ್ಯಾಂಕ್
RESERVE BANK OF INDIA
www.rbi.org.in





ನೇಗಿಲ ಯೋಗಿ... ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರು (ಪ್ರಾತಿನಿಧಿಕ ಚಿತ್ರ)

ನಲ್ಲಿ ನೀರು ಪೂರೈಕೆಗೆ ₹60ಸಾವಿರ ಕೋಟಿ

ನವದೆಹಲಿ(ಪಿಟಿಐ): ಪ್ರತಿಯೊಂದು ಮನೆಗೂ ಶುದ್ಧವಾದ ಕುಡಿಯುವ ನೀರು ಒದಗಿಸುವ 'ಹರ್ ಘರ್ ನಲ್ ಸೇ ಜಲ್' ಯೋಜನೆ ಅಡಿಯಲ್ಲಿ 2022–23ನೇ ಸಾಲಿನಲ್ಲಿ 3.8 ಕೋಟಿ ಕುಟುಂಬಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲು ₹60ಸಾವಿರ ಕೋಟಿ ಮೀಸಲಿಡಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ತಿಳಿಸಿದ್ದಾರೆ.

ಈ ಯೋಜನೆಯು ಪ್ರಸ್ತುತ 8.7 ಕೋಟಿ ಕುಟುಂಬಗಳ ವ್ಯಾಪ್ತಿಯನ್ನು ಹೊಂದಿದ್ದು, ಕಳೆದೆರಡು ವರ್ಷಗಳಲ್ಲಿ 5.5 ಕೋಟಿ ಕುಟುಂಬಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲಾಗಿದೆ ಎಂದು ಹೇಳಿದ್ದಾರೆ.

80 ಲಕ್ಷ ಮನೆ: ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿಯಲ್ಲಿ 2022–23ನೇ ಸಾಲಿನಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಗುರುತಿಸಲಾಗಿರುವ ಫಲಾನುಭವಿಗಳಿಗೆ 80 ಲಕ್ಷ ಮನೆಗಳನ್ನು ಪೂರ್ಣಗೊಳಿಸಿ ವಿತರಿಸಲಾಗುವುದು ಎಂದು ಹಣಕಾಸು ಸಚಿವೆ ತಿಳಿಸಿದ್ದಾರೆ. ಇದಕ್ಕಾಗಿ ₹48 ಸಾವಿರ ಕೋಟಿ ಅನುದಾನ ಮೀಸಲಿಡಲಾಗಿದೆ ಎಂದೂ ಘೋಷಿಸಿದ್ದಾರೆ.

ನಗರ ಪ್ರದೇಶದ ಮಧ್ಯಮ ವರ್ಗ ಮತ್ತು ಆರ್ಥಿಕವಾಗಿ ದುರ್ಬಲರಾದವರಿಗೆ ಮನೆ ನಿರ್ಮಾಣದ ವೇಳೆ ಭೂಮಿ ಮತ್ತು ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಅನುಮೋದನೆ ಪಡೆಯಲು ತಗಲುವ ಕಾಲಾವಧಿಯನ್ನು ಕಡಿತಗೊಳಿಸಲು ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳೊಂದಿಗೆ ಕೆಲಸ ಮಾಡಲಿದೆ ಎಂದೂ ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ನರೇಗಾಕ್ಕೆ ₹73ಸಾವಿರ ಕೋಟಿ

ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಗೆ (ಎಂನರೇಗಾ) 2022–23ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ₹73ಸಾವಿರ ಕೋಟಿ ಮೀಸಲಿಟ್ಟಿದೆ. ಇದು ಪ್ರಸಕ್ತ ಹಣಕಾಸು ವರ್ಷದ ಪರಿಷ್ಕೃತ ಅಂದಾಜಿಗಿಂತ ಶೇ25.51 ರಷ್ಟು ಕಡಿಮೆಯಾಗಿದೆ.

ಕಳೆದ ವರ್ಷದ ಬಜೆಟ್‌ನಲ್ಲಿಯೂ ನರೇಗಾಕ್ಕೆ ₹73 ಸಾವಿರ ಕೋಟಿ ಮೀಸಲಿಡಲಾಗಿತ್ತು. ಆದರೆ ಕಾಮಗಾರಿಗೆ ಹೆಚ್ಚಿನ ಬೇಡಿಕೆ ಬಂದ ಕಾರಣ ಈ ಮೊತ್ತವನ್ನು ₹98ಸಾವಿರ ಕೋಟಿಗೆ ಹೆಚ್ಚಿಸಲಾಗಿತ್ತು.

ದೇಶದ ಗ್ರಾಮೀಣ ಪ್ರದೇಶಗಳಲ್ಲಿನ ಕುಟುಂಬಗಳ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸುವ ಗುರಿಯನ್ನು ನರೇಗಾವು ಹೊಂದಿದೆ. ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಠ 100 ದಿನಗಳ ಕೆಲಸವನ್ನು ಒದಗಿಸುತ್ತದೆ.

ನದಿಗಳ ಜೋಡಣೆಗೆ ಯೋಜನೆ

ಮೈಸೂರು ಜಿಲ್ಲೆ ಕೆ.ಆರ್‌ನಗರ ತಾಲ್ಲೂಕಿನ ಚುಂಚನಕಟ್ಟೆಯಲ್ಲಿ ಕಾವೇರಿ ನದಿ ಧುಮ್ಮಿಕ್ಕಿ ಹರಿಯುವ ದೃಶ್ಯ

ನವದೆಹಲಿ: ಕರ್ನಾಟಕದ ಕಾವೇರಿ ಮತ್ತು ಆಂಧ್ರಪ್ರದೇಶದ ಪೆನ್ನಾರ್ ನದಿಗಳ ಜೋಡಣೆ ಸೇರಿದಂತೆ ವಿವಿಧ ನದಿಗಳನ್ನು ಸಂಪರ್ಕಿಸುವ ಮಹತ್ವದ ಐದು ನದಿ ಜೋಡಣಾ ಯೋಜನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಈ ಸಾಲಿನ ಬಜೆಟ್‌ನಲ್ಲಿ ಈ ಯೋಜನೆ ಪ್ರಕಟಿಸಿದ್ದು, ಒಮ್ಮೆ ಫಲಾನುಭವಿ ರಾಜ್ಯಗಳ ನಡುವೆ ಸಹಮತ ಏರ್ಪಡುತ್ತಿದ್ದಂತೆ ಕಾರ್ಯಗತಗೊಳಿಸಲಾಗುವುದು. ದಮನ್ ಗಂಗಾ–ಪಿಂಜಾಲ್, ಪರ್–ತಾಪಿ–ನರ್ಮದಾ, ಗೋದಾವರಿ–ಕೃಷ್ಣಾ, ಕೃಷ್ಣಾ–ಪೆನ್ನಾರ್, ಪೆನ್ನಾರ್–ಕಾವೇರಿ ನದಿಗಳ ಜೋಡಣೆ ಸಂಬಂಧ ಸಮಗ್ರ ಯೋಜನಾ ವರದಿ ಸಜ್ಜಾಗಿದೆ ಎಂದು ಸರ್ಕಾರ ತಿಳಿಸಿದೆ.

ಕೆನ್–ಬೆತ್ವಾ ಯೋಜನೆ: ನೀರಾವರಿ ಸೌಲಭ್ಯ, ಕುಡಿಯುವ ನೀರು ಪೂರೈಕೆ, ಜಲವಿದ್ಯುತ್ ಉತ್ಪಾದನೆ ಒಳಗೊಂಡ ಅಂದಾಜು ₹ 44,605 ಕೋಟಿ ವೆಚ್ಚದ ಕೆನ್–ಬೆತ್ವಾ ಯೋಜನೆಯನ್ನೂ ಕೇಂದ್ರ ಸರ್ಕಾರ ಪ್ರಕಟಿಸಿದೆ.

ಯೋಜನೆಯಡಿ 9.08 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ, 62 ಲಕ್ಷ ಜನರಿಗೆ ಕುಡಿಯುವ ನೀರು ಪೂರೈಕೆ, 103 ಮೆಗಾವಾಟ್ ಜಲವಿದ್ಯುತ್ ಉತ್ಪಾದನೆ 27 ಮೆಗಾವ್ಯಾಟ್ ಸೋಲಾರ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಈ ಯೋಜನೆಯಡಿ ಹೊಂದಲಾಗಿದೆ. ಉದ್ದೇಶಿತ ಯೋಜನೆಗಾಗಿ 2021–22ನೇ ಸಾಲಿನಲ್ಲಿ 4,300 ಕೋಟಿ, 2022–23ನೇ ಸಾಲಿನಲ್ಲಿ ₹ 1,400 ಕೋಟಿ ಅನ್ನೂ ಹಂಚಿಕೆ ಮಾಡಲಾಗಿದೆ.

ಎಣ್ಣೆಕಾಳುಗಳ ಆಮದು ಮೇಲಿನ ಅವಲಂಬನೆ ತಗ್ಗಿಸಲು ಯೋಜನೆ

ರಾಸಾಯನಿಕ ಮುಕ್ತ ಕೃಷಿಗೆ ಉತ್ತೇಜನ

ನವದೆಹಲಿ: ದೇಶದಾದ್ಯಂತ ರಾಸಾಯನಿಕ ಮುಕ್ತ ಹಾಗೂ ನೈಸರ್ಗಿಕ ಕೃಷಿಗೆ ಉತ್ತೇಜನ, ಎಣ್ಣೆಕಾಳುಗಳ ಆಮದು ಮೇಲಿನ ಅವಲಂಬನೆ ಕಡಿಮೆಗೊಳಿಸಲು ಎಣ್ಣೆಕಾಳುಗಳ ಕೃಷಿಗೆ ಪ್ರೋತ್ಸಾಹ ನೀಡಲು ಸಮಗ್ರ ಯೋಜನೆ ಜಾರಿ ಸೇರಿದಂತೆ ಕೃಷಿ ಕ್ಷೇತ್ರದ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು 2022–23ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಕೃಷಿ ಭೂಮಿಯ ಫಲವತ್ತತೆ ಕ್ಷೀಣಿಸುವುದನ್ನು ತಡೆಗಟ್ಟುವ ಪ್ರಮುಖ ಉದ್ದೇಶದಿಂದ ನೈಸರ್ಗಿಕ ಕೃಷಿಗೆ ಪ್ರೋತ್ಸಾಹ ನೀಡಲು ಈ ಯೋಜನೆಯನ್ನು ದೇಶದಾದ್ಯಂತ ಜಾರಿಗೊಳಿಸುತ್ತಿದ್ದರೂ, ಮೊದಲ ಹಂತದಲ್ಲಿ, ಗಂಗಾ ನದಿ ಪಾತ್ರದಲ್ಲಿ 5 ಕಿ.ಮೀ. ವ್ಯಾಪ್ತಿಯಲ್ಲಿನ ರೈತರಿಗೆ ಈ ಯೋಜನೆಯಡಿ ಒತ್ತು ನೀಡಲಾಗುವುದು ಎಂದು ತಿಳಿಸಲಾಗಿದೆ.

ನೈಸರ್ಗಿಕ ಕೃಷಿಯ ಜೊತೆಗೆ ಶೂನ್ಯಬಂಡವಾಳ ಹಾಗೂ ಸಾವಯವ ಕೃಷಿ ಪದ್ಧತಿಗಳನ್ನೂ ಪ್ರೋತ್ಸಾಹಿಸುವುದು, ಕೃಷಿಯಲ್ಲಿ ಆಧುನಿಕ ಪದ್ಧತಿಗಳ ಅಳವಡಿಕೆ, ಮೌಲ್ಯವರ್ಧನೆ ಹಾಗೂ ಸಮರ್ಪಕ ನಿರ್ವಹಣೆ ಅಗತ್ಯ. ಕೃಷಿ ಕ್ಷೇತ್ರದ ಈ ಅಗತ್ಯಗಳನ್ನು ಪೂರೈಸುವ ಸಲುವಾಗಿ ಕೃಷಿ ವಿಶ್ವವಿದ್ಯಾಲಯಗಳು ತಮ್ಮ ಪಠ್ಯಕ್ರಮವನ್ನು ಪರಿಷ್ಕರಿಸಬೇಕಾಗುತ್ತದೆ. ಹಾಗಾಗಿ, ಪಠ್ಯಕ್ರಮಗಳ ಪರಿಷ್ಕರಣೆ ಮಾಡಲು ರಾಜ್ಯಗಳನ್ನು ಉತ್ತೇಜಸಲಾಗುವುದು ಎಂದಿದ್ದಾರೆ.

ಎಣ್ಣೆಕಾಳುಗಳ ಉತ್ಪಾದನೆ ಹೆಚ್ಚಳಕ್ಕೆ ಕ್ರಮ: ಎಣ್ಣೆಕಾಳುಗಳನ್ನು ಆಮದು ಮಾಡಿಕೊಳ್ಳುವುದರ ಮೇಲಿನ ಅವಲಂಬನೆಯನ್ನು ಕಡಿಮೆಗೊಳಿಸಲು ಬಜೆಟ್‌ನಲ್ಲಿ ಯೋಜನೆಯನ್ನು ಪ್ರಕಟಸಲಾಗಿದೆ. ದೇಶದ ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಸಮಗ್ರವಾದ ಹಾಗೂ ವ್ಯವಸ್ಥಿತವಾದ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂದೂ ನಿರ್ಮಲಾ ಘೋಷಿಸಿದ್ದಾರೆ.

ಸಿರಿಧಾನ್ಯಗಳ ಮಾರುಕಟ್ಟೆ ವಿಸ್ತರಣೆ: 2023 ಅನ್ನು 'ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷ' ಎಂಬುದಾಗಿ ಘೋಷಿಸಲಾಗಿದೆ. ಹೀಗಾಗಿ, ಸಿರಿಧಾನ್ಯಗಳ ಕೃಷಿಯನ್ನು ಪ್ರೋತ್ಸಾಹಿಸುವ ಜೊತೆಗೆ, ಕೊಯ್ಲು ನಂತರ ಮೌಲ್ಯವರ್ಧನೆ, ದೇಶೀಯವಾಗಿ ಮಾರುಕಟ್ಟೆ ವಿಸ್ತರಣೆಗೆ ಒತ್ತು ನೀಡಲಾಗುವುದು. ಜೊತೆಗೆ, ಸಿರಿಧಾನ್ಯಗಳಿಗೆ ಬ್ರ್ಯಾಂಡ್ ರೂಪ ನೀಡಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆ ಒದಗಿಸಲು ಯೋಜನೆ ಜಾರಿಗೆ ತರಲಾಗುವುದು ಎಂದು ಪ್ರಕಟಿಸಿದ್ದಾರೆ.

ಬಂಡವಾಳ ಹೂಡಿಕೆಗೆ ಒತ್ತು: ಕೃಷಿ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ನಬಾರ್ಡ್ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಜಾರಿಗೊಳಿಸುವದಾಗಿ ನಿರ್ಮಲಾ ಸೀತಾರಾಮನ್ ಪ್ರಕಟಿಸಿದರು.

ಸ್ಟಾರ್ಟ್ ಅಪ್‌ಗಳು ಬಂಡವಾಳ ಹೂಡುವುದನ್ನು ಪ್ರೋತ್ಸಾಹಿಸಲು 'ಸಹ–ಹೂಡಿಕೆ ಮಾದರಿ' ಎಂಬ ಪರಿಕಲ್ಪನೆಯನ್ನು ನಬಾರ್ಡ್ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ. ಕೃಷಿ ಮತ್ತು ಗ್ರಾಮೀಣ ಉದ್ದಿಮೆಗಳಲ್ಲಿ ಬಂಡವಾಳ ಹೂಡಿಕೆ ಈ ಯೋಜನೆಯ ಉದ್ದೇಶ. ಕೃಷಿಕರ ಸಂಘಗಳು, ರೈತರಿಗೆ ಬಾಡಿಗೆ ಆಧಾರದ ಮೇಲೆ ಕೃಷಿ ಉಪಕರಣಗಳನ್ನು ನೀಡುವುದು, ಮಾಹಿತಿ ತಂತ್ರಜ್ಞಾನ ಆಧಾರಿತ ನೆರವನ್ನು ರೈತರಿಗೆ ಒದಗಿಸುವುದು ಈ ಯೋಜನೆ ಒಳಗೊಂಡಿದೆ.

ತಂತ್ರಜ್ಞಾನ: ಖಾಸಗಿ ಸಹಭಾಗಿತ್ವಕ್ಕೆ ಮಣೆ

ಡಿಜಿಟಲ್ ಹಾಗೂ ಹೈ–ಟೆಕ್ ಸೇವೆಗಳನ್ನು ಅನ್ನದಾತನ ಮನೆಗೆ ತಲುಪಿಸಲು ಸರ್ಕಾರ–ಖಾಸಗಿ ಸಹಭಾಗಿತ್ವ (ಪಿಪಿಪಿ) ವಿಧಾನದಡಿ ಯೋಜನೆಗೆ ಜಾರಿಗೊಳಿಸಲು ಕೇಂದ್ರ ಸರ್ಕಾರ ಘೋಷಿಸಿದೆ.

ಈ ಕಾರ್ಯದಲ್ಲಿ ಸಾರ್ವಜನಿಕ ವಲಯದ ಸಂಶೋಧನಾ ಸಂಸ್ಥೆಗಳು, ವಿಸ್ತರಣಾ ಕೇಂದ್ರಗಳಲ್ಲದೇ, ಕೃಷಿ ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಖಾಸಗಿ ಉದ್ದಿಮೆಗಳನ್ನು ಒಳಗೊಳ್ಳುವಂತೆ ಮಾಡಲಾಗುವುದು. ಖಾಸಗಿ ವಲಯವನ್ನು ಸಹ ಕೃಷಿ ಕ್ಷೇತ್ರದ ಭಾಗಿದಾರರನ್ನಾಗಿ ಮಾಡುವ ಚಿಂತನೆಯನ್ನು ಸಚಿವೆ ನಿರ್ಮಲಾ ಸೀತಾರಾಮನ್ ಮುಂದಿಟ್ಟಿದ್ದಾರೆ.

ಬಾಹ್ಯಾಕಾಶ, ರಕ್ಷಣಾ ಕ್ಷೇತ್ರದಲ್ಲಿ ಡ್ರೋನ್‌ಗಳ ಬಳಕೆ ಈ ವ್ಯಾಪಕವಾಗಿದೆ. ಈ ಕ್ಷೇತ್ರದಲ್ಲಿಯೂ ಅವುಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು 'ಕಿಸಾನ್ ಡ್ರೋನ್' ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದುಪ್ರಕಟಿಸಿದ್ದಾರೆ.

ಬೆಳೆಗಳ ಸಮೀಕ್ಷೆ, ಜಮೀನಿನ ದಾಖಲೆಗಳ ಡಿಜಿಟಲೀಕರಣ, ಕೀಟನಾಶಕಗಳು ಹಾಗೂ ಪೋಷಕಾಂಶಗಳ ಸಿಂಪಡಣೆಗೆ ಡ್ರೋನ್‌ಗಳನ್ನು ಬಳಕೆಯನ್ನು ಉತ್ತೇಜಿಸಲಾಗುತ್ತದೆ.

ಎಂಎಸ್‌ಪಿ: ₹ 2.37 ಲಕ್ಷ ಕೋಟಿ ಮೀಸಲು

ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಯೋಜನೆಯಡಿ ಕೃಷಿ ಉತ್ಪನ್ನಗಳ ಖರೀದಿಗೆ ₹ 2.37 ಲಕ್ಷ ಕೋಟಿ ತೆಗೆದಿರಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಕಳೆದ ವರ್ಷ ಈ ಮೊತ್ತ ₹ 2.42 ಲಕ್ಷ ಕೋಟಿ ಇತ್ತು.

2021–22ನೇ ಸಾಲಿನ ಹಿಂಗಾರು ಹಂಗಾಮಿನ ಗೋಧಿ ಹಾಗೂ ಮುಂಗಾರು ಹಂಗಾಮಿನ ಭತ್ತ ಸೇರಿದಂತೆ ಒಟ್ಟು 1,208 ಲಕ್ಷ ಟನ್ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತದೆ. 1.63 ಕೋಟಿ ರೈತರಿಗೆ ಇದರಿಂದ ಲಾಭವಾಗಲಿದೆ. ತಮಗೆ ಹೊಂದುವಂತಹ ತರಕಾರಿ ಹಾಗೂ ಹಣ್ಣುಗಳ ಕೃಷಿಯನ್ನು ರೈತರು ಕೈಗೊಳ್ಳಲು ಹಾಗೂ ಅವುಗಳ ಕೊಯ್ಲು, ಸಾಗಣೆಗಾಗಿ ನೆರವು ನೀಡಲಾಗುವುದು. ಈ ಉದ್ದೇಶಕ್ಕೆ ರಾಜ್ಯ ಸರ್ಕಾರಗಳ ಪಾಲುದಾರಿಕೆಯೂ ಇರಲಿದೆ.

ಗ್ರಾಮಭಾರತದ ಬಗ್ಗೆ ಕ್ರೂರ ಉದಾಸೀನದ ದಾಖಲೆ



ವಿಶ್ಲೇಷಣೆ
ಕೆ.ಪಿ.ಸುರೇಶ್

ಮೊನ್ನೆ ಮೊನ್ನೆಯಷ್ಟೇ ನಿಲುಗಡೆಗೆ ಬಂದ ಚಾರಿತ್ರಿಕ ರೈತ ಚಳವಳಿಯ ಹಿನ್ನೆಲೆಯಲ್ಲಿ ಈ ಬಾರಿ ಮೋದಿ ಸರ್ಕಾರ ತನ್ನ ಬಜೆಟ್ಟಿನಲ್ಲಿ ರೈತರ ದೀರ್ಘ ಕಾಲೀನ ಬೇಡಿಕೆ, ಸಮಸ್ಯೆಗಳ ಬಗ್ಗೆ ಗಮನಹರಿಸೀತು ಎಂಬ ಭಾವನೆ ಎಲ್ಲರಿಗೂ ಇತ್ತು. ರೈತ ವಿರೋಧಿ ಕಾನೂನುಗಳೆಂದೇ ಪರಿಗಣಿಸಲ್ಪಟ್ಟ ಮೂರು ಕಾನೂನುಗಳನ್ನು ಮೋದಿಯವರು ಹಿಂತೆಗೆದುಕೊಂಡ ಹಿನ್ನೆಲೆಯಲ್ಲಿ ಈ ನಿರೀಕ್ಷೆಗೊಂದು ರಾಜಕೀಯ ಆಯಾಮವೂ ಇತ್ತು.

ಆದರೆ ಈ ಬಜೆಟ್ ಇಡೀ ಗ್ರಾಮಭಾರತದ ಬಗ್ಗೆ ಕ್ರೂರ ಉದಾಸೀನ ತೋರಿದ ದಾಖಲೆಯಾಗಿ ಉಳಿಯಲಿದೆ. ಇಷ್ಟು ಸಂವೇದನಾರಹಿತ ನಿಲುವು ಹೇಗೆ ಸಾಧ್ಯ ಎಂಬುದೂ ಭವಿಷ್ಯದಲ್ಲಿ ರಾಜಕೀಯ ಪಂಡಿತರ ವಿಶ್ಲೇಷಣೆಗೂ ಈ ಬಜೆಟ್ ಯೋಗ್ಯ!

ಅಪಾರ ಸಂಕಷ್ಟದಲ್ಲಿರುವ ಭಾರತೀಯ ಕೃಷಿ ಲೋಕಕ್ಕೆ ಅನುಕೂಲವಾಗುವ ಉಪಕ್ರಮಗಳನ್ನು ಕೈಗೊಳ್ಳುವುದೆಂದರೆ ಬಹುತೇಕ ಗ್ರಾಮಭಾರತದ ಜೀವನ್ಮುಖಿ ಚಲನೆಯನ್ನು ಪೋಷಿಸುವುದೆಂದರ್ಥ. ಗ್ರಾಮ ಭಾರತಕ್ಕೆ ಪ್ರತ್ಯಕ್ಷ /ಪರೋಕ್ಷ ಸಂಬಂಧವಿರುವ ವಿವಿಧ ಕ್ಷೇತ್ರಗಳಿಗೆ ಈ ಬಜೆಟ್ಟಿನಲ್ಲಿ ನಿಗದಿ ಮಾಡಲಾಗಿರುವ ಅಂದಾಜು ಅನುದಾನಗಳನ್ನು ನೋಡಿದರೆ ಇದು ಅರ್ಥವಾಗುತ್ತದೆ.

ಕೊರೊನಾ ಕಾರಣಕ್ಕೇ ಮರು ವಲಸೆ ಹೆಚ್ಚಿ, ಕನಿಷ್ಠ ಆಹಾರ ಭದ್ರತೆಯ ಕಾರಣಕ್ಕೆ ನಿವ್ವಳ ಸಾಗುವಳಿ ಆದ ಪ್ರದೇಶ ಹೆಚ್ಚಾಗಿದ್ದನ್ನು ಸರ್ಕಾರ ಗಮನಿಸಿದೆ. ಹಾಗೇ ಉದ್ಯೋಗ ಖಾತರಿಯ ಕೆಲಸಕ್ಕೆ ಮತ್ತೆ ಮತ್ತೆ ಜನ ಮುಗಿ ಬೀಳುತ್ತಿರುವ ವಿವರಗಳೂ ಇವೆ. ಕೊರೊನಾ / ಓಮೈಕ್ರಾನ್ ಮುಂದಿನ ವರ್ಷವೂ ಕಾಡಬಹುದು ಎಂಬ ಆತಂಕ ಜನರಲ್ಲಿ ಹೇಗೆ ಮನೆ ಮಾಡಿದೆಯೆಂದರೆ ಜನರಲ್ಲಿ ಮಾನಸಿಕ ನೆಮ್ಮದಿ ಮೂಡಿಸುವ ಸುಧಾರಣಾ ಕ್ರಮವಾಗಿ ಆರೋಗ್ಯ ಕ್ಷೇತ್ರಕ್ಕೆ ಅನುದಾನ ಹೆಚ್ಚಳವಾಗಬೇಕಿತ್ತು.

ಇನ್ನೊಂದೆಡೆ ತೈಲ ಬೆಲೆ ಏರಿಕೆಯ ಪರಿಣಾಮವಾಗಿ ಕೃಷಿಯ ಹತ್ತು ಹಲವು ಕೆಲಸಗಳ ವೆಚ್ಚ ಏರಿರುವುದೂ ನಮೂದಾಗಿದೆ. ಆದ್ದರಿಂದಲೇ ಸರ್ಕಾರವೊಂದು ಹಲವು ಆಯಾಮಗಳಲ್ಲಿ ಅನುದಾನ ಹೆಚ್ಚಿಸಬೇಕಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ ಕೃಷಿಕ್ಷೇತ್ರದ ಪ್ರತಿಯೊಂದೂ ವಲಯದ ಅನುದಾನಕ್ಕೆ ಕತ್ತರಿ ಹಾಕಿರುವುದು ವಿಸ್ಮಯ /ವಿಷಾದ ಎರಡನ್ನೂ ಮೂಡಿಸಿದೆ.

ಗಮನಿಸಿ, ಉದ್ಯೋಗ ಖಾತರಿಯ ಅನುದಾನ ₹25 ಸಾವಿರ ಕೋಟಿ ಕಡಿತಗೊಳಿಸಿದರೆ ರಸಗೊಬ್ಬರದ ಸಬ್ಸಿಡಿಯಲ್ಲಿ ₹35 ಸಾವಿರ ಕೋಟಿ ಕಡಿತ ಮಾಡಲಾಗಿದೆ. ಆಹಾರ ಸಬ್ಸಿಡಿಯಲ್ಲಿ ₹80 ಸಾವಿರ ಕೋಟಿ ಕಡಿತವಾಗಿದ್ದರೆ, ಬೆಲೆ ಕುಸಿತದ ಆಟ ತಪ್ಪಿಸಲು ಸರ್ಕಾರ ಕೈಗೊಳ್ಳುವ ಮಾರುಕಟ್ಟೆ ಮಧ್ಯಪ್ರವೇಶದ ಉಪಕ್ರಮದ ಅನುದಾನವನ್ನು ಅರ್ಧಕ್ಕರ್ಧ ಇಳಿಸಲಾಗಿದೆ.

ಇದರರ್ಥ ಸರ್ಕಾರ ಕನಿಷ್ಠ ಬೆಂಬಲ ಬೆಲೆಯನ್ನು ಗೌರವಿಸುವುದಿರಲಿ, "ಸಂಕಷ್ಟದ ಮಾರಾಟ"ದ ಬಗ್ಗೆಯೂ ದಿವ್ಯ ನಿರ್ಲಕ್ಷ್ಯ ತೋರಿರುವುದು ಕಣ್ಣಿಗೆ ರಾಚುತ್ತದೆ. ಹಾಗೆಂದು ಕಳೆದ ಏಳು ವರ್ಷಗಳಲ್ಲಿ ಇದ್ದ ಬದ್ದ ಆದಾಯ ಪೂರ್ತಿ ಕೃಷಿಗೆ ಸುರಿದ ಪುರಾವೆ ಇದ್ದಿದ್ದರೆ ಏನೋ ಬಿಡಪ್ಪಾ ಎನ್ನಬಹುದಿತ್ತು!!

ಮೋದಿ ಸರ್ಕಾರ ಅಧಿಕಾರಕ್ಕೆ ಬಂದಾಗ ₹51 ಲಕ್ಷ ಕೋಟಿ ಸಾಲ ಇತ್ತು. ಆರೇ ವರ್ಷಗಳಲ್ಲಿ ಅದು ₹105 ಲಕ್ಷ ಕೋಟಿಗಳಿಗೇರಿದೆ. ಕೋವಿಡ್ ನೆಪ ಹೇಳೋಣವೆಂದರೆ ಅದಕ್ಕೂ ಮೊದಲೇ ಈ ಸಾಲದ ಜ್ವರ ಏರಿದ ದಾಖಲೆ ಇದೆ. ಈ ವರ್ಷ ಮತ್ತೆ ₹ 40 ಲಕ್ಷ ಕೋಟಿ ವೆಚ್ಚ ತೋರಿಸಿದರೂ ಆದಾಯ ಕೇವಲ ₹22 ಲಕ್ಷ ಕೋಟಿ ಇದೆ. ಈ ಸಾಲಿನಲ್ಲಿ ಸಾಲದ ಬಡ್ಡಿ ಕಟ್ಟಲು ಸರ್ಕಾರ ಅಧಿಕೃತವಾಗಿ ₹10 ಲಕ್ಷ ಕೋಟಿ ಮೀಸಲಿರಿಸಿದೆ.

ಯಾಕಾಗಿ ಇಷ್ಟೆಲ್ಲಾ ಸಾಲ ಮಾಡಲಾಯಿತು? ಯಾವ ಕ್ಷೇತ್ರಕ್ಕೆ ಹಾಲು– ಜೇನು ಹರಿಸುವ ಅನುದಾನ ನೀಡಲಾಯಿತು ಎಂಬ ವಿವರ ಎಲ್ಲೂ ಸಿಕ್ಕುವುದಿಲ್ಲ.

ಚಟಕ್ಕೆ ಸಾಲ ಮಾಡಿ ಹೆಂಡಿರು ಮಕ್ಕಳಿಗೆ ರಾಗಿ ಹಿಟ್ಟೂ ತರಲಾರದವನ ಬಗ್ಗೆ ನಮಗೆ ಜಿಗುಪ್ಸೆ ಬರುತ್ತದೆ. ಸರ್ಕಾರವೊಂದು ಇದೇ ಹಾದಿ ತುಳಿದರೆ?

ಪ್ರಾಯಶಃ ರೈತ/ ಗ್ರಾಮೀಣ ಕ್ಷೇತ್ರವನ್ನು ಓಲೈಸಲು ಅನುದಾನ ವೆಚ್ಚ ಮಾಡುವುದು ಮೂರ್ಖತನ, ಜಾತಿ ಧರ್ಮದ ಮೂಲಕ ಅವರನ್ನು ಪ್ರತ್ಯೇಕವಾಗಿ ಒಗ್ಗೂಡಿಸಿ ಚುನಾವಣೆ ಗೆಲ್ಲಬಹುದು ಎಂಬ ಲೆಕ್ಕಾಚಾರವೂ ಇರಬಹುದು.

ಸರ್ವಾಧಿಕಾರಿಯೊಬ್ಬ ಜನರನ್ನು ದೈನೇಸಿ ಸ್ಥಿತಿಯಲ್ಲಿರಿಸಿದಷ್ಟೂ ಅವರು ಅಸಹಾಯಕತೆಯಿಂದ ದೇಹಿ ಎಂದು ಹಿಂಬಾಲಿಸುತ್ತಾರೆ ಎಂಬುದನ್ನು ತೋರಿಸಲು ಕೋಳಿಯೊಂದರ ರೆಕ್ಕೆ, ಪುಕ್ಕ ಕಿತ್ತು, ಹಿಡಿಕಾಲು ಒಡ್ಡಿದರೆ ನೆತ್ತರು ಸೋರುತ್ತಿದ್ದರೂ ಅದು ಅವನನ್ನು ಹಿಂಬಾಲಿಸಿ ಕಾಳು ತಿಂದಿತಂತೆ. . .

ಲೇಖಕ: ಕೃಷಿ, ಗ್ರಾಮೀಣಾಭಿವೃದ್ಧಿ ತಜ್ಞರು

'ತೆರಿಗೆ ಏರಿಸದ ನಿರ್ಧಾರ ಸಮಯೋಚಿತ'

ನಿರ್ಮಲಾ ಸೀತಾರಾಮನ್

ಕೋವಿಡ್ ಸಾಂಕ್ರಾಮಿಕದಿಂದ ದೇಶದ ಜನರು ಬಿಕ್ಕಟ್ಟಿನಲ್ಲಿರುವಾಗ, ಅವರಿಗೆ ತೊಂದರೆಯಾಗಬಾರದು ಎಂಬ ಉದ್ದೇಶದಿಂದ ತೆರಿಗೆಯನ್ನು ಹೆಚ್ಚಿಸದಿರುವ ನಿರ್ಧಾರಕ್ಕೆ ಬರಲಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆ. ಬಜೆಟ್ ಮಂಡನೆ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡುವ ಡಿಜಿಟಲ್ ಕರೆನ್ಸಿಗೆ ತೆರಿಗೆ ವಿಧಿಸಲು ಕೇಂದ್ರ ಸರ್ಕಾರ ಉದ್ದೇಶಿಸಿಲ್ಲ ಎಂದು ಸ್ಪಷ್ಟಪಡಿಸಿದ ಸೀತಾರಾಮನ್ ಅವರು, ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿರುವ ಶೇ 30ರಷ್ಟು ತೆರಿಗೆಯನ್ನು ಕ್ರಿಪ್ಟೋಕರೆನ್ಸಿಗಳ ಮೇಲೆ ಮಾತ್ರ ವಿಧಿಸಲಾಗುವುದು ಎಂದು ಹೇಳಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕೇಂದ್ರ ಬಜೆಟ್ ಮಂಡಿಸುವ ಸಂದರ್ಭದಲ್ಲಿ ಮಹಾಭಾರತದ ಸಾಲೊಂದನ್ನು ಉಲ್ಲೇಖಿಸಿದರು. ಮಹಾಭಾರತದ ಶಾಂತಿ ಪರ್ವವನ್ನು ಉಲ್ಲೇಖಿಸಿದ ಅವರು, ಧರ್ಮದ ಹಾದಿಯಲ್ಲಿ ಸರ್ಕಾರವನ್ನು ನಡೆಸುವ ದೊರೆ, ಪ್ರಜೆಗಳ ಕಲ್ಯಾಣಕ್ಕಾಗಿ ವಿವಿಧ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ.

ಸಂಸತ್ ಭವನದ ಆವರಣದಲ್ಲಿ ಬಜೆಟ್ ಪ್ರತಿಗಳ ಬ್ಯಾಗುಗಳನ್ನು ಭದ್ರತಾ ಸಿಬ್ಬಂದಿ ಪರಿಶೀಲಿಸಿದರು –ಪಿಟಿಐ ಚಿತ್ರ

ಬಡವರ ಕಲ್ಯಾಣವೇ ಆಶಯ: ಮೋದಿ

ನವದೆಹಲಿ: ಕೇಂದ್ರ ಬಜೆಟ್‌ನ ಪ್ರಮುಖ ಅಂಶವೆಂದರೆ ಬಡವರ ಕಲ್ಯಾಣ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಅಭಿಪ್ರಾಯಪಟ್ಟಿದ್ದಾರೆ. ಇದು ಸಮಕಾಲೀನ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸಾಮಾನ್ಯ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತದೆ ಎಂದು ಅವರು ವಿಡಿಯೊ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಜೆಟ್ ಪ್ರತಿ ಬಡ ಕುಟುಂಬಕ್ಕೆ ಪಕ್ಕಾ ಮನೆ, ಶೌಚಾಲಯ, ನಲ್ಲಿ ನೀರು ಮತ್ತು ಅನಿಲ ಸಂಪರ್ಕವನ್ನು ಖಚಿತಪಡಿಸುವ ಗುರಿಯನ್ನು ಹೊಂದಿದೆ. ಆಧುನಿಕ ಇಂಟರ್ನೆಟ್ ಸಂಪರ್ಕದ ಬಗ್ಗೆಯೂ ಗಮನ ಹರಿಸಿದೆ ಎಂದು ಹೇಳಿದರು.

ಶತಮಾನದ ಸಾಂಕ್ರಾಮಿಕ ಬಿಕ್ಕಟ್ಟಿನ ನಡುವೆಯೂ ಅಭಿವೃದ್ಧಿಯ ಹೊಸ ವಿಶ್ವಾಸವನ್ನು ಬಜೆಟ್ ಮೂಡಿಸಿದೆ. ಇದು ಆರ್ಥಿಕತೆಗೆ ಬಲ ಒದಗಿಸುವುದರ ಜೊತೆಗೆ ಸಾಮಾನ್ಯ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಹೇಳಿದರು.

'ರೈತರಿಗಾಗಿ ಡ್ರೋನ್‌ಗಳು, ವಂದೇ ಭಾರತ್ ರೈಲುಗಳು, ಡಿಜಿಟಲ್ ಕರೆನ್ಸಿ, 5ಜಿ ಸೇವೆಗಳು, ರಾಷ್ಟ್ರೀಯ ಡಿಜಿಟಲ್ ಆರೋಗ್ಯ ವ್ಯವಸ್ಥೆಯಂತಹ ಯೋಜನೆಗಳ ಮೂಲಕ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಆಧುನಿಕತೆ ಮತ್ತು ತಂತ್ರಜ್ಞಾನದ ಅನ್ವೇಷಣೆ ಸಾಧ್ಯವಾಗಿಸಲಾಗಿದೆ. ನಮ್ಮ ಯುವಜನರು, ಮಧ್ಯಮ ವರ್ಗ, ಬಡ, ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಹೆಚ್ಚು ಪ್ರಯೋಜನವನ್ನು ನೀಡಲಿದೆ' ಎಂದಿದ್ದಾರೆ.

ಪರ್ವತಮಲಾ ಯೋಜನೆಯು ಹಿಮಾಚಲ ಪ್ರದೇಶ, ಉತ್ತರಾಖಂಡ, ಜಮ್ಮು ಮತ್ತು ಕಾಶ್ಮೀರ ಮತ್ತು ಈಶಾನ್ಯದಂತಹ ಗುಡ್ಡಗಾಡು ಪ್ರದೇಶಗಳಲ್ಲಿ ಆಧುನಿಕ ಸಾರಿಗೆ ವ್ಯವಸ್ಥೆಯನ್ನು ಸಾಧ್ಯವಾಗಿಸಿದೆ ಎಂದು ಮೋದಿ ಹೇಳಿದರು.

ಪ್ರತಿಪಕ್ಷ ಸದಸ್ಯರ ಜತೆ ಕುಶಲೋಪರಿ

ಬಜೆಟ್ ಮಂಡನೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿಪಕ್ಷ ಸದಸ್ಯರ ಆಸನಗಳತ್ತ ತೆರಳಿ ಸಂಸದರ ಜೊತೆ ಮಾತನಾಡಿದರು. ಟಿಎಂಸಿ ನಾಯಕ ಸುದೀಪ್ ಬಂದೋಪಾಧ್ಯಾಯ, ಸೌಗತ ರಾಯ್ ಅವರ ಜೊತೆ ಚರ್ಚಿಸಿದರು. ಪಶ್ಚಿಮ ಬಂಗಾಳ ರಾಜ್ಯಪಾಲ ಜಗದೀಪ್ ಧನಕರ್ ಅವರನ್ನು ವಾಪಸ್ ಕರೆಸಿಕೊಳ್ಳುವಂತೆ ಪ್ರಧಾನಿಗೆ ಸೌಗತ ರಾಯ್ ಮನವಿ ಮಾಡಿದರು. ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಸಂಸದ ಎ. ರಾಜಾ ಅವರೊಂದಿಗೆ ಮೋದಿ ಹಸ್ತಲಾಘವ ಮಾಡಿದರು. ಈ ವೇಳೆ ರಾಹುಲ್ ಗಾಂಧಿ ಅವರು ಸದನದಿಂದ ಹೊರನಡೆದಿದ್ದರು. ಫಾರೂಕ್ ಅಬ್ದುಲ್ಲಾ, ದಯಾನಿಧಿ ಮಾರನ್, ಎನ್.ಕೆ. ಪ್ರೇಮಚಂದ್ರನ್ ಜತೆಗೂ ಮಾತನಾಡಿದರು.

ಪ್ರತಿಕ್ರಿಯೆಗಳು



ಭಾರತದ ಆರ್ಥಿಕತೆ ಇನ್ನಷ್ಟು ವೇಗವಾಗಿ ಬೆಳವಣಿಗೆ ಹೊಂದಲು ಪೂರಕವಾಗಿರುವ ದೂರದೃಷ್ಟಿಯುಳ್ಳ ಬಜೆಟ್. ನಗರ ಮತ್ತು ಗ್ರಾಮೀಣ ಪ್ರದೇಶದ ಜನಸಾಮಾನ್ಯರ ಅಭ್ಯುದಯಕ್ಕೆ ಕಾರಣವಾಗಲಿದೆ. ಆರ್ಥಿಕ ಹಿಂಜರಿತದ ನಡುವೆಯೂ, ದೇಶದ ಆರ್ಥಿಕತೆಗೆ ಇನ್ನಷ್ಟು ವೇಗದ ಬೆಳವಣಿಗೆಗೆ ದಾರಿ ಮಾಡಿಕೊಡಲಿದೆ. ಚೇತೋಹಾರಿ ಕ್ರಮಗಳಿರುವ ಬಜೆಟ್‌ನಿಂದಾಗಿ ಕೋವಿಡ್ ನಂತರದ ದಿನಗಳಲ್ಲಿ ದೇಶದ ಆರ್ಥಿಕ ಪ್ರಗತಿ ಹೆಚ್ಚಾಗಲಿದೆ. ಮೂಲಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆ ಹೆಚ್ಚಾಗಲಿದೆ. ಶೇ 9.2ರಷ್ಟು ಆರ್ಥಿಕ ಬೆಳವಣಿಗೆ ಗುರಿ ಇದೆ. ಒಂದು ವರ್ಷದಲ್ಲಿ ಆರ್ಥಿಕ ಸುಧಾರಣೆ, ಆರ್ಥಿಕ ಬೆಳವಣಿಗೆಗೆ ಸ್ಥಿರತೆ ಸಿಗಲಿದೆ.

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ನಾಡಿನ ರೈತರು, ಮಹಿಳೆಯರು ಮತ್ತು ಸಾಮಾನ್ಯ ವರ್ಗದ ಜನರ ನಿರೀಕ್ಷೆ ಹುಸಿಯಾಗಿದೆ. ದೇಶದ ಸಾಲ ₹93 ಲಕ್ಷ ಕೋಟಿಯಿಂದ ₹135 ಲಕ್ಷ ಕೋಟಿಗೆ ತಲುಪಿದೆ. ಹಸಿವು, ಬಡತನ, ನಿರುದ್ಯೋಗ ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ಕ್ರಮಗಳ ಮುನ್ಸೂಚನೆ ಇಲ್ಲ. ರಾಜ್ಯಕ್ಕೆ ಅನುದಾನ ತರುವಲ್ಲಿ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ವಿಫಲವಾಗಿದೆ. ಪ್ರಧಾನಿಯವರ ಮುಂದೆ ಧ್ವನಿ ಎತ್ತಿ ಮಾತನಾಡದ ಹೇಡಿ ಸರ್ಕಾರ ಇದು. ಕೇಂದ್ರವು ಬಡವರ ವಿರೋಧಿ ಮತ್ತು ಕಾರ್ಪೊರೇಟ್ ಸ್ನೇಹಿ ಸರ್ಕಾರ ಎಂಬುದು ಸಾಬೀತಾಗಿದೆ. ಮುಂದಿನ 25 ವರ್ಷದಲ್ಲಿ ಏನೆಲ್ಲಾ ಮಾಡ್ತೀವಿ ಎಂದು ಹೇಳಿದ್ದಾರೆ. ಮುಂದಿನ 25 ವರ್ಷ ಇವರೇ ಇರ್ತಾರಾ?

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ನನ್ನ 40 ವರ್ಷಗಳ ರಾಜಕೀಯ ಅನುಭವದಲ್ಲಿ ಇಂತಹ ರೋಗಿಷ್ಠ ಬಜೆಟ್ ಕಂಡಿರಲಿಲ್ಲ. ಈ ಸರ್ಕಾರ ಕಾರ್ಪೊರೇಟ್ ಲಾಬಿಗೆ ಮಣಿದು ಅವರಿಗೆ ನೆರವಾಗುತ್ತಿದೆ. ಜನಸಾಮಾನ್ಯರಿಗೆ ಅನುಕೂಲವಾಗುವ ಯಾವುದೇ ಯೋಜನೆಗಳೂ ಇಲ್ಲ. ಎಲ್ಲರ ಜೇಬಿಗೆ ಕತ್ತರಿ ಹಾಕಿ ಪಿಕ್‌ಪಾಕೆಟ್ ಮಾಡುವ ಬಜೆಟ್ ಇದಾಗಿದೆ. ನಿಮ್ಹಾನ್ಸ್‌ನಲ್ಲಿ ನೋಡಲ್ ಕಚೇರಿ ಏಕೆಂದರೆ, ಸರ್ಕಾರದಲ್ಲಿ ಮೆಂಟಲ್ ಗಿರಾಕಿಗಳು ಹೆಚ್ಚಾಗಿರುವ ಕಾರಣಕ್ಕೆ ಇರಬೇಕು. ಅವರನ್ನು ನೋಡಿಕೊಳ್ಳಲು ಒಬ್ಬರನ್ನು ನೇಮಿಸುತ್ತಿದ್ದಾರೆ. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ಅವರು ಕಿಂಚಿತ್ತಾದರೂ ಸ್ವಾರ್ಥ ಪ್ರದರ್ಶಿಸಿ ರಾಜ್ಯದ ಬಗ್ಗೆ ಯೋಚಿಸುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆವು. ಅದು ಸುಳ್ಳಾಗಿದೆ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಜನರಿಗೆ ಹೊಟ್ಟೆ ಮೇಲೆ ತಣ್ಣೀರು ಬಟ್ಟೆ ಹಾಕಿಕೊಂಡು ಮನೆಯಲ್ಲಿ ಮಲಗಿ ಎನ್ನುವಂತಿದೆ ಈ ಬಜೆಟ್. ಸಾಮಾನ್ಯರ ಬದುಕಿನ ಬಗ್ಗೆ ಬಜೆಟ್ ಯೋಚನೆ ಮಾಡಿಲ್ಲ. ಕೋವಿಡ್, ಬೆಲೆ ಏರಿಕೆಯಿಂದ ಬಸವಳಿದ ಬಡ ಜನರ ಬಗ್ಗೆ ಕನಿಕರ ತೋರಿಲ್ಲ. ಕೋವಿಡ್ ನಂತರ ಬಡತನ ಹೆಚ್ಚಾಗಿದೆ. ಸಿರಿವಂತರು ಮತ್ತಷ್ಟು ಸಿರಿವಂತರಾಗಿದ್ದಾರೆ. ರೈತಾಪಿ ಮತ್ತು ಕಾರ್ಮಿಕರಿಗೆ ಧೈರ್ಯ ತುಂಬುವ ಮತ್ತು ಆರ್ಥಿಕವಾಗಿ ಮೇಲಕ್ಕೆತ್ತುವ ಕೆಲಸ ಆಗಿಲ್ಲ. ನದಿ ಯೋಜನೆ ಬಗ್ಗೆ ಮೂರು ವರ್ಷದಿಂದ ಹೇಳುತ್ತಿದ್ದಾರೆ. ಕಾವೇರಿ - ಪೆನ್ನಾರ್, ಕೃಷ್ಣಾ-ಗೋದಾವರಿ ನದಿಗಳ ಜೋಡಣೆ ಬಗ್ಗೆ ಹೇಳಿದ್ದಾರೆ. ಅದು ಕಾರ್ಯರೂಪಕ್ಕೆ ಬರಬೇಕಲ್ಲ. ನದಿ ಜೋಡಣೆ ವಿಚಾರ ಬರಿ ಚರ್ಚೆಗಷ್ಟೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

400 ‘ವಂದೇ ಭಾರತ್ ರೈಲು’ ಘೋಷಣೆ

ಇಂಧನ ದಕ್ಷತೆ ಮತ್ತು ಪ್ರಯಾಣಿಕ ಸ್ನೇಹಿ ತಂತ್ರಜ್ಞಾನದ ರೈಲು

ಪಿಎಂ ಗತಿಶಕ್ತಿ ಯೋಜನೆಯಡಿ 100 ಸರಕು ಟರ್ಮಿನಲ್ ನಿರ್ಮಾಣ ಗುರಿ

ಪ್ರಜಾವಾಣಿ ವಾರ್ತೆ

ಹೊಸದಾಗಿ 400 ‘ವಂದೇ ಭಾರತ್ ರೈಲು’ಗಳನ್ನು ಪರಿಚಯಿಸುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಇಂಧನ ದಕ್ಷತೆ ಮತ್ತು ಪ್ರಯಾಣಿಕ ಸ್ನೇಹಿ ತಂತ್ರಜ್ಞಾನದೊಂದಿಗೆ ಹೊಸ ತಲೆಮಾರಿನ ವಂದೇ ಭಾರತ್ ರೈಲುಗಳನ್ನು ಮುಂದಿನ ಮೂರು ವರ್ಷಗಳಲ್ಲಿ ತಯಾರಿಸಲಾಗುವುದು ಎಂದು ತಿಳಿಸಿದ್ದಾರೆ.

ರೈಲಿನ ತೂಕವನ್ನು ಸುಮಾರು 50 ಟನ್ ಕಡಿಮೆ ಮಾಡಲಾಗಿದ್ದು, ಹಗುರ ತೂಕದ ಅಲ್ಯುಮಿನಿಯಂ ಅನ್ನು ಬಳಸಿ ಇವುಗಳನ್ನು ತಯಾರಿಸಲಾಗುತ್ತದೆ. ಇದರಿಂದ ಇಂಧನದ ಉಳಿತಾಯವಾಗುತ್ತದೆ. ಪಿಎಂ ಗತಿಶಕ್ತಿ ಯೋಜನೆಯಡಿ 100 ಸರಕು ಟರ್ಮಿನಲ್‌ಗಳನ್ನು ಮುಂದಿನ 3 ವರ್ಷಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ.

ಸಣ್ಣ ರೈತರು ಹಾಗೂ ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮಗಳ ಸರಕುಗಳನ್ನು ಸಾಗಿಸಲು ದಕ್ಷ ಸರಕು ಸಾಗಣೆ ಸೇವೆಗಳನ್ನು ರೈಲ್ವೆ ಅಭಿವೃದ್ಧಿಪಡಿಸಲಿದೆ. ಜೊತೆಗೆ ಪಾರ್ಸೆಲ್‌ಗಳ ತಡೆರಹಿತ ಸಂಚಾರಕ್ಕೆ ಅನುಕೂಲವಾಗುವಂತೆ ಅಂಚೆ ಮತ್ತು ರೈಲ್ವೆ ನಡುವೆ ಸಂಪರ್ಕ ಸಾಧಿಸಲು ರೈಲ್ವೆ ಮುಂದಾಳತ್ವ ವಹಿಸಲಿದೆ.

- ಜನರು ಮತ್ತು ಸರಕುಗಳ ವೇಗದ ಸಂಚಾರಕ್ಕೆ ಅನುಕೂಲವಾಗುವಂತೆ 2022-23ರಲ್ಲಿ ಎಕ್ಸ್‌ಪ್ರೆಸ್ ಹೆದ್ದಾರಿಗಳಿಗಾಗಿ ಮಾಸ್ಟರ್ ಪ್ಲಾನ್ ರೂಪಿಸಲಾಗುವುದು
- ಸ್ಥಳೀಯ ವ್ಯಾಪಾರಗಳು ಮತ್ತು ಪೂರೈಕೆ ಸರಪಳಿಗಳಿಗೆ ಸಹಾಯ ಮಾಡಲು ‘ಒಂದು ನಿಲ್ದಾಣ-ಒಂದು ಉತ್ಪನ್ನ’ ಪರಿಕಲ್ಪನೆಯನ್ನು ಜನಪ್ರಿಯಗೊಳಿಸಲಾಗುತ್ತದೆ
- ಆತ್ಮನಿರ್ಭರ ಭಾರತ್ ಭಾಗವಾಗಿ 2022-23ರಲ್ಲಿ ಸುರಕ್ಷತೆ ಮತ್ತು ಸಾಮರ್ಥ್ಯ ವರ್ಧನೆಗಾಗಿ 2,000 ಕಿ.ಮೀ. ಜಾಲವನ್ನು ‘ಕವಚ್’ ಅಡಿಯಲ್ಲಿ ತರಲಾಗುವುದು
- ನಗರಗಳ ಸಮೂಹ ಸಾರಿಗೆ ಮತ್ತು ರೈಲು ನಿಲ್ದಾಣಗಳ ನಡುವೆ ಬಹು ಮಾದರಿ ಸಂಪರ್ಕವನ್ನು ಆದ್ಯತೆಯ ಮೇಲೆ ಸುಗಮಗೊಳಿಸಲಾಗುವುದು

2,000 ಕಿ.ಮೀ.
ಸ್ವದೇಶಿ ವಿಶ್ವದರ್ಜೆಯ ತಂತ್ರಜ್ಞಾನ ‘ಕವಚ್’ ಅಡಿ ರೈಲ್ವೆ ಸಂಪರ್ಕ ಜಾಲ ಸೇರ್ಪಡೆ

₹20,000 ಕೋಟಿ
ಹೊಸ ವಿಧಾನಗಳ ಮೂಲಕ ಕ್ರೋಢೀಕರಣ ಗುರಿ

ಮೂಲಸೌಕರ್ಯಕ್ಕೆ ‘ಗತಿಶಕ್ತಿ’ಯ ಬಲ

ಆರ್ಥಿಕ ಬೆಳವಣಿಗೆ ಮತ್ತು ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಿಸುವ ನಿಟ್ಟಿನಲ್ಲಿ ಆರಂಭಿಸಿರುವ ‘ಪ್ರಧಾನಮಂತ್ರಿ ಗತಿ ಶಕ್ತಿ ರಾಷ್ಟ್ರೀಯ ಮಾಸ್ಟರ್ ಪ್ಲಾನ್’ನಡಿಯಲ್ಲಿ ತಡೆರಹಿತ, ಬಹುಮಾಧ್ಯಮ ಸಂಪರ್ಕ ಹಾಗೂ ದಕ್ಷ ಸಾರಿಗೆಯನ್ನು ಒಳಗೊಳ್ಳುವ ಏಳು ಎಂಜಿನ್‌ಗಳು ಕೆಲಸ ಮಾಡಲಿವೆ. ರಸ್ತೆಗಳು, ರೈಲ್ವೆ, ವಿಮಾನ ನಿಲ್ದಾಣಗಳು, ಬಂದರುಗಳು, ಸಮೂಹ ಸಾರಿಗೆ, ಜಲಮಾರ್ಗಗಳು ಮತ್ತು ಸಾರಿಗೆ ಮೂಲಸೌಕರ್ಯ ಸಾರಿಗೆ ಮೂಲಸೌಕರ್ಯ ವಲಯಗಳು ಇಲ್ಲಿ ಆದ್ಯತೆ ಪಡೆಯಲಿವೆ.

ಇದು ವಿಭಿನ್ನ ವಿಧಾನಗಳ ಮೂಲಕ ಸರಕುಗಳ ಸರಾಗ ಸಂಚಾರ ಸಾಧ್ಯವಾಗಿಸುತ್ತದೆ. ಸಾಗಣೆ ವೆಚ್ಚ ಮತ್ತು ಸಮಯ ಕಡಿಮೆ ಮಾಡುತ್ತದೆ. ಯುವಜನರಿಗೆ ಉದ್ಯೋಗ ಮತ್ತು ಉದ್ಯಮಶೀಲತೆಯ ಅವಕಾಶಗಳನ್ನು ಇದು ತೆರೆಯಲಿದೆ ಎಂದು ಸರ್ಕಾರ ತಿಳಿಸಿದೆ.

2022-23ರಲ್ಲಿ ಖಾಸಗಿ-ಸಾರ್ವಜನಿಕ ಸಹಭಾಗಿತ್ವದಡಿ ನಾಲ್ಕು ಸ್ಥಳಗಳಲ್ಲಿ ಬಹುವಿಧದ ‘ಲಾಜಿಸ್ಟಿಕ್ಸ್ ಪಾರ್ಕ್’ ಅನುಷ್ಠಾನಕ್ಕೆ ಗುತ್ತಿಗೆ ನೀಡಲಾಗುತ್ತದೆ.

ಅನುದಾನ: ಕೆಲವು ಇಳಿಕೆ, ಕೆಲವು ಏರಿಕೆ



ನವೋದ್ಯಮಕ್ಕೆ ಪ್ರೋತ್ಸಾಹ ಮುಂದುವರಿಕೆ

ದೇಶದ ಆರ್ಥಿಕತೆಯ ಬೆಳವಣಿಗೆಗೆ ‘ಚಾಲಕ’ ಎಂಬಂತೆ ಸ್ಟಾರ್ಟ್‌ಅಪ್‌ಗಳು (ನವೋದ್ಯಮ) ಹೊರಹೊಮ್ಮಿದ್ದು, ಅನೇಕ ನವೋದ್ಯಮಗಳು ಯಶಸ್ಸು ಕಂಡಿವೆ. 2022ರ ಮಾರ್ಚ್ 31ಕ್ಕೂ ಮುನ್ನ ಸ್ಥಾಪಿಸಲಾಗಿರುವ ಅರ್ಹ ನವೋದ್ಯಮಗಳಿಗೆ ಪ್ರೋತ್ಸಾಹದಾಯಕವಾಗಿ ತೆರಿಗೆ ವಿನಾಯ್ತಿ ನೀಡಲಾಗಿದೆ. ಕೋವಿಡ್ ಸಾಂಕ್ರಾಮಿಕ ರೋಗದ ಕಾರಣ ಈ ವರ್ಷವೂ ಸ್ಟಾರ್ಟ್‌ಅಪ್‌ಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ತೆರಿಗೆ ರಿಯಾಯಿತಿ ನೀಡಲಾಗುತ್ತದೆ.

ಹೊಸದಾಗಿ ಆರಂಭವಾಗಿರುವ ನವೋದ್ಯಮಗಳಿಗೆ ಒಂದು ವರ್ಷದ ಅವಧಿಯವರೆಗೆ ಅಂದರೆ 2023ರ ಮಾರ್ಚ್ 31ರವರೆಗೆ ತೆರಿಗೆ ರಿಯಾಯಿತಿ ದೊರೆಯಲಿದೆ. ತೆರಿಗೆ ರಿಯಾಯಿತಿಯು ನವೋದ್ಯಮ ಕ್ಷೇತ್ರಕ್ಕೆ ಪ್ರೋತ್ಸಾಹದಾಯಕವಾಗಲಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಇ–ಪಾಸ್‌ಪೋರ್ಟ್

ಎಂಬೆಡೆಡ್ ಚಿಪ್ ಮತ್ತು ಫ್ಯೂಚರಿಸ್ಟಿಕ್ ತಂತ್ರಜ್ಞಾನವನ್ನು ಬಳಸಿಕೊಂಡು ಇ-ಪಾಸ್‌ಪೋರ್ಟ್‌ಗಳ ವಿತರಣೆಗೆ ಚಾಲನೆ. ವಿದೇಶ ಪ್ರವಾಸ ಮತ್ತಷ್ಟು ಸರಳಗೊಳಿಸಲು ಆಧುನಿಕ ತಂತ್ರಜ್ಞಾನ ಜಾರಿ.

ಕೌಶಲಾಭಿವೃದ್ಧಿಗೆ ಒತ್ತು

ಕೌಶಲಾಭಿವೃದ್ಧಿ, ಸುಸ್ಥಿರತೆ ಮತ್ತು ಉದ್ಯೋಗವನ್ನು ಉತ್ತೇಜಿಸಲು ಮರುದೃಷ್ಟಿಕೋನದ ಮೂಲಕ ಉದ್ಯಮ ವಲಯದ ಪಾಲುದಾರಿಕೆ ಮತ್ತು ಕೌಶಲ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗುವುದು. ಕ್ರಿಯಾತ್ಮಕ ಕೈಗಾರಿಕಾ ವಲಯದ ಅಗತ್ಯಗಳಿಗೆ ಹೊಂದಿಕೆಯಾಗುವಂತೆ ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟು (ಎನ್‌ಎಸ್‌ಕ್ಯೂಎಫ್) ರೂಪಿಸಲಾಗುವುದು ಎಂದು ಪ್ರಕಟಿಸಲಾಗಿದೆ.

ಕೌಶಲ ಮತ್ತು ಜೀವನೋಪಾಯಕ್ಕಾಗಿ ಡಿಜಿಟಲ್ ಪರಿಸರ ವ್ಯವಸ್ಥೆಯನ್ನು (ದೇಶ್ ಸ್ಟಾಕ್ ಇ-ಪೋರ್ಟಲ್) ಪ್ರಾರಂಭಿಸಲಾಗುವುದು. ಇ ಪೋರ್ಟಲ್ ಮೂಲಕ ನಾಗರಿಕರಿಗೆ ಆನ್‌ಲೈನ್ ತರಬೇತಿ ನೀಡಿ ಅವರಲ್ಲಿನ ಕೌಶಲವನ್ನು ಮೇಲ್ದರ್ಜೆಗೇರಿಸಿ ಸಬಲೀಕರಣ ಮಾಡುವ ಉದ್ದೇಶ ಹೊಂದಲಾಗಿದೆ.

ವಿವಿಧ ಅಪ್ಲಿಕೇಷನ್‌ಗಳ ಮೂಲಕ ಮತ್ತು ಡ್ರೋನ್ ಆ್ಯಸ್-ಎ- ಸರ್ವೀಸ್‌ಗಾಗಿ ‘ಡ್ರೋನ್ ಶಕ್ತಿ’ಯ ಮೂಲಕ ನವೋದ್ಯಮಗಳನ್ನು ಉತ್ತೇಜಿಸಲಾಗುವುದು. ಆಯ್ದ ಐಟಿಐಗಳಲ್ಲಿ, ಎಲ್ಲಾ ರಾಜ್ಯಗಳಲ್ಲಿ ಕೌಶಲಕ್ಕಾಗಿ ಅಗತ್ಯವಿರುವ ಕೋರ್ಸ್‌ಗಳನ್ನು ಆರಂಭಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ಪ್ರಕಟಿಸಿದರು.

ಮೆಟ್ರೊ ಯೋಜನೆಗಳಿಗೆ ₹19,130 ಕೋಟಿ

ದೇಶದಾದ್ಯಂತ ವಿವಿಧ ಮೆಟ್ರೊ ಯೋಜನೆಗಳಿಗಾಗಿ ₹19,130 ಕೋಟಿ ಅನುದಾನ ನೀಡಲಾಗಿದೆ. ಕಳೆದ ಸಾಲಿನಲ್ಲಿ ₹18,978 ಕೋಟಿ ಅನುದಾನ ನೀಡಲಾಗಿತ್ತು.

ದೆಹಲಿ ಮೆಟ್ರೊ ರೈಲು ಕಾರ್ಪೊರೇಷನ್ ಲಿಮಿಟೆಡ್ (ಡಿಎಂಆರ್‌ಸಿ) ಅಲ್ಲದೇ ದೇಶದ ಎಲ್ಲಾ ಮೆಟ್ರೊ ಯೋಜನೆಗಳಿಗೂ ಬಜೆಟ್ ಅನುದಾನ ನೀಡಲಾಗುತ್ತದೆ. ಲಖನೌ, ಕೊಚ್ಚಿ, ಮುಂಬೈ, ಬೆಂಗಳೂರು, ಹೈದರಾಬಾದ್ ಮತ್ತು ಕಾನ್ಪುರಾದಲ್ಲಿ ಮೆಟ್ರೊ ಸೇವೆ ಇದೆ.

ರಾಷ್ಟ್ರೀಯ ಹೆದ್ದಾರಿ ಜಾಲ ಯೋಜನೆ 25,000 ಕಿ.ಮೀ ವಿಸ್ತರಣೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ರಾಷ್ಟ್ರೀಯ ಹೆದ್ದಾರಿ ಜಾಲವನ್ನು 25,000 ಕಿ.ಮೀಗಳಷ್ಟು ವಿಸ್ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ್ದು, ಇದನ್ನು ಬಜೆಟ್‌ನಲ್ಲಿ ಪ್ರಕಟಿಸಿದೆ.

ಹೆದ್ದಾರಿ ಜಾಲವನ್ನು 25,000 ಕಿ.ಮೀಗೆ ವಿಸ್ತರಿಸಬೇಕು ಎಂದರೆ ದಿನಕ್ಕೆ 70 ಕಿ.ಮೀ ರಸ್ತೆಯನ್ನು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನಿರ್ಮಿಸಬೇಕಾಗುತ್ತದೆ. ಕಳೆದ ಸಾಲಿನಲ್ಲಿ ದಿನಕ್ಕೆ 40 ಕಿ.ಮೀ ರಸ್ತೆ ನಿರ್ಮಿಸುವ ಗುರಿ ಹೊಂದಲಾಗಿತ್ತು. 2020-21 ರಲ್ಲಿ ದಿನಕ್ಕೆ 28 ಕಿ.ಮೀ ರಸ್ತೆ ನಿರ್ಮಾಣವಾಗುತ್ತಿತ್ತು. 2020–21ರಲ್ಲಿ ಇದು ಶೇ 36.5ರಷ್ಟು ಏರಿಕೆಯಾಗಿತ್ತು.

ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಾಲ್ಕು ಕಡೆ ಬಹುಮಾದರಿ ಲಾಜಿಸ್ಟಿಕ್ಸ್ ಪಾರ್ಕ್‌ಗಳ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಲಾಗುವುದು. ಸಾರ್ವಜನಿಕ ಸಂಪನ್ಮೂಲಗಳಿಗೆ ಪೂರಕವಾಗಿ ಹೊಸ ವಿಧಾನಗಳ ಮೂಲಕ ₹ 20,000 ಕೋಟಿ ಸಂಗ್ರಹಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಜನರು ಮತ್ತು ಸರಕುಗಳ ವೇಗದ ಚಲನೆಗೆ ಅನುಕೂಲವಾಗುವಂತೆ ಎಕ್ಸ್‌ಪ್ರೆಸ್‌ವೇಗಳಿಗಾಗಿ ‘ಪಿಎಂ ಗತಿ ಶಕ್ತಿ ಮಾಸ್ಟರ್ ಪ್ಲಾನ್’ ರೂಪಿಸಲಾಗುವುದು. ಕಷ್ಟಕರವಾದ ಗುಡ್ಡಗಾಡು ಪ್ರದೇಶಗಳಲ್ಲಿ ರಾಷ್ಟ್ರೀಯ ರೋಪ್‌ವೇಸ್ ಅಭಿವೃದ್ಧಿ ಕಾರ್ಯಕ್ರಮವನ್ನು ಪಿಪಿಪಿ ಮಾದರಿಯಲ್ಲಿ ತೆಗೆದುಕೊಳ್ಳಲಾಗುವುದು ಎಂದು ಪ್ರಸ್ತಾಪಿಸಿದ್ದಾರೆ.

ಪ್ರವಾಸೋದ್ಯಮವನ್ನು ಉತ್ತೇಜಿಸುವುದರ ಜೊತೆಗೆ ಪ್ರಯಾಣಿಕರಿಗೆ ಸಂಪರ್ಕ ಮತ್ತು ಅನುಕೂಲತೆಯನ್ನು ಸುಧಾರಿಸುವ ಗುರಿ ಹೊಂದಲಾಗಿದೆ. 60 ಕಿಮೀ ಉದ್ದದ ಎಂಟು ರೋಪ್‌ವೇ ಯೋಜನೆಗಳ ಗುತ್ತಿಗೆಯನ್ನು ಈ ಆರ್ಥಿಕ ಸಾಲಿನಲ್ಲಿ ನೀಡಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ನಗರಾಭಿವೃದ್ಧಿ

- ನಗರ ಯೋಜನೆ ಮತ್ತು ವಿನ್ಯಾಸದಲ್ಲಿ ನಿರ್ದಿಷ್ಟ ಜ್ಞಾನ ಅಭಿವೃದ್ಧಿಪಡಿಸಲು ಮತ್ತು ಈ ಕ್ಷೇತ್ರದಲ್ಲಿ ಉನ್ನತಮಟ್ಟದ ತರಬೇತಿ ನೀಡಲು ಸುಮಾರು ಐದು ಸಂಸ್ಥೆಗಳನ್ನು ದೇಶದ ವಿವಿಧ ಭಾಗಗಳಲ್ಲಿ ಸ್ಥಾಪಿಸಲಾಗುವುದು. ಈ ಕೇಂದ್ರಗಳಿಗೆ ತಲಾ ₹250 ಕೋಟಿ ದತ್ತಿ ನೀಡಲಾಗುವುದು.
- ದೇಶಕ್ಕೆ ಸ್ವಾತಂತ್ರ್ಯ ಬಂದು 100 ವರ್ಷ ತುಂಬುವಷ್ಟರಲ್ಲಿ ದೇಶದ ಅರ್ಧದಷ್ಟು ಜನಸಂಖ್ಯೆ ನಗರಗಳಲ್ಲಿ ವಾಸಿಸಲಿದ್ದಾರೆ. ಆ ದಿನಗಳಿಗಾಗಿ ನಗರಗಳನ್ನು ಅಣಿಗೊಳಿಸಬೇಕು. ಅದಕ್ಕಾಗಿ ಬೃಹತ್ ನಗರಗಳನ್ನು ಉತ್ತಮಪಡಿಸಬೇಕು. ಎರಡು ಮತ್ತು ಮೂರನೇ ಹಂತದ ನಗರಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.
- ನಗರ ವಲಯ ನೀತಿಗಳು, ಕಟ್ಟಡಗಳ ಸಾಮರ್ಥ್ಯ, ನಗರಗಳ ಯೋಜನೆ ಮತ್ತು ಆಡಳಿತ ಕುರಿತು ಶಿಫಾರಸ್ಸುಗಳನ್ನು ನೀಡುವ ಸಲುವಾಗಿ ನಗರಗಳ ಯೋಜನೆ ಮಾಡುವವರು, ಅರ್ಥಶಾಸ್ತ್ರಜ್ಞರು, ಸಂಸ್ಥೆಗಳನ್ನು ಒಳಗೊಂಡಿರುವ ಉನ್ನತ ಮಟ್ಟದ ಸಮಿತಿ ರಚನೆ

ಇವಿಎಂಗಳ ಖರೀದಿಗೆ ₹1,525 ಕೋಟಿ

ನವದೆಹಲಿ (ಪಿಟಿಐ): ಹೊಸ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಖರೀದಿ ಹಾಗೂ ಬಳಕೆ ಮಾಡದ ಮತಯಂತ್ರಗಳನ್ನು ನಾಶಪಡಿಸುವುದಕ್ಕಾಗಿ ಕಾನೂನು ಸಚಿವಾಲಯಕ್ಕೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ₹ 1,525 ಕೋಟಿ ಹಂಚಿಕೆ ಮಾಡಲಾಗಿದೆ.

‘ಬ್ಯಾಲಟ್ ಯುನಿಟ್’, ಕಂಟ್ರೋಲ್ ಯುನಿಟ್ ಹಾಗೂ ವಿವಿಪ್ಯಾಟ್ ಯಂತ್ರಗಳು ಹಾಗೂ ಮತಯಂತ್ರಗಳಿಗೆ ಸಂಬಂಧಿಸಿದ ಇತರ ಸಾಧನ/ಸಲಕರಣೆಗಳ ಖರೀದಿಗೆ ಈ ಹಣವನ್ನು ಬಳಸಲಾಗುತ್ತದೆ. ಒಂದು ಇವಿಎಂಅನ್ನು 15 ವರ್ಷಗಳ ಕಾಲ ಬಳಕೆ ಮಾಡಲಾಗುತ್ತದೆ. ನಂತರ, ತಜ್ಞರನ್ನೊಳಗೊಂಡ ಸಮಿತಿಯ ಸಮ್ಮುಖದಲ್ಲಿ ಹಾಗೂ ಕಠಿಣ ಶಿಷ್ಟಾಚಾರ ಪಾಲನೆಯೊಂದಿಗೆ ಹಳೆಯ ಇವಿಎಂಗಳನ್ನು ನಾಶ ಮಾಡಲಾಗುತ್ತದೆ.

ರಫ್ತಿಗೆ ವಿನಾಯಿತಿ

ಕರಕುಶಲ ವಸ್ತುಗಳು, ಜವಳಿ, ಚರ್ಮದ ಉಡುಗೆಗಳು, ಚರ್ಮದ ಪಾದರಕ್ಷೆಗಳ ರಫ್ತಿನ ವೇಳೆ ಬಳಸುವ ಆಲಂಕಾರಿಕ ವಸ್ತುಗಳು, ಪ್ಯಾಕೇಜಿಂಗ್ ಬಾಕ್ಸ್‌ಗಳು, ಬಟನ್‌ಗಳು, ಝಿಪ್‌ಗಳಂತಹ ವಸ್ತುಗಳಿಗೆ ವಿನಾಯಿತಿ ನೀಡಲಾಗುತ್ತದೆ ಎಂದು ನಿರ್ಮಲಾ ಹೇಳಿದ್ದಾರೆ.

ರೈಲ್ವೆ: ವಿವಿಧ ಕಾರ್ಯಕ್ಕೆ ಬಜೆಟ್ ಮೀಸಲು

- **₹25,243 ಕೋಟಿ** ಹೊಸ ರೈಲು ಮಾರ್ಗಗಳ ನಿರ್ಮಾಣಕ್ಕೆ ಮೀಸಲಿರಿಸಿದ ಅನುದಾನ
- **₹12,108 ಕೋಟಿ** ಅವಳಿ ಮಾರ್ಗಗಳ ನಿರ್ಮಾಣಕ್ಕೆ ಮೀಸಲಿರಿಸಿದ ಅನುದಾನ
- **₹13,335 ಕೋಟಿ** ರೈಲು ಹಳಿಗಳ ನವೀಕರಣಕ್ಕೆ ಮೀಸಲಿರಿಸಿದ ಅನುದಾನ
- **₹2,850 ಕೋಟಿ** ಗೇಜ್ ಪರಿವರ್ತನೆಗೆ ಮೀಸಲಿರಿಸಿದ ಅನುದಾನ
- **₹38,686 ಕೋಟಿ** ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ರೈಲ್ವೆ ಇಲಾಖೆಯು ಹೂಡಿಕೆ ಮಾಡಲು ಮೀಸಲಿರಿಸಿದ ಅನುದಾನ

ಕೇಂದ್ರ ಬಜೆಟ್ 2022-23: ಉದ್ಯೋಗ ಸೃಷ್ಟಿ ಹಾಗೂ ಕೈಗಾರಿಕೆಗಳ ಉತ್ತೇಜನಕ್ಕೆ ಕೈಗೊಂಡ ಕ್ರಮಗಳ ವಿಶ್ಲೇಷಣೆ

ಬಂಡವಾಳ ವೆಚ್ಚ ಹೆಚ್ಚಳ, ಮೂಲಸೌಕರ್ಯ ಅಭಿವೃದ್ಧಿಯಷ್ಟೇ ಸಾಲದು

ವಿಶ್ಲೇಷಣೆ

ಸಾರ್ಥಕ್ ಪ್ರಧಾನ್

ಕೇಂದ್ರ ಬಜೆಟ್ ಬಂಡವಾಳ ವೆಚ್ಚ, ಮೂಲಸೌಕರ್ಯ ಅಭಿವೃದ್ಧಿಯತ್ತ ಗಮನ ಕೇಂದ್ರೀಕರಿಸಿದೆ. ಮೂಲಸೌಕರ್ಯಗಳಿಗೆ ಹೆಚ್ಚು ವೆಚ್ಚ ಮಾಡಿದಷ್ಟೂ ಹೆಚ್ಚು ಉದ್ಯೋಗ ಸೃಷ್ಟಿ ಸಾಧ್ಯ. ಎಂಎಸ್‌ಎಂಇ ಕೈಗಾರಿಕೆಗಳಿಗೆ ನಗದು ಲಭ್ಯತೆಯ ಬೆಂಬಲವನ್ನು ಪ್ರಕಟಿಸಲಾಗಿದೆ. ತುರ್ತು ಸಾಲ ಖಾತರಿ ಕಾರ್ಯಕ್ರಮಗಳಿಗೆ ಅನುದಾನ ಹೆಚ್ಚಳವಾಗಿದೆ. ಎಂಎಸ್‌ಎಂಇಗಳು ಭಾರಿ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಸುವ ಸಾಮರ್ಥ್ಯ ಹೊಂದಿರುವುದರಿಂದ, ಈ ಕ್ರಮವು ನಿರುದ್ಯೋಗ ಪ್ರಮಾಣವನ್ನು ತಗ್ಗಿಸಲು ನೆರವಾದೀತು.

ರಾಜ್ಯಗಳ ಪಾಲುದಾರಿಕೆಯಲ್ಲಿ ‘ಉದ್ದಿಮೆಗಳು ಮತ್ತು ಸೇವೆ ಅಭಿವೃದ್ಧಿ ಹಬ್’ ಸ್ಥಾಪಿಸಲು ಅನುಕೂಲ ಕಲ್ಪಿಸುವ ಸಲುವಾಗಿ ‘ವಿಶೇಷ ಆರ್ಥಿಕ ವಲಯಗಳ ಕಾಯ್ದೆ’ಯ ಬದಲು ಬೇರೊಂದು ಕಾಯ್ದೆ ಜಾರಿಗೆ ತರುವ ಘೋಷಣೆ ಮಾಡಲಾಗಿದೆ. ಭಾರತೀಯ ಎಸ್‌ಇಜೆಡ್‌ಗಳು ದಕ್ಷತೆ ಹೊಂದಿಲ್ಲ, ಅವುಗಳ ರಫ್ತು ಸ್ಪರ್ಧಾತ್ಮಕವಾಗಿಲ್ಲ. ‘ಉದ್ದಿಮೆಗಳು ಮತ್ತು ಸೇವೆ ಹಬ್’ಗಳ ಯಶಸ್ಸು ಅವುಗಳನ್ನು ಹೇಗೆ ವಿನ್ಯಾಸಗೊಳಿಸಲಾಗುತ್ತದೆ ಎಂಬುದನ್ನು ಆಧರಿಸಿದೆ.

2021-22ನೇ ಸಾಲಿನ ಪರಿಷ್ಕೃತ ಅಂದಾಜಿಗೆ ಹೋಲಿಸಿದರೆ, ದೇಶದ ಮಹತ್ವಾಕಾಂಕ್ಷಿ ಉದ್ಯೋಗ ಖಾತರಿ ಯೋಜನೆಯಾದ ನರೇಗಾಕ್ಕೆ ಅನುದಾನ ಹಂಚಿಕೆಯಲ್ಲಿ ಶೇ 25ರಷ್ಟು ಕಡಿತವಾಗಿದೆ. ಗ್ರಾಮೀಣ ಆರ್ಥಿಕತೆಯು ಬಿಕ್ಕಟ್ಟನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ನರೇಗಾ ಕಾರ್ಯಕ್ರಮಕ್ಕೆ ಅನುದಾನ ಕಡಿತ ಮಾಡಿರುವುದು ಗ್ರಾಮೀಣ ಪ್ರದೇಶದ ಅಭಿವೃದ್ಧಿ ಕುಂಠಿತಗೊಳ್ಳುವುದಕ್ಕೆ ಕಾರಣವಾಗಬಹುದು.

ಬೇಡಿಕೆಯನ್ನಷ್ಟೇ ನೋಡಿಕೊಂಡರೆ ಸಾಲದು, ಪೂರೈಕೆಯ ಬಗ್ಗೆಯೂ ಗಮನ ಹರಿಸಬೇಕು– ಉದ್ಯೋಗಾಕಾಂಕ್ಷಿಗಳನ್ನು ಮಾರುಕಟ್ಟೆಯ ಬೇಡಿಕೆಗಳಿಗೆ ತಕ್ಕಂತೆ ಸಜ್ಜುಗೊಳಿಸಲು ನೆರವಾಗುವುದು ಹೇಗೆ ಎಂಬ ಬಗ್ಗೆಯೂ ದೃಷ್ಟಿಹರಿಸಬೇಕು. ಕೌಶಲ ಅಭಿವೃದ್ಧಿ ವಿಚಾರದಲ್ಲಿ ಬಜೆಟ್ ಹೆಚ್ಚಿನ ಕಾರ್ಯಕ್ರಮಗಳೇನನ್ನೂ ಹೊಂದಿಲ್ಲ. 2021-22ನೇ ಸಾಲಿನ ಪರಿಷ್ಕೃತ ಅಂದಾಜುಗಳಿಗೆ ಹೋಲಿಸಿದರೆ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯಕ್ಕೆ ಅನುದಾನ ಹಂಚಿಕೆಯಲ್ಲಾಗಲೀ, ಕಾರ್ಯವಿಧಾನದಲ್ಲಾಗಲೀ ಯಾವುದೇ ಬದಲಾವಣೆಗಳು ಕಾಣಿಸುತ್ತಿಲ್ಲ. ಪುರುಷ ಕಾರ್ಮಿಕರ ಪಾಲ್ಗೊಳ್ಳುವಿಕೆ ದರಕ್ಕೆ (ಶೇ 55.6) ಹೋಲಿಸಿದರೆ ಮಹಿಳಾ ಕಾರ್ಮಿಕರ ಪಾಲ್ಗೊಳ್ಳುವಿಕೆ ದರ (ಎಲ್‌ಎಫ್‌ಪಿಆರ್) ತೀರಾ ತಳಮಟ್ಟಕ್ಕೆ (ಶೇ 18.6) ಕುಸಿದಿದೆ. ಮಹಿಳೆಯರು ಕಾರ್ಮಿಕ ಬಲದಲ್ಲಿ ಹೆಚ್ಚಿನ ಪಾಲು ಪಡೆಯುವುದನ್ನು ಉತ್ತೇಜಿಸಲು ಕೇಂದ್ರ ಬಜೆಟ್‌ನಲ್ಲಿ ಯಾವುದಾದರೂ ಕಾರ್ಯಕ್ರಮ ಹಮ್ಮಿಕೊಳ್ಳಬಹುದಿತ್ತು.

ಬಂಡವಾಳ ವೆಚ್ಚ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಷ್ಟೇ ಅಲ್ಲ; ಉದ್ದಿಮೆ ಸ್ಥಾಪನೆಗೆ, ಅವುಗಳನ್ನು ಮುನ್ನಡೆಸುವುದಕ್ಕೆ ಹಾಗೂ ಅವುಗಳನ್ನು ಮುಚ್ಚುವುದಕ್ಕೆ ಸಂಬಂಧಿಸಿದ ನಿಯಮಗಳನ್ನು ಸರಳೀಕರಿಸುವ ಮೂಲಕ ಕೈಗಾರಿಕೆಗಳಿಗೆ ಬೆಂಬಲ ನೀಡುವ ಉದ್ದೇಶವನ್ನೂ ಸರ್ಕಾರ ಹೊಂದಿದೆ. ಹಸಿರು ಪರವಾನಗಿ ಪಡೆಯುವುದಕ್ಕೆ ಏಕಗವಾಕ್ಷಿ ಪೋರ್ಟಲ್ ಸ್ಥಾಪಿಸುವುದರಿಂದ ಸಮಯ ಉಳಿತಾಯವಾಗಬಲ್ಲುದು. ಸೆಂಟರ್ ಫಾರ್ ಪ್ರೊಸೆಸಿಂಗ್ ಅಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ-ಪೇಸ್) ಸಂಸ್ಥೆಯು ಕಂಪನಿಗಳನ್ನು ಮುಚ್ಚುವ ಪ್ರಕ್ರಿಯೆಯನ್ನು ಚುರುಕುಗೊಳಿಸಬಲ್ಲುದು. ಭಾರತದಲ್ಲಿ ಉದ್ದಿಮೆಯನ್ನು ಸ್ಥಾಪಿಸುವುದು ಸುಲಭದ ವಿಚಾರವಲ್ಲ. ಆದರೆ, ಅದಕ್ಕಿಂತಲೂ ತ್ರಾಸದಾಯಕವಾದುದು ಅದನ್ನು ಮುಚ್ಚುವ ಪ್ರಕ್ರಿಯೆ. ಕಂಪನಿ ಮುಚ್ಚುವ ಅವಧಿಯನ್ನು 2 ವರ್ಷಗಳಿಂದ 6 ತಿಂಗಳುಗಳಿಗೆ ಇಳಿಸುವ ಮೂಲಕ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಆಶಯವನ್ನು ಸಿ-ಪೇಸ್ ಹೊಂದಿದೆ.

ಆ್ಯನಿಮೇಷನ್, ವಿಷುವಲ್‌ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ (ಎವಿಜಿಸಿ) ವಲಯವು ರಫ್ತು ಹಾಗೂ ಉದ್ಯೋಗ ಸೃಷ್ಟಿಯ ವಿಚಾರದಲ್ಲಿ ಹೇರಳ ಅವಕಾಶ ಹೊಂದಿದೆ. ಈ ವಲಯಕ್ಕೆ ಕಾರ್ಯಪಡೆಯನ್ನು ಸ್ಥಾಪಿಸುವುದನ್ನು ಹೊರತುಪಡಿಸಿ ಬೇರಾವುದೇ ಸ್ಪಷ್ಟ ಪ್ರಸ್ತಾವಗಳು ಕೇಂದ್ರ ಬಜೆಟ್‌ನಲ್ಲಿಲ್ಲ. ಸರ್ಕಾರ ಕೃತಕ ಬುದ್ಧಿಮತ್ತೆ (ಎ.ಐ), ಜಿಯೊಸ್ಪೇಷಿಯಲ್ ಸಿಸ್ಟಮ್‌ಗಳು ಮತ್ತು ಡ್ರೋನ್‌ಗಳು, ಸೆಮಿಕಂಡಕ್ಟರ್‌ಗಳು, ಸ್ಪೇಸ್ ಎಕಾನಮಿ, ಜೀನೋಮಿಕ್ಸ್ ಮತ್ತು ಫಾರ್ಮಾಸ್ಯುಟಿಕಲ್ಸ್, ಹಸಿರು ಇಂಧನ ಮತ್ತು ಸ್ವಚ್ಛ ಸಾರಿಗೆ ವ್ಯವಸ್ಥೆಗಳನ್ನು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮತ್ತು ಭಾರತೀಯ ಕೈಗಾರಿಕೆಗಳ ಕ್ಷಮತೆಯನ್ನು ಇನ್ನಷ್ಟು ಹೆಚ್ಚಿಸಬಲ್ಲ ‘ಉದಯೋನ್ಮುಖ ವಲಯಗಳು’ (ಸನ್ ರೈಸ್ ಸೆಕ್ಟರ್ಸ್) ಎಂದು ಗುರುತಿಸಿದೆ. ಆದರೆ, ಇವುಗಳ ಸಲುವಾಗಿ ಸ್ಪಷ್ಟವಾದ ಪ್ರಸ್ತಾವಗಳನ್ನು ಹೊಂದುವ ನಿಟ್ಟಿನಲ್ಲಿ ಕೇಂದ್ರ ಬಜೆಟ್ ಹೆಚ್ಚು ಧಾರಾಳವಾಗಿ ನಡೆದುಕೊಂಡಿಲ್ಲ. ಕೋವಿಡ್ ಸಾಂಕ್ರಾಮಿಕವು ಈಗಲೂ ಇದೆ. ಅದರಿಂದ ಸೃಷ್ಟಿಯಾಗಿರುವ ಆರ್ಥಿಕ ಪರಿಣಾಮಗಳನ್ನು ಇನ್ನಷ್ಟೇ ನಿವಾರಿಸ ಬೇಕಾಗಿದೆ. ಹಾಗಾಗಿ ಉದ್ಯೋಗ ಸೃಷ್ಟಿ ಹಾಗೂ ಕೈಗಾರಿಕಾ ಅಭಿವೃದ್ಧಿ ಈಗಿನ ತುರ್ತು ಅಗತ್ಯ. ಕೇಂದ್ರ ಬಜೆಟ್ ಈ ನಿಟ್ಟಿನಲ್ಲಿ ಪ್ರಯತ್ನಪಟ್ಟಿದೆಯಾದರೂ, ಅದು ಏನೇನೂ ಸಾಲದು.

ಲೇಖಕ: ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನಲ್ಲಿ ಅಸೋಸಿಯೇಟ್ ಫೆಲೊ

ಪ್ರತಿಕ್ರಿಯೆಗಳು

ನಿರುದ್ಯೋಗ ಮತ್ತು ಹಣದುಬ್ಬರದಿಂದ ನಲುಗಿ ಹೋಗಿರುವ ದೇಶದ ಸಾಮಾನ್ಯ ಜನರಿಗೆ ಕೇಂದ್ರ ಸರ್ಕಾರದ ಬಜೆಟ್ ಶೂನ್ಯವನ್ನಷ್ಟೇ ನೀಡಿದೆ. ದೊಡ್ಡ ದೊಡ್ಡ ಬೊಗಳೆ ಮಾತುಗಳಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕಳೆದು ಹೋಗಿದೆ. ಇದೊಂದು ಪೆಗಾಸಸ್ ಸ್ಪಿನ್ ಬಜೆಟ್.

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕೋವಿಡ್–19 ಪಿಡುಗಿನ ಅವಧಿಯಲ್ಲಿ ಜನರು ಕೇಂದ್ರ ಸರ್ಕಾರದ ಬಜೆಟ್‌ನಿಂದ ಹೆಚ್ಚಿನ ನಿರೀಕ್ಷೆಗಳನ್ನು ಹೊಂದಿದ್ದರು. ಆದರೆ ಈ ಬಜೆಟ್ ಜನರಲ್ಲಿ ನಿರಾಸೆ ಮೂಡಿಸಿದೆ. ಸಾಮಾನ್ಯ ಜನರಿಗೆ ಈ ಬಜೆಟ್‌ನಲ್ಲಿ ಏನನ್ನೂ ನೀಡಲಾಗಿಲ್ಲ. ಹಣದುಬ್ಬರ ಕಡಿಮೆ ಮಾಡಲು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿಲ್ಲ.

ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಈ ಬಜೆಟ್‌ನಲ್ಲಿ ವೇತನದಾರರು, ಮಧ್ಯಮ ವರ್ಗ, ರೈತರು ಮತ್ತು ಬಡವರಿಗೆ ಹಾಗೂ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಏನನ್ನೂ ನೀಡಿಲ್ಲ. ಹಾಗಾಗಿ ಇದು ಶೂನ್ಯ ಮೊತ್ತದ ಬಜೆಟ್. ಇದು ಅತ್ಯಂತ ನಿರಾಶಾದಾಯಕ ಹಾಗೂ ಸಾರವಿಲ್ಲದ ಬಜೆಟ್ ಸಹ ಆಗಿದೆ

ರಾಹುಲ್ ಗಾಂಧಿ, ಕಾಂಗ್ರೆಸ್ ಮುಖಂಡ



ಅಭಿವೃದ್ಧಿಯ ಕಡೆಗೆ ಸ್ಪಷ್ಟ ದಿಕ್ಕು ತೋರದ ಬಜೆಟ್ ಇದಾಗಿದೆ. ರೈತರಿಗೆ ಯಾವುದೇ ಪರಿಹಾರವನ್ನು ಇದು ಸೂಚಿಸಲ್ಲ. ರೈತರ ಆದಾಯವನ್ನು ದ್ವಿಗುಣಗೊಳಿಸುವ ಭರವಸೆಯ ಬಗ್ಗೆ ಇದು ಮೌನವಾಗಿದೆ. ಹಿಂದಿನ ಬಜೆಟ್‌ನಲ್ಲಿ ಉಲ್ಲೇಖಿಸಲಾದ ಅಂಶಗಳನ್ನು ಪೂರ್ಣಗೊಳಿಸುವ ಕುರಿತು ಪ್ರಸ್ತಾಪಿಸಿಲ್ಲ. ಯುವಜನರು, ನಿರುದ್ಯೋಗಿಗಳು, ಮಹಿಳೆಯರಿಗೆ ಏನನ್ನೂ ನೀಡದ ಇದು ‘ಲಾಲಿ ಪಾಪ್ ಬಜೆಟ್’ ಆಗಿದೆ.

ಭೂಪೇಶ್ ಬಘೇಲ್, ಛತ್ತೀಸಗಡ ಮುಖ್ಯಮಂತ್ರಿ

ಮಹಿಳಾ ಸಬಲೀಕರಣ, ಮಕ್ಕಳ ಆರೋಗ್ಯಕ್ಕೆ ಒತ್ತು

ನವದೆಹಲಿ: ‘ಸಕ್ಷಮ್ ಅಂಗನವಾಡಿಗಳ ಯೋಜನೆಯಡಿ ಎರಡು ಲಕ್ಷ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಲಾಗುವುದು. ಇದು ಹೊಸ ಪೀಳಿಗೆಯ ಅಂಗನವಾಡಿಗಳಿಗೆ ಬೇಕಾಗಿರುವ ಮೂಲ ಸೌಕರ್ಯಗಳು ಹಾಗೂ ಮಕ್ಕಳ ಆರಂಭಿಕ ಅಭಿವೃದ್ಧಿಗೆ ನೆರವಾಗಲು ಧ್ವನಿ–ದೃಶ್ಯ ಸಾಧನಗಳನ್ನು ಒದಗಿಸಲು ನೆರವಾಗಲಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ತಿಳಿಸಿದ್ದಾರೆ.

2022–23 ನೇ ಸಾಲಿನ ಬಜೆಟ್ ಮಂಡಿಸಿದ ಸೀತಾರಾಮನ್ ಅವರು,‘ ಭಾರತದ ಉಜ್ವಲ ಭವಿಷ್ಯದ ಮುಂಚೂಣಿಯಲ್ಲಿ ‘ನಾರಿ ಶಕ್ತಿ’ಯ ಮಹತ್ವ ಮತ್ತು ‘ಅಮೃತ ಕಾಲ’ ದಲ್ಲಿ ಮಹಿಳಾ ನೇತೃತ್ವದ ಅಭಿವೃದ್ಧಿಯನ್ನು ಗುರುತಿಸಿರುವ ಸರ್ಕಾರ,ಮಹಿಳಾ ಸಚಿವಾಲಯದ ಯೋಜನೆಗಳನ್ನು ಸಮಗ್ರವಾಗಿ ಪರಿಷ್ಕರಿಸಿದೆ’ ಎಂದರು.

ಮಹಿಳೆಯರು ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ 3 ಯೋಜನೆಗಳನ್ನು ಆರಂಭಿಸಲಾಗಿದೆ. ಮಿಷನ್ ಶಕ್ತಿ, ಮಿಷನ್ ವಾತ್ಸಲ್ಯ, ಸಕ್ಷಮ್ ಅಂಗನವಾಡಿ ಹಾಗೂ ಪೋಷಣ್ 2.0 ಯೋಜನೆಯನ್ನು ಜಾರಿಗೆ ತರಲಾಗಿದೆ.

ಸಕ್ಷಮ್ ಅಂಗನವಾಡಿ ಹಾಗೂ ಪೋಷಣ್ 2.0 ಯೋಜನೆಗೆ 2021-22 ರ ಸಾಲಿನಲ್ಲಿ ₹20,105 ಕೋಟಿ ನೀಡಲಾಗಿತ್ತು. ಇದನ್ನು ₹20,263ಕ್ಕೆ ಏರಿಸಲಾಗಿದೆ. ‘ಮಿಷನ್ ಶಕ್ತಿ’ಗೆ ಕಳೆದ ವರ್ಷ ₹3,109 ಕೋಟಿ ನೀಡಲಾಗಿತ್ತು. ಈ ವರ್ಷ ಅದನ್ನು ₹3,184 ಕೋಟಿಯಷ್ಟು ಹೆಚ್ಚಳ ಮಾಡಲಾಗಿದೆ. ಜತೆಗೆ, ಮಿಷನ್ ವಾತ್ಸಲ್ಯಗೆ ₹1,472 ಕೋಟಿ ಬಜೆಟ್ ಹಂಚಿಕೆ ಮಾಡಲಾಗಿದೆ. ಕಳೆದ ವರ್ಷ ₹900 ಕೋಟಿ ನೀಡಲಾಗಿತ್ತು.

2022-23ರ ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ ಕಳೆದ ವರ್ಷಕ್ಕಿಂತ ಶೇಕಡ 3 ರಷ್ಟು ಹೆಚ್ಚು ಹಣ ಹಂಚಿಕೆ ಮಾಡಲಾಗಿದೆ. 2021-22ರ ಸಾಲಿನಲ್ಲಿ ₹24,435 ಕೋಟಿ ನೀಡಲಾಗಿತ್ತು. ಇದೀಗ ಪ್ರಸಕ್ತ ಸಾಲಿನಲ್ಲಿ ಈ ಮೊತ್ತವನ್ನು ₹25,172.28 ಕೋಟಿಗೆ ಏರಿಕೆ ಮಾಡಲಾಗಿದೆ.

ಸಾಂದರ್ಭಿಕ ಚಿತ್ರ

ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ಹೆಚ್ಚು ಅನುದಾನ

ಕೇಂದ್ರ ಸರ್ಕಾರವು ಈ ಬಾರಿಯ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಮೀಸಲಿರಿಸಿರುವ ಒಟ್ಟು ಅನುದಾನದಲ್ಲಿ ಶೇ 45ಕ್ಕಿಂತಲೂ ಹೆಚ್ಚು ಮೊತ್ತವನ್ನು ರಾಷ್ಟ್ರೀಯ ಆರೋಗ್ಯ ಮಿಷನ್‌ಗೆ ನೀಡಿದೆ. ರಾಷ್ಟ್ರೀಯ ಆರೋಗ್ಯ ಮಿಷನ್‌ನ ಅಡಿ ಪ್ರಧಾನಿ ಸ್ವಸ್ತ್ಯ ಸುರಕ್ಷಾ ನಿಧಿಗೆ ಹೆಚ್ಚು ಮೊತ್ತವನ್ನು ನೀಡಲಾಗಿದೆ.



‘ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮ ಪ್ರಾರಂಭ’

ನವದೆಹಲಿ (ಪಿಟಿಐ): ಗುಣಮಟ್ಟದ ಮಾನಸಿಕ ಆರೋಗ್ಯ ಸಮಾಲೋಚನೆ ಮತ್ತು ಆರೈಕೆ ಸೇವೆಗಳ ಸುಧಾರಣೆಗೆ ‘ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮ’ವನ್ನು ಪ್ರಾರಂಭಿಸಲಾಗುವುದು ಎಂದು ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಮಂಗಳವಾರ ಹೇಳಿದರು.

2022-23 ರ ಬಜೆಟ್ ಮಂಡಿಸಿ, ಸಾಂಕ್ರಾಮಿಕ ರೋಗವು ಎಲ್ಲಾ ವಯಸ್ಸಿನ ಜನರಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಹೆಚ್ಚಿಸಿದೆ. ಆದ್ದರಿಂದ ಗುಣಮಟ್ಟದ ಮಾನಸಿಕ ಆರೋಗ್ಯ ಸಮಾಲೋಚನೆ ಮತ್ತು ಆರೈಕೆ ಸೇವೆಗಳ ಸುಧಾರಣೆಗೆ ಈ ಕಾರ್ಯಕ್ರಮ ಪ್ರಾರಂಭಿಸಲಾಗುವುದು ಎಂದರು.

‘ಕಾರ್ಯಕ್ರಮವು 23 ಟೆಲಿ-ಮೆಂಟಲ್ ಹೆಲ್ತ್ ಸೆಂಟರ್ ಆಫ್ ಎಕ್ಸಲೆನ್ಸ್‌ನ ನೆಟ್‌ವರ್ಕ್ ಅನ್ನು ಒಳಗೊಂಡಿರುತ್ತದೆ. ನಿಮ್ಹಾನ್ಸ್ ನೋಡಲ್ ಕೇಂದ್ರವಾಗಿದೆ. ಬೆಂಗಳೂರಿನ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆಯು (ಐಐಐಟಿ–ಬಿ) ತಂತ್ರಜ್ಞಾನ ಒದಗಿಸಲಿದೆ ಎಂದು ಹೇಳಿದರು.

ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್: ರಾಷ್ಟ್ರೀಯ ಡಿಜಿಟಲ್ ಆರೋಗ್ಯ ಪರಿಸರ ವ್ಯವಸ್ಥೆಗಾಗಿ ಮುಕ್ತ ವೇದಿಕೆ ತರಲಾಗುವುದು. ಇದು ಆರೋಗ್ಯ ಪೂರೈಕೆದಾರರು ಮತ್ತು ಆರೋಗ್ಯದ ಡಿಜಿಟಲ್ ನೋಂದಣಿಗಳನ್ನು ಒಳಗೊಂಡಿರುತ್ತದೆ ಎಂದು ಅವರು ತಿಳಿಸಿದರು.

ಪರಿಸರ ಸಚಿವಾಲಯಕ್ಕೆ ಅನುದಾನ ಹಂಚಿಕೆ ಹೆಚ್ಚಳ

ನವದೆಹಲಿ(ಪಿಟಿಐ): ಕೇಂದ್ರ ಪರಿಸರ ಸಚಿವಾಲಯಕ್ಕೆ ಕಳೆದ ಸಾಲಿಗಿಂತ ಶೇಕಡ 5.6 ರಷ್ಟು ಅನುದಾನವನ್ನು ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚಿಸಿರುವ ಕೇಂದ್ರ ಸರ್ಕಾರ, ಮಾಲಿನ್ಯ ನಿಯಂತ್ರಣಕ್ಕೆ ಮಾಡಲಾಗಿದ್ದ ಹಂಚಿಕೆಯಲ್ಲಿ ₹ 10 ಕೋಟಿಗಳಷ್ಟು ಕಡಿತಗೊಳಿಸಿದೆ.

ನ್ಯಾಷನಲ್ ಮಿಷನ್ ಫಾರ್ ಗ್ರೀನ್ ಇಂಡಿಯಾಗೆ ಕಳೆದ ಹಣಕಾಸು ವರ್ಷದಲ್ಲಿ ನೀಡಲಾಗಿದ್ದ ₹290 ಕೋಟಿ ಹಣವನ್ನು ₹361.69 ಕೋಟಿಗೆ ಏರಿಕೆ ಮಾಡಲಾಗಿದೆ. ಇದರಲ್ಲಿ ರಾಷ್ಟ್ರೀಯ ಅರಣ್ಯೀಕರಣ ಕಾರ್ಯಕ್ರಮಕ್ಕೆ ₹300 ಕೋಟಿ ನಿಗದಿ ಮಾಡಲಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ಮಾಲಿನ್ಯ ನಿಯಂತ್ರಣಕ್ಕಾಗಿ ₹460 ಹಂಚಿಕೆ ಮಾಡಲಾಗಿದ್ದು, ಇದು ಕಳೆದ ವರ್ಷದ ಬಜೆಟ್‌ನಲ್ಲಿ ನೀಡಲಾಗಿದ್ದ ಮೊತ್ತಕ್ಕಿಂತ ₹10 ಕೋಟಿ ಕಡಿಮೆಯಾಗಿದೆ.

ಕೇಂದ್ರ ಸರ್ಕಾರವು ವನ್ಯಜೀವಿ ಸಂರಕ್ಷಣೆಗಾಗಿ ಪ್ರಾರಂಭಿಸಿರುವ ಪ್ರಾಜೆಕ್ಟ್ ಟೈಗರ್ ಮತ್ತು ಪ್ರಾಜೆಕ್ಟ್ ಎಲಿಫೆಂಟ್ ಯೋಜನೆಗಳಿಗೆ ಈ ವರ್ಷ ಹಂಚಿಕೆಯನ್ನು ಹೆಚ್ಚಳ ಮಾಡಲಾಗಿದೆ. ಪ್ರಾಜೆಕ್ಟ್ ಟೈಗರ್‌ಗೆ ₹50 ಕೋಟಿ (₹300 ಕೋಟಿ) ಹಾಗೂ ಪ್ರಾಜೆಕ್ಟ್ ಎಲಿಫೆಂಟ್‌ಗೆ ₹ 2 ಕೋಟಿಯನ್ನು (₹35 ಕೋಟಿ) ಏರಿಕೆ ಮಾಡಲಾಗಿದೆ. ಕಳೆದ ವರ್ಷ ಪ್ರಾಜೆಕ್ಟ್ ಟೈಗರ್ ಮತ್ತು ಪ್ರಾಜೆಕ್ಟ್ ಎಲಿಫೆಂಟ್‌ಗೆ ಕ್ರಮವಾಗಿ ₹250 ಕೋಟಿ ಹಾಗೂ ₹33 ಕೋಟಿ ಹಂಚಿಕೆ ಮಾಡಲಾಗಿತ್ತು.

ಸಾಂದರ್ಭಿಕ ಚಿತ್ರ

ಆನ್‌ಲೈನ್ ವೇದಿಕೆಯ ಸಮರ್ಪಕ ಬಳಕೆಗೆ ಮುಂದಾಗಿರುವ ಕೇಂದ್ರ

200 ಟಿ.ವಿ ಚಾನೆಲ್, ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಒನ್ ಕ್ಲಾಸ್– ಒನ್ ಟಿವಿ ಚಾನೆಲ್’ ಕಾರ್ಯಕ್ರಮದಡಿ 200 ಚಾನೆಲ್‌ಗಳು, ಕೌಶಲ ವೃದ್ಧಿಗೆ ವರ್ಚುವಲ್ ಲ್ಯಾಬ್ ಮತ್ತು ಇ-ಲ್ಯಾಬ್‌ಗಳ ನಿರ್ಮಾಣ, ಗುಣಮಟ್ಟದ ‘ಇ- ಕಂಟೆಂಟ್’ ಸಿದ್ಧಪಡಿಸುವಿಕೆ, ‘ಡಿಜಿಟಲ್ ವಿಶ್ವವಿದ್ಯಾಲಯ’ ಸ್ಥಾಪನೆ ಸೇರಿದಂತೆ ಶಿಕ್ಷಣ ಕ್ಷೇತ್ರಕ್ಕೆ ಹಲವು ಹೊಸ ಕಾರ್ಯಕ್ರಮಗಳನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಪ್ರಕಟಿಸಿದರು.

ಕೋವಿಡ್ ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿ ದೇಶದಾದ್ಯಂತ ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯಾರ್ಥಿಗಳು, ಪರಿಶಿಷ್ಟ ಸಮುದಾಯ ಹಾಗೂ ಇತರ ದುರ್ಬಲ ವರ್ಗಗಳ ಮಕ್ಕಳು ಎರಡು ವರ್ಷಗಳ ಕಾಲ ಔಪಚಾರಿಕ ಶಿಕ್ಷಣದಿಂದ ದೂರ ಉಳಿದಿದ್ದರು. ಇವರಲ್ಲಿ ಬಹುತೇಕರು ಸರ್ಕಾರಿ ಶಾಲಾ ಮಕ್ಕಳು ಎಂಬುದು ಗಮನಾರ್ಹ.

ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ‘ಪಿಎಂ ಇ–ವಿದ್ಯಾ’ ಯೋಜನೆಯಡಿ ‘ಒಂದು ಕ್ಲಾಸ್– ಒನ್ ಟಿವಿ ಚಾನೆಲ್’ ಕಾರ್ಯಕ್ರಮವನ್ನು 12ರಿಂದ 200 ಟಿವಿ ಚಾನೆಲ್‌ಗಳಿಗೆ ವಿಸ್ತರಿಸಲಾಗುತ್ತದೆ. ಇದು ಎಲ್ಲ ರಾಜ್ಯಗಳ 1ರಿಂದ 12ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಪೂರಕ ಶಿಕ್ಷಣ ಒದಗಿಸಲಿದೆ ಎಂದು ಸಚಿವರು ಹೇಳಿದರು.

ಮುಖ್ಯಾಂಶಗಳು

- 1ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಪೂರಕ ಶಿಕ್ಷಣ
- ಎಲ್ಲ ಪ್ರಾದೇಶಿಕ ಭಾಷೆಗಳಲ್ಲೂ ಸಿದ್ಧವಾಗಲಿದೆ ‘ಇ–ಕಂಟೆಂಟ್’
- ಡಿಜಿಟಲ್ ವಿ.ವಿ ಮೂಲಕ ವಿದ್ಯಾರ್ಥಿಗಳ ಮನೆಬಾಗಿಲಿಗೆ ಶಿಕ್ಷಣ

ವೃತ್ತಿಪರ ಕೋರ್ಸ್‌ಗಳ ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಕೌಶಲ ಉತ್ತೇಜಿಸಲು ಹಾಗೂ ಸೃಜನಶೀಲತೆಗೆ ಬೆಳೆಸಲು ವಿಜ್ಞಾನ ಮತ್ತು ಗಣಿತ ವಿಷಯದಲ್ಲಿ 750 ‘ವರ್ಚುವಲ್ ಲ್ಯಾಬ್’ಗಳು ಹಾಗೂ 75 ‘ಇ–ಲ್ಯಾಬ್’ಗಳನ್ನು ಸ್ಥಾಪಿಸಲಾಗುವುದು.

ದೇಶದ ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಉತ್ತಮ ಗುಣಮಟ್ಟದ ‘ಇ–ಕಂಟೆಂಟ್’ ಅಭಿವೃದ್ಧಿಪಡಿಸಲಾಗುತ್ತದೆ. ಅದನ್ನು ಇಂಟರ್‌ನೆಟ್, ಮೊಬೈಲ್, ಟಿ.ವಿ ಹಾಗೂ ರೇಡಿಯೊ ಮೂಲಕ ವಿದ್ಯಾರ್ಥಿಗಳಿಗೆ ದೊರೆಯುವಂತೆ ವ್ಯವಸ್ಥೆ ಮಾಡಲಾಗುವುದು. ಗುಣಮಟ್ಟದ ‘ಇ–ಕಂಟೆಂಟ್’ ಅಭಿವೃದ್ಧಿಗೆ ಪೂರಕವಾಗಿ ಶಿಕ್ಷಕರನ್ನು ಸಶಕ್ತಗೊಳಿಸಿ, ಡಿಜಿಟಲ್ ಉಪಕರಣಗಳೊಂದಿಗೆ ಸಜ್ಜುಗೊಳಿಸಲಾಗುತ್ತದೆ.

ಡಿಜಿಟಲ್ ವಿಶ್ವವಿದ್ಯಾಲಯ: ದೇಶದ ಎಲ್ಲ ಭಾಗದ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಲು ಜಾಗತಿಕ ಮಟ್ಟದ ಡಿಜಿಟಲ್ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು. ಇದು ವಿದ್ಯಾರ್ಥಿಗಳಿಗೆ ತಮ್ಮ ಮನೆ ಬಾಗಿಲಿನಲ್ಲಿಯೇ ಕಲಿಕೆಯ ಅನುಭವ ನೀಡಲಿದೆ. ದೇಶದ ವಿವಿಧ ಭಾಷೆಗಳ ಮೂಲಕ ಇದರಲ್ಲಿ ಶಿಕ್ಷಣ ದೊರೆಯಲಿದೆ. ದೇಶದ ಅತ್ಯುತ್ತಮ ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಈ ಕಾರ್ಯಕ್ರಮಕ್ಕೆ ಸಹಕರಿಸಲಿವೆ ಎಂದು ಸಚಿವರು ತಿಳಿಸಿದರು.

ನಗರ ಯೋಜನೆ ಮತ್ತು ವಿನ್ಯಾಸದಲ್ಲಿ ಭಾರತದ ನಿರ್ದಿಷ್ಟ ಜ್ಞಾನವನ್ನು ಅಭಿವೃದ್ಧಿಪಡಿಸಲಾಗುತ್ತದೆ. ಇದಕ್ಕಾಗಿ ಈ ಕ್ಷೇತ್ರದಲ್ಲಿ ಪ್ರಮಾಣೀಕೃತ ತರಬೇತಿ ನೀಡಲಾಗುತ್ತದೆ. ಅಲ್ಲದೆ ಇದಕ್ಕಾಗಿ ದೇಶದ ವಿವಿಧೆಡೆ ಐದು ಶೈಕ್ಷಣಿಕ ಸಂಸ್ಥೆಗಳನ್ನು ಪರಿಣಿತಿ ಕೇಂದ್ರಗಳನ್ನಾಗಿ ಗುರುತಿಸಲಾಗುತ್ತದೆ.

ಈ ಕೇಂದ್ರಗಳಿಗೆ ತಲಾ ₹ 250 ಕೋಟಿ ದತ್ತಿ ನಿಧಿಯನ್ನು ಒದಗಿಸಲಾಗುತ್ತದೆ. ಜೊತೆಗೆ, ಇತರ ಸಂಸ್ಥೆಗಳಲ್ಲಿ ನಗರ ಯೋಜನೆ ಕೋರ್ಸ್‌ಗಳ ಪಠ್ಯಕ್ರಮ, ಗುಣಮಟ್ಟ ಮತ್ತು ಪ್ರವೇಶವನ್ನು ಸುಧಾರಿಸಲು ಎಐಸಿಟಿಇ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹಣಕಾಸು ಸಚಿವರು ತಿಳಿಸಿದರು.

ಸೇನಾ ಸಲಕರಣೆ: ಸ್ವಾವಲಂಬನೆ ಮಂತ್ರ

ನವದೆಹಲಿ: ಸೇನಾ ಉಪಕರಣಗಳ ತಯಾರಿಕೆಯಲ್ಲಿ ಸ್ವಾವಲಂಬನೆಯನ್ನು ಖಾತ್ರಿಪಡಿಸುವುದನ್ನು ಈ ಬಾರಿಯ ಬಜೆಟ್ ಒತ್ತಿ ಹೇಳಿದೆ. ರಕ್ಷಣಾ ಉಪಕರಣಗಳ ಆಮದು ಮೇಲಿನ ಅವಲಂಬನೆ ಕಡಿಮೆ ಮಾಡಲು ಮತ್ತು ಸಶಸ್ತ್ರ ಪಡೆಗಳಿಗೆ ಉಪಕರಣಗಳನ್ನು ಉತ್ಪಾದಿಸುವಲ್ಲಿ ಸ್ವಾವಲಂಬನೆ ಉತ್ತೇಜಿಸಲು ಸರ್ಕಾರ ಮುಂದಾಗಿದೆ.

ಭಾರತವನ್ನು ರಕ್ಷಣಾ ಉತ್ಪಾದನಾ ಕೇಂದ್ರವಾಗಿ ಪರಿವರ್ತಿಸುವ ಉದ್ದೇಶವನ್ನು ಕೇಂದ್ರ ಇಟ್ಟುಕೊಂಡಿದೆ. ಈ ದಿಸೆಯಲ್ಲಿ ರಕ್ಷಣಾ ಖರೀದಿಯಲ್ಲಿ ಶೇ 68ರಷ್ಟನ್ನು ದೇಶೀಯ ಕೈಗಾರಿಕೆಗಳಿಗೆ ಮೀಸಲಿಡಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ನವೋದ್ಯಮ ಮತ್ತು ಖಾಸಗಿ ಸಂಸ್ಥೆಗಳ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ಶೇ 25ರಷ್ಟು ಮೀಸಲಿಡುವ ಪ್ರಸ್ತಾಪವವನ್ನೂ ಮಾಡಲಾಗಿದೆ.

ದೇಶದ ರಕ್ಷಣಾ ಬಜೆಟ್‌ನ ಗಾತ್ರವನ್ನು ಹೆಚ್ಚಿಸಲಾಗಿದೆ. 2022–23ನೇ ಸಾಲಿನಲ್ಲಿ ರಕ್ಷಣಾ ವಲಯಕ್ಕೆ ₹5.25 ಲಕ್ಷ ಕೋಟಿ ಮೀಸಲಿಡಲಾಗಿದೆ. ಕಳೆದ ವರ್ಷ ₹4.78 ಕೋಟಿ ನೀಡಲಾಗಿತ್ತು. ಹೊಸ ಶಸ್ತ್ರಾಸ್ತ್ರಗಳು, ವಿಮಾನಗಳು, ಯುದ್ಧನೌಕೆಗಳು ಮತ್ತು ಇತರ ಮಿಲಿಟರಿ ಯುದ್ಧೋಪಕರಣಗಳ ಖರೀದಿ ಒಳಗೊಂಡಂತೆ ಬಂಡವಾಳ ವೆಚ್ಚಕ್ಕಾಗಿ ಒಟ್ಟು ₹1,52,369 ಕೋಟಿ ಮೀಸಲಿಡಲಾಗಿದೆ. ಕಳೆದ ಬಾರಿ ಬಂಡವಾಳ ವೆಚ್ಚಕ್ಕಾಗಿ ₹1.34 ಲಕ್ಷ ಕೋಟಿ ನೀಡಲಾಗಿತ್ತು. ವೇತನ ಪಾವತಿ ಮತ್ತು ಸಂಸ್ಥೆಗಳ ನಿರ್ವಹಣೆ ವೆಚ್ಚಗಳನ್ನು ಒಳಗೊಂಡ ವೆಚ್ಚಕ್ಕಾಗಿ ₹2,33,000 ಕೋಟಿ ತೆಗೆದಿರಿಸಲು ನಿರ್ಧರಿಸಲಾಗಿದೆ. ರಕ್ಷಣಾ ಪಿಂಚಣಿಗಾಗಿ ₹1,19,696 ಕೋಟಿ, ರಕ್ಷಣಾ ಸಚಿವಾಲಯಕ್ಕೆ (ನಾಗರಿಕ) ₹20,100 ಕೋಟಿ ಮೀಸಲು ಇಡಲಾಗಿದೆ.

ರಾಜನಾಥ್ ಸ್ವಾಗತ: ಸ್ಥಳೀಯ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಬಜೆಟ್‌ನಲ್ಲಿ ಮಹತ್ವದ ಕ್ರಮ ತೆಗೆದುಕೊಳ್ಳಲಾಗಿದ್ದು, ಇದು ದೇಶೀಯ ರಕ್ಷಣಾ ಉದ್ಯಮಗಳಿಗೆ ಉತ್ತೇಜನ ನೀಡುತ್ತದೆ ಎಂದು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

ಜನಾಭಿಪ್ರಾಯ

ಐಎಲ್‌ಸಿ ಶಿಫಾರಸು ಜಾರಿ ಬಗ್ಗೆ ಚಕಾರ ಎತ್ತಿಲ್ಲ

ಅಂಗನವಾಡಿಗಳಿಗೆ ನೀಡುತ್ತಿದ್ದ ಅನುದಾನದಲ್ಲಿ ಶೇ 40ರಷ್ಟು ಕಡಿತ ಮಾಡಿ ಈಗ 2 ಲಕ್ಷ ಅಂಗನವಾಡಿಗಳನ್ನು ಮೇಲ್ದರ್ಜೆಗೆ ಏರಿಸುತ್ತೇವೆ ಎಂದು ಹೇಳುತ್ತಿರುವುದು ಸರಿಯಲ್ಲ. ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು (ಐಸಿಡಿಎಸ್) ಕಾಯಂಗೊಳಿಸುವುದು ಹಾಗೂ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸುವುದಕ್ಕೆ ಈ ಬಜೆಟ್‌ನಲ್ಲೂ ಆದ್ಯತೆ ನೀಡದಿರುವುದು ಬೇಸರ ಉಂಟುಮಾಡಿದೆ. ಅಂಗನವಾಡಿ ಕಾರ್ಯಕರ್ತೆಯರನ್ನು ನೌಕರರನ್ನಾಗಿ ಪರಿಗಣಿಸಿ ಶಾಸನಬದ್ಧ ಸೌಕರ್ಯಗಳನ್ನು ಒದಗಿಸಬೇಕೆಂದು ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ) ಶಿಫಾರಸು ಮಾಡಿದೆ. ಅದರ ಬಗ್ಗೆ ಬಜೆಟ್‌ನಲ್ಲಿ ಚಕಾರ ಎತ್ತಿಲ್ಲ.

ಎಸ್.ವರಲಕ್ಷ್ಮಿ
ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ.

ದುಡಿಯುವ ವರ್ಗದ ಕಡೆಗಣನೆ



ಕಾರ್ಮಿಕರು, ರೈತರು ಹಾಗೂ ನೌಕರರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಮಾರುವ ಅವಶ್ಯಕತೆಯಾದರೂ ಏನು? ಕಾರ್ಪೊರೇಟ್ ಸಂಸ್ಥೆಗಳ ಮೇಲೆ ಹೆಚ್ಚು ತೆರಿಗೆ ವಿಧಿಸಿ ಮಧ್ಯಮ ವರ್ಗದವರು, ಸಂಬಳ ಪಡೆಯುವ ನೌಕರರ ಮೇಲಿನ ತೆರಿಗೆ ಭಾರ ಕಡಿಮೆ ಮಾಡಬೇಕಿತ್ತು. ಆದರೆ, ಇದಕ್ಕೆ ವ್ಯತಿರಿಕ್ತವಾಗಿ ಕಾರ್ಪೊರೇಟ್ ತೆರಿಗೆ ಇಳಿಕೆ ಮಾಡಲಾಗಿದೆ. ಬಡವರ ಕಲ್ಯಾಣದ ಬದಲು ಬಂಡವಾಳಶಾಹಿಗಳ ಹಿತಾಸಕ್ತಿ ಕಾಪಾಡಲು ಮಂಡಿಸಿದ ಬಜೆಟ್ ಇದಾಗಿದೆ.

ಎಸ್.ಕೆ. ಕಾಂತಾ
ಕಾರ್ಮಿಕ ಮುಖಂಡ, ಕಲಬುರಗಿ

ದೂರದೃಷ್ಟಿಯ ಬಜೆಟ್

ಆದಾಯ ತೆರಿಗೆಯಲ್ಲಿ ಬದಲಾವಣೆ ಮಾಡದೇ ಭವಿಷ್ಯದ ದಿನಗಳಲ್ಲಿ ಅಭಿವೃದ್ಧಿಯ ದೃಷ್ಟಿಕೋನ ಇಟ್ಟುಕೊಂಡು ಬಜೆಟ್ ಮಂಡಿಸಲಾಗಿದೆ. ತಂತ್ರಜ್ಞಾನದ ಸ್ಪರ್ಧೆಯಲ್ಲಿ ಸಾಗುತ್ತಿರುವ ನಮಗೆ ಡಿಜಿಟಲ್ ಕ್ಷೇತ್ರಕ್ಕೆ ಒತ್ತು ನೀಡಿದ್ದು ಸ್ವಾಗತಾರ್ಹ. ಅಂಚೆಕಚೇರಿಗಳಿಗೆ ಡಿಜಿಟಲ್ ಸೌಕರ್ಯ ಕಲ್ಪಿಸಿದ್ದರಿಂದ ಗ್ರಾಮೀಣ ಭಾಗದ ಜನರಿಗೆ ಅನುಕೂಲವಾಗಲಿದೆ. ಕೃಷಿಯಲ್ಲಿ ಕಿಸಾನ್ ಡ್ರೋನ್ ಬಳಕೆಗೆ ಉತ್ತೇಜನ, ಅರಣ್ಯದಲ್ಲಿ ಕೃಷಿ ಮಾಡುವ ಜನರಿಗೆ ಆರ್ಥಿಕ ನೆರವಿನ ಭರವಸೆಗಳು ಹೊಸ ವಿಶ್ವಾಸ ಮೂಡಿಸಿವೆ. ಡಿಜಿಟಲ್ ಸ್ವತ್ತಿನ ಮೇಲೆ ಶೇ 30ರಷ್ಟು ತೆರಿಗೆ ವಿಧಿಸಿರುವುದು ದೇಶದ ಅಭಿವೃದ್ಧಿಗೆ ಅನುಕೂಲವಾಗುವಂತಿದೆ.

ಪದ್ಮಜಾ ಗರಗಟ್ಟಿ
ಲೆಕ್ಕ ಪರಿಶೋಧಕಿ, ಹುಬ್ಬಳ್ಳಿ

ಕೃಷಿ, ಕೃಷಿಕ ವಿರೋಧಿ ಬಜೆಟ್

ಕೇಂದ್ರದ ಈ ಬಜೆಟ್ ಮದ್ದಿಲ್ಲದ ಪಟಾಕಿಯಂತೆ. ಕೃಷಿ, ಕೃಷಿಕ ಹಾಗೂ ಕಾರ್ಮಿಕ ವಿರೋಧಿಯಾಗಿದೆ. ರೈತರ ಹೋರಾಟದ ಪರಿಣಾಮವಾಗಿ ಮೂರು ಕೃಷಿ ಕಾಯ್ದೆ ವಾಪಸ್ ಪಡೆದರೂ ಅದಕ್ಕೆ ಪೂರಕವಾಗಿ ಯಾವುದೇ ಅನುಕೂಲ ಮಾಡಿಕೊಟ್ಟಿಲ್ಲ. ಎಲ್ಲಾ ಬೆಳೆಗಳನ್ನು ಕನಿಷ್ಠ ಬೆಂಬಲ ಬೆಲೆ ವ್ಯಾಪ್ತಿಗೆ ತಂದು, ಉತ್ತೇಜನ ಕೊಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಕಳೆದ ಬಾರಿ ₹ 2.42 ಲಕ್ಷ ಕೋಟಿ ಅನುದಾನ ಇಟ್ಟಿದ್ದು, ಈ ಬಾರಿ ₹ 2.37 ಲಕ್ಷ ಕೋಟಿಗೆ ಇಳಿಸಲಾಗಿದೆ. ಎಂಎಸ್‌ಪಿಯಿಂದ ಹಿಂದೆ ಸರಿಯುವ ಲಕ್ಷಣವಿದು. ಭತ್ತ ಮತ್ತು ಗೋಧಿಗೆ ಬೆಂಬಲ ಬೆಲೆ ಘೋಷಿಸಿರುವುದು ಪಂಜಾಬ್ ಹಾಗೂ ಉತ್ತರ ಪ್ರದೇಶ ಚುನಾವಣೆಯಲ್ಲಿ ಮತ ಸೆಳೆಯುವ ತಂತ್ರವಷ್ಟೇ.

ಬಡಗಲಪುರ ನಾಗೇಂದ್ರ,
ರಾಜ್ಯ ರೈತ ಸಂಘದ ಅಧ್ಯಕ್ಷ

ಅಂಕಿ-ಅಂಶಗಳು

- ₹37,510 ಕೋಟಿ — ರಾಷ್ಟ್ರೀಯ ಶಿಕ್ಷಣ ಮಿಷನ್‌ಗೆ ಮೀಸಲಿರಿಸಿದ ಅನುದಾನ
- ₹10,233 ಕೋಟಿ — ಪಿಎಂ ಪೋಷಣ್ ಕಾರ್ಯಕ್ರಮಕ್ಕೆ ಮೀಸಲಿರಿಸಿದ ಅನುದಾನ
- ₹127 ಕೋಟಿ — ನವ ಭಾರತ ಸಾಕ್ಷರತಾ ಕಾರ್ಯಕ್ರಮಕ್ಕೆ ಮೀಸಲಿರಿಸಿದ ಅನುದಾನ

ವಿದ್ಯುತ್ ಕ್ಷೇತ್ರದ ಪಿಎಸ್‌ಯುಗಳ ಹೂಡಿಕೆ ₹51 ಸಾವಿರ ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಎಂಟು ವಿದ್ಯುತ್ ಕಂಪನಿಗಳ ಒಟ್ಟು ಹೂಡಿಕೆಯನ್ನು 2022–2023ನೇ ಆರ್ಥಿಕ ವರ್ಷಕ್ಕೆ ₹ 51,470.14 ಕೋಟಿಗೆ ಹೆಚ್ಚಿಸಲು ಸರ್ಕಾರ ಪ್ರಸ್ತಾಪಿಸಿದೆ.

ಮಂಗಳವಾರ ಸಂಸತ್ತಿನಲ್ಲಿ ಮಂಡಿಸಲಾದ ಬಜೆಟ್ ಪ್ರಕಾರ, ವಿದ್ಯುತ್ ಸಚಿವಾಲಯದ ಆಡಳಿತಾತ್ಮಕ ನಿಯಂತ್ರಣದಲ್ಲಿರುವ ಸಾರ್ವಜನಿಕ ವಲಯದ ಉದ್ಯಮ (ಪಿಎಸ್‌ಯು) ಸತ್ಲುಜ್ ಜಲ ವಿದ್ಯುತ್ ನಿಗಮಕ್ಕೆ 2022-23ರಲ್ಲಿ ₹ 8,000 ಕೋಟಿ ಒದಗಿಸಲಾಗಿದೆ.

ಜಲ ವಿದ್ಯುತ್ ಕಂಪನಿಯಾದ ಎನ್‌ಎಚ್‌ಪಿಸಿ ಹೂಡಿಕೆಯನ್ನು 2022-23ಕ್ಕೆ ₹ 7,361.05 ಕೋಟಿಗೆ ಹೆಚ್ಚಿಸಲಾಗಿದೆ.

ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಪಿಜಿಸಿಐಎಲ್) ಹೂಡಿಕೆಯನ್ನು 2022-23ಕ್ಕೆ ₹ 7,500 ಕೋಟಿ ನಿಗದಿಪಡಿಸಲಾಗಿದೆ. ದಾಮೋದರ್ ವ್ಯಾಲಿ ಕಾರ್ಪೊರೇಶನ್‌ನ ಹೂಡಿಕೆಯನ್ನು 2022-23ಕ್ಕೆ ₹ 2,009.87 ಕೋಟಿಗೆ ನಿಗದಿಪಡಿಸಲಾಗಿದೆ. 2022–2023ರ ಅವಧಿಗೆ ಎನ್‌ಟಿಪಿಸಿಯ ಹೂಡಿಕೆಯನ್ನು ₹ 22,454 ಕೋಟಿಗೆ ಇಳಿಸಲಾಗಿದೆ.

ಸೌರ ವಿದ್ಯುತ್ ಉತ್ಪಾದನೆಗೆ ಆದ್ಯತೆ: ಸೌರ ವಿದ್ಯುತ್ ಉತ್ಪಾದನೆಗೆ ಪ್ರಸಕ್ತ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. 10 ವಲಯಗಳಲ್ಲಿ ‘ಸ್ವಚ್ಛ ಇಂಧನ’, ವಿದ್ಯುತ್ ಪ್ರಸರಣ ಮತ್ತು ಆಧುನೀಕರಣಕ್ಕೆ ಒತ್ತು ಕೊಡಲಾಗಿದೆ.

ವಿಶೇಷವಾಗಿ ಹಸಿರು ಇಂಧನ ಮೂಲಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಸುಸ್ಥಿರ ಅಭಿವೃದ್ಧಿಗೆ ಕಡಿಮೆ ಇಂಗಾಲ ಬಿಡುಗಡೆ ಮಾಡುವ ಶಕ್ತಿ ಮೂಲಗಳ ಬಳಕೆಗೆ ಒತ್ತು ಕೊಡಲಾಗಿದ್ದು, 2030 ರೊಳಗೆ 280 ಗಿಗಾ ವಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಗಿದ್ದು, ಇದಕ್ಕೆ ₹ 19,500 ಕೋಟಿ ಅನುದಾನ ನಿಗದಿ ಮಾಡಲಾಗಿದೆ. ‘ಪಂಚಾಮೃತ’ ಕಲ್ಪನೆಯಲ್ಲಿ ಸೋಲಾರ್ ವಿದ್ಯುತ್ ಉತ್ಪಾದನೆಗೆ ಒತ್ತು ನೀಡಿದ್ದಾರೆ.

ದೇಶವು ಸುಸ್ಥಿರ ಅಭಿವೃದ್ಧಿ ಪಥದಲ್ಲಿ ಮುನ್ನಡೆದಿದೆ ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದ್ದು, ಅದಕ್ಕೆ ಅನುಗುಣವಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದೆ.

ಇಂಧನ ಉಳಿತಾಯವು ಇಂಧನ ನಿರ್ವಹಣೆಯ ಪ್ರಮುಖ ಅಂಶವಾಗಿದೆ. ಆದ್ದರಿಂದ, ಇಂಧನ ದಕ್ಷತೆ ಮತ್ತು ಉಳಿತಾಯ ಕ್ರಮಗಳಿಗೆ ಉತ್ತೇಜನ ನೀಡಲಾಗುವುದು. ಇಂಧನ ಕ್ಷೇತ್ರದಲ್ಲೂ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ನೀಡಲಾಗುವುದು ಎಂದು ಹಣಕಾಸು ಸಚಿವರು ಹೇಳಿದರು.

ಬಜೆಟ್: ತೃಪ್ತಿಯ ಬೂಸ್ಟರ್ ಡೋಸ್

ವಿಶ್ಲೇಷಣೆ

ಮೀನಾ ಚಂದಾವರಕರ್

ಕೇಂದ್ರ ಬಜೆಟ್ 2022–23 ದೇಶದ ನಾಗರಿಕರಲ್ಲಿ ತೃಪ್ತಿಯ ಬೂಸ್ಟರ ಡೋಸ್ ತಂದಿದೆ.

ಉತ್ತಮ ಜೀವನದ ಹುಡುಕಾಟದಲ್ಲಿರುವ ಯುವಕರು, ಪರಿಶಿಷ್ಟ ಜಾತಿ, ಪಂಗಡಗಳು, ಅಲ್ಪ ಸಂಖ್ಯಾತರು, ಹಾಗೂ ಮಹಿಳೆಯರ ಆಕಾಂಕ್ಷೆಯ ಮಾನವ ಸಂಪನ್ಮೂಲವನ್ನು ಪುನರುಜ್ಜೀವನಗೊಳಿಸಿ, ಮೂಲ ಸೌಕರ್ಯಗಳೊಂದಿಗೆ ಕೌಶಲ್ಯಾಭಿವೃದ್ಧಿ, ಆರೋಗ್ಯ ಹಾಗೂ ರೈತರ ಪರವಾಗಿ ಹೆಚ್ಚಿನ ಗಮನ ಹರಿಸಿ ಶಿಕ್ಷಣ ವೆಚ್ಚವನ್ನು ಹೆಚ್ಚಿಸುವಂತಹ ಧ್ಯೇಯಗಳೊಂದಿಗೆ ಒಟ್ಟು ಸಮಾಜದ ವಿವಿಧ ವಲಯಗಳನ್ನು ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷೆಯನ್ನು ಈ ಬಜೆಟ್ ಹೊಂದಿದೆ.

- ಮೂಲ ಸೌಕರ್ಯಗಳನ್ನು ಬಳಸಿ, ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಬಡವರಿಗೆ ಉದ್ಯೋಗಾವಕಾಶವನ್ನು ಒದಗಿಸಲು ಆದ್ಯತೆ ನೀಡಲಾಗಿದೆ.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಇತ್ತೀಚೆಗೆ ಮಿಷನ್ ಸಾಕ್ಷಿ ವಾತ್ಸಲ್ಯ ಸಕ್ಷಮ್ ಅಂಗನವಾಡಿಗಳು ಮತ್ತು ಪೋಷಣ್ 2.0 ಅನ್ನು ಪ್ರಾರಂಭಿಸಿ ಬಲಪಡಿಸಿತು. ಈಗ 2 ಲಕ್ಷ ಅಂಗನವಾಡಿಗಳನ್ನು ಸಕ್ಷಮ ಅಂಗನವಾಡಿಗಳಾಗಿ ಮೇಲ್ದರ್ಜೆಗೆ ಏರಿಸುವುದು ಸ್ವಾಗತಾರ್ಹ ಕ್ರಮವಾಗಿದೆ. ಮಕ್ಕಳಲ್ಲಿ ಬಲವಾದ ಶೈಕ್ಷಣಿಕ ಅಡಿಪಾಯ ಹಾಕುವ ಈ ಕ್ರಮ ನಿರ್ಣಾಯಕವಾದುದಾಗಿದೆ.
- ಸಾಂಕ್ರಾಮಿಕ ರೋಗದಿಂದ ಬಳಲುತ್ತಿರುವ ವಿದ್ಯಾರ್ಥಿಗಳಿಗಾಗಿ ಸರ್ಕಾರ ಕೈಗೊಂಡಿರುವುದು ಮಾನವೀಯ ನಡೆ. ಆಡು ಭಾಷೆಗಳಲ್ಲಿ ಡಿಜಿಟಲ್ ವಿಶ್ವವಿದ್ಯಾಲಯದ ಸ್ಥಾಪನೆಯು ಯುವ ಭಾರತವನ್ನು ಪುನರುಜ್ಜೀವನಗೊಳಿಸುತ್ತದೆ. ಎನ್.ಇ.ಪಿ 2020 ಅನುಷ್ಠಾನಕ್ಕೆ ಅನುಕೂಲವಾಗುತ್ತದೆ.

ಸಮಗ್ರ ಶಿಕ್ಷಾ ಅಭಿಯಾನ ಶೇ 28 ಆತ್ಮ ನಿರ್ಭರ್ ಭಾರತ್ ರೋಜಗಾರ ಯೋಜನೆಗೆ ಶೇ 28, ಪ್ರಧಾನಮಂತ್ರಿ ಸ್ವಾಸ್ಥ ಸುರಕ್ಷಾ ಯೋಜನೆ ಶೇ 35 ಹೆಚ್ಚಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ₹63,449 ಕೋಟಿ, ಉನ್ನತ ಶಿಕ್ಷಣಕ್ಕೆ ₹40,828 ಕೋಟಿ ಬಜೆಟ್ ಮಂಜೂರು ಮಾಡಿದೆ. ಆದರೆ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಉನ್ನತ ಶಿಕ್ಷಣಕ್ಕೆ ಇನ್ನು ಹೆಚ್ಚಿನ ಹಣವನ್ನು ಮಂಜೂರು ಮಾಡಬೇಕಿತ್ತು.

- ಈಸ್ ಆಫ್ ಡುಯಿಂಗ್ ಬಿಸಿನೆಸ್ 2.0 ಮತ್ತು ಈಸ್ ಆಫ್ ಲಿವಿಂಗ್ ನ ಮುಂದಿನ ಹಂತ ಆರಂಭಿಸುವುದರಿಂದ ಬಂಡವಾಳ ಮತ್ತು ಮಾನವ ಸಂಪನ್ಮೂಲಗಳ ಉತ್ಪಾದಕ ದಕ್ಷತೆಯನ್ನು ಸುಧಾರಿಸುವಂತಾಗುತ್ತದೆ. ಎಸ್.ಇ.ಝಡ್ ಗಳ ಸಂಪೂರ್ಣ ಐಟಿ ಚಾಲಿತ ಕಸ್ಟಮ್ಸ್ ಅಡ್ಮಿನಿಸ್ಟ್ರೇಷನ್, ಎಸ್.ಇ.ಝಡ್ ಘಟಕಗಳ ವ್ಯವಹಾರವನ್ನು ಗಣನೀಯವಾಗಿ ಸುಲಭಗೊಳಿಸುತ್ತದೆ.
- ಉದ್ಯಮ, ಇ-ಶ್ರಮ್, ಎನ್.ಸಿ.ಎಸ್. ಮತ್ತು ಎ.ಎಸ್.ಇ.ಇ.ಎಂ. ಪೋರ್ಟಲ್ ಗಳನ್ನು ಎಂಎಸ್‌ಎಂಇ ಗಳಿಗೆ ಸಾಲ ಸೌಲಭ್ಯ ಕೌಶಲ ಮತ್ತು ನೇಮಕಾತಿಗೆ ಲಿಂಕ್ ಮಾಡುವುದು ಎಲ್ಲರಿಗೂ ಉದ್ಯಮಶೀಲತೆಯ ಅವಕಾಶಗಳನ್ನು ಹೆಚ್ಚಿಸುವ ಗುರಿಯೊಂದಿಗೆ ಯುವಶಕ್ತಿಗೆ ಉತ್ತಮ ವರವಾಗಿದೆ.
- ರಾಷ್ಟ್ರೀಯ ಶಿಕ್ಷಣ ನೀತಿ 2020 ಒಟ್ಟು ಬಜೆಟ್ ನ ಕನಿಷ್ಠ ಶೇ 6ರಷ್ಟು ಶಿಕ್ಷಣಕ್ಕೆ ಮೀಸಲಿರಿಸುವ ಅಗತ್ಯವನ್ನು ಒತ್ತಿಹೇಳುತ್ತದೆ. ಶಿಕ್ಷಣದ ನಿರ್ಣಾಯಕ ಅಂಶಗಳಾದ, ಒಳ್ಳೆಯ ಶಿಕ್ಷಕರನ್ನು ಒದಗಿಸುವುದು, ಶಿಕ್ಷಕರ ತರಬೇತಿ ಇತ್ಯಾದಿಗಳಿಗೆ ಹಣಕಾಸಿನ ಬೆಂಬಲವನ್ನು ನೀಡುತ್ತದೆ.ಪರಿಣಾಮಕಾರಿ ಶಿಕ್ಷಣ, ಸಂಪನ್ಮೂಲಗಳ ಸೂಕ್ತ ಬಳಕೆಗೆ ಯೋಜಿಸಲಾಗಿದೆ. ಈಗಾಗಲೆ ಮಂಜೂರು ಮಾಡಿದ ಹಣಕ್ಕಿಂತ ಇನ್ನೂ ಹೆಚ್ಚಿನ ಹಣ ವನ್ನು ಉನ್ನತ ಶಿಕ್ಷಣಕ್ಕೆ ಮೀಸಲಿಡಬಹುದಿತ್ತು.
- ಗ್ರಾಮೀಣ ಭಾಗದ ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ವಿಶೇಷ ಸ್ಕಾಲರ್ ಶಿಪ್ ಹಾಗೂ ವಯಸ್ಕರ ಶಿಕ್ಷಣಕ್ಕಾಗಿ ಪಡನಾ ಲಿಖನಾ ಅಭಿಯಾನ್ ಮುಂದುವರಿಸಬೇಕಿತ್ತು. ಮಹಿಳಾ ಉದ್ಯಮಿಗಳಿಗೆ ತೆರಿಗೆ ಸಡಿಲಿಕೆಯು ಹಾಗೂ 2ರಿಂದ 3 ವರ್ಷಗಳವರೆಗೆ ಅಸಾಧಾರಣ ಅಥವಾ ಹೆಚ್ಚುವರಿ ಸೆಕ್ಷನ್ 80 ಸಿ ಪ್ರಯೋಜನ ನೀಡುವ ನಿರೀಕ್ಷೆಯಿತ್ತು.

ಒಟ್ಟನಲ್ಲಿ ಈ ಬಜೆಟ್ ಕೋವಿಡ್ ನಂತರ, ಯುವಶಕ್ತಿಯ ಸರ್ವಾಂಗೀಣ ಅಭಿವೃದ್ಧಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ರೂಪಿಸಿದ ಬಜೆಟ್ ಇದಾಗಿದೆ. ಅತಿ ಮಹತ್ವಾಕಾಂಕ್ಷೆಯ ಬಜೆಟ್ ಕೇವಲ ಆತ್ಮನಿರ್ಭರ್ ಆಗಿ ಮಾಡದೆ, ಜಾಗತಿಕ ಶಕ್ತಿ ಕೇಂದ್ರವನ್ನಾಗಿ ರೂಪಿಸಿ ಯುವಸಮುದಾಯದಲ್ಲಿ ಆತ್ಮಸ್ಥೈರ್ಯ ತುಂಬಲಿದೆ.

ಲೇಖಕರು: ವಿಶ್ರಾಂತ ಕುಲಪತಿ

ಅಂಚೆ ಖಾತೆ ನಿರ್ವಹಣೆ ಸುಗಮ

ವಿತ್ತೀಯ ಒಳಗೊಳ್ಳುವಿಕೆಯ ಭಾಗವಾಗಿ ದೇಶದಲ್ಲಿ ಇರುವ 1.5 ಲಕ್ಷ ಅಂಚೆ ಕಚೇರಿಗಳನ್ನು ಬ್ಯಾಂಕಿಂಗ್ ವ್ಯವಸ್ಥೆಯೊಂದಿಗೆ ಜೋಡಿಸಲು ನಿರ್ಧರಿಸಲಾಗಿದೆ. ಇದರಿಂದಾಗಿ ಜನರು ತಮ್ಮ ಅಂಚೆ ಕಚೇರಿ ಖಾತೆಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಬಹುದು. ಅಂಚೆ ಇಲಾಖೆಯ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಾಗೂ ಬೇರೆ ಬ್ಯಾಂಕ್‌ಗಳ ಖಾತೆಗಳಿಗೆ ಹಣ ವರ್ಗಾವಣೆಯನ್ನು ಮಾಡಬಹುದು.

ಗ್ರಾಮೀಣ ಪ್ರದೇಶಗಳಲ್ಲಿ ಇರುವ ರೈತರು ಮತ್ತು ಹಿರಿಯ ನಾಗರಿಕರಿಗೆ ಇದರಿಂದ ಹೆಚ್ಚಿನ ಅನುಕೂಲ ಆಗಲಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಅಂಚೆ ಕಚೇರಿಗಳು ಈಗ ಉಳಿತಾಯ ಖಾತೆ ಸೇವೆಗಳನ್ನು ಹಾಗೂ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಮೂಲಕ ಪೇಮೆಂಟ್ಸ್ ಬ್ಯಾಂಕ್ ಸೇವೆಗಳನ್ನು ನೀಡುತ್ತಿವೆ.

5ಜಿ ತರಂಗಾಂತರ ಹರಾಜು

ದೂರಸಂಪರ್ಕ ಕಂಪನಿಗಳು 2022–23ನೇ ಹಣಕಾಸು ವರ್ಷದಲ್ಲಿಯೇ 5ಜಿ ಸೇವೆಗಳನ್ನು ಜಾರಿಗೊಳಿಸಲು ಅನುಕೂಲ ಆಗುವಂತೆ ತರಂಗಾಂತರ ಹರಾಜು ನಡೆಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ದೂರಸಂಪರ್ಕ ವಲಯ ಅದರಲ್ಲಿಯೂ ನಿರ್ದಿಷ್ಟವಾಗಿ 5ಜಿಯಿಂದ ಬೆಳವಣಿಗೆ ಮತ್ತು ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ. ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆಯ ಭಾಗವಾಗಿ 5ಜಿ ವ್ಯವಸ್ಥೆಯನ್ನು ಬಲಪಡಿಸಲು ವಿನ್ಯಾಸ ಆಧಾರಿತ ತಯಾರಿಕೆಗೆ ಚಾಲನೆ ನೀಡಲಾಗುವುದು ಎಂದು ಸರ್ಕಾರ ಹೇಳಿದೆ.

2022 ಮತ್ತು 2023ರಲ್ಲಿ ಭಾರತ್‌ನೆಟ್ ಯೋಜನೆಯ ಅಡಿಯಲ್ಲಿ ಎಲ್ಲ ಗ್ರಾಮಗಳಿಗೆ ಆಪ್ಟಿಕಲ್ ಫೈಬರ್ ಹಾಕಲು ಕೇಂದ್ರ ಸರ್ಕಾರವು ಗುತ್ತಿಗೆ ನೀಡುತ್ತಿದೆ. ಇದು ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದಲ್ಲಿ ನಡೆಯಲಿದ್ದು, 2025ಕ್ಕೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಬ್ಯಾಟರಿ ಸ್ವ್ಯಾಪಿಂಗ್ ನೀತಿ

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳ ಬಳಕೆಯನ್ನು ಉತ್ತೇಜಿಸಲು ಬ್ಯಾಟರಿ ಸ್ವ್ಯಾಪಿಂಗ್ ನೀತಿ ಮತ್ತು ಪರಸ್ಪರ ಕಾರ್ಯಸಾಧ್ಯತೆಯ ಮಾನದಂಡಗಳನ್ನು ಪರಿಚಯಿಸುವುದಾಗಿ ಸರ್ಕಾರ ಹೇಳಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿನ ನವೋದ್ಯಮಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ.

ಬ್ಯಾಟರಿ ಸ್ವ್ಯಾಪಿಂಗ್ ಮತ್ತು ಚಾರ್ಜಿಂಗ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಉತ್ತೇಜನವನ್ನು ನೀಡುವುದರಿಂದ ಸುಸ್ಥಿರ ಮತ್ತು ನವೀನ ವ್ಯಾಪಾರ ಮಾದರಿಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ವಲಯಕ್ಕೆ ಪ್ರೋತ್ಸಾಹ ಸಿಗಲಿದೆ ಎಂದು ಮಜಂತಾ ಕಂಪನಿಯ ನಿರ್ದೇಶಕ ಸಿಇಒ ಮ್ಯಾಕ್ಸ್‌ವೆಲ್ ಲೆವಿಸ್ ಪ್ರತಿಕ್ರಿಯೆ ನೀಡಿದ್ದಾರೆ.

ಷೇರು ವಿಕ್ರಯ ಗುರಿ ₹ 65 ಸಾವಿರ ಕೋಟಿ

ಕೇಂದ್ರ ಸರ್ಕಾರವು ಏಪ್ರಿಲ್ 1ರಿಂದ ಆರಂಭ ಆಗಲಿರುವ ಮುಂದಿನ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದಿಂದ ₹ 65 ಸಾವಿರ ಕೋಟಿ ಸಂಗ್ರಹಿಸುವ ಗುರಿಯನ್ನು ಇಟ್ಟುಕೊಂಡಿದೆ. ಇದು ಪ್ರಸಕ್ತ ಹಣಕಾಸು ವರ್ಷಕ್ಕೆ ಅಂದಾಜು ಮಾಡಿರುವ ₹ 78 ಸಾವಿರ ಕೋಟಿಗಿಂತಲೂ ಕಡಿಮೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಷೇರು ವಿಕ್ರಯದಿಂದ ₹ 1.75 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಇಟ್ಟುಕೊಳ್ಳಲಾಗಿತ್ತು. ಆದರೆ ಅದನ್ನು ₹ 78 ಸಾವಿರಕ್ಕೆ ತಗ್ಗಿಸಲಾಗಿದೆ. ಸರ್ಕಾರವು ಈವರೆಗೆ ₹ 12,030 ಕೋಟಿಯನ್ನಷ್ಟೇ ಸಂಗ್ರಹ ಮಾಡಿದೆ.

ಐಟಿಆರ್ ತಿದ್ದುಪಡಿಗೆ ಅವಕಾಶ

ಆದಾಯ ತೆರಿಗೆ ಲೆಕ್ಕಪತ್ರ (ಐಟಿಆರ್) ಸಲ್ಲಿಕೆಯಲ್ಲಿ ಆಗುವ ದೋಷಗಳನ್ನು ಸರಿಪಡಿಸಲು ಅವಕಾಶ ಸಿಗಲಿದೆ. ಪರಿಷ್ಕೃತ ಐಟಿಆರ್ ಅನ್ನು ಹೆಚ್ಚುವರಿ ತೆರಿಗೆಯೊಂದಿಗೆ ಎರಡು ವರ್ಷಗಳ ಒಳಗಾಗಿ ಸಲ್ಲಿಸಬೇಕು.

75 ಡಿಜಿಟಲ್ ಬ್ಯಾಂಕ್

ಡಿಜಿಟಲ್ ಪಾವತಿಗೆ ಉತ್ತೇಜನ ನೀಡಲು ವಾಣಿಜ್ಯ ಬ್ಯಾಂಕ್‌ಗಳು ದೇಶದ 75 ಜಿಲ್ಲೆಗಳಲ್ಲಿ 75 ಡಿಜಿಟಲ್ ಬ್ಯಾಂಕ್‌ಗಳನ್ನು ಸ್ಥಾಪಿಸಲಿವೆ.

ಬಿಎಸ್‌ಎನ್‌ಎಲ್: ವಿಆರ್‌ಎಸ್

ಸರ್ಕಾರಿ ಸ್ವಾಮ್ಯದ ಟೆಲಿಕಾಂ ಕಂಪನಿಗಳಾದ ಬಿಎಸ್‌ಎನ್‌ಎಲ್ ಹಾಗೂ ಎಂಟಿಎನ್‌ಎಲ್ ನೌಕರರಿಗೆ ‘ಸ್ವಯಂ ನಿವೃತ್ತಿ ಯೋಜನೆ’ (ವಿಆರ್‌ಎಸ್) ಅನುಷ್ಠಾನಕ್ಕೆ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ ₹ 7,443.57 ಕೋಟಿ ಒದಗಿಸಲಿದೆ.

ನಷ್ಟದಲ್ಲಿರುವ ಬಿಎಸ್‌ಎನ್‌ಎಲ್‌ಗೆ ಕೇಂದ್ರ ಸರ್ಕಾರ ಮುಂದಿನ ಹಣಕಾಸು ವರ್ಷದಲ್ಲಿ ₹ 44,720 ಕೋಟಿ ಬಂಡವಾಳವನ್ನೂ ನೀಡಲಿದೆ. 4ಜಿ ಸ್ಪೆಕ್ಟ್ರಮ್, ತಂತ್ರಜ್ಞಾನ ಮೇಲ್ದರ್ಜೆಗೇರಿಸಲು ಹಾಗೂ ಬಿಎಸ್‌ಎನ್‌ಎಲ್ ಪುನರ್‌ರಚನೆಗಾಗಿ ಈ ಅನುದಾನ ನೀಡಲಾಗುತ್ತದೆ ಎಂದು ಬಜೆಟ್ ದಾಖಲೆಗಳು ಹೇಳುತ್ತವೆ.

ಕ್ರಿಪ್ಟೊಕರೆನ್ಸಿ: ಶೇ 30ರಷ್ಟು ತೆರಿಗೆ

ನವದೆಹಲಿ (ಪಿಟಿಐ): ಕ್ರಿಪ್ಟೊಕರೆನ್ಸಿಗಳ ವರ್ಗಾವಣೆಯಿಂದ ಬರುವ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸಲು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಸಂಸತ್‌ನಲ್ಲಿ ಕೇಂದ್ರ ಬಜೆಟ್ ಅಂಗೀಕಾರವಾದ ನಂತರ, ಏಪ್ರಿಲ್ 1ರಿಂದ ಪ್ರಸ್ತಾವಿತ ತೆರಿಗೆಯು ಜಾರಿಗೆ ಬರಲಿದೆ.

ಈ ಮೂಲಕ ಕ್ರಿಪ್ಟೊಕರೆನ್ಸಿಗಳನ್ನೂ ತೆರಿಗೆ ವ್ಯಾಪ್ತಿಗೆ ತರುವ ಕುರಿತು ಕೇಂದ್ರ ಸರ್ಕಾರವು ತನ್ನ ನಿರ್ಧಾರ ಸ್ಪಷ್ಟಪಡಿಸಿದೆ. ಒಂದು ವರ್ಷದಲ್ಲಿ ₹ 10 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ವರ್ಚುವಲ್ ಕರೆನ್ಸಿಗಳ ವರ್ಗಾವಣೆಯ ಮೇಲೆ ಶೇ 1ರಷ್ಟು ಟಿಡಿಎಸ್ (ಮೂಲದಲ್ಲೇ ತೆರಿಗೆ ಕಡಿತ) ಮಾಡುವ ಕುರಿತು ಪ್ರಸ್ತಾಪಿಸಲಾಗಿದೆ. ಕ್ರಿಪ್ಟೊ ಮತ್ತು ಡಿಜಿಟಲ್ ಸ್ವತ್ತನ್ನು ಉಡುಗೊರೆಯಾಗಿ ನೀಡುವುದಕ್ಕೂ ತೆರಿಗೆ ಕೊಡಬೇಕಾಗುತ್ತದೆ.

ಕ್ರಿಪ್ಟೊಕರೆನ್ಸಿ ಮಾರಾಟದಿಂದ ಬರುವ ಆದಾಯಕ್ಕೆ ಶೇ 30ರಷ್ಟು ತೆರಿಗೆ ವಿಧಿಸಿರುವುದು ಲಾಟರಿ, ಗೇಮ್ ಷೋ ಮತ್ತು ಪಜಲ್‌ಗಳಲ್ಲಿ ಗೆಲ್ಲುವುದರಿಂದ ಬರುವ ತೆರಿಗೆಗೆ ಸಮನಾಗಿದೆ ಎಂದು ತಜ್ಞರು ಹೇಳಿದ್ದಾರೆ. ಭಾರತವು ಅಂತಿಮವಾಗಿ ಕ್ರಿಪ್ಟೊ ವಲಯವನ್ನು ಕಾನೂನುಬದ್ಧಗೊಳಿಸುವ ಹಾದಿಯಲ್ಲಿದೆ ಎಂದು ಕ್ರಿಪ್ಟೊ ಎಕ್ಸ್‌ಚೇಂಜ್ ‘ವಜೀರ್‌ಎಕ್ಸ್’ನ ಸ್ಥಾಪಕ ನಿಶ್ಚಲ್ ಶೆಟ್ಟಿ ಹೇಳಿದ್ದಾರೆ.

ಕ್ರಿಪ್ಟೊ ಕರೆನ್ಸಿಗಳ ಬಗ್ಗೆ ಕೇಂದ್ರ ಸರ್ಕಾರವು ಸ್ಪಷ್ಟತೆ ನೀಡಿರುವುದರಿಂದ, ಕ್ರಿಪ್ಟೊ ಉದ್ಯಮಕ್ಕೆ ಹಣಕಾಸಿನ ಸೇವೆಗಳನ್ನು ನೀಡುವುದು ಸಾಧ್ಯವಾಗಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಟಿಡಿಎಸ್‌ನಿಂದಾಗಿ ಕ್ರಿಪ್ಟೊ ವರ್ಗಾವಣೆಯ ಮೇಲೆ ಉತ್ತಮ ರೀತಿಯಲ್ಲಿ ನಿಗಾ ಇರಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗಲಿದೆ ಎಂದು ಶಾರ್ದೂಲ್ ಅಮರ್‌ಚಂದ್ ಮಂಗಲ್‌ದಾಸ್ ಆ್ಯಂಡ್ ಕಂಪನಿಯ ಪಾಲುದಾರ ಅಮಿತ್ ಸಿಂಘಾನಿಯಾ ಹೇಳಿದ್ದಾರೆ.

ಡಿಜಿಟಲ್ ಸ್ವತ್ತು ಅಥವಾ ಕ್ರಿಪ್ಟೊ ಮೇಲೆ ತೆರಿಗೆ ವಿಧಿಸುವ ಕ್ರಮವು ಸರಿಯಾದುದು. ಉದ್ಯಮದ ಬಗ್ಗೆ ಸ್ಪಷ್ಟತೆ ಮತ್ತು ವಿಶ್ವಾಸವನ್ನು ಇದು ನೀಡುತ್ತದೆ ಎಂದು ಕಾಯಿನ್‌ಡಿಸಿಎಕ್ಸ್‌ನ ಸಹ ಸ್ಥಾಪಕ ಸುಮಿತ್ ಗುಪ್ತಾ ತಿಳಿಸಿದ್ದಾರೆ.

ಆರ್‌ಬಿಐನಿಂದ ಡಿಜಿಟಲ್ ಕರೆನ್ಸಿ

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) 2022ರ ಏಪ್ರಿಲ್‌ನಿಂದ ಡಿಜಿಟಲ್ ಕರೆನ್ಸಿಯನ್ನು ಹೊರತರಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯನ್ನು (ಸಿಬಿಡಿಸಿ) ಪರಿಚಯಿಸುವುದರಿಂದ ಡಿಜಿಟಲ್ ಆರ್ಥಿಕತೆಗೆ ದೊಡ್ಡ ಉತ್ತೇಜನ ಸಿಗಲಿದೆ. ಡಿಜಿಟಲ್ ಕರೆನ್ಸಿಯಿಂದಾಗಿ ಕರೆನ್ಸಿ ನಿರ್ವಹಣಾ ವ್ಯವಸ್ಥೆಯಲ್ಲಿ ದಕ್ಷತೆಯೂ ಬರಲಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಸಿಬಿಡಿಸಿ ಡಿಜಿಟಲ್ ಅಥವಾ ವರ್ಚುವಲ್ ಕರೆನ್ಸಿ ಆಗಿರಲಿದ್ದು, ಇದನ್ನು ಖಾಸಗಿ ವರ್ಚುವಲ್ ಕರೆನ್ಸಿ ಅಥವಾ ಕ್ರಿಪ್ಟೊಕರೆನ್ಸಿಗಳ ಜೊತೆ ಹೋಲಿಕೆ ಮಾಡಲಾಗದು. ನಿರ್ದಿಷ್ಟ ವಿತರಕರು ಇಲ್ಲದಿರುವುದರಿಂದ ಖಾಸಗಿ ವರ್ಚುವಲ್ ಕರೆನ್ಸಿಗಳು ಯಾವುದೇ ವ್ಯಕ್ತಿಯ ಸಾಲ ಅಥವಾ ಹೊಣೆಗಾರಿಕೆಗಳನ್ನು ಪ್ರತಿನಿಧಿಸುವುದಿಲ್ಲ. ಅವು ಹಣವಲ್ಲ ಮತ್ತು ಕರೆನ್ಸಿಯಂತೂ ಅಲ್ಲವೇ ಅಲ್ಲ.

ಡಿಜಿಟಲ್ ಕರೆನ್ಸಿ ಹೊರತರುವ ಬಗ್ಗೆ ಆರ್‌ಬಿಐನ ಹಿರಿಯ ಅಧಿಕಾರಿಗಳಿಂದ ಈಚಿನ ತಿಂಗಳುಗಳಲ್ಲಿ ಹಲವು ಬಾರಿ ಹೇಳಿಕೆಗಳು ಬಂದಿದ್ದವು. ಈಗ ಕೇಂದ್ರ ಬಜೆಟ್, ಆ ಕರೆನ್ಸಿ ಯಾವಾಗ ಸಿಗಲಿದೆ ಎಂಬ ಪ್ರಶ್ನೆಗೆ ಉತ್ತರ ನೀಡಿದೆ.

ಉದ್ಯೋಗ ಸೃಷ್ಟಿ: ಕಳೆದ ವರ್ಷಕ್ಕಿಂತ ಶೇ 25ರಷ್ಟು ಕಡಿಮೆ ಹಂಚಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಜಿಸುವ ಯೋಜನೆ ಅನುಷ್ಠಾನಕ್ಕೆ ಕೇಂದ್ರ ಸರ್ಕಾರ 2022–23ನೇ ಸಾಲಿಗೆ ₹ 73,000 ಕೋಟಿ ವೆಚ್ಚ ಮಾಡಲು ಉದ್ದೇಶಿಸಿದೆ. 2021–22ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿದ್ದ, ಪರಿಷ್ಕೃತ ಹಂಚಿಕೆಗಿಂತ ಈ ಮೊತ್ತ ಶೇ 25.5ರಷ್ಟು ಕಡಿಮೆ ಎಂದು ಮೂಲಗಳು ಹೇಳಿವೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ (ನರೇಗಾ) ಹೆಚ್ಚು ಅನುದಾನ ಒದಗಿಸುವಂತೆ ವಿವಿಧ ನಾಗರಿಕ ಸಂಘಟನೆಗಳು ಬೇಡಿಕೆ ಮಂಡಿಸಿದ್ದವು. ಆದರೆ, ಮಂಗಳವಾರ ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಈ ಯೋಜನೆಗೆ ಕಳೆದ ವರ್ಷದ ಬಜೆಟ್‌ನಲ್ಲಿ ಹಂಚಿಕೆ ಮಾಡಿದಷ್ಟೇ ಹಣವನ್ನು ಹಂಚಿಕೆ ಮಾಡಲಾಗಿದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯದ ಮೂಲಕ ಅನುಷ್ಠಾನಗೊಳಿಸಲಾಗುತ್ತಿರುವ, ಕೇಂದ್ರ ಪುರಸ್ಕೃತ ಯೋಜನೆಗಳಿಗೆ 2021–22ನೇ ಸಾಲಿನ ಪರಿಷ್ಕೃತ ಅಂದಾಜಿನಲ್ಲಿ ₹ 1,53,558.07 ಕೋಟಿ ಹಂಚಿಕೆ ಮಾಡಲಾಗಿತ್ತು. ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗಳಿಗೆ 1,35,944.29 ಕೋಟಿ ತೆಗೆದಿರಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳ ನಿರ್ಮಿಸಲು ಪ್ರಧಾನ ಮಂತ್ರಿ ಗ್ರಾಮೀಣ ಸಡಕ್ ಯೋಜನೆಗೆ ಕಳೆದ ವರ್ಷ ₹ 14,000 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಬಜೆಟ್‌ನಲ್ಲಿ ₹ 19,000 ಕೋಟಿ ಹಂಚಿಕೆ ಮಾಡುವುದಾಗಿ ಪ್ರಕಟಿಸಲಾಗಿದೆ.

ಕೋವಿಡ್‌19 ಪಿಡುಗಿನ ಹಿನ್ನೆಲೆಯಲ್ಲಿ ದೇಶದಾದ್ಯಂತ ಲಾಕ್‌ಡೌನ್ ಹಾಗೂ ಇತರ ನಿರ್ಬಂಧಗಳನ್ನು ಜಾರಿಗೊಳಿಸಲಾಗಿತ್ತು. ಈ ಅವಧಿಯಲ್ಲಿ ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ತೆರಳಿದ್ದರು. ಅವರಿಗೆ ಉದ್ಯೋಗ ಒದಗಿಸುವ ಸಲುವಾಗಿ 2020–21ನೇ ಸಾಲಿನಲ್ಲಿ ನರೇಗಾ ಅಡಿ ₹ 1.12 ಲಕ್ಷ ಕೋಟಿ ವೆಚ್ಚ ಮಾಡಲಾಗಿತ್ತು.

2021–22ನೇ ಸಾಲಿನ ಬಜೆಟ್‌ನಲ್ಲಿ ನರೇಗಾಕ್ಕೆ ₹ 73,000 ಕೋಟಿ ಹಂಚಿಕೆ ಮಾಡುವುದಾಗಿ ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದರು. ಆದರೆ, ಪರಿಷ್ಕೃತ ಅಂದಾಜಿನಲ್ಲಿ ಈ ಮೊತ್ತವನ್ನು ₹ 98,000 ಕೋಟಿಗೆ ಹೆಚ್ಚಿಸಬೇಕಾಯಿತು ಎಂದು ಮೂಲಗಳು ಹೇಳಿವೆ.





ಆತಿಥ್ಯ ವಲಯಕ್ಕೆ ಆದ್ಯತೆ, ಸಾಲ ಖಾತರಿ ಯೋಜನೆ ವಿಸ್ತರಣೆ

ನವದೆಹಲಿ (ಪಿಟಿಐ): ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳಿಗೆ ತೀರಾ ಅಗತ್ಯವಾಗಿದ್ದ ಹೆಚ್ಚುವರಿ ಸಾಲವನ್ನು ಒದಗಿಸಿದ ತುರ್ತು ಸಾಲ ಖಾತರಿ ಯೋಜನೆಯನ್ನು (ಇಸಿಎಲ್‌ಜಿಎಸ್) 2023ರ ಮಾರ್ಚ್‌ವರೆಗೂ ವಿಸ್ತರಣೆ ಮಾಡಲಾಗುವುದು ಎಂದು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಈ ಯೋಜನೆಯ ಅಡಿ ಒದಗಿಸುವ ಸಾಲ ಖಾತರಿಯ ಒಟ್ಟು ಮೊತ್ತವನ್ನು ₹ 50 ಸಾವಿರ ಕೋಟಿಯಷ್ಟು ಹೆಚ್ಚಿಸಲಾಗುವುದು.

ಹೆಚ್ಚುವರಿಯಾಗಿ ಸಾಲ ಖಾತರಿ ರೂಪದಲ್ಲಿ ನೀಡುವ ಮೊತ್ತವನ್ನು ಆತಿಥ್ಯ ವಲಯಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ವಲಯಗಳಿಗೆ ಮೀಸಲಿಡಲಾಗುವುದು. ಅತಿಸಣ್ಣ ಮತ್ತು ಸಣ್ಣ ಪ್ರಮಾಣದ ಉದ್ದಿಮೆಗಳಿಗಾಗಿನ ಸಾಲ ಖಾತರಿ ಟ್ರಸ್ಟ್‌ಗೆ ಹೊಸ ರೂಪ ನೀಡಲಾಗುತ್ತದೆ, ಅದಕ್ಕೆ ಅಗತ್ಯ ಹಣಕಾಸಿನ ನೆರವು ಒದಗಿಸಲಾಗುತ್ತದೆ.

‘ಇದರಿಂದಾಗಿ ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಹೆಚ್ಚುವರಿಯಾಗಿ ಸಾಲ ಪಡೆಯಲು ಸಾಧ್ಯವಾಗಲಿದೆ. ಉದ್ಯೋಗ ಅವಕಾಶಗಳನ್ನು ಕೂಡ ಇದು ಹೆಚ್ಚಿಸಲಿದೆ’ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದ್ದಾರೆ.

ಎಂಎಸ್‌ಎಂಇ ವಲಯವು ಸವಾಲುಗಳನ್ನು ಎದುರಿಸಲು ಇನ್ನಷ್ಟು ಶಕ್ತಿಯುತ ಆಗಬೇಕು ಎಂಬ ಉದ್ದೇಶದಿಂದ, ಅವು ಇನ್ನಷ್ಟು ಸ್ಪರ್ಧಾತ್ಮಕ ಆಗಬೇಕು, ಇನ್ನಷ್ಟು ದಕ್ಷವಾಗಬೇಕು ಎಂಬ ಉದ್ದೇಶದಿಂದ ವಿಶೇಷ ಯೋಜನೆಯೊಂದನ್ನು (ಆರ್‌ಎಎಂಪಿ) ಆರಂಭಿಸಲಾಗುತ್ತದೆ. ಇದಕ್ಕಾಗಿ ಐದು ವರ್ಷಗಳ ಅವಧಿಯಲ್ಲಿ ₹ 6 ಸಾವಿರ ಕೋಟಿ ಮೀಸಲಿಡಲಾಗುತ್ತದೆ ಎಂದು ನಿರ್ಮಲಾ ಅವರು ಪ್ರಕಟಿಸಿದ್ದಾರೆ. ‘ಆತಿಥ್ಯ ಮತ್ತು ಅದಕ್ಕೆ ಸಂಬಂಧಿಸಿದ ಉದ್ಯಮ ವಲಯವು ಕೋವಿಡ್ ಪೂರ್ವದ ಸ್ಥಿತಿಗೆ ಇನ್ನೂ ಮರಳಿಲ್ಲ. ಅದರಲ್ಲೂ ಮುಖ್ಯವಾಗಿ, ಈ ವಲಯದ ಎಂಎಸ್‌ಎಂಇ ಉದ್ದಿಮೆಗಳು ಸಮಸ್ಯೆ ಎದುರಿಸುತ್ತಿವೆ. ಇದನ್ನು ಗಮನದಲ್ಲಿ ಇರಿಸಿಕೊಂಡು ಸಾಲ ಖಾತರಿ ಯೋಜನೆಯನ್ನು 2023ರ ಮಾರ್ಚ್‌ವರೆಗೆ ವಿಸ್ತರಿಸಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

ನಿರೀಕ್ಷೆ ಹುಸಿಯಾಗಿಸಿದ ಕೇಂದ್ರ ಬಜೆಟ್

ಒಂದನೇ ಪುಟದಿಂದ

ಕೃಷಿ ಕ್ಷೇತ್ರಕ್ಕಿಲ್ಲ ಕೊಡುಗೆ: ಕೋವಿಡ್ ಸಾಂಕ್ರಾಮಿಕದ ಸಂದರ್ಭ ಗ್ರಾಮೀಣರ ಕೈಹಿಡಿದ ಕೃಷಿ ಕ್ಷೇತ್ರಕ್ಕೆ ವಿಶೇಷ ಎನ್ನಬಹುದಾದ ಕೊಡುಗೆಯನ್ನೂ ₹ 39.54 ಲಕ್ಷ ಕೋಟಿಯಷ್ಟು ಬೃಹತ್ ಗಾತ್ರದ ಬಜೆಟ್‌ನಲ್ಲಿ ಮೋದಿ ನೇತೃತ್ವದ ಸರ್ಕಾರ ಪ್ರಕಟಿಸಿಲ್ಲ.

ಎಣ್ಣೆಕಾಳುಗಳ ದೇಶೀ ಉತ್ಪಾದನೆ ಹೆಚ್ಚಳ ಮತ್ತು ಕೀಟನಾಶಕ ಮತ್ತು ಪೋಷಕಾಂಶ ಸಿಂಪರಣೆ ಹಾಗೂ ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಹಾಗೂ ಕೃಷಿ ಬೆಳೆ ಮೌಲ್ಯಮಾಪನಕ್ಕಾಗಿ ‘ಡ್ರೋನ್’ಗಳ ಬಳಕೆ ಉತ್ತೇಜಿಸುವ ಗುರಿ ಇರಿಸಿಕೊಳ್ಳಲಾಗಿದೆ.

ಸಾವಯವ ಕೃಷಿಯ ಮೌಲ್ಯವರ್ಧನೆಗಾಗಿ ಕೃಷಿ ವಿಶ್ವವಿದ್ಯಾಲಯದ ಪಠ್ಯಕ್ರಮ ಪರಿಷ್ಕರಿಸುವಂತೆ ರಾಜ್ಯ ಸರ್ಕಾರಗಳಿಗೆ ಸಹಕಾರ ನೀಡುವುದಲ್ಲದೆ, ನೈಸರ್ಗಿಕ ಕೃಷಿಗೆ ಪ್ರೋತ್ಸಾಹ ನೀಡುವ ಘೋಷಣೆ ಹೊರತುಪಡಿಸಿ ಕೃಷಿ ವಲಯದ ಉತ್ತೇಜನದತ್ತ ಗಮನ ಹರಿಸಿರುವುದು ಕಂಡುಬಂದಿಲ್ಲ.

ಪೆನ್ನಾರ್- ಕಾವೇರಿ, ಕೃಷ್ಣಾ- ಪೆನ್ನಾರ್, ಕೃಷ್ಣಾ-ಗೋಧಾವರಿ ಸೇರಿದಂತೆ ನದಿ ಜೋಡಣೆಯ ಒಟ್ಟು ಐದು ಯೋಜನೆಗಳಿಗೆ ಆಯಾ ರಾಜ್ಯ ಸರ್ಕಾರಗಳ ಅನುಮತಿ ದೊರೆತ ನಂತರ ಅನುಮೋದನೆ ನೀಡುವುದಾಗಿ ತಿಳಿಸಲಾಗಿದೆ.

ಉದ್ಯೋಗ ಸೃಷ್ಟಿ: ಮುಂದಿನ ಐದು ವರ್ಷಗಳಲ್ಲಿ 60 ಲಕ್ಷ ಹೊಸ ಉದ್ಯೋಗ ಸೃಷ್ಟಿಯ ಭರವಸೆಯೊಂದಿಗೆ, ‘ಆತ್ಮನಿರ್ಭರ’ ಯೋಜನೆ ಅಡಿ ₹ 30 ಲಕ್ಷ ಕೋಟಿ ಮೀಸಲಿರಿಸುವುದಾಗಿ ಹೇಳಿರುವ ಸರ್ಕಾರ, ದೇಶದ 1.50 ಲಕ್ಷ ಅಂಚೆ ಕಚೇರಿಗಳನ್ನು ‘ಕೋರ್ ಬ್ಯಾಂಕಿಂಗ್’ ವ್ಯವಸ್ಥೆ ಅಡಿ ತರಲು ಮುಂದಾಗಿದೆ.

ಈ ಮೂಲಕ, ಬ್ಯಾಂಕ್ ಮತ್ತು ಅಂಚೆ ಕಚೇರಿಯ ಖಾತೆಗಳನ್ನು ಜೋಡಣೆ ಮಾಡಿ ಗ್ರಾಹಕರ ವಹಿವಾಟಿಗೆ ಮುಕ್ತಗೊಳಿಸುವ ಹಾಗೂ ಆಯ್ದ 75 ಜಿಲ್ಲೆಗಳಲ್ಲಿ 75 ಡಿಜಿಟಲ್ ಬ್ಯಾಂಕಿಂಗ್ ಘಟಕ ಸ್ಥಾಪಿಸುವ ಪ್ರಸ್ತಾವ ಹೊಂದಲಾಗಿದೆ. ಬೆಂಗಳೂರಿನ ನಿಮ್ಹಾನ್ಸ್ ತಜ್ಞರ ಸಹಯೋಗದೊಂದಿಗೆ ಮಾನಸಿಕ ಆರೋಗ್ಯಕ್ಕಾಗಿ ರಾಷ್ಟ್ರೀಯ ಕಾರ್ಯಕ್ರಮ ರೂಪಿಸಲಾಗಿದೆ.

ಪಿಪಿಪಿ ಮಾದರಿ: ಖಾಸಗೀಕರಣದ ಕಡೆಗಿನ ತನ್ನ ಒಲವನ್ನು ಮತ್ತೆ ತೋರಿರುವ ಕೇಂದ್ರ, ‘ಪ್ರಧಾನಮಂತ್ರಿ ಗತಿಶಕ್ತಿ’ ಕಾರ್ಯಕ್ರಮದಡಿ ಆಧುನಿಕ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗೂ ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿ ಅನುಸರಿಸುವುದಾಗಿ ತಿಳಿಸಿದೆ.

ಸಣ್ಣ, ಮಧ್ಯಮ ಮತ್ತು ಅತಿ ಸಣ್ಣ ಉದ್ಯಮಗಳ ಪುನಶ್ಚೇತಕ್ಕೆ ಕ್ರಮ ಕೈಗೊಳ್ಳುವುದಾಗಿ ಪ್ರಕಟಿಸಲಾಗಿದೆ. 2025ರೊಳಗೆ ದೇಶದ ಎಲ್ಲ ಗ್ರಾಮೀಣ ಪ್ರದೇಶಗಳಲ್ಲಿ ಇ-ಡಿಜಿಟಲ್ ಸಂಪರ್ಕ ವ್ಯವಸ್ಥೆ ಜಾರಿಗೆ ‘ಭಾರತ್ ನೆಟ್’ ಆಪ್ಟಿಕಲ್ ಫೈಬರ್ ಅಳವಡಿಕೆಗೆ ಹಾಗೂ ಗುಡ್ಡಗಾಡು ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿಗಾಗಿ ಇದೇ ಮಾದರಿ ಅಡಿ ಕ್ರಮ ಕೈಗೊಳ್ಳುವ ಆಶ್ವಾಸನೆ ನೀಡಲಾಗಿದೆ.

ಕ್ರಿಪ್ಟೋ ಕರೆನ್ಸಿ: ರಾಜ್ಯದಲ್ಲಿ ಕಂಡುಬಂದ ಬಹುಕೋಟಿ ಮೌಲ್ಯದ ಬಿಟ್ ಕಾಯಿನ್ ಹಗರಣ ದೇಶದಾದ್ಯಂತ ಸದ್ದು ಮಾಡಿದ್ದ ಹಿನ್ನೆಲೆಯಲ್ಲಿ, ಬಿಟ್ ಕಾಯಿನ್ ಒಳಗೊಂಡ ಕ್ರಿಪ್ಟೋ ಕರೆನ್ಸಿಯ ನಿಯಂತ್ರಣಕ್ಕಾಗಿ ಭಾರತೀಯ ರಿಜರ್ವ್ ಬ್ಯಾಂಕ್ ಮುಖೇನ ಅಧಿಕೃತ ಚಾಲನೆಯ ಮುದ್ರೆ ಒತ್ತಲು ನಿರ್ಧರಿಸಲಾಗಿದೆ. 2022–23ನೇ ಹಣಕಾಸು ವರ್ಷದಲ್ಲೇ ಸ್ವತಂತ್ರ ಡಿಜಿಟಲ್ ಕರೆನ್ಸಿಗೆ ಚಾಲನೆ ದೊರೆಯಲಿದ್ದು, ಈ ಕರೆನ್ಸಿ ಹೊಂದಿದವರಿಗೆ ಶೇ 30ರಷ್ಟು ತೆರಿಗೆ ವಿಧಿಸುವ ಹಾಗೂ ಅದರ ಡಿಜಿಟಲ್ ವರ್ಗಾವಣೆಯ ಮೇಲೂ ಟಿಡಿಎಸ್ ಮೂಲಕ ಶೇ 1ರಷ್ಟು ತೆರಿಗೆ ವಿಧಿಸುವ ಮೂಲಕ ಆದಾಯ ಹೆಚ್ಚಳಕ್ಕೆ ಮುಂದಾಗಿರುವುದು ಹೊಸ ನಡೆಯಾಗಿದೆ.

5-ಜಿ ತರಂಗಾಂತರ ಹರಾಜು: ಅಂತರ್ಜಾಲ ಸಂಪರ್ಕ ವ್ಯವಸ್ಥೆಯ ವೇಗವರ್ಧನೆಗೆಂದೇ 5-ಜಿ ತರಂಗಾಂತರ ಹರಾಜು ಪ್ರಕ್ರಿಯೆಯನ್ನೂ ಪ್ರಸಕ್ತ ವರ್ಷವೇ ನಡೆಸುವ ಮೂಲಕ ಆರ್ಥಿಕತೆಯ ಸುಧಾರಣೆಯತ್ತ ಹೆಜ್ಜೆ ಇರಿಸಲಾಗುವುದು ಎಂಬುದು 90 ನಿಮಿಷಗಳ ಅವಧಿಯ ಬಜೆಟ್ ಭಾಷಣದ ಮೂಲಕ ಹಣಕಾಸು ಸಚಿವರು ನೀಡಿದ ವಾಗ್ದಾನವಾಗಿದೆ.

ಹೊರೆ: ಹೆಚ್ಚಿಸಿಲ್ಲ, ಇಳಿಕೆಯೂ ಇಲ್ಲ

ವಿಶ್ಲೇಷಣೆ

ಪ್ರಮೋದ ಶ್ರೀಕಾಂತ್ ದೈತೋಟ

ನಿರ್ಮಲಾ ಸೀತಾರಾಮನ್ ಅವರು ಈ ಬಾರಿಯ ಬಜೆಟ್ ಮೂಲಕ ಜನಸಾಮಾನ್ಯರ ಆಸೆ-ಆಕಾಂಕ್ಷೆಗಳನ್ನು ಸಾಕಾರಗೊಳಿಸಿದ್ದಾರೆಯೇ ಎಂದು ಕೇಳಿದರೆ, ಖಂಡಿತವಾಗಿಯೂ ಇಲ್ಲವೆಂದೇ ಹೇಳಬೇಕಾಗುತ್ತದೆ. ಬಹು ಮುಖ್ಯವಾಗಿ, ಆದಾಯ ತೆರಿಗೆಯ ಸೆಕ್ಷನ್ 80ಸಿ ಅಡಿ ಮಿತಿ ಹೆಚ್ಚಳ ಅಥವಾ ಯಾವುದೇ ತೆರಿಗೆ ರಿಯಾಯಿತಿ ಅಧಿಕಗೊಳಿಸಿಲ್ಲ ಎನ್ನುವುದು ಇದಕ್ಕೆ ಪುಷ್ಟಿ ನೀಡುವ ವಿಚಾರ. ಅಷ್ಟೇ ಅಲ್ಲದೆ, ಗೃಹ ಸಾಲಗಳ ಮೇಲೆ ನೀಡಲಾಗುವ ₹ 2 ಲಕ್ಷದ ಬಡ್ಡಿ ರಿಯಾಯಿತಿಯನ್ನೂ ಹೆಚ್ಚಿಸಲಾಗಿಲ್ಲ.

2020ರಲ್ಲಿ, ಸರ್ಕಾರವು ನೀಡಿದ ವಿವಿಧ ವಿನಾಯಿತಿಗಳನ್ನು ತ್ಯಜಿಸಲು ಸಿದ್ಧರಿರುವವರಿಗೆ ಕಡಿಮೆ ದರದ ತೆರಿಗೆ ಸ್ಲ್ಯಾಬ್‌ಗಳೊಂದಿಗೆ ಹೊಸ ತೆರಿಗೆ ದರವನ್ನು ಸರ್ಕಾರ ಘೋಷಿಸಿತ್ತು. ಆದರೆ ಇದು ನಿಜವಾಗಿ ಯಾವ ಅರ್ಥದಲ್ಲೂ ಸ್ವಂತ ಮನೆಗಾಗಿ ಗೃಹ ಸಾಲ ಹೊಂದಿದವರಿಗೆ ಅಥವಾ ಬಹಳಷ್ಟು ಉಳಿತಾಯ ಮಾಡುವವರಿಗೆ ಪ್ರಯೋಜನ ತಂದುಕೊಟ್ಟಿಲ್ಲ ಎನ್ನುವುದು ಜನರಿಗೆ ಬಜೆಟ್ ವಿವರಗಳು ಸಿಕ್ಕ ನಂತರ ನಿಧಾನವಾಗಿ ಮನವರಿಕೆಯಾಗುತ್ತಾ ಹೋಯಿತು. ಇದು ಈಗಲೂ ಜನಸಾಮಾನ್ಯರಿಗೆ ಸರಿಯಾಗಿ ಅರ್ಥವಾಗದೆ ಮುಂದುವರಿಯುತ್ತಿರುವ ಸಮಾನಾಂತರ ತೆರಿಗೆ.

ಕೇಂದ್ರ ಸರ್ಕಾರವು ದೊಡ್ಡ ಯೋಜನೆಗಳನ್ನು ಅನೇಕ ಕ್ಷೇತ್ರಗಳಲ್ಲಿ ಕೈಗೆತ್ತಿಕೊಳ್ಳುತ್ತಿದ್ದರೂ, ಜನಸಾಮಾನ್ಯನ ಆಕಾಂಕ್ಷೆಗಳನ್ನು ತಿಳಿದೂ ತಿಳಿಯದಂತೆ ನಟಿಸುತ್ತಿರುವಂತಿದೆ. ಸಾಮಾನ್ಯ ಜನರ ನಿರೀಕ್ಷೆಗಳಾದ ಆದಾಯ ತೆರಿಗೆ ದರ ಕಡಿತ, ಮೂಲ ವಿನಾಯಿತಿ ಮೊತ್ತದ ಹೆಚ್ಚಳ, ತೆರಿಗೆ ಉಳಿತಾಯದ ವಿನಾಯಿತಿಯಲ್ಲಿ ಹೆಚ್ಚಳ, ಹೊಸ ರಿಯಾಯಿತಿಗಳನ್ನು ನೀಡುವುದು ಇತ್ಯಾದಿಗಳಷ್ಟೇ ಬಜೆಟ್ಟನ್ನು ಜನಮೆಚ್ಚುಗೆಗೆ ಪಾತ್ರವಾಗುವಂತೆ ಮಾಡುವ ಅಂಶಗಳು. ಕಳೆದ ಕೆಲವು ವರ್ಷಗಳಿಂದ ಇಂತಹ ಸೂಕ್ಷ್ಮ ವಿಚಾರಗಳಿಗೆ ಸ್ಪಂದಿಸದಿರುವ ಸರ್ಕಾರವು ಈ ಬಾರಿಯೂ ಅದೇ ಹಾದಿಯಲ್ಲಿ ಸಾಗಿದೆ. ದೇಶದಲ್ಲಿ ಶೇಕಡ 6ರ ಪ್ರಮಾಣದ ಹಣದುಬ್ಬರ ಇರುವಾಗ, ಕನಿಷ್ಠ ಎರಡೋ ಮೂರೋ ವರ್ಷಗಳಿಗೊಮ್ಮೆಯಾದರೂ ಪ್ರಮುಖ ತೆರಿಗೆ ರಿಯಾಯಿತಿಗಳನ್ನು ಸರ್ಕಾರ ಪುನರ್ ಅವಲೋಕನ ಮಾಡುವುದು ಜನ ಸಾಮಾನ್ಯರ ಹಿತಾಸಕ್ತಿಯಿಂದ ಸಮಂಜಸ ನಡೆಯಾಗುತ್ತದೆ.

ತೆರಿಗೆದಾರರಿಗೆ, ಅವರು ಆದಾಯವನ್ನು ವರದಿ ಮಾಡಲು ತಪ್ಪಿದಲ್ಲಿ ಸಂಬಂಧಿತ ಮೌಲ್ಯಮಾಪನ ವರ್ಷದಿಂದ ಎರಡು ವರ್ಷಗಳವರೆಗೆ ನವೀಕರಿಸಿದ ಐಟಿಆರ್ ಅನ್ನು ಸಲ್ಲಿಸಲು ಸಾಧ್ಯವಾಗಿಸುವ ಹೆಚ್ಚುವರಿ ಅವಕಾಶವನ್ನು ಕೊಟ್ಟಿರುವುದು ಈ ಬಾರಿಯ ವಿಶೇಷ.

ಇತ್ತೀಚಿನ ದಿನಗಳಲ್ಲಿ ಪ್ರಚಾರ ಪಡೆಯುತ್ತಿರುವ ಕ್ರಿಪ್ಟೊ ಹಣದ ವಹಿವಾಟಿಗೆ ಸಂಬಂಧಿಸಿದ ತೆರಿಗೆ ಗೊಂದಲಕ್ಕೆ ತೆರೆ ಬಿದ್ದಿದೆ. ಇದು ಲಾಭಾಂಶದ ಮೇಲೆ ಶೇಕಡಾ 30ರ ದರದಲ್ಲಿ ತೆರಿಗೆಗೆ ಒಳಪಡಲಿದೆ. ಇದರ ಖರೀದಿ ದರವನ್ನಷ್ಟೇ ವೆಚ್ಚವೆಂದು ಪರಿಗಣಿಸಿ ಉಳಿದ ಲಾಭಾಂಶದ ಮೇಲೆ ತೆರಿಗೆಗೆ ಒಳಪಡಿಸಲಾಗುತ್ತದೆ. ಇಂದು ಜನಸಾಮಾನ್ಯರು ತಮ್ಮ ಮೊಬೈಲ್ ಆ್ಯಪ್‌ಗಳ ಮೂಲಕ ಒಂದಲ್ಲ ಒಂದು ಕ್ರಿಪ್ಟೊ ವೇದಿಕೆಗಳಲ್ಲಿ ವ್ಯವಹರಿಸುತ್ತಿರುವುದು ಸಹಜವಾಗಿರುವಾಗ ಈ ತೆರಿಗೆಯ ಬಗ್ಗೆಯೂ ಮತ್ತಷ್ಟು ಅರಿತು ವ್ಯವಹರಿಸುವ ಅಗತ್ಯವಿದೆ.

ಈ ಬಾರಿಯ ಬಜೆಟ್‌ನಲ್ಲಿ ಕೋವಿಡ್ ಬಗೆಗಿನ ವೈದ್ಯಕೀಯ ವೆಚ್ಚಕ್ಕಾಗಿ ಅಥವಾ ಆ ಕಾರಣದಿಂದಾದ ಸಾವಿನ ಬಾಬ್ತು ಸಂಗ್ರಹವಾಗುವ ಯಾವುದೇ ಹಣಕ್ಕೆ ಷರತ್ತು ಬದ್ಧ ತೆರಿಗೆ ರಿಯಾಯಿತಿಯನ್ನು ಕೊಡಲಾಗಿದೆ. ಈ ರಿಯಾಯಿತಿ ರೋಗಿಗೆ ಅಥವಾ ಮೃತಪಟ್ಟ ಕುಟುಂಬದ ಸದಸ್ಯರಿಗೂ ಸಿಗುತ್ತದೆ.

ದೇಶದ ಎಲ್ಲ ಅಂಚೆ ಕಚೇರಿಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ತರುವ ಉದ್ದೇಶ ಒಳ್ಳೆಯದು. ಇದು ಆರ್ಥಿಕ ರಂಗದಲ್ಲಿ ಇನ್ನಷ್ಟು ಸಂಚಲನ ಮೂಡಿಸಲಿದೆ. ಇದರೊಂದಿಗೆ, ಅಂಚೆ ಕಚೇರಿ ಖಾತೆದಾರರು ಆನ್‌ಲೈನ್ ವಹಿವಾಟುಗಳನ್ನು ಮಾಡಲು ಮತ್ತು ನೆಟ್‌ಬ್ಯಾಂಕಿಂಗ್ ಮೂಲಕ ಇತರ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಲು ಸುಲಭ ಆಗುತ್ತದೆ. ಮಾತ್ರವಲ್ಲ ಇದು ಬ್ಯಾಂಕ್ ಖಾತೆಗಳಿಗೆ ಸಮಾನವಾಗಿ ಪೈಪೋಟಿ ನೀಡಲಿದೆ.

ಲೇಖಕ ವೈಯಕ್ತಿಕ ತೆರಿಗೆ ತಜ್ಞ

ಬೆಳವಣಿಗೆ ಆಧಾರಿತ ಬಜೆಟ್

ಗ್ರಾಮೀಣ ವಲಯದ ಉನ್ನತಿಗಾಗಿ ಕೃಷಿ ಆರ್ಥಿಕತೆಗೆ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಕೃಷಿಯ ಸಮಗ್ರ ಅಭಿವೃದ್ಧಿ ಹಾಗೂ ಬೆಳವಣಿಗೆಗೆ ಹೆಚ್ಚಿನ ಮಹತ್ವ ನೀಡಲಾಗಿದ್ದು ನದಿಗಳ ಜೋಡಣೆ ಯೋಜನೆಯ ಅನುಷ್ಠಾನಕ್ಕೆ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದೊಂದಿಗೆ ಆಹಾರ ಸಂಸ್ಕರಣೆಗೆ ಆದ್ಯತೆ ನೀಡಲಾಗಿದೆ.

ಕಿರು, ಸಣ್ಣ ಹಾಗೂ ಮಧ್ಯಮ ಪ್ರಮಾಣದ ಕೈಗಾರಿಕೆಗಳ (ಎಂಎಸ್‌ಎಂಇ) ಸ್ಥಿತಿ ಸುಧಾರಿಸಲು ಮತ್ತು ಸ್ಪರ್ಧಾತ್ಮಕತೆ ಬೆಳೆಸಿಕೊಳ್ಳಲು ಅನುಕೂಲ ಆಗುವಂತೆ ತುರ್ತು ಸಾಲ ಖಾತರಿ ಯೋಜನೆಯನ್ನು (ಇಸಿಜಿಎಲ್‌ಎಸ್) 2023ರ ಮಾರ್ಚ್‌ವರೆಗೆ ವಿಸ್ತರಿಸಲಾಗಿದೆ. ಇದರಿಂದಾಗಿ 1.30 ಕೋಟಿ ಎಂಎಸ್‌ಎಂಇಗಳ ಪುನಶ್ಚೇತನಕ್ಕೆ ಸಹಾಯ ಆಗಲಿದೆ. ಪ್ರಧಾನಮಂತ್ರಿ ಗತಿಶಕ್ತಿ ಯೋಜನೆಯು ಆರ್ಥಿಕ ಬೆಳವಣಿಗೆಗೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಸಹಾಯಕ. ಸಾಮಾನ್ಯ ಜನರಿಗೆ ಯಾವುದೇ ನಿರ್ದಿಷ್ಟ ಪರಿಹಾರವನ್ನು ನೀಡುವುದರಿಂದ ದೂರವಿದ್ದರೂ ಉದ್ಯೋಗ ಸೃಷ್ಟಿಗೆ, ನವೋದ್ಯಮಗಳು ಮತ್ತು ಎಂಎಸ್‌ಎಂಇ ವಲಯಗಳಿಗೆ ಹೆಚ್ಚು ಸಹಕಾರಿಯಾಗಿದ್ದು ಬೆಳವಣಿಗೆ ಆಧಾರಿತ ಬಜೆಟ್ ಇದಾಗಿದೆ.

ಐ.ಎಸ್. ಪ್ರಸಾದ್, ಅಧ್ಯಕ್ಷ, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ

ಎಂಎಸ್‌ಎಂಇ ಬೆಳವಣಿಗೆಗೆ ಪ್ರಾಮಾಣಿಕ ಪ್ರಯತ್ನ

ಸಾಂಕ್ರಾಮಿಕದ ಪರಿಸ್ಥಿತಿಯಲ್ಲೂ ಎಂಎಸ್‌ಎಂಇಗಳ ಬೆಳವಣಿಗೆಯನ್ನು ಅಭಿವೃದ್ಧಿಪಡಿಸಲು ಈ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಆದಾಗ್ಯೂ, ಸಾಂಕ್ರಾಮಿಕದ ಬಿಕ್ಕಟ್ಟಿನಿಂದ ಎದುರಾಗುವ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ವಲಯಕ್ಕೆ ಶೇಕಡ 4 ರ ದರದಲ್ಲಿ ಮೃದು ಸಾಲಗಳನ್ನು ವಿಸ್ತರಿಸುವ ನಮ್ಮ ಸಲಹೆಯನ್ನು ಪರಿಗಣಿಸಬಹುದಿತ್ತು ಎಂದು ಕಾಸಿಯಾ ಹೇಳಿದೆ.

ಕೇಂದ್ರ ಸಚಿವಾಲಯಗಳಿಂದ ವಿಳಂಬ ಪಾವತಿಗಳನ್ನು ಕಡಿಮೆ ಮಾಡಲು ಮತ್ತು ಸರಬರಾಜುದಾರರಿಗೆ ಪರೋಕ್ಷ ವೆಚ್ಚವನ್ನು ಕಡಿಮೆ ಮಾಡಲು ಜಾಮೀನು ಬಾಂಡ್‌ಗಳನ್ನು ಪರಿಚಯಿಸಲು ಪ್ರಸ್ತಾಪಿಸಲಾದ ಆನ್‌ಲೈನ್ ಬಿಲ್ ವ್ಯವಸ್ಥೆಯು ಅದರ ಪರಿಣಾಮಕಾರಿತ್ವವನ್ನು ತೀವ್ರವಾಗಿ ಗಮನಿಸಲಾಗುವುದು ಎಂದು ಕಾಸಿಯಾ ತಿಳಿಸಿದೆ. ಕೆಲವು ಉತ್ಪನ್ನಗಳ ಮೇಲಿನ ಕಸ್ಟಮ್ ಸುಂಕ ಕಡಿತವನ್ನು ಸ್ವಾಗತಿಸುತ್ತೇವೆ.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ (ಕಾಸಿಯಾ)

ಬಜೆಟ್ ಪ್ರತಿಕ್ರಿಯೆಗಳು

ಇಪಿಎಫ್ ಹೆಚ್ಚಳದ ನಿರೀಕ್ಷೆ ಹುಸಿ

ಉದ್ಯೋಗಿಗಳ ಭವಿಷ್ಯ ನಿಧಿಯನ್ನು (ಇಪಿಎಫ್) ಹೆಚ್ಚಳ ಮಾಡಬಹುದೆಂಬ ನಿರೀಕ್ಷೆ ಇತ್ತು. ಅದರ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸದಿರುವುದು ನಿರಾಸೆ ಮೂಡಿಸಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯಕ್ಕೆ ಯಾವುದೇ ಹೊಸ ಕೊಡುಗೆಗಳನ್ನು ನೀಡಿಲ್ಲ. ಬಡವರು ಹಾಗೂ ಮಧ್ಯಮ ವರ್ಗದವರನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಪಿಂಚಣಿಯನ್ನೂ ಹೆಚ್ಚಿಸಿಲ್ಲ.

ನಂಜುಂಡಸ್ವಾಮಿ, ಹನುಮಂತನಗರ ನಿವಾಸಿ

ಮಧ್ಯಮ ವರ್ಗದವರನ್ನು ಮರೆತ ಬಜೆಟ್

ಈ ಬಾರಿಯ ಬಜೆಟ್‌ನಲ್ಲಿ ಮಧ್ಯಮ ವರ್ಗದವರನ್ನು ಸಂಪೂರ್ಣವಾಗಿ ಮರೆಯಲಾಗಿದೆ. ನೇರ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡದೆ ಮಧ್ಯಮ ವರ್ಗದವರನ್ನು ತ್ರಿಶಂಕು ಸ್ಥಿತಿಗೆ ತಳ್ಳಲಾಗಿದೆ. ನವೋದ್ಯಮಗಳಿಗೆ ತೆರಿಗೆಯಿಂದ ನೀಡುತ್ತಿರುವ ವಿನಾಯಿತಿಯನ್ನು ಮುಂದುವರಿಸಲಾಗಿದೆ. ಡಿಜಿಟಲ್ ಆಸ್ತಿ ಹೂಡಿಕೆದಾರರ ಮೇಲೆ ಶೇ 30ರಷ್ಟು ತೆರಿಗೆ ಹೇರುವ ಮೂಲಕ ಅವರನ್ನು ನರಕಕ್ಕೆ ದೂಡಲಾಗಿದೆ.

ವಿನೋದ್ ಕರ್ತವ್ಯ, ‘ಬೆಂಗಳೂರು ಹುಡುಗರು’ ತಂಡದ ಸಹ ಸಂಸ್ಥಾಪಕ

ನದಿ ಜೋಡಣೆಗೆ ಇಚ್ಛಾಶಕ್ತಿ ತೋರಲಿ

ಬರಪೀಡಿತ ಪ್ರದೇಶಗಳಿಗೆ ನೀರುಣಿಸುವ ನದಿ ಜೋಡಣೆ ಯೋಜನೆಗೆ ಚಾಲನೆ ನೀಡುವುದಾಗಿ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಘೋಷಿಸಿದೆ. ಇದು ಕಾಗದಕ್ಕಷ್ಟೇ ಸೀಮಿತವಾಗಬಾರದು. ಇದನ್ನು ಕಾರ್ಯಗತಗೊಳಿಸುವ ಇಚ್ಛಾಶಕ್ತಿ ತೋರಬೇಕು. ಕೃಷಿ ವಲಯದ ಉತ್ತೇಜನದತ್ತ ಒಲವು ತೋರದಿರುವುದು ಬೇಸರ ತರಿಸಿದೆ. ನರೇಗಾ ಯೋಜನೆಗೂ ಹೆಚ್ಚಿನ ಅನುದಾನ ಒದಗಿಸಿಲ್ಲ.

ವಿನೋದ್ ಗೌಡ, ಗಿರಿನಗರ ನಿವಾಸಿ

ಇಳಿಸದ ಇಂಧನ ದರ

ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆಯಿಂದ ನಾಗರಿಕರು ಹೈರಾಣಾಗಿದ್ದಾರೆ. ದರ ಇಳಿಸುವತ್ತ ಸರ್ಕಾರ ಗಮನ ಹರಿಸಿಲ್ಲ. ಉದ್ಯೋಗ ಸೃಷ್ಟಿಗೂ ಒತ್ತು ನೀಡಿಲ್ಲ. ಕ್ರಿಪ್ಟೊ ಕರೆನ್ಸಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಮುಂದಾಗಿರುವುದು ಸ್ವಾಗತಾರ್ಹ. ಆದರೆ ದುಡಿಯುವ ವರ್ಗವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ಶಿವರಂಜನ್, ಖಾಸಗಿ ಕಂಪನಿ ಉದ್ಯೋಗಿ

ಸುಂಕ ಇಳಿಕೆ ಸ್ವಾಗತಾರ್ಹ

ಈ ಬಜೆಟ್‌ನಲ್ಲಿ ವೈದ್ಯಕೀಯ ಹಾಗೂ ಔಷಧಗಳ ಮೇಲಿನ ಅಬಕಾರಿ ಸುಂಕ ಇಳಿಸಿರುವುದು ಸ್ವಾಗತಾರ್ಹ. ಉತ್ಪಾದಕರು ಇದನ್ನು ದುರುಪಯೋಗ ಮಾಡಿಕೊಳ್ಳದಂತೆ ನಿಯಂತ್ರಣ ತರಬೇಕು. ಲಾಭವು ಗ್ರಾಹಕರಿಗೆ ನೇರವಾಗಿ ತಲುಪಬೇಕು. ರಾಷ್ಟ್ರೀಯ ಔಷಧ ಬೆಲೆ ನಿಯಂತ್ರಣ ಪ್ರಾಧಿಕಾರ ಈ ಬಗ್ಗೆ ಗಮನ ಹರಿಸಿ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೊಳಿಸಬೇಕು. ಇಲ್ಲವಾದರೆ ಸಾರ್ವಜನಿಕರಿಗೆ ಏನೂ ಪ್ರಯೋಜನವಾಗುವುದಿಲ್ಲ.

ಬಂಡು ಕಟ್ಟಿ, ರಾಜ್ಯ ಔಷಧ ವ್ಯಾಪಾರಿಗಳ ಸಂಘದ ಸಂಘಟನಾ ಕಾರ್ಯದರ್ಶಿ

ತೆರಿಗೆ ಸಂಗ್ರಹದಲ್ಲಿ ತಾರತಮ್ಯ

ದೇಶದಲ್ಲಿ ದುಡಿಯುತ್ತಿರುವ ಎಲ್ಲರಿಂದ ತೆರಿಗೆ ಪಾವತಿ ನಡೆಯುತ್ತಿಲ್ಲ. ಕೇಂದ್ರ ಸರ್ಕಾರಕ್ಕೆ ಸಂಬಳದ ನೌಕರರ ಮೇಲೆ ಮಾತ್ರ ಕಣ್ಣು. ದುಡಿಯುವ ಪ್ರತಿ ರೂಪಾಯಿಗೂ ತೆರಿಗೆ ಕಟ್ಟುವುದು ಅನಿವಾರ್ಯ. ತಂತ್ರಜ್ಞಾನ ಎಷ್ಟೇ ಮುಂದುವರಿದಿದ್ದರೂ, ತೆರಿಗೆ ವಂಚಕರನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ಬಜೆಟ್‌ನಲ್ಲಿ ಇದರ ಸದ್ದೇ ಇಲ್ಲ.

ರವೀಂದ್ರ, ಮೆಕಾನಿಕಲ್ ಎಂಜಿನಿಯರ್

‘ನವ ಭಾರತ’ಕ್ಕೆ ಸಹಕಾರಿ

ಕೇಂದ್ರ ಬಜೆಟ್ ದೂರದೃಷ್ಟಿಯಿಂದ ಕೂಡಿದೆ. ಬಿಟ್‌ಕಾಯಿನ್‌ನಂತಹ ಗೊಂದಲಕ್ಕೆ ಉತ್ತರವಾಗಿ ‘ಡಿಜಿಟಲ್ ಕರೆನ್ಸಿ’ ಚಾಲನೆ ಮಾಡುವ ಯೋಜನೆ ಸಂಚಲನ ಮೂಡಿಸಲಿದೆ. ಕೋವಿಡ್ ಪರಿಸ್ಥಿತಿಯಲ್ಲೂ ದೇಶದ ಆರ್ಥಿಕತೆಯನ್ನು ಮೇಲೆತ್ತುವ ಗುರಿ ಹೊಂದಿದೆ. ಅಭಿವೃದ್ಧಿಯತ್ತ ಹೆಜ್ಜೆ ಇಟ್ಟಿರುವ ನವ ಭಾರತಕ್ಕೆ ಈ ಬಜೆಟ್ ಸಹಕಾರಿ.

ಸಿ.ಎ.ನಾಗರಾಜ್ ಆಚಾರ್, ಆರ್ಥಿಕ ತಜ್ಞ

‘ನಾರಿ’ಗೆ ಸಿಗದ ಶಕ್ತಿ

ಮಹಿಳಾ ಸಬಲೀಕರಣ ದೃಷ್ಟಿಯಿಂದ ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ಘೋಷಿಸಿದೆಯಾದರೂ, ದೇಶದಲ್ಲಿ ಮಹಿಳೆಯರ ರಕ್ಷಣೆಯನ್ನು ನಿರ್ಲಕ್ಷಿಸಲಾಗಿದೆ. ಮಹಿಳೆಯರ ಮೇಲಿನ ಶೋಷಣೆಗಳು ದೇಶಮಟ್ಟದಲ್ಲಿ ಸದ್ದು ಮಾಡುತ್ತಲೇ ಇವೆ. ಮಹಿಳೆಯರಿಗೆ ಬಲ ಮತ್ತು ರಕ್ಷಣೆ ನೀಡುವಂತಹ ಕ್ರಮಗಳಿಗೆ ಬಜೆಟ್‌ನಲ್ಲಿ ಆದ್ಯತೆ ಕೊಡಬೇಕಿತ್ತು.

ಸರಳ, ವಿದ್ಯಾರ್ಥಿನಿ

ಗ್ರಾಮೀಣ ಮಕ್ಕಳಿಗೆ ಅನುಕೂಲ

ಗ್ರಾಮೀಣ ಪ್ರದೇಶದ ಮಕ್ಕಳ ಶಿಕ್ಷಣಕ್ಕೆ ಕೋವಿಡ್ ಸಾಂಕ್ರಾಮಿಕದಿಂದಾಗಿ ತೊಡಕಾಗಿರುವುದನ್ನು ಮನಗಂಡು ‘ವನ್ ಕ್ಲಾಸ್ ವನ್ ಟಿವಿ’ ಆರಂಭಿಸುವ ಚಿಂತನೆ ನಿಜಕ್ಕೂ ಶ್ಲಾಘನೀಯ. ಶ್ರೀಮಂತರ ಮಕ್ಕಳು ಮನೆಯಲ್ಲೇ ಶಿಕ್ಷಣ ಪಡೆದರು. ಬಡ ಮಕ್ಕಳ ಗೋಳನ್ನು ಕೇಳುವವರೇ ಇರಲಿಲ್ಲ.

ರಘು, ಉಪನ್ಯಾಸಕ

ತೆರಿಗೆ ಪಾವತಿಸಲು ಗಳಿಸಬೇಕು

ನಾವು ಕೇವಲ ತೆರಿಗೆ ಪಾವತಿಸಲು ಗಳಿಸಬೇಕು. ಆದರೆ, ನಮ್ಮ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬಾರದು. ಮಧ್ಯಮ ವರ್ಗದ ನಾಗರಿಕ ಪ್ರಶ್ನೆಗಳನ್ನು ಎತ್ತಿದರೆ, ದಿನದ ಒಂದು ಹೊತ್ತಿನ ಊಟ ತಗ್ಗಿಸಲು ಸೂಚಿಸುವುದು ವಿಪರ್ಯಾಸ. ಮಧ್ಯಮ ವರ್ಗ ಯಾವಾಗಲೂ ಏಕೆ ಸಂಕಷ್ಟದಲ್ಲೇ ಸಿಲುಕುತ್ತದೆ? ಮಧ್ಯಮ ವರ್ಗಕ್ಕೆ ಲಾಭ ಸಿಗುವುದೇ ದೇಶದ ಪವಾಡ ಇರಬೇಕು.

ವಖಾರ್ ಮೊಹಮ್ಮದ್, ಖಾಸಗಿ ಕಂಪನಿ ಉದ್ಯೋಗಿ

ಮಕ್ಕಳ ಆರಂಭಿಕ ಶಿಕ್ಷಣಕ್ಕೆ ಬಲ

ದೇಶದ 2 ಲಕ್ಷ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸುವುದು ಒಳ್ಳೆಯ ನಿರ್ಧಾರ. ಮಕ್ಕಳ ಆರಂಭಿಕ ಶಿಕ್ಷಣಕ್ಕೆ ಬಹಳ ಅನುಕೂಲವಾಗಲಿದೆ. ಅಂಗನವಾಡಿಗಳನ್ನು ಮತ್ತಷ್ಟು ಅಭಿವೃದ್ಧಿಪಡಿಸಿದರೆ ಮಕ್ಕಳ ಶೈಕ್ಷಣಿಕ ಹಾದಿ ಸುಗಮವಾಗಲಿದೆ.

ಚೈತ್ರಾ, ಶಿಕ್ಷಕಿ

ದೇಶವಾಗಲಿದೆ ‘ಡಿಜಿಟಲ್’ಮಯ

ಬಜೆಟ್‌ನಲ್ಲಿ ದೇಶವನ್ನು ಡಿಜಿಟಲೀಕರಣಗೊಳಿಸಲು ಹೆಚ್ಚಿನ ಆದ್ಯತೆ ನೀಡಲಾಗಿದೆ. ದೇಶದ ಅಭಿವೃದ್ಧಿಗೆ ಈ ನಿರ್ಣಯಗಳು ಪೂರಕವಾಗಿವೆ. ಡಿಜಿಟಲ್ ತಂತ್ರಜ್ಞಾನ ದೇಶದ ಪ್ರತಿಯೊಬ್ಬರನ್ನೂ ತಲುಪುವಂತೆ ಸರ್ಕಾರದ ದೂರದೃಷ್ಟಿ ವ್ಯಕ್ತವಾಗಿದೆ.

ಸುಭಾಷ್, ಸ್ನಾತಕೋತ್ತರ ಪದವೀಧರ

ಉದ್ಯೋಗ ಸೃಷ್ಟಿಸದ ಬಜೆಟ್

ಕೋವಿಡ್‌ನಿಂದ ಲಕ್ಷಾಂತರ ಯುವಕ ಯುವತಿಯರು ಕೆಲಸ ಕಳೆದುಕೊಂಡಿದ್ದಾರೆ. ಬದುಕು ಸಾಗಿಸಲು ಉದ್ಯೋಗಕ್ಕಾಗಿ ಹಾತೊರೆಯುತ್ತಿದ್ದಾರೆ. ಬಜೆಟ್‌ನಲ್ಲಿ ಇವರಿಗೆ ನೆರವಾಗುವ ಅಂಶಗಳು ಕಂಡುಬರಲಿಲ್ಲ. ಉದ್ಯೋಗ ಸಿಕ್ಕರೆ, ಸಮಾಜದ ಒಂದು ಕುಟುಂಬ ಅಭಿವೃದ್ಧಿ ಹೊಂದುತ್ತದೆ. ನಿರುದ್ಯೋಗಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

ಮುರಳಿ ಕೃಷ್ಣ, ಖಾಸಗಿ ಕಂಪನಿ ಉದ್ಯೋಗಿ

ಕೌಶಲಾಭಿವೃದ್ಧಿಗೆ ಇ–ಪೋರ್ಟಲ್, ಡಿಜಿಟಲ್ ವಿಶ್ವವಿದ್ಯಾಲಯ ಸ್ಥಾಪನೆಗೆ ಒಲವು

ಉದ್ದಿಮೆ ಸ್ನೇಹಿ, ಎಸ್‌ಇಝೆಡ್‌ಗೆ ಹೊಸ ಕಾಯ್ದೆ

ನವದೆಹಲಿ (ಪಿಟಿಐ): ಆರ್ಥಿಕತೆಯ ಚೇತರಿಕೆ ಮತ್ತು ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಗುರಿಯೊಂದಿಗೆ ಕೈಗಾರಿಕಾ ವಲಯದ ವಿವಿಧ ಕ್ಷೇತ್ರಗಳಿಗೆ ಉತ್ತೇಜನಾ ಕ್ರಮಗಳನ್ನು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಕಟಿಸಿದೆ.

ಸೋಲಾರ್ ಸೆಲ್‌ಗಳು ಮತ್ತು ಮಾಡ್ಯೂಲ್ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಉತ್ಪಾದನೆ ಆಧರಿಸಿ ಪ್ರೋತ್ಸಾಹ ನೀಡುವಿಕೆ (ಪಿಎಲ್‌ಐ) ಯೋಜನೆಯಡಿ ನೆರವನ್ನು ಈ ಕ್ಷೇತ್ರಕ್ಕೆ ಈಗಿನ ₹ 4,500 ಕೋಟಿಯಿಂದ ₹ 24,000 ಕೋಟಿಗೆ ಹೆಚ್ಚಿಸುವ ನಿರ್ಧಾರವನ್ನು ಪ್ರಕಟಿಸಿದೆ. ಭಾರತವನ್ನು ರಫ್ತು ರಾಷ್ಟ್ರವಾಗಿ ರೂಪಿಸುವುದು ಇದರ ಗುರಿ.

2030ರ ವೇಳೆಗೆ ಸ್ಥಾಪಿತ ಸೋಲಾರ್ ಉತ್ಪಾದನೆ ಸಾಮರ್ಥ್ಯವನ್ನು 280 ಗಿಗಾವ್ಯಾಟ್‌ಗೆ ಹೆಚ್ಚಿಸುವ ಮಹತ್ವದ ಗುರಿ ಸಾಧನೆಗಾಗಿ ಪಿಎಲ್‌ಐ ಯೋಜನೆಯಡಿ ₹ 19,500 ಕೋಟಿ ಹೆಚ್ಚುವರಿ ಹಂಚಿಕೆ ಮಾಡಲಾಗಿದೆ. ಉನ್ನತ ಸಾಮರ್ಥ್ಯದ ಸೋಲಾರ್ ಮಾಡ್ಯೂಲ್‌ಗಳ ಉತ್ಪಾದನೆಗೆ ಪ್ರೋತ್ಸಾಹ ನೀಡಲಾಗುವುದು ಎಂದು ಸಚಿವೆ ಹೇಳಿದರು.

ಯೋಜನೆಯಡಿ ಏಪ್ರಿಲ್ 2021ರಲ್ಲಿ ₹4,500 ಕೋಟಿ ಹಂಚಿಕೆಗೆ ಕೇಂದ್ರ ಅನುಮೋದನೆ ನೀಡಿತ್ತು. ಸಮಗ್ರ ಸೋಲಾರ್ ಪಿವಿ ಮಾಡ್ಯೂಲ್ ಉತ್ಪಾದನೆ ಸಾಮರ್ಥ್ಯವನ್ನು 1000 ಮೆಗಾವಾಟ್ ಹೆಚ್ಚಿಸುವ ಗುರಿ ಇದೆ. ಈಗ ₹ 24000 ಕೋಟಿಗೆ ಹೆಚ್ಚಿಸಿರುವುದರಿಂದ ಉತ್ಪಾದನಾ ಸಾಮರ್ಥ್ಯ ಇನ್ನಷ್ಟು ವೃದ್ಧಿಯಾಗುವ ನಿರೀಕ್ಷೆಯಿದೆ.

ಎಸ್‌ಇಝೆಡ್‌ಗೆ ಉತ್ತೇಜನ, ಹೊಸ ಕಾಯ್ದೆ: ಉದ್ಯಮ ಮತ್ತು ಸೇವಾ ಹಬ್‌ಗಳ ಅಭಿವೃದ್ಧಿಯಲ್ಲಿ ರಾಜ್ಯಗಳ ಭಾಗಿತ್ವ ಉತ್ತೇಜಿಸಲು ವಿಶೇಷ ಆರ್ಥಿಕ ವಲಯಗಳ (ಎಸ್‌ಇಝೆಡ್) ನಿರ್ವಹಣೆಗೆ ಸಂಬಂಧಿಸಿ ಹೊಸ ಕಾಯ್ದೆ ರೂಪಿಸಲಾಗುತ್ತದೆ. ಹಾಲಿ ಎಸ್‌ಇಝೆಡ್ ಕಾಯ್ದೆಯನ್ನು 2006ರಲ್ಲಿ ರೂಪಿಸಲಾಗಿತ್ತು. ದೇಶದಲ್ಲಿ ಉತ್ಪಾದನೆ ಕ್ಷೇತ್ರಕ್ಕೆ ಪ್ರೋತ್ಸಾಹ ನೀಡಲು ರಫ್ತು ವಲಯಗಳ ಅಭಿವೃದ್ಧಿ ಇದರ ಉದ್ದೇಶವಾಗಿತ್ತು.

ಎಸ್‌ಇಝೆಡ್‌ನಲ್ಲಿರುವ ಉದ್ಯಮಗಳು ರಫ್ತುಗೆ ಸಂಬಂಧಿಸಿ ಮೊದಲ ಐದು ವರ್ಷ ಶೇ 100, ನಂತರದ ಐದು ವರ್ಷ ಶೇ 50ರಷ್ಟು ತೆರಿಗೆ ವಿನಾಯಿತಿ ಅನುಕೂಲ ಪಡೆಯಲಿವೆ. ಉದ್ಯಮ ನಿರ್ವಹಣೆಯ ಅಡೆತಡೆ ನಿವಾರಿಸಲು ಕಸ್ಟಮ್ಸ್ ಸುಧಾರಣೆ ಕ್ರಮಗಳನ್ನು ಸೆಪ್ಟೆಂಬರ್ 30ರೊಳಗೆ ಕೈಗೊಳ್ಳಲಿದೆ ಎಂದು ಸಚಿವೆ ಹೇಳಿದರು.

ಸಂಶೋಧನೆಗೆ ಉತ್ತೇಜನ: ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರ ಪ್ರೋತ್ಸಾಹಿಸಲು ದೇಶಿಯ ಸಾಮರ್ಥ್ಯ ವೃದ್ಧಿಗಾಗಿ ಪೂರಕ ನೀತಿಯನ್ನು ರೂಪಿಸಲಿದ್ದು, ನಿಯಂತ್ರಣ ಕ್ರಮಗಳನ್ನು ಸಡಿಲಗೊಳಿಸಲಾಗುವುದು. ಕೃತಕಬುದ್ಧಿಮತ್ತೆ(ಎಐ), ಜಿಯೊಸ್ಪೇಷಿಯಲ್ ಸಿಸ್ಟಮ್ಸ್, ಡ್ರೋನ್, ಸೆಮಿಕಂಡಕ್ಟರ್‌ಗಳು, ಬಾಹ್ಯಾಕಾಶ ಆರ್ಥಿಕತೆ, ಔಷಧ ಕ್ಷೇತ್ರ, ಹಸಿರು ಇಂಧನ, ಶುದ್ಧ ಸಂಚಾರ ವ್ಯವಸ್ಥೆ ಕ್ಷೇತ್ರಗಳಲ್ಲಿ ಸುಸುಸ್ಥಿರಾಭಿವೃದ್ಧಿ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿವೆ. ಈ ಕ್ಷೇತ್ರಗಳು ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿವೆ ಎಂದು ಆಶಿಸಿದರು.

ಉದ್ಯೋಗ ಸೃಷ್ಟಿಗೆ ಆದ್ಯತೆ

ಸಣ್ಣ ಮತ್ತು ಅತಿಸಣ್ಣ ಉದ್ದಿಮೆಗಳಿಗೆ ಸಾಲ ಖಾತರಿ ವಿಶ್ವಾಸ ಯೋಜನೆಯನ್ನು ಪರಿಷ್ಕರಿಸಿದ್ದು, ಹೆಚ್ಚುವರಿ ಸಂಪನ್ಮೂಲ ಒದಗಿಸಲಾಗುತ್ತದೆ. ಈ ಉದ್ದಿಮೆಗಳಿಗೆ ನೆರವಾಗಲು ಈ ಸಾಲಿಗೆ ಹೆಚ್ಚುವರಿ ₹ 2 ಲಕ್ಷ ಕೋಟಿ ಲಭ್ಯವಾಗಲಿದೆ. ಸಹಕಾರ ತತ್ವದಡಿ ಬಂಡವಾಳ ಹೂಡಿಕೆಗೆ ಪೂರಕವಾಗಿ ಕೇಂದ್ರವು ರಾಜ್ಯಗಳ ಕೈಬಲಪಡಿಸಲಿದೆ. ರಾಜ್ಯಗಳಿಗೆ ನೆರವಾಗಲು ಇರುವ ಹಂಚಿಕೆಯು ಈಗಿನ ₹ 10,000 ಕೋಟಿಯಿಂದ ₹ 15,000 ಕೋಟಿಗೆ ಏರಲಿದೆ.

ಬಜೆಟ್‌ಗೆ ಷೇರು ಮಾರುಕಟ್ಟೆ ಸ್ವಾಗತ

ಮುಂಬೈ (ಪಿಟಿಐ): ಮೂಲಸೌಕರ್ಯ ವಲಯದ ಮೇಲೆ ಹೆಚ್ಚಿನ ಹೂಡಿಕೆ ಪ್ರಸ್ತಾವ ಇರುವ ಬಜೆಟ್‌ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡನೆ ಮಾಡಿದ ದಿನ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 848 ಅಂಶ ಏರಿಕೆ ಕಂಡಿತು. ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 17,500 ಅಂಶಗಳ ಗಡಿಯನ್ನು ಮತ್ತೆ ದಾಟಿತು.

ಲೋಹ, ರಿಯಾಲ್ಟಿ ಮತ್ತು ಸಿಮೆಂಟ್ ಕಂಪನಿಗಳ ಷೇರುಗಳ ಖರೀದಿ ಜೋರಾಗಿ ನಡೆಯಿತು. ಆಟೊಮೊಬೈಲ್, ಟೆಲಿಕಾಂ ಕಂಪನಿಗಳ ಷೇರುಗಳ ಮಾರಾಟ ಹೆಚ್ಚಿತ್ತು. ‘ಇದು ಬೆಳವಣಿಗೆಗೆ ಪೂರಕವಾಗಿರುವ ಬಜೆಟ್. ಇದನ್ನು ಷೇರು ಮಾರುಕಟ್ಟೆ ಸ್ವಾಗತಿಸಿದೆ. ಇದರಲ್ಲಿ ಜನಪ್ರಿಯ ಘೋಷಣೆಗಳು ಇಲ್ಲ. ಆದರೆ, ಗ್ರಾಮೀಣ ಪ್ರದೇಶ, ಕೃಷಿ ವಲಯ, ಕಡಿಮೆ ತೆರಿಗೆ ಪಾವತಿಸುವ ವಲಯಗಳಿಗೆ ಬೆಂಬಲದ ಅಗತ್ಯ ಇತ್ತು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಭವಿಷ್ಯದತ್ತ ದೃಷ್ಟಿ ಇರಿಸಿರುವ ಬಜೆಟ್’

ಪ್ರಜಾವಾಣಿ ವಾರ್ತೆ

ಸಂಜೀವ್ ಪುರಿ

ಬೆಂಗಳೂರು: ಭವಿಷ್ಯದ ಕಡೆ ಚಿತ್ತ ನೆಟ್ಟಿರುವ, ಬೆಳವಣಿಗೆಗೆ ಪೂರಕ ಆಗಿರುವ, ದೂರದೃಷ್ಟಿಯನ್ನು ಹೊಂದಿರುವ ಬಜೆಟ್ ಮಂಡಿಸಿದ್ದಕ್ಕೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಅಭಿನಂದಿಸುವುದಾಗಿ ಐಟಿಸಿ ಲಿಮಿಟೆಡ್‌ನ ಅಧ್ಯಕ್ಷ ಸಂಜೀವ್ ಪುರಿ ಹೇಳಿದ್ದಾರೆ.

‘ಭಾರತವನ್ನು ಸ್ಪರ್ಧಾತ್ಮಕವಾಗಿ, ಸವಾಲುಗಳನ್ನು ಎದುರಿಸಲು ಸಶಕ್ತವಾಗಿ ನಿರ್ಮಾಣ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೊಂದಿರುವ ಕನಸಿಗೆ ಈ ಬಜೆಟ್ ಪೂರಕವಾಗಿದೆ ಇದೆ’ ಎಂದು ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಕ್ರಮಗಳು ಉದ್ಯೋಗ ಸೃಷ್ಟಿ, ರೈತರ ಆದಾಯ ವೃದ್ಧಿಗೆ ಪೂರಕವಾಗಿ ಇವೆ. ಪರಿಸರ ಪೂರಕ ಕ್ರಮಗಳು ಕೂಡ ಇದರಲ್ಲಿ ಇವೆ. ಈ ಬಜೆಟ್ ಕೃಷಿ ವಲಯದಲ್ಲಿ ಪರಿವರ್ತನೆಯನ್ನು ತರಲಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸರ್ವಸ್ಪರ್ಶಿ, ಸರ್ವವ್ಯಾಪಿ: ಕಟೀಲ್

ನಳಿನ್ ಕುಮಾರ್ ಕಟೀಲ್

ಬೆಂಗಳೂರು: ಈ ಬಾರಿಯ ಬಜೆಟ್ ಸರ್ವಸ್ಪರ್ಶಿ, ಸರ್ವವ್ಯಾಪಿ ಪ್ರಗತಿದಾಯಕ ಆಗಿದ್ದು, ಪ್ರಧಾನಿ ಮೋದಿಯವರ ಆಶಯದಂತೆ ಭಾರತ 5 ಟ್ರಿಲಿಯನ್ ಡಾಲರ್ ಆರ್ಥಿಕ ಶಕ್ತಿಯಾಗಿ ಹೊಮ್ಮುವುದು ಖಚಿತ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಬಜೆಟ್ ಕುರಿತು ಪ್ರತಿಕ್ರಿಯಿಸಿರುವ ಅವರು, ಮುಂದಿನ 25 ವರ್ಷಗಳಲ್ಲಿ ಜಗತ್ತಿನಲ್ಲೇ ಅತ್ಯಂತ ಶಕ್ತಿಶಾಲಿ ದೇಶವಾಗುವತ್ತ ಭಾರತ ಮುನ್ನಡೆಯಲಿದೆ ಎಂದು ತಿಳಿಸಿದರು.

ಬಜೆಟ್‌ನಲ್ಲಿ ಪ್ರಧಾನಿ ಗತಿಶಕ್ತಿ ಯೋಜನೆ, ಅಂತರ್ಗತ ಅಭಿವೃದ್ಧಿ, ಉತ್ಪಾದಕತೆ ಹೆಚ್ಚಳ, ಮೂಲ ಸೌಕರ್ಯಗಳಲ್ಲಿ ಹೂಡಿಕೆಗೆ ಅನುದಾನ ನೀಡಿದ್ದು, ಇದೊಂದು ಆತ್ಮನಿರ್ಭರ ಬಜೆಟ್. ಪಿಎಂ ಗತಿ ಶಕ್ತಿ ಯೋಜನೆಯನ್ನು ರಸ್ತೆ, ರೈಲ್ವೆ, ವಿಮಾನನಿಲ್ದಾಣಗಳು, ಬಂದರುಗಳು, ಸಮೂಹ ಸಾರಿಗೆ, ಜಲಸಾರಿಗೆ ಮತ್ತು ಲಾಜಿಸ್ಟಿಕ್ ಇನ್‌ಫ್ರಾ ಎಂದು ಏಳು ವಿಭಾಗಗಳನ್ನಾಗಿ ಮಾಡಿರುವುದು ಸಮಗ್ರ ಪ್ರಗತಿಗೆ ಪೂರಕ ಎಂದು ಹೇಳಿದ್ದಾರೆ.

ಕರ್ನಾಟಕಕ್ಕೆ ಶೂನ್ಯ ಕೊಡುಗೆ: ಡಿಕೆಶಿ ವ್ಯಂಗ್ಯ

ಬೆಂಗಳೂರು: ಕರ್ನಾಟಕಕ್ಕೆ ಎಲ್ಲಾ ರಂಗದಲ್ಲೂ ಶೂನ್ಯ ಕೊಡುಗೆ. ಕರ್ನಾಟಕದ ಹೆಸರನ್ನೂ ಪ್ರಸ್ತಾಪಿಸದ ಬಜೆಟ್ ಇದಾಗಿದ್ದು, ಇದಕ್ಕಾಗಿ ರಾಜ್ಯದಿಂದ ಆಯ್ಕೆಯಾಗಿರುವ ಬಿಜೆಪಿ 25 ಸಂಸದರನ್ನು ಅಭಿನಂದಿಸುತ್ತೇನೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವ್ಯಂಗ್ಯವಾಡಿದ್ದಾರೆ.

ಇದು ಕೇಂದ್ರ ಬಜೆಟ್ ಅಲ್ಲ, ಕೋವಿಡ್ ಬಜೆಟ್. ಕೋವಿಡ್‌ನಿಂದ ಸಮಾಜದ ಎಲ್ಲ ವರ್ಗದ ಜನ ಹೇಗೆ ನರಳಿದ್ದರೋ ಅದೇ ರೀತಿ ಈ ಬಜೆಟ್‌ನಿಂದ ಕೂಡ ಎಲ್ಲ ವರ್ಗದ ಜನ ನರಳುವಂತಾಗಿದೆ. ವರ್ಷಕ್ಕೆ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದಿದ್ದವರು, ಈಗ ವರ್ಷಕ್ಕೆ 60 ಲಕ್ಷ ಉದ್ಯೋಗ ಕೊಡುತ್ತೇವೆ ಎಂದಿದ್ದಾರೆ. ಉಳಿದ 1.40 ಕೋಟಿ ಯುವಕರಿಗೆ ಅನ್ಯಾಯ ಮಾಡಲು ಸಿದ್ಧರಾಗಿದ್ದಾರೆ. ಅವರ 2 ಕೋಟಿ ಉದ್ಯೋಗ ಕೇವಲ ಚುನಾವಣಾ ಹೇಳಿಕೆ ಎಂಬುದು ಸಾಬೀತಾಗಿದೆ ಎಂದು ಹೇಳಿದರು.

ಕೃಷ್ಣಾ, ಕಾವೇರಿ ಮತ್ತು ಪೆನ್ನಾರ್ ನದಿ ಜೋಡಣೆಯಿಂದ ಕರ್ನಾಟಕಕ್ಕೆ ಏನು ಅನುಕೂಲ ಆಗುತ್ತದೆ. ಕರ್ನಾಟಕಕ್ಕೆ ಅನುಕೂಲವಾಗುವ ಯಾವುದಾದರೂ ಒಂದು ಯೋಜನೆ ಪ್ರಕಟಿಸಿದ್ದಾರಾ? ಅವರಿಗೆ ರಾಜ್ಯದ ಬಗ್ಗೆ ನಿಜಕ್ಕೂ ಕಾಳಜಿ ಇದ್ದರೆ 2–3 ದಿನಗಳಲ್ಲಿ ಮೇಕೆದಾಟು ಯೋಜನೆಗೆ ಪರಿಸರ ಇಲಾಖೆ ಅನುಮತಿ ನೀಡಿ ಯೋಜನೆ ಆರಂಭಿಸಲಿ ಎಂದು ಸವಾಲು ಹಾಕಿದರು.

‘ಕೇಂದ್ರ ಸರ್ಕಾರ ರಾಜ್ಯಗಳಿಗೆ ಅನುದಾನ ನೀಡಿಲ್ಲ. ಸಾಲ ನೀಡಲು ಬ್ಯಾಂಕ್‌ಗಳಿವೆ. ಇವರೇಕೆ ಬೇಕು. ಕೇಂದ್ರ ಸರ್ಕಾರ ಡಿಜಿಟಲ್ ಯೂನಿವರ್ಸಿಟಿ ಮಾಡುತ್ತೇವೆ ಎಂದಿದ್ದಾರೆ. ಅದನ್ನು ಕರ್ನಾಟಕದಲ್ಲಿ ಮಾಡಿಸಲಿ ನೋಡೋಣ. ನಮ್ಮಲ್ಲಿ ಐಟಿ, ಬಿಟಿ ಕ್ಷೇತ್ರ ಉತ್ತಮವಾಗಿದೆ. ರೈತರ ಜತೆ ಮಾತನಾಡಿ ಬೇಕಾದ ಜಮೀನನ್ನು ಕೊಡಿಸುವ ಕೆಲಸ ಮಾಡುತ್ತೇವೆ’ ಎಂದು ಶಿವಕುಮಾರ್ ಹೇಳಿದರು.

ಉದ್ಧಾರವಲ್ಲ, ‘ಸಬ್ ಕಾ ವಿನಾಶ್’ ಬಜೆಟ್ – ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನರ ನಿರೀಕ್ಷೆಗಳಿಗೆ ಸ್ಪಂದಿಸುವ, ಅಭಿವೃದ್ಧಿ ಪರವಾದ, ವಾಸ್ತವಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ಬಜೆಟ್ ಇದಲ್ಲ. ಇದು ದೇಶದ ಪಾಲಿಗೆ ‘ಸಬ್ ಕಾ ವಿನಾಶ್’ ಬಜೆಟ್. ಜನರ ನಂಬಿಕೆಗೆ ಕೇಂದ್ರ ಸರ್ಕಾರ ದ್ರೋಹ ಮಾಡಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಕಳೆದ ವರ್ಷ ದೇಶದ ಮೇಲೆ ₹135 ಲಕ್ಷ ಕೋಟಿ ಸಾಲ ಇತ್ತು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಮನಮೋಹನ್ ಸಿಂಗ್ ಅವರ ಸರ್ಕಾರ ನಿರ್ಗಮಿಸುವವರೆಗೆ ಇದ್ದ ಒಟ್ಟು ಸಾಲ ₹53 ಲಕ್ಷ ಕೋಟಿ. ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದ ಕೇವಲ ಎಂಟೇ ವರ್ಷದಲ್ಲಿ ₹ 93 ಲಕ್ಷ ಕೋಟಿ ಸಾಲ ಮಾಡಿದ್ದು, ಬಡ್ಡಿ ಪಾವತಿಗಾಗಿ ಪ್ರತೀ ವರ್ಷ ₹9.4 ಲಕ್ಷ ಕೋಟಿ ವ್ಯಯಮಾಡಬೇಕಾಗುತ್ತದೆ. ಬಹುಮೊತ್ತ ಬಡ್ಡಿಗೇ ಬಳಕೆಯಾಗುವುದರಿಂದ ಅಭಿವೃದ್ಧಿಗೆ ಮಾರಕವಾದ ಬಜೆಟ್ ಇದಾಗಿದೆ ಎಂದು ಅವರು ಹೇಳಿದ್ದಾರೆ.

ಬಜೆಟ್‌ನ ಅಂಕಿ ಅಂಶ ನೋಡಿದರೆ ಸರ್ಕಾರದ ವೆಚ್ಚಗಳು ಕಡಿಮೆಯಾಗುತ್ತಿರುವುದು ಕಾಣಿಸುತ್ತದೆ. ಆಹಾರ, ಕೃಷಿ ಮೇಲಿನ ಸಹಾಯಧನಗಳು, ಮಹಿಳೆ, ಮಕ್ಕಳು, ಆರೋಗ್ಯ, ಗ್ರಾಮೀಣಾಭಿವೃದ್ಧಿ ಕ್ಷೇತ್ರದ ಅನುದಾನದ ವರ್ಷದಿಂದ ಇಳಿಕೆಯಾಗುತ್ತಲೇ ಇದೆ. ಸರ್ಕಾರವು ಜನ ಕಲ್ಯಾಣ ಕಾರ್ಯಕ್ರಮಗಳಿಂದ ಹಿಂದೆ ಸರಿದು, ಕಾರ್ಪೊರೇಟ್ ಹಾಗೂ ಬಂಡವಾಳಿಗ ವರ್ಗಕ್ಕೆ ಹತ್ತಿರವಾಗುತ್ತಿರುವುದನ್ನು ಮೋದಿ ಸರ್ಕಾರದ ಬಜೆಟ್‌ಗಳು ಸ್ಪಷ್ಟವಾಗಿ ಬಿಂಬಿಸುತ್ತಿವೆ. ಇದರ ನೇರ ಪರಿಣಾಮ ನಿತ್ಯದ ಅನ್ನಕ್ಕೆ ದುಡಿದೇ ಸಂಪಾದಿಸಬೇಕಾದ ಬಡ, ಮಧ್ಯಮವರ್ಗದ ಮೇಲೆ ಆಗುತ್ತದೆ ಎಂದು ಅವರು ಹೇಳಿದ್ದಾರೆ.

ಕೊರೊನಾ ಸಂದರ್ಭದಲ್ಲಿ ಜನರಿಗೆ ಉದ್ಯೋಗ ನೀಡಿ ಹಸಿವಿನಿಂದ ಕಾಪಾಡಿದ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಹಿಂದಿನ ಬಜೆಟ್ ನಲ್ಲಿ ₹37 ಸಾವಿರ ಕೋಟಿ ಕಡಿತ ಮಾಡಿದ್ದರು. ಈ ಬಾರಿ ಮತ್ತೆ ಕಳೆದ ಬಾರಿಗಿಂತ ₹25 ಸಾವಿರ ಕೋಟಿ ಕಡಿತ ಮಾಡಿದ್ದಾರೆ. ಆಹಾರ ಭದ್ರತೆ ಕಾಯ್ದೆಯಡಿ ಆಹಾರ ಇಲಾಖೆಗೆ ನೀಡುತ್ತಿದ್ದ ಅನುದಾನ ಕಳೆದ ಬಾರಿಗಿಂತ ₹79,638 ಕೋಟಿ ಕಡಿಮೆಯಾಗಿದೆ. ಅಕ್ಕಿ, ಗೋಧಿ ಮುಂತಾದ ಅಗತ್ಯ ವಸ್ತುಗಳ ಹಂಚಿಕೆ ಮೇಲೆ ಇದು ಪರಿಣಾಮ ಬೀರುತ್ತದೆ ಎಂದಿದ್ದಾರೆ.

‘ರೈತರ ಗೊಬ್ಬರಕ್ಕೆ ಈ ವರ್ಷ ಸಹಾಯಧನದ ಮೊತ್ತವನ್ನು ಕಡಿಮೆ ಮಾಡಿದ್ದಾರೆ. ಹಿಂದಿನ ವರ್ಷ ₹1.40 ಲಕ್ಷ ಕೋಟಿ ಇತ್ತು, ಈಗ ಅದನ್ನು ₹1.05 ಲಕ್ಷ ಕೋಟಿಗೆ ಇಳಿಸಿದ್ದಾರೆ. ಇದರಿಂದ ಗೊಬ್ಬರದ ಬೆಲೆ ಹೆಚ್ಚಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಮಹದೇವಪುರ: 109 ಸೇವಾ ಕಾರ್ಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಶಾಸಕ ಅರವಿಂದ ಲಿಂಬಾವಳಿ ಹುಟ್ಟು ಹಬ್ಬದ ಅಂಗವಾಗಿ ಕ್ಷೇತ್ರದ ವಿವಿಧೆಡೆ 109 ಸೇವಾ ಕಾರ್ಯಗಳು ನಡೆದವು.

ಜ್ಯೋತಿಪುರ ಗ್ರಾಮದ ಜ್ಯೋತಿಲಿಂಗೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಸೇವಾ ಕಾರ್ಯಗಳಿಗೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು.

ವೈಟ್‌ಫೀಲ್ಡ್‌ನ ಇನ್ನರ್ ಸರ್ಕಲ್‌ನಲ್ಲಿ ನೇತ್ರದಾನ ಶಿಬಿರಕ್ಕೆ ಚಾಲನೆ ನೀಡಿದರು. ಹೊಸೂರು ಬಂಡೆಯ ಗೋಶಾಲೆಯ ಗೋವುಗಳಿಗೆ ಮೇವು, ಬೆಲ್ಲ ನೀಡಿದರು. ಗೋಶಾಲೆಗೆ ಶಾಸಕರು ವೈಯಕ್ತಿಕವಾಗಿ ₹5 ಲಕ್ಷ ನೀಡಿದರು. ದೊಡ್ಡಗುಬ್ಬಿ ಗ್ರಾಮದ ಅಕ್ಸೆಪ್ಟ್ ಎಚ್‌ಐವಿ ಸೋಂಕಿತರ ಆಶ್ರಮಕ್ಕೆ ಭೇಟಿ ನೀಡಿ ಸಿಹಿ ಹಂಚಿದರು.

ಚಿಕ್ಕಗುಬ್ಬಿಯಲ್ಲಿರುವ ಎಐಆರ್ ಹ್ಯುಮಾನಿಟೇರಿಯನ್ ಆಶ್ರಮಕ್ಕೆ ಭೇಟಿ ನೀಡಿ ಹಣ್ಣು ಹಂಪಲು ವಿತರಣೆ ಮಾಡಿದರು.

ನೇತ್ರದಾನ ಅಭಿಯಾನದಲ್ಲಿ ನೋಂದಣಿ ಪ್ರಮಾಣ ಪತ್ರಗಳನ್ನು ಶಾಸಕ ಅರವಿಂದ ಲಿಂಬಾವಳಿ ವಿತರಿಸಿದರು. ಬಿಜೆಪಿ ನಗರ ಮಂಡಲ ಅಧ್ಯಕ್ಷ ಮನೋಹರ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ನಟರಾಜ್, ಮುಖಂಡರಾದ ಜಯಚಂದ್ರಾರೆಡ್ಡಿ, ವೆಂಕಟಸ್ವಾಮಿರೆಡ್ಡಿ, ಮಹೇಂದ್ರ ಮೋದಿ, ಗಿರಿರಾಜಗೌಡ , ಎಸ್‌.ವಿ.ವಿಶ್ವನಾಥ್ ರೆಡ್ಡಿ ಇದ್ದರು

ಕ್ಷೇತ್ರದ ಹಲವೆಡೆ ಸ್ವಚ್ಛತಾ ಕಾರ್ಯ, ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳು, ವೃದ್ಧರಿಗೆ ಕಂಬಳಿ, ಬಡ ಮಹಿಳೆಯರಿಗೆ ಸೀರೆ, ನಿರ್ಗತಿಕರಿಗೆ ಹಾಲು, ಹಣ್ಣು ವಿತರಣೆ ಸೇರಿ ಅನೇಕ ಕಾರ್ಯಕ್ರಮಗಳನ್ನು ಬಿಜೆಪಿ ಮುಖಂಡರು ನಡೆಸಿದರು.

ಕದ್ದ ವಾಹನಗಳಲ್ಲಿ ಸುತ್ತಾಡಿ ಸುಲಿಗೆ

ಬೆಂಗಳೂರು: ದ್ವಿಚಕ್ರ ವಾಹನಗಳನ್ನು ಕದ್ದು, ಅದರಲ್ಲೇ ನಗರದಲ್ಲಿ ಸುತ್ತಾಡಿ ಜನರ ಸುಲಿಗೆ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಗೋವಿಂದರಾಜನಗರ ಪೊಲೀಸರು ಬಂಧಿಸಿದ್ದಾರೆ.

‘ಆದರ್ಶ, ವಿಜಯ್ ಹಾಗೂ ಅಶೋಕ ಬಂಧಿತರು. ಅವರಿಂದ ₹ 3 ಲಕ್ಷ ಮೌಲ್ಯದ 6 ದ್ವಿಚಕ್ರ ವಾಹನ ಹಾಗೂ 6 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಠಾಣೆ ವ್ಯಾಪ್ತಿಯಲ್ಲಿ ಜ. 30ರಂದು ಕಾಣಿಸಿಕೊಂಡಿದ್ದ ಆರೋಪಿಗಳು, ಸುಲಿಗೆ ಮಾಡಲು ಸಂಚು ರೂಪಿಸಿದ್ದರು. ರಸ್ತೆಯಲ್ಲಿ ಸಾರ್ವಜನಿಕರು ಬರುವುದನ್ನು ಕಾಯುತ್ತ ನಿರ್ಜನ ಪ್ರದೇಶದಲ್ಲಿ ಅಡಗಿ ಕುಳಿತಿದ್ದರು. ಮಾಹಿತಿ ಬರುತ್ತಿದ್ದಂತೆ ಪೊಲೀಸರ ತಂಡ, ಕಾರ್ಯಾಚರಣೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿದೆ. ಇಬ್ಬರು ಆರೋಪಿಗಳು ಪರಾರಿಯಾಗಿದ್ದಾರೆ’ ಎಂದೂ ತಿಳಿಸಿದರು.

‘ಕದ್ದ ವಾಹನಗಳ ನೋಂದಣಿ ಫಲಕ ಬದಲಿಸುತ್ತಿದ್ದ ಆರೋಪಿಗಳು, ಅದೇ ವಾಹನಗಳಲ್ಲಿ ನಗರದಲ್ಲಿ ಸುತ್ತಾಡುತ್ತಿದ್ದರು. ಒಂಟಿಯಾಗಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ ನಗದು, ಚಿನ್ನಾಭರಣ ಹಾಗೂ ಮೊಬೈಲ್ ಸುಲಿಗೆ ಮಾಡುತ್ತಿದ್ದರು. ಅನ್ನಪೂರ್ಣೇಶ್ವರಿ ನಗರ, ವಿಜಯನಗರ, ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದೂ ಅಧಿಕಾರಿ ಹೇಳಿದರು.

ನಕಲಿ ಕೀ ತಯಾರಿಸಿ ಕಳ್ಳತನ: ಮೆಕ್ಯಾನಿಕ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಕಲಿ ಕೀ ತಯಾರಿಸಿ ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಆರೋಪಿ ಮುರಳಿ ಅಲಿಯಾಸ್ ಪ್ರಾಜೆಕ್ಟ್ ಎಂಬಾತನನ್ನು ಆರ್‌.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

‘ಆರೋಪಿ ಮುರಳಿ, ಗ್ಯಾರೇಜೊಂದರಲ್ಲಿ ಮೆಕ್ಯಾನಿಕ್ ಆಗಿದ್ದ. ಬೆರಳಚ್ಚು ಸುಳಿವಿನಿಂದ ಆತನನ್ನು ಬಂಧಿಸಲಾಗಿದೆ. ₹ 59 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಕ್ಕಳನ್ನು ಶಾಲೆಗೆ ಬಿಡಲು ಪೋಷಕರು ಹೊರ ಹೋಗುತ್ತಿದ್ದ ಮನೆಗಳು, ರಂಗೋಲಿ ಹಾಕಿರದ ಹಾಗೂ ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ ಮನೆಗಳನ್ನು ಆರೋಪಿ ಗುರುತಿಸುತ್ತಿದ್ದ. ನಂತರ ನಕಲಿ ಕೀಗಳನ್ನು ಸಿದ್ಧಪಡಿಸುತ್ತಿದ್ದ. ನಂತರ, ಅಂಥ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದ’ ಎಂದೂ ತಿಳಿಸಿದರು.

‘2009ರಿಂದಲೇ ಅಪರಾಧ ಕೃತ್ಯ ಎಸಗುತ್ತಿರುವ ಆರೋಪಿ, ಇದುವರೆಗೂ 14 ಮನೆಗಳಲ್ಲಿ ಕಳ್ಳತನ ಮಾಡಿದ್ದಾನೆ. ಪ್ರತಿಯೊಂದು ಕಳ್ಳತನವನ್ನೂ ಆರೋಪಿ, ಪ್ರಾಜೆಕ್ಟ್ ರೀತಿಯಲ್ಲಿ ಮಾಡುತ್ತಿದ್ದ. ಹೀಗಾಗಿ, ಆತನಿಗೆ ಪ್ರಾಜೆಕ್ಟ್ ಎಂಬ ಅಡ್ಡ ಹೆಸರಿದೆ’ ಎಂದೂ ಹೇಳಿದರು.

ಆರೋಪಿಯಿಂದ ಜಪ್ತಿ ಮಾಡಲಾದ ಚಿನ್ನಾಭರಣ

ಪೋಷಕರ ಹಿಂಬಾಲಿಸಿ ಸಂಚು: ‘ಮಕ್ಕಳನ್ನು ಶಾಲೆಗೆ ಬಿಡಲು ಕೆಲವರು, ಮನೆಗೆ ಬೀಗ ಹಾಕಿಕೊಂಡು ಹೋಗುತ್ತಿದ್ದರು. ಅವರು ಮನೆಗೆ ವಾಪಸು ಬರಲು ಸಾಕಷ್ಟು ಸಮಯ ಹಿಡಿಯುತ್ತಿತ್ತು. ಅಂಥ ಪೋಷಕರನ್ನು ಹಿಂಬಾಲಿಸಿ ಆರೋಪಿ ಸಂಚು ರೂಪಿಸುತ್ತಿದ್ದ’ ಎಂದೂ ಪೊಲೀಸರು ತಿಳಿಸಿದರು.

‘ಮನೆ ಬಿಡುವ ಸಮಯ, ಶಾಲೆ ತಲುಪುವ ಸಮಯ ಹಾಗೂ ಮನೆಗೆ ವಾಪಸು ಬರುವ ಸಮಯವನ್ನು ಆರೋಪಿ ತಿಳಿದುಕೊಳ್ಳುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನಕಲಿ ಕೀ ಬಳಸಿ ಒಳನುಗ್ಗಿ ಕೃತ್ಯ ಎಸಗುತ್ತಿದ್ದ. ಬಳಿಕ ಗ್ಯಾರೇಜ್‌ಗೆ ಯಥಾಪ್ರಕಾರ ಹೋಗಿ ಮೆಕ್ಯಾನಿಕ್ ಆಗಿ ಕೆಲಸ ಮುಂದುವರಿಸುತ್ತಿದ್ದ’ ಎಂದೂ ಹೇಳಿದರು.

‘2009ರಲ್ಲಿ ನಡೆದಿದ್ದ ಕಳ್ಳತನ ಪ್ರಕರಣವೊಂದರಲ್ಲಿ ಮುರಳಿಯನ್ನು ಹೆಬ್ಬಾಳ ಪೊಲೀಸರು ಬಂಧಿಸಿದ್ದರು. ಬೆರಳಚ್ಚು ಸಂಗ್ರಹಿಸಿದ್ದರು. ಇತ್ತೀಚೆಗೆ ಆರ್‌.ಟಿ.ನಗರ ಠಾಣೆ ವ್ಯಾಪ್ತಿಯಲ್ಲಿ ಕಳ್ಳತನ ಆಗಿತ್ತು. ಸ್ಥಳದಲ್ಲಿ ಸಿಕ್ಕ ಬೆರಳಚ್ಚು ಹೋಲಿಕೆ ಮಾಡಿದಾಗಲೇ ಆರೋಪಿ ಸಿಕ್ಕಿಬಿದ್ದ’ ಎಂದೂ ತಿಳಿಸಿದರು.

ಕದ್ದ ಚಿನ್ನ ಖರೀದಿಸಿದ್ದವನ ಬಂಧನ: ‘ಆರೋಪಿ ಮುರಳಿ, ಕದ್ದ ಚಿನ್ನಾಭರಣವನ್ನು ಮಾರಿದ್ದ. ಅದರಿಂದ ಹಣ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ಈತನಿಂದ ಚಿನ್ನ ಖರೀದಿ ಮಾಡುತ್ತಿದ್ದ ಶಿವರಾಮ್ ಎಂಬಾತನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು

ಶೈಕ್ಷಣಿಕ ಕ್ರಾಂತಿ ಬೇಕಿತ್ತು

ಎರಡು ವರ್ಷಗಳಿಂದ ಕೋವಿಡ್‌ನಿಂದಾಗಿ ದೇಶದ ಶಿಕ್ಷಣ ವ್ಯವಸ್ಥೆಯೇ ಬದಲಾಗಿದೆ. ಇದರಿಂದ ಕೋಟ್ಯಂತರ ಮಕ್ಕಳ ಶಿಕ್ಷಣ ಹಾದಿ ತಪ್ಪಿದೆ. ಈ ಎರಡು ವರ್ಷಗಳಲ್ಲಿ ಶಿಕ್ಷಣ ಪೂರೈಸಿದವರು ಉದ್ಯೋಗ ಪಡೆಯಲಾಗದ ಆತಂಕ ಎದುರಿಸುತ್ತಿದ್ದಾರೆ. ಈ ಬಗ್ಗೆ ಬಜೆಟ್ ಗಮನ ಹರಿಸಿಲ್ಲ.

ದಿಲೀಪ್, ವಿದ್ಯಾರ್ಥಿ

ಅಭಿವೃದ್ಧಿಗೆ ‘ಸಹಕಾರ’

ಸಹಕಾರ ಸಂಘಗಳ ಮೇಲೆ ಪ್ರಸ್ತುತ ಇರುವ ತೆರಿಗೆಯನ್ನು ಇಳಿಕೆ ಮಾಡಿ, ಸಹಕಾರಿ ಸೊಸೈಟಿಗಳಿಗೆ ಏಕರೂಪದ ತೆರಿಗೆ ತಂದಿರುವುದು ಅಭಿನಂದನೀಯ. ಬಜೆಟ್‌ನಲ್ಲಿ ಸಾರಿಗೆ ಸೇವೆಗಳಿಗೆ ನೀಡಿರುವ ಆದ್ಯತೆ ಸ್ವಾಗತಾರ್ಹ. ಮೆಟ್ರೊ ರೈಲು ಜಾಲದ ವಿಸ್ತರಣೆ ಮತ್ತು ನಗರ ಬಸ್ ಸೇವೆಯನ್ನು ಹೆಚ್ಚಿಸುವ ನಿರ್ಧಾರ ಒಳ್ಳೆಯದು. ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಸಾರಿಗೆಯ ಬಲವರ್ಧನೆಗೆ ಆದ್ಯತೆ ನೀಡಿರುವುದು ಶ್ಲಾಘನೀಯ.

ಎಂ.ಆರ್.ವೆಂಕಟೇಶ್
ಶ್ರೀತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ

ಕೊಟ್ಟು ಕಸಿಯುವ ಬಜೆಟ್

ಕೇಂದ್ರದ ಬಜೆಟ್ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯಗಳಿಗೆ ಹೆಚ್ಚೇನೂ ಮಹತ್ವ ನೀಡಿಲ್ಲ. ಹೆಸರಿಗೆ ಸಾವಿರಾರು ಕೋಟಿ ಮೀಸಲಿಟ್ಟಿದ್ದೇವೆ ಎನ್ನುತ್ತಾರೆ. ಆದರೆ, ಅದನ್ನು ಮತ್ತೆ ಬೇರೆ ಕಾರಣ ನೀಡಿ ಕಸಿಯುವ ಹುನ್ನಾರ ನಡೆಯುತ್ತದೆ.

ಲಕ್ಷ್ಮೀನಾರಾಯಣ ನಾಗವಾರ
ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ

ಬೆಂಕಿ ತಗುಲಿದ್ದ ಬಿಎಂಟಿಸಿ ಬಸ್ ಹೊತ್ತಿ ಉರಿಯಿತು

ಬೆಂಕಿ ಅವಘಡ: ಹೊತ್ತಿ ಉರಿದ ಬಿಎಂಟಿಸಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣದಿಂದ ಬನಶಂಕರಿಯತ್ತ ಹೊರಟಿದ್ದ ಬಿಎಂಟಿಸಿ ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದು, ನಡುರಸ್ತೆಯಲ್ಲೇ ಬಸ್ ಹೊತ್ತಿ ಉರಿದಿದೆ. ಮಂಗಳವಾರ ಬೆಳಿಗ್ಗೆ ಈ ಅವಘಡ ಸಂಭವಿಸಿದ್ದು, ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

‘ಬಸ್ಸಿನಲ್ಲಿ 20 ಪ್ರಯಾಣಿಕರಿದ್ದರು. ಜಯನಗರ ಮೆಟ್ರೊ ನಿಲ್ದಾಣದ ಬಳಿ ಬಸ್ಸಿನ ಬ್ಯಾಟರಿ ಭಾಗದಲ್ಲಿ ಬೆಂಕಿ ಕಾಣಿಸಿಕೊಂಡು, ಹೊಗೆ ಬರಲಾರಂಭಿಸಿತ್ತು. ಅದನ್ನು ಗಮನಿಸಿದ್ದ ಚಾಲಕ, ಬಸ್ ನಿಲ್ಲಿಸಿ ಪ್ರಯಾಣಿಕರನ್ನು ಕೆಳಗೆ ಇಳಿಸಿದ್ದರು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದರು.

‘ಬೆಂಕಿ ಕೆನ್ನಾಲಗೆ ಕ್ರಮೇಣ ಹೆಚ್ಚಾಗಿ, ಇಡೀ ಬಸ್ ಧಗ ಧಗ ಉರಿಯುತ್ತಿತ್ತು. ಇದರಿಂದಾಗಿ ರಸ್ತೆಯಲ್ಲಿ ಇತರೆ ವಾಹನಗಳ ಸಂಚಾರವನ್ನು ಕೆಲ ಹೊತ್ತು ನಿರ್ಬಂಧಿಸಲಾಗಿತ್ತು. ಅದೃಷ್ಟವಶಾತ್ ಯಾವುದೇ ಸಾವು–ನೋವು ಸಂಭವಿಸಿಲ್ಲ’ ಎಂದೂ ತಿಳಿಸಿದರು.

ಅಗ್ನಿಶಾಮಕ ಅಧಿಕಾರಿಯೊಬ್ಬರು, ‘ಸ್ಥಳ ಪರಿಶೀಲನೆ ನಡೆಸಿ, ಅವಶೇಷಗಳ ಕೆಲ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಅವುಗಳ ಪರೀಕ್ಷೆಯಿಂದ ಬೆಂಕಿ ಅವಘಡಕ್ಕೆ ಕಾರಣವೇನು ಎಂಬುದು ತಿಳಿಯಲಿದೆ’ ಎಂದರು. ಚಾಮರಾಜಪೇಟೆ ಬಳಿಯ ಮಕ್ಕಳಕೂಟ ಸಮೀಪದಲ್ಲಿ ಇತ್ತೀಚೆಗಷ್ಟೇ ಬಿಎಂಟಿಸಿ ಬಸ್‌ಗೆ ಬೆಂಕಿ ಹೊತ್ತಿಕೊಂಡಿತ್ತು.

9ನೇ ತರಗತಿ ಬಾಲಕಿ ಆತ್ಮಹತ್ಯೆ

ಬೆಂಗಳೂರು: ನಗರದ ಪಶ್ಚಿಮ ವಿಭಾಗ ವ್ಯಾಪ್ತಿಯಲ್ಲಿ 15 ವರ್ಷದ ಬಾಲಕಿಯೊಬ್ಬಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಬಗ್ಗೆ ಪ್ರಕರಣ ದಾಖಲಾಗಿದೆ.

‘ನಗರದ ಶಾಲೆಯೊಂದರಲ್ಲಿ 9ನೇ ತರಗತಿಯಲ್ಲಿ ಬಾಲಕಿ ಓದುತ್ತಿದ್ದಳು. ಪೋಷಕರ ಜೊತೆ ವಾಸವಿದ್ದಳು. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ. ಬಾಲಕಿ ಹೆಸರು ಬಹಿರಂಗಪಡಿಸದಂತೆ ಪೋಷಕರು ಕೋರಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಾಲೆಯ ಆನ್‌ಲೈನ್ ತರಗತಿ ಇರುವುದಾಗಿ ಹೇಳಿದ್ದ ಬಾಲಕಿ, ಮನೆ ಕೊಠಡಿಯೊಳಗೆ ಹೋಗಿದ್ದಳು. ಕೆಲ ಗಂಟೆಗಳ ನಂತರ, ತಿಂಡಿ ತಿನ್ನಲೆಂದು ತಾಯಿ ಕೂಗಿದರೂ ಹೊರಗೆ ಬಂದಿರಲಿಲ್ಲ. ಅನುಮಾನಗೊಂಡ ತಾಯಿ, ಕಿಟಕಿಯಲ್ಲಿ ನೋಡಿದಾಗ ಮೃತದೇಹ ಕಂಡಿತ್ತು’ ಎಂದೂ ತಿಳಿಸಿವೆ.

‘ಸ್ಥಳಕ್ಕೆ ಹೋದ ಹೊಯ್ಸಳ ಸಿಬ್ಬಂದಿ, ಬಾಗಿಲು ತೆರೆದು ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಿದ್ದಾರೆ. ಪೋಷಕರು ನೀಡಿರುವ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದೂ ಹೇಳಿವೆ.

ಉಪನಗರ ರೈಲು: ವಿಮಾನ ನಿಲ್ದಾಣ ಮಾರ್ಗವೇ ಆದ್ಯತೆಯಾಗಲಿ

ರಾಜಧಾನಿ ಒಡಲದನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಂಚಾರ ದಟ್ಟಣೆ ಕಡಿಮೆ ಮಾಡಬಹುದು ಎಂದು ನಿರೀಕ್ಷಿಸಿರುವ ಉಪನಗರ ರೈಲು ಯೋಜನೆ ಕನಸು ಸದ್ಯಕ್ಕೆ ನನಸಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಈ ಯೋಜನೆಗೆ ಕೂಡಲೇ ಕಾಮಗಾರಿ ಆರಂಭಿಸಬೇಕೆಂಬ ಒತ್ತಡ ಹೆಚ್ಚಾಗಿದೆ. ಅದರಲ್ಲೂ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗದ ಕಾರಿಡಾರ್‌ಗೇ ಮೊದಲ ಆದ್ಯತೆ ನೀಡಬೇಕು ಎಂಬ ಕೂಗು ದೊಡ್ಡದಾಗಿದೆ.

2020ರ ಅ. 21ರಂದು ರೈಲ್ವೆ ಮಂಡಳಿಯಿಂದ ಯೋಜನೆಗೆ ಅನುಮೋದನೆ ದೊರೆಯಿತು. ಕಾಮಗಾರಿ ಪೂರ್ಣಗೊಳಿಸಲು 6 ವರ್ಷಗಳ ಕಾಲಮಿತಿ ನಿಗದಿ ಮಾಡಲಾಗಿದೆ. ಈಗಾಗಲೇ 15 ತಿಂಗಳು ಮುಗಿದಿದೆ. ಆದರೂ, ಕಾಮಗಾರಿಗೆ ಶಂಕುಸ್ಥಾಪನೆಯೇ ನೆರವೇರಿಲ್ಲ. ಕೆಎಸ್‌ಆರ್ ರೈಲು ನಿಲ್ದಾಣದಿಂದ ದೇವನಹಳ್ಳಿ ತನಕದ 41.40 ಕಿಲೋ ಮೀಟರ್ ಉದ್ದದ 'ಸಂಪಿಗೆ' ಕಾರಿಡಾರ್ ಅನುಷ್ಠಾನಕ್ಕೆ ಇದ್ದ ಆದ್ಯತೆಯನ್ನು ಈಗ ಕೆ–ರೈಡ್(ಕರ್ನಾಟಕ ರೈಲ್ವೆ ಮೂಲಸೌಕರ್ಯ ಅಭಿವೃದ್ಧಿ ನಿಗಮ) ಬದಲಿಸಿದೆ. ಬೈಯಪ್ಪನಹಳ್ಳಿ–ಚಿಕ್ಕಬಾಣಾವರ ತನಕದ 24 ಕಿಲೋ ಮೀಟರ್ ಉದ್ದದ 'ಮಲ್ಲಿಗೆ' ಕಾರಿಡಾರ್ ಮತ್ತು ಹೀಲಳಿಗೆ–ರಾಜಾನುಕುಂಟೆ ತನಕದ 46.24 ಕಿಲೋ ಮೀಟರ್ ಉದ್ದದ 'ಕನಕ' ಕಾರಿಡಾರ್‌ಗೆ ಮೊದಲ ಆದ್ಯತೆಯನ್ನು ಕೆ–ರೈಡ್ ನೀಡಿದೆ.

ವಿಮಾನ ನಿಲ್ದಾಣದ ಮಾರ್ಗದಲ್ಲಿ ಇರುವ ಸಂಚಾರದ ದಟ್ಟಣೆ ಕೆಲವೇ ತಿಂಗಳಲ್ಲಿ ಮೂರು ಪಟ್ಟು ಹೆಚ್ಚಾಗುವ ಸಾಧ್ಯತೆ ಇದೆ. ಈ ಮಾರ್ಗಕ್ಕೆ ಮೊದಲ ಆದ್ಯತೆ ನೀಡಬೇಕು ಎಂಬುದು ರೈಲ್ವೆ ಹೋರಾಟಗಾರರ ಒತ್ತಾಯ. ಈ ಸಂಬಂಧ ಆನ್‌ಲೈನ್ ಸಹಿ ಸಂಗ್ರಹ ಅಭಿಯಾನವೂ ಆರಂಭವಾಗಿದೆ. ಅದಕ್ಕೆ 3 ಸಾವಿರಕ್ಕೂ ಹೆಚ್ಚು ಮಂದಿ ಸಹಿ ಕೂಡ ಹಾಕಿದ್ದಾರೆ. ಉಪನಗರ ರೈಲು ಯೋಜನೆಯನ್ನು ಬೇಕೆಂದೇ ನಿಧಾನ ಮಾಡಿ ಮೆಟ್ರೊ ರೈಲು ಮಾರ್ಗಕ್ಕೆ ಒತ್ತು ನೀಡಲಾಗುತ್ತಿದೆ ಎಂಬುದು ಹೋರಾಟಗಾರರ ಆರೋಪ. ಈ ಬಗ್ಗೆ 'ಪ್ರಜಾವಾಣಿ' ಜತೆ ಅವರು ಅಭಿಪ್ರಾಯ ಹಂಚಿಕೊಂಡಿದ್ದಾರೆ.

'ಆದ್ಯತೆ ಬದಲಾಗಿದ್ದೇಕೆ'

ಉಪನಗರ ರೈಲು ಯೋಜನೆ ಅನುಷ್ಠಾನ ಸಂದರ್ಭದಲ್ಲಿ ವಿಮಾನ ನಿಲ್ದಾಣ ಮಾರ್ಗಕ್ಕೆ ಮೊದಲ ಆದ್ಯತೆ ನೀಡಲಾಗಿತ್ತು. ಅದು ಸೂಕ್ತವಾದ ನಿರ್ಧಾರ ಕೂಡ. ಈಗ ಆದ್ಯತೆಗಳನ್ನು ಸರ್ಕಾರ ಬದಲಾವಣೆ ಮಾಡಿಕೊಂಡಿದೆ. ಇದರ ಹಿಂದಿನ ಉದ್ದೇಶ ಏನು ಎಂಬುದು ಅರ್ಥವಾಗುತ್ತಿಲ್ಲ. ವಿಮಾನ ನಿಲ್ದಾಣ ಮಾರ್ಗದ ಸಂಚಾರ ಒತ್ತಡ ನಿಭಾಯಿಸಲು ಅನುಕೂಲಕರವಾಗಿರುವ ಉಪನಗರ ರೈಲು ಯೋಜನೆಯನ್ನು ಮೊದಲು ಆರಂಭಿಸಬೇಕು. ಆದರೆ, ಮೆಟ್ರೊ ರೈಲು ಮಾರ್ಗದ ಕಾಮಗಾರಿಗೆ ನೀಡುತ್ತಿರುವ ಆದ್ಯತೆಯನ್ನು ಸರ್ಕಾರ ಉಪನಗರ ರೈಲು ಯೋಜನೆಗೆ ನೀಡುತ್ತಿಲ್ಲ. ಸರ್ಕಾರಕ್ಕೆ ಬೇರೆ ಹಿತಾಸಕ್ತಿ ಇದೆಯೇ ಎಂಬ ಅನುಮಾನ ಮೂಡುತ್ತಿದೆ. ಮುಖ್ಯ ಕಾರ್ಯದರ್ಶಿ ಸೇರಿ ಎಲ್ಲರ ಮೇಲೂ ಒತ್ತಡ ಹಾಕಿದ್ದೇವೆ. ಕೇಂದ್ರ ಮತ್ತು ರಾಜ್ಯದಲ್ಲಿ ಒಂದೇ ಪಕ್ಷದ ಆಡಳಿತ ಇದ್ದರೆ ಅಭಿವೃದ್ಧಿಗೆ ವೇಗ ದೊರಕಲಿದೆ ಎಂಬ ಮಾತೂ ಸುಳ್ಳಾಗಿದೆ. ಸಂಸದರು ಮಾತ್ರವಲ್ಲ, ಶಾಸಕರು ಕೂಡ ಸರ್ಕಾರಗಳ ಮೇಲೆ ಒತ್ತಡ ಹೇರಿ ಉಪನಗರ ರೈಲು ಯೋಜನೆಗೆ ಚಾಲನೆ ಕೊಡಿಸಬೇಕು. ಅದರಲ್ಲೂ ವಿಮಾನ ನಿಲ್ದಾಣ ಮಾರ್ಗಕ್ಕೆ ಆದ್ಯತೆ ನೀಡಬೇಕು.

ಕೃಷ್ಣ ಪ್ರಸಾದ್, ರೈಲ್ವೆ ಹೋರಾಟಗಾರ

'ವಿಮಾನ ನಿಲ್ದಾಣ ಮಾರ್ಗಕ್ಕೆ ಆದ್ಯತೆ ಇರಲಿ'

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ನಗರಕ್ಕೆ ಬರಲು ಇರುವುದು ಸದ್ಯಕ್ಕೆ ರಸ್ತೆ ಮಾರ್ಗ ಮಾತ್ರ. ರೈಲು ಮಾರ್ಗ ಇದ್ದರೂ ಪ್ರಯಾಣಿಕರು ಆಸಕ್ತಿ ತೋರಿಸುತ್ತಿಲ್ಲ. ಪ್ರತಿ 10 ನಿಮಿಷಕ್ಕೊಂದು ರೈಲು ಇದ್ದರೆ ಜನ ಈ ಮಾರ್ಗವನ್ನು ಬಳಸದೇ ಬಿಡುವುದಿಲ್ಲ. ವಿಮಾನ ನಿಲ್ದಾಣದ ಬಳಿ ಸದ್ಯ ಇರುವ ರೈಲು ನಿಲ್ದಾಣ ಸ್ವಲ್ಪ ದೂರದಲ್ಲಿದೆ. ಅಲ್ಲಿಂದ ಮತ್ತೊಂದು ಬಸ್ ಹತ್ತಿ ಹೋಗಬೇಕು ಎಂದಾಗ ಪ್ರಯಾಣಿಕರು ಹಿಂದೇಟು ಹಾಕುತ್ತಾರೆ. ವಿಮಾನ ನಿಲ್ದಾಣದ ಬಳಿಯೇ ರೈಲು ನಿಲ್ದಾಣ ಇದ್ದಿದ್ದರೆ ಜನ ಮನಸು ಮಾಡುತ್ತಿದ್ದರು. ಆದ್ದರಿಂದ ಉಪನಗರ ರೈಲು ಯೋಜನೆಯಲ್ಲಿ ವಿಮಾನ ನಿಲ್ದಾಣ ಮಾರ್ಗಕ್ಕೆ ಮೊದಲ ಆದ್ಯತೆ ನೀಡಬೇಕು.

ಪುನಿತ್, ಉದ್ಯಮಿ

'ಎಲ್ಲ ಮಾರ್ಗವೂ ಮುಖ್ಯವೇ'



ಉಪನಗರ ರೈಲು ಯೋಜನೆ ಬಗ್ಗೆ ಮುಖ್ಯಮಂತ್ರಿ ಅವರ ಜತೆ ಮಾತನಾಡಿದ್ದೇನೆ. ವಿಮಾನ ನಿಲ್ದಾಣದ ಮಾರ್ಗದ ಜೊತೆಗೆ ಉಳಿದ ಮೂರು ಮಾರ್ಗವೂ ಮುಖ್ಯವೇ. ವಿಮಾನ ನಿಲ್ದಾಣದ ಪಕ್ಕದಲ್ಲಿ ರೈಲು ನಿಲ್ದಾಣ ನಿರ್ಮಿಸಿ ಕೆಎಸ್‌ಆರ್ ನಿಲ್ದಾಣದಿಂದ ರೈಲುಗಳನ್ನು ಓಡಿಸುತ್ತಿದ್ದೇವೆ. ಒತ್ತಡ ಹೆಚ್ಚಾದರೆ ಆ ರೈಲುಗಳ ಸಂಖ್ಯೆ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. ಹಾಗೆಂದ ಮಾತ್ರಕ್ಕೆ ಸರ್ಕಾರಕ್ಕೆ ವಿಮಾನ ನಿಲ್ದಾಣ ಮಾರ್ಗ ಆದ್ಯತೆಯಲ್ಲ ಎಂದಲ್ಲ. ಮೆಟ್ರೊ ರೈಲು ಮಾರ್ಗಕ್ಕೆ ಒತ್ತು ನೀಡಲು ಉಪನಗರ ರೈಲು ಯೋಜನೆಯನ್ನು ವಿಳಂಬ ಮಾಡಲಾಗುತ್ತಿದೆ ಎಂಬುದು ತಪ್ಪು ಕಲ್ಪನೆ. ವಿಮಾನ ನಿಲ್ದಾಣ ಮಾತ್ರವಲ್ಲ ಬೆಂಗಳೂರು ಸುತ್ತಮುತ್ತಲ ಎಲ್ಲಾ ನಗರಗಳನ್ನು ಉಪನಗರ ರೈಲುಗಳು ತಲುಪಬೇಕು ಎಂಬುದು ನನ್ನ ಕಲ್ಪನೆ. ಬೆಂಗಳೂರಿಗೆ ಬಂದು ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಹೋಗುವ ವ್ಯವಸ್ಥೆ ಇರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಕಾರ್ಯ ಪ್ರವೃತ್ತವಾಗಿದೆ.

ಪಿ.ಸಿ. ಮೋಹನ್, ಸಂಸದ

'ಮೆಟ್ರೊ ರೈಲಿಗಿಂತ ಉಪನಗರ ರೈಲು ಅನುಕೂಲ'

ವಿಮಾನ ನಿಲ್ದಾಣಕ್ಕೆ ಹೋಗುವ ಪ್ರಯಾಣಿಕರಿಗೆ ಮೆಟ್ರೊ ರೈಲಿಗಿಂತ ಉಪನಗರ ರೈಲುಗಳು ಹೆಚ್ಚು ಅನುಕೂಲ. ಸಿಲ್ಕ್ ಬೋರ್ಡ್, ಹೊರ ವರ್ತುಲ ರಸ್ತೆ, ಕೆ.ಆರ್.ಪುರ, ಹೆಬ್ಬಾಳ ಮೂಲಕ 58 ಕಿಲೋ ಮೀಟರ್ ಮಾರ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ತಲುಪಬೇಕಾಗುತ್ತದೆ. ಗಂಟೆಗೆ 34 ಕಿಲೋ ಮೀಟರ್ ವೇಗದಲ್ಲಿ ಚಲಿಸುವ ಮೆಟ್ರೊ ರೈಲು ವಿಮಾನ ನಿಲ್ದಾಣ ತಲುಪಲು ಕನಿಷ್ಠ 100 ನಿಮಿಷ ಬೇಕಾಗುತ್ತದೆ. ಅಲ್ಲದೇ ಸುತ್ತು ಬಳಸಿ ವಿಮಾನ ನಿಲ್ದಾಣ ತಲುಪಬಹುದಾದ ಆ ಮಾರ್ಗ ನಗರದ ಶೇ 80ರಷ್ಟು ಜನರಿಗೆ ಅನುಕೂಲವಾಗುವುದಿಲ್ಲ. ಕೆ.ಎಸ್.ಆರ್. ರೈಲು ನಿಲ್ದಾಣದಿಂದ ಮಲ್ಲೇಶ್ವರ, ಯಶವಂತಪುರ, ಕೊಡಿಗೇಹಳ್ಳಿ ಮಾರ್ಗದಲ್ಲಿ ವಿಮಾನ ನಿಲ್ದಾಣಕ್ಕೆ ಉಪನಗರ ರೈಲಿನಲ್ಲಿ ಸುಲಭವಾಗಿ ತಲುಪಬಹುದು. ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಸದ್ಯದಲ್ಲೇ ಆರಂಭವಾಗಲಿದೆ. ಈ ಮಾರ್ಗದ ಪ್ರಯಾಣಿಕರ ಸಂಖ್ಯೆ ಮೂರು ಪಟ್ಟು(3 ಲಕ್ಷಕ್ಕೆ) ಹೆಚ್ಚಾಗುವ ಸಾಧ್ಯತೆ ಇದೆ. ಮೆಟ್ರೊ ರೈಲು ಮಾರ್ಗ ಪೂರ್ಣಗೊಳ್ಳಲು ಕನಿಷ್ಠ 6 ವರ್ಷವಾದರೂ ಬೇಕು. ಸಂಚಾರ ದಟ್ಟಣೆ ನಿಭಾಯಿಸಲು ಉಪನಗರ ರೈಲು ಯೋಜನೆಯನ್ನು ಮೊದಲ ಆದ್ಯತೆಯೊಂದಿಗೆ ತ್ವರಿತವಾಗಿ ಅನುಷ್ಠಾನಗೊಳಿಸುವುದೊಂದೇ ದಾರಿ.

ರಾಜಕುಮಾರ್ ದುಗಾರ್, ರೈಲ್ವೆ ಹೋರಾಟಗಾರ

ಟೋಯಿಂಗ್ ಪ್ರತಿಕ್ರಿಯೆಗಳು

'ಬೈಕ್ ಮುಚ್ಚಿಟ್ಟು ಹಣ ಪಡೆದರು'

ಕೆಲ ವರ್ಷಗಳ ಹಿಂದೆ ಕಲಾಸಿಪಾಳ್ಯ ವ್ಯಾಪ್ತಿಯ ಅಂಗಡಿಯೊಂದರ ಬಳಿ ಬೈಕ್ ನಿಲ್ಲಿಸಿದ್ದೆ. ಎರಡೇ ನಿಮಿಷದಲ್ಲಿ ಗಾಡಿ ಟೋಯಿಂಗ್ ಮಾಡಿದ್ದರು. ಈ ವಿಚಾರವನ್ನು ಅಲ್ಲೇ ಇದ್ದವರು ತಿಳಿಸಿದರು. ಠಾಣೆಗೆ ಹೋಗಿ ಬೈಕ್ ಬಗ್ಗೆ ವಿಚಾರಿಸಿದಾಗ,' ಗಾಡಿ ಇನ್ನೂ ಬಂದಿಲ್ಲ..ಕಾಯಿರಿ' ಎಂದರು. ಒಂದು ಗಂಟೆಯ ಬಳಿಕ ಟೋಯಿಂಗ್ ವಾಹನ ಅಲ್ಲಿಗೆ ಬಂತು. ಆದರೆ, ಅದರಲ್ಲಿ ನನ್ನ ಬೈಕ್ ಇರಲಿಲ್ಲ. ಗಾಡಿ ಬಗ್ಗೆ ಕೇಳಿದಾಗ ಉತ್ತರವೇ ಬರಲಿಲ್ಲ. ಟೋಯಿಂಗ್ ಸಿಬ್ಬಂದಿಯೊಬ್ಬ ಹಣ ಕೊಟ್ಟರೆ ಗಾಡಿ ಹುಡುಕಿ ಕೊಡುವುದಾಗಿ ಹೇಳಿದ. ಅಂದರೆ, ಇವರೇ ಕಳ್ಳರಂತೆ ಬೈಕ್ ಮುಚ್ಚಿಟ್ಟು ಹಣಕ್ಕೆ ಬೇಡಿಕೆ ಇಟ್ಟಿದ್ದರು. ಕೊನೆಗೆ ಅವರು ಬಚ್ಚಿಟ್ಟಿದ್ದ ಸ್ಥಳಕ್ಕೆ ಕರೆದೊಯ್ದು, ಗಾಡಿ ಕೊಟ್ಟರು. ಇದರಿಂದ ಅವರೂ ಜೇಬು ತುಂಬಿತು.

ಯಶಸ್ವಿ, ಜ್ಞಾನಭಾರತಿ

'ಕುಂಟುತ್ತಾ ಓಡಿದೆ'

ಜೀವನ್‌ಬಿಮಾನಗರದಲ್ಲಿ ಇತ್ತೀಚೆಗೆ ಮಳಿಗೆಯೊಂದರ ಮುಂದೆ ಬೈಕ್ ನಿಲ್ಲಿಸಿ, ಒಳಗೆ ಹೋಗಿದ್ದೆ. ಮಿಂಚಿನ ವೇಗದಲ್ಲಿ ಟೋಯಿಂಗ್ ವಾಹನ ಬಂತು. ಕ್ಷಣಾರ್ಧದಲ್ಲೇ ಬೈಕ್ ಎತ್ತಿ ವಾಹನದಲ್ಲಿ ಇಟ್ಟರು. ಕಾಲಿನ ಸಮಸ್ಯೆ ಇದ್ದರೂ ಕುಂಟುತ್ತಾ ಟೋಯಿಂಗ್ ವಾಹನದ ಹಿಂದೆ ಓಡಿದೆ. ಆದರೆ, ಅವರಲ್ಲಿ ಕರುಣೆಯೇ ಇರಲಿಲ್ಲ. ವಾಹನ ಬಿಡಿಸಿಕೊಳ್ಳಲು ಲಂಚ ಕೇಳಿದರು. ಆದರೆ, ಪೂರ್ಣ ದಂಡ ಕಟ್ಟಿಯೇ ವಾಹನ ಬಿಡಿಸಿಕೊಂಡೆ.

ಮಂಜುನಾಥ ಸ್ವರೂಪ್, ಹೊಸ ತಿಪ್ಪಸಂದ್ರ

'ಪ್ರಶ್ನಿಸುವ ಅಧಿಕಾರವಿಲ್ಲವೇ?'

ಕಳೆದ ವರ್ಷ ಕೆಲಸದ ನಿಮಿತ್ತ ಇಂದಿರಾ ನಗರದಲ್ಲಿರುವ ಬ್ಯಾಂಕ್‌ಗೆ ತೆರಳಿದ್ದೆ. ಬೈಕ್ ನಿಲುಗಡೆಗೆ ಜಾಗ ಇರಲಿಲ್ಲ. ಕೊನೆಗೆ ಕಾರುಗಳ ನಡುವೆ ನಿಲ್ಲಿಸಿ ಬ್ಯಾಂಕಿಗೆ ಹೋಗಿದ್ದೆ. ಕೇವಲ 10 ನಿಮಿಷದಲ್ಲಿ ವಾಪಸ್ ಆಗುವಷ್ಟರಲ್ಲಿ ಬೈಕ್ ಅಲ್ಲಿರಲಿಲ್ಲ. ನಾನು ಕಳ್ಳರು ಕದ್ದಿರಬಹುದು ಎಂದು ಮೊದಲಿಗೆ ಭಾವಿಸಿದ್ದೆ. ಅಲ್ಲಿದ್ದ ವ್ಯಕ್ತಿಯೊಬ್ಬ ಟೋಯಿಂಗ್ ವಾಹನ ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದ. ಅಲ್ಲಿದ್ದ ಕಾರುಗಳನ್ನು ಟೋಯಿಂಗ್ ಮಾಡದೆ, ಬೈಕ್ ಮಾತ್ರ ಟೋಯಿಂಗ್ ಮಾಡಿದ ಬಗ್ಗೆ ಪೊಲೀಸರನ್ನು ಪ್ರಶ್ನಿಸಿದೆ. 'ನಮ್ಮನ್ನು ಪ್ರಶ್ನಿಸುವ ಅಧಿಕಾರ ನಿನಗಿಲ್ಲ' ಎಂದು ಪೊಲೀಸ್ ಅಧಿಕಾರಿ ಗದರಿ, ಕೊನೆಗೆ ಬೈಕ್ ಬಿಟ್ಟು ಕಳುಹಿಸಿದರು.

ಕೆ.ವಿ.ಗಿರೀಶ್, ಇಂದಿರಾನಗರ

ಟೋಯಿಂಗ್ ಕಿರಿಕಿರಿ: ನೀವೂ ಬರೆಯಿರಿ

ಟೋಯಿಂಗ್ ಹೆಸರಿನಲ್ಲಿ ಸುಲಿಗೆ, ಕಿರಿಕಿರಿಗೆ ಒಳಗಾಗಿದ್ದರೆ ನಿಮ್ಮ ಅಭಿಪ್ರಾಯವನ್ನು ಬರೆದು ಕಳುಹಿಸಿ. ಎಲ್ಲಿ, ಯಾವಾಗ ನಡೆಯಿತು ಎಂಬ ವಿವರ ಇರಲಿ. ಜತೆಗೆ ನಿಮ್ಮದೊಂದು ಫೋಟೋ, ಮೊಬೈಲ್ ನಂಬರ್, ವಿಳಾಸ ಇರುವುದು ಅಗತ್ಯ.
ಗರಿಷ್ಠ ಪದ ಮಿತಿ 100 ಪದಗಳು

ವಾಟ್ಸ್ ಆ್ಯಪ್ ಸಂಖ್ಯೆ 9606038256

ಚಿಕಿತ್ಸೆಗೆ ಮೀಸಲಿರಿಸಲಾದ ಹಾಸಿಗೆಗಳಲ್ಲಿ ಶೇ 94 ರಷ್ಟು ಹಾಸಿಗೆಗಳು ಖಾಲಿ

ಕೋವಿಡ್ ಪ್ರಕರಣಗಳು, ಆಸ್ಪತ್ರೆ ದಾಖಲಾತಿ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳ ಜತೆಗೆ ಆಸ್ಪತ್ರೆ ದಾಖಲಾತಿಯೂ ಇಳಿಕೆ ಕಂಡಿದೆ. ಸದ್ಯ ಲಕ್ಷಕ್ಕೂ ಅಧಿಕ ಸಕ್ರಿಯ ಪ್ರಕರಣಗಳಿದ್ದರೂ 431 ಮಂದಿ ಮಾತ್ರ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾಗಿದ್ದಾರೆ. ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳಲ್ಲಿ ಶೇ 6 ರಷ್ಟು ಹಾಸಿಗೆಗಳು ಮಾತ್ರ ಭರ್ತಿಯಾಗಿವೆ.

ನಗರದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಜನವರಿಯಲ್ಲಿ ಏರಿಕೆಯಾದಾಗ ಕೆಲವರು ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಆಗ ಆಸ್ಪತ್ರೆ ದಾಖಲಾತಿ ಸಾವಿರದ ಗಡಿ ಸಮೀಪಿಸಿತ್ತು. ಆ ಸಂಖ್ಯೆ ಈಗ ಇಳಿಕೆ ಕಾಣುತ್ತಿದೆ. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ 6,963 ಹಾಸಿಗೆಗಳಲ್ಲಿ 6,524 ಹಾಸಿಗೆಗಳು ಖಾಲಿ ಉಳಿದಿವೆ.

ಹಾಸಿಗೆ ಮೀಸಲು: ಕೋವಿಡ್ ಪ್ರಕರಣಗಳ ಸಂಖ್ಯೆ ಜನವರಿ ಮೊದಲ ವಾರದ ಬಳಿಕ ಏರಿಕೆ ಕಂಡಿದ್ದರಿಂದ ಸರ್ಕಾರವು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 75 ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 6 ಸಾವಿರಕ್ಕೂ ಅಧಿಕ ಹಾಸಿಗೆಗಳು ದೊರೆತಿದ್ದವು.

ಕಳೆದ ಏಳು ದಿನಗಳಲ್ಲಿ 362 ಸೋಂಕಿತರು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. ಕೋವಿಡ್ ಪೀಡಿತರಲ್ಲಿ ಬೌರಿಂಗ್ ಆಸ್ಪತ್ರೆಯಲ್ಲಿ 85 ಮಂದಿ, ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನಲ್ಲಿ 62 ಮಂದಿ, ಕಿಮ್ಸ್‌ನಲ್ಲಿ 46 ಮಂದಿ, ಎಂ.ಎಸ್. ರಾಮಯ್ಯ ಆಸ್ಪತ್ರೆಯಲ್ಲಿ 34 ಮಂದಿ, ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 31 ಮಂದಿ, ಎಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆಯಲ್ಲಿ 29 ಮಂದಿ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯಲ್ಲಿ 20 ಮಂದಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಉಳಿದ ಆಸ್ಪತ್ರೆಗಳಲ್ಲಿ ದಾಖಲಾತಿ ಸಂಖ್ಯೆ 20ಕ್ಕಿಂತ ಕಡಿಮೆ ಇದೆ.

'ಕೋವಿಡ್ ಎರಡನೇ ಅಲೆಯಲ್ಲಿ ಸೋಂಕು ಹೆಚ್ಚಿನ ಪ್ರಮಾಣದಲ್ಲಿ ಶ್ವಾಸಕೋಶಕ್ಕೆ ಹಾನಿ ಮಾಡಿತ್ತು. ಇದರಿಂದ ಹೆಚ್ಚಿನವರು ಗಂಭೀರವಾಗಿ ಅಸ್ವಸ್ಥಗೊಂಡು ಆಸ್ಪತ್ರೆಗಳಿಗೆ ದಾಖಲಾಗಿದ್ದರು. ಮೂರನೇ ಅಲೆಯಲ್ಲಿ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾದರೂ ಸೋಂಕಿನ ತೀವ್ರತೆ ಕಡಿಮೆಯಿದೆ. ಹೀಗಾಗಿ, ಆಸ್ಪತ್ರೆ ದಾಖಲಾತಿಯೂ ಕಡಿಮೆಯಿದೆ' ಎಂದು ಬೌರಿಂಗ್ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ರಾಜ್ಯ ಕೋವಿಡ್ ಅಂಕಿ–ಅಂಶ

38,23,833 ▲	ಒಟ್ಟು ಸೋಂಕಿತರು (38,09,467 ನಿನ್ನೆಯ ವಿವರ)
1,97,725 ▼	ಸಕ್ರಿಯ ಪ್ರಕರಣಗಳು
35,87,022 ▲	ಗುಣಮುಖರಾದವರು
39,056 ▲	ಒಟ್ಟು ಸಾವು
ದಿನದ ಏರಿಕೆ	
ಹೊಸ ಪ್ರಕರಣ	14,366 ▼
ಗುಣಮುಖ	60,914 ▲
ಸಾವು	58 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ನಗರದ ಕೋವಿಡ್ ಅಂಕಿ–ಅಂಶ

17,27,575 ▲	ಒಟ್ಟು ಪ್ರಕರಣಗಳು
1,05,125 ▼	ಸಕ್ರಿಯ ಪ್ರಕರಣಗಳು
16,05,847 ▲	ಗುಣಮುಖರಾದವರು
16,602 ▲	ಒಟ್ಟು ಸಾವು
ದಿನದ ಏರಿಕೆ	
ಹೊಸ ಪ್ರಕರಣ	6,685 ▼
ಗುಣಮುಖ	35,589 ▲
ಸಾವು	09 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನೀರಿನ ಸಂಪ್‌ನಲ್ಲಿ ವಿದ್ಯುತ್ ತಗುಲಿ ಕಾರ್ಮಿಕ ಸಾವು

ಬೆಂಗಳೂರು: ನೀರಿನ ಸಂಪ್ ಸ್ವಚ್ಛಗೊಳಿಸುತ್ತಿದ್ದ ವೇಳೆ ವಿದ್ಯುತ್ ತಗುಲಿ ಕಾರ್ಮಿಕ ಮೋಹನ್‌ಕುಮಾರ್ (30) ಎಂಬುವರು ಮೃತಪಟ್ಟಿದ್ದು, ಈ ಸಂಬಂಧ ಕೆ.ಪಿ.ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮೃತ ಮೋಹನ್‌ಕುಮಾರ್, ಟಾರ್ಗೆಟ್ ಮ್ಯಾನ್ ಪವರ್ ಸಲ್ಯೂಷನ್ಸ್ ಕಂಪನಿಯಡಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕೆ.ಪಿ. ಅಗ್ರಹಾರ ಬಳಿಯ ಇಟಿಎ ಅಪಾರ್ಟ್‌ಮೆಂಟ್ ಸಮುಚ್ಚಯದ ನೀರಿನ ಸಂಪ್ ಸ್ವಚ್ಛಗೊಳಿಸಲು ಮೋಹನ್ ಕುಮಾರ್ ಅವರನ್ನು ಕಂಪನಿ ನಿಯೋಜಿಸಿತ್ತು. ಮಂಗಳವಾರ ಕೆಲಸಕ್ಕೆ ಬಂದಿದ್ದ ಅವರು, ನೀರಿನ ಸಂಪಿನಲ್ಲಿ ಇಳಿದು ಸ್ವಚ್ಛಗೊಳಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಅವರಿಗೆ ವಿದ್ಯುತ್ ತಗುಲಿತ್ತು.'

'ಪ್ರಜ್ಞೆ ತಪ್ಪಿ ಬಿದ್ದಿದ್ದ ಮೋಹನ್ ಅವರನ್ನು ಶೇಷಾದ್ರಿಪುರದ ಆಸ್ಪತ್ರೆಯೊಂದಕ್ಕೆ ಕರೆದೊಯ್ಯಲಾಗಿತ್ತು. ಪರೀಕ್ಷಿಸಿದ್ದ ವೈದ್ಯರು, ಅವರು ಮೃತಪಟ್ಟಿರುವುದಾಗಿ ಹೇಳಿದರು' ಎಂದರು.

'ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಮೋಹನ್ ಸಾವಿನ ಬಗ್ಗೆ ಕುಟುಂಬದವರಿಂದ ದೂರು ಪಡೆಯಲಾಗಿದೆ. 'ಟಾರ್ಗೆಟ್ ಮ್ಯಾನ್ ಪವರ್ ಸಲ್ಯೂಷನ್ಸ್' ಕಂಪನಿ ವ್ಯವಸ್ಥಾಪಕ ಶ್ರೀನಿವಾಸ್, ಮೇಲ್ವಿಚಾರಕ ಬಾಬುರೆಡ್ಡಿ, ಅಪಾರ್ಟ್‌ಮೆಂಟ್‌ನ ನಜೀಬ್ ಹಾಗೂ ನಮ್ರತಾ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದೂ ಹೇಳಿದರು.

ರಾಮ್‌ಕುಮಾರ್ ರಾಮನಾಥನ್– ಪಿಟಿಐ ಚಿತ್ರ

ಪ್ರಜ್ಞೇಶ್ ಗುಣೇಶ್ವರನ್– ಪಿಟಿಐ ಚಿತ್ರ

ರಾಮ್‌ಕುಮಾರ್, ಪ್ರಜ್ಞೇಶ್‌ಗೆ ನೇರ ಅರ್ಹತೆ

ಬೆಂಗಳೂರಿನಲ್ಲಿ ಫೆಬ್ರುವರಿ 6ರಿಂದ ಎಟಿಪಿ ಚಾಲೆಂಜರ್ಸ್ ಟೆನಿಸ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ರಾಮ್‌ಕುಮಾರ್ ರಾಮನಾಥನ್ ಮತ್ತು ಪ್ರಜ್ಞೇಶ್ ಗುಣೇಶ್ವರನ್ ಅವರು ಬೆಂಗಳೂರು ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಗೆ ನೇರ ಪ್ರವೇಶ ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು (ಕೆಎಸ್‌ಎಲ್‌ಟಿಎ) ಉದ್ಯಾನ ನಗರಿಯಲ್ಲಿ ಫೆಬ್ರುವರಿ 6ರಿಂದ 20ರವರೆಗೆ ಎರಡು ಲೆಗ್‌ಗಳಲ್ಲಿ ಟೂರ್ನಿಯನ್ನು ಆಯೋಜಿಸುತ್ತಿದೆ. ಅಂದಾಜು ಒಟ್ಟು ₹ 80 ಲಕ್ಷ ಬಹುಮಾನದ ಮೊತ್ತದ ಟೂರ್ನಿ ಇದಾಗಿದೆ.

ವಿಶ್ವ ಕ್ರಮಾಂಕದಲ್ಲಿ 182ನೇ ಸ್ಥಾನದಲ್ಲಿರುವ ರಾಮ್‌ಕುಮಾರ್ ಮತ್ತು 2018ರ ಚಾಂಪಿಯನ್ ಪ್ರಜ್ಞೇಶ್ ಗುಣೇಶ್ವರನ್ ನೇರ ಅರ್ಹತೆ ಗಳಿಸಿದ್ದಾರೆ. 2017ರ ಚಾಂಪಿಯನ್ ಸುಮಿತ್ ನಗಾಲ್ ಅವರು ಗಾಯದ ಕಾರಣ ಈ ಬಾರಿ ಟೂರ್ನಿಗೆ ಲಭ್ಯರಿಲ್ಲ.

ಒಟ್ಟು 21 ಮಂದಿಗೆ ನೇರ ಪ್ರವೇಶ ಸಿಕ್ಕಿದೆ. ಮೂರು ಮಂದಿ ವೈಲ್ಡ್ ಕಾರ್ಡ್, ಆರು ಮಂದಿ ಕ್ವಾಲಿಫೈಯರ್ಸ್‌ಗಳಿಂದ ಮುಖ್ಯ ಸುತ್ತಿಗೆ ಆಯ್ಕೆಯಾಗಿದ್ದಾರೆ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರ 100ರ ಸ್ಥಾನದಲ್ಲಿರುವ ಜೆಕ್ ಗಣರಾಜ್ಯದ ಜಿರಿ ವೆಸ್ಲಿ ಮತ್ತು ಇಟಲಿಯ ಸ್ಟೆಫಾನೊ ಟ್ರವಾಗ್ಲಿಯಾ ಟೂರ್ನಿಯ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಈ ಕುರಿತು ಮಾತನಾಡಿರುವ ಕೆಎಸ್‌ಎಲ್‌ಟಿಎ ಅಧ್ಯಕ್ಷ, ರಾಜ್ಯ ಕಂದಾಯ ಸಚಿವ ಆರ್.ಅಶೋಕ ಅವರು 'ಪ್ರತಿಷ್ಠಿತ ಟೂರ್ನಿಯಲ್ಲಿ 20ಕ್ಕೂ ಹೆಚ್ಚು ದೇಶಗಳ ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ. ಟೂರ್ನಿಯನ್ನು 2017ರಿಂದಲೂ ಆಯೋಜಿಸಲಾಗುತ್ತಿದೆ. ಕೋವಿಡ್ ಕಾರಣದಿಂದ ಹೋದ ವರ್ಷ ನಡೆಸಿರಲಿಲ್ಲ. ಟೂರ್ನಿಯಿಂದ ದೇಶದ ಅದರಲ್ಲೂ ಕರ್ನಾಟಕದ ಆಟಗಾರರಿಗೆ ಹೆಚ್ಚು ಅನುಕೂಲವಾಗಲಿದೆ' ಎಂದು ಹೇಳಿದ್ದಾರೆ.

ಯಶ್ ನಟನೆಯ ಬಹುನಿರೀಕ್ಷಿತ ಕೆ.ಜಿ.ಎಫ್–2 ಸಿನಿಮಾ ಏಪ್ರಿಲ್ 14ರಂದು ತೆರೆ ಕಾಣಲಿದ್ದು, ಈ ಹಿನ್ನೆಲೆಯಲ್ಲಿ ಚಿತ್ರತಂಡವು ಉಡುಪಿ ಜಿಲ್ಲೆಯ ಕೊಲ್ಲೂರಿನ ಮೂಕಾಂಬಿಕೆ ಹಾಗೂ ಆನೆಗುಡ್ಡೆಯ ವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದೆ. ಚಿತ್ರದ ನಿರ್ದೇಶಕ ಪ್ರಶಾಂತ್ ನೀಲ್, ಸಂಗೀತ ನಿರ್ದೇಶಕ ರವಿ ಬಸ್ರೂರು ಇದ್ದರು.

ಹಲ್ಲೆ: ಬಂಧನ

ಬೆಂಗಳೂರು: ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಚಾಕುವಿನಿಂದ ಹಲ್ಲೆ ಮಾಡಿದ್ದ ಆರೋಪದಡಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಹಲ್ಲೆಗೀಡಾಗಿದ್ದ ನಿವಾಸಿಯೊಬ್ಬರು ದೂರು ನೀಡಿದ್ದರು. ಆರೋಪಿಗಳಾದ ಬ್ಯಾಟರಾಯನಪುರದ ಚಂದ್ರು ಹಾಗೂ ಆತನ ಸಹಚರರಾದ ಕಿರಣ್, ಪ್ರಮೋದ್, ಸಂತೋಷ್ ಎಂಬುವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ ಪತ್ನಿ ಜೊತೆ ಕತ್ರಿಗುಪ್ಪೆಯಲ್ಲಿ ನೆಲೆಸಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಪತ್ನಿಗೆ ಆರೋಪಿ ಚಂದ್ರು ಪರಿಚಯವಾಗಿತ್ತು. ನಂತರ, ಅವರಿಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಸಿಟ್ಟಾದ ದೂರುದಾರ, ತಮ್ಮ ಪತ್ನಿ ಜೊತೆ ಮಾತನಾಡದಂತೆ ಚಂದ್ರುಗೆ ಎಚ್ಚರಿಕೆ ನೀಡಿದ್ದರು. ಕೋಪಗೊಂಡ ಆರೋಪಿ, ಸಹಚರರ ಜೊತೆ ಸೇರಿ ಜ. 30ರಂದು ರಾತ್ರಿ ದೂರುದಾರರ ಮನೆಗ ನುಗ್ಗಿದ್ದ. ಚಾಕುವಿನಿಂದ ದೂರುದಾರರಿಗೆ ಇರಿದು, ಹಲ್ಲೆ ಮಾಡಿ ಪರಾರಿಯಾಗಿದ್ದ' ಎಂದೂ ಮೂಲಗಳು ತಿಳಿಸಿವೆ.

'ಗಂಗಾಮತಸ್ಥ: 37 ಪಂಗಡಗಳನ್ನು ಎಸ್‌ಟಿಗೆ ಸೇರಿಸಿ'

ಪ್ರಜಾವಾಣಿ ವಾರ್ತೆ

ಯೋಗೇಶ್

ಬೆಂಗಳೂರು: 'ಗಂಗಾಮತಸ್ಥ ಸಮುದಾಯದ ಎಲ್ಲ 37 ಉಪ ಪಂಗಡಗಳನ್ನೂ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು' ಎಂದು ಗಂಗಾ ಸಂಗಮದ ಅಧ್ಯಕ್ಷ ಡಾ.ಯೋಗೇಶ್ ಒತ್ತಾಯಿಸಿದ್ದಾರೆ.

ಬೆಸ್ತ, ಗಂಗಾಮತ, ಗಂಗಾಕುಲ, ಕಬ್ಬಲಿಗ, ಕೋಲಿ, ಸುಣಗಾರ, ಕಬ್ಬೇರ, ಜಲಗಾರ ಮತ್ತು ಇತ್ಯಾದಿ ಉಪನಾಮಗಳಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕು. ಇದರಿಂದ ಶೈಕ್ಷಣಿಕ, ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ ಪ್ರಾತಿನಿಧ್ಯ ದೊರೆಯಲು ಅನುಕೂಲ ಆಗಲಿದೆ ಎಂದು ಹೇಳಿದ್ದಾರೆ.

ಪ್ರವರ್ಗ 1ರಲ್ಲಿದ್ದ 39 ಪರ್ಯಾಯ ಪದಗಳಲ್ಲಿ ಪರಿವಾರ ಮತ್ತು ತಳವಾರ ಪಂಗಡಗಳನ್ನು ಕೇಂದ್ರ ಸರ್ಕಾರ 2020ರಲ್ಲಿ ಹೊರಡಿಸಿದ್ದ ಆದೇಶದ ಪ್ರಕಾರ ರಾಜ್ಯ ಸರ್ಕಾರವು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿರುವುದು ಸ್ವಾಗತಾರ್ಹ. ಸರ್ಕಾರದ ಈ ಆದೇಶದಿಂದ ಅತ್ಯಂತ ಹಿಂದುಳಿದ ಸಮುದಾಯಗಳ ಲಕ್ಷಾಂತರ ಜನರಿಗೆ ಅನುಕೂಲ ಆಗಲಿದೆ. ಇನ್ನುಳಿದ 37 ಉಪ ಪಂಗಡಗಳಿಗೂ ನ್ಯಾಯ ದೊರಕಿಸಿಕೊಡಬೇಕು ಎಂದು ಮನವಿ ಮಾಡಿದ್ದಾರೆ.

ಮಾನವ ಹಕ್ಕುಗಳ ಸಂಘದ ಪದಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ವಿ.ರವಿ

ಕೋಲಾರ: ಮಾಂಸದ ವಹಿವಾಟಿನ ಫ್ರೆಶ್ ಅಲಿಸಿಯಸ್ ಸೂಪರ್ ಬಜಾರ್ ಪ್ರೈವೇಟ್ ಲಿಮಿಟೆಡ್‌ಗೆ ಸೇರಿದ ಸರಕು ಸಾಗಣೆ ವಾಹನ ಅಡ್ಡಗಟ್ಟಿ ಚಾಲಕನ ಮೇಲೆ ಹಲ್ಲೆ ನಡೆಸಿ ₹48 ಸಾವಿರ ಹಣ ಪಡೆದಿದ್ದ ಪ್ರಕರಣ ಸಂಬಂಧ ಮಾನವ ಹಕ್ಕುಗಳ ಹೋರಾಟಗಾರರ ಸಂಘದ ರಾಜ್ಯ ಯುವ ಘಟಕದ ಅಧ್ಯಕ್ಷ ವಿ.ರವಿ ಎಂಬಾತನನ್ನು ತಾಲ್ಲೂಕಿನ ವೇಮಗಲ್ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಫ್ರೆಶ್ ಅಲಿಸಿಯಸ್ ಸೂಪರ್ ಬಜಾರ್ ಪ್ರೈವೇಟ್ ಲಿಮಿಟೆಡ್‌ನ ಕಂಟೈನರ್ ಚಾಲಕ ಜೂಲಿನ್ ಅವರು ಜ.29ರಂದು ಜಿಲ್ಲೆಯ ಮುಳಬಾಗಿಲಿನ ಪ್ರೊ ಟ್ಯಾಕ್ ಕಾರ್ಖಾನೆಯಿಂದ ವಾಹನದಲ್ಲಿ ಕೋಳಿ ಮಾಂಸ ತುಂಬಿಸಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದರು. ಆರೋಪಿ ರವಿ ಮತ್ತು ಆತನ ಮೂವರು ಸಹಚರರು ಕಾರುಗಳಲ್ಲಿ ಕಂಟೈನರ್ ವಾಹನ ಹಿಂಬಾಲಿಸಿ ಬಂದು ನರಸಾಪುರದ ಬಳಿ ರಾಷ್ಟ್ರೀಯ ಹೆದ್ದಾರಿ 75ರಲ್ಲಿ ಅಡ್ಡಗಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ರವಿ ಮತ್ತು ಸಹಚರರು ಚಾಲಕನಿಗೆ ಬೆದರಿಸಿ ಕಂಟೈನರ್ ವಾಹನವನ್ನು ಹೆದ್ದಾರಿಯಿಂದ ನಿರ್ಜನ ಪ್ರದೇಶಕ್ಕೆ ಚಾಲನೆ ಮಾಡಿಸಿಕೊಂಡು ಹೋಗಿದ್ದರು. ಬಳಿಕ ಬಲವಂತವಾಗಿ ವಾಹನದ ಬಾಗಿಲು ತೆರೆಸಿ ಹವಾ ನಿಯಂತ್ರಣ (ಎ.ಸಿ) ವ್ಯವಸ್ಥೆಯ ಉಪಕರಣ ಸ್ಥಗಿತಗೊಳಿಸಿದ್ದರು. ನಂತರ ವಾಹನದಲ್ಲಿನ ತಾಜಾ ಮಾಂಸದ ಕ್ರೇಟ್‌ಗಳಿಗೆ ಸತ್ತ ನೊಣಗಳನ್ನು ಹಾಕಿ ವಿಡಿಯೊ ಚಿತ್ರೀಕರಿಸಿಕೊಂಡಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿಗಳು ನೊಣ ಮುತ್ತಿಕೊಂಡಿರುವ ಮಾಂಸ ಹಾಳಾಗಿರುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ಹಾಕಿ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರ ಮಾಡಿಸಿ ಕಂಪನಿ ಹೆಸರು ಹಾಳು ಮಾಡುವುದಾಗಿ ಚಾಲಕನಿಗೆ ಬೆದರಿಸಿದ್ದರು. ಅಲ್ಲದೇ, ಚಾಲಕನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದರು. ಈ ಸಂಗತಿ ತಿಳಿದು ಸ್ಥಳಕ್ಕೆ ಬಂದ ಫ್ರೆಶ್ ಅಲಿಸಿಯಸ್ ಸೂಪರ್ ಬಜಾರ್ ಪ್ರೈವೇಟ್ ಲಿಮಿಟೆಡ್‌ನ ನೌಕರರಾದ ರಂಜಿತ್ ಮತ್ತು ಚೇತನ್ ಅವರನ್ನು ಬೆದರಿಸಿ ₹ 48 ಸಾವಿರ ವಸೂಲಿ ಮಾಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರೊ ಕಬಡ್ಡಿ ಲೀಗ್ ಟೂರ್ನಿ: ಪವನ್, ಭರತ್ ಪರಾಕ್ರಮ

ಬೆಂಗಳೂರು ಬುಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತೊಮ್ಮೆ ತಮ್ಮ ಚುರುಕಿನ ದಾಳಿಯ ಮೂಲಕ ಗಮನ ಸೆಳೆದ ನಾಯಕ ಪವನ್ ಶೆರಾವತ್ ಮತ್ತು ಭರತ್ ಬೆಂಗಳೂರು ಬುಲ್ಸ್ ತಂಡಕ್ಕೆ ಜಯದ ಕಾಣಿಕೆ ನೀಡಿದರು.

ವೈಟ್‌ಫೀಲ್ಡ್‌ನಲ್ಲಿರುವ ಗ್ರ್ಯಾಂಡ್ ಶೆರಟಾನ್ ಹೋಟೆಲ್‌ನಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 31–26 ರಿಂದ ಯುಪಿ ಯೋಧಾ ವಿರುದ್ಧ ಜಯಿಸಿತು.

ಪವನ್ ಶೆರಾವತ್ (9) ಮತ್ತು ಭರತ್ (6) ರೇಡಿಂಗ್‌ನಲ್ಲಿ ಮಿಂಚಿದರು. ಅಮನ್ (7) ರಕ್ಷಣಾ ವಿಭಾಗದಲ್ಲಿ ಅಮೋಘ ಸಾಧನೆ ಮೆರೆದರು. ಯೋಧಾ ತಂಡದ ನಿತೀಶ್ ಕುಮಾರ್ ಮತ್ತು ಶ್ರೀಕಾಂತ್ ಜಾಧವ್ ತಲಾ ಆರು ಅಂಕ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 34–25ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ಜಯಗಳಿಸಿತು. ಗುಜರಾತ್ ತಂಡದ ಅಜಯ್ ಕುಮಾರ್ (9), ಪ್ರದೀಪ್ ಕುಮಾರ್ (7) ರೇಡಿಂಗ್‌ನಲ್ಲಿ ಮಿಂಚಿದರು. ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ ಒಂಬತ್ತು ಅಂಕಗಳನ್ನು ಗಳಿಸಿದರು.

ಬುಧವಾರ ಯುಪಿ ಯೋಧಾ–ಪಟ್ನಾ ಪೈರೇಟ್ಸ್, ಪುಣೇರಿ ಪಲ್ಟನ್–ಯು ಮುಂಬಾ ಸೆಣಸಲಿವೆ.

ಬೆಂಗಳೂರು ಬುಲ್ಸ್ ತಂಡದ ಪವನ್ ಶೆರಾವತ್ ರೇಡಿಂಗ್

ಬೆಂಗಳೂರು ಎಫ್‌ಸಿಗೆ ಯಾಯಾ ಬನಾನ

ಬೆಂಗಳೂರು: ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫ್ರಾಂಚೈಸ್ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಮಂಗಳವಾರ ಕ್ಯಾಮರೂನ್ ದೇಶದ ಡಿಫೆಂಡರ್ ಯಾಯಾ ಬನಾನ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ.

ಐಎಸ್‌ಎಲ್‌ನ ಈ ಆವೃತ್ತಿ ಮುಗಿಯುವವರೆಗೆ ಅವರು ತಂಡದಲ್ಲಿರುತ್ತಾರೆ ಎಂದು ಫ್ರಾಂಚೈಸ್ ತಿಳಿಸಿದೆ.

30 ವರ್ಷದ ಯಾಯಾ ಇತ್ತೀಚೆಗೆ ಜೋರ್ಡಾನ್ ಪ್ರೊ ಲೀಗ್‌ನಲ್ಲಿ ಆಡಿದ್ದರು. ಗಬಾನ್‌ನ ರೊಂದು ಮೊಸಾವು ಕಿಂಗ್ ಗಾಯಗೊಂಡು ಬೆಂಗಳೂರು ಎಫ್‌ಸಿಯಿಂದ ಹೊರಗುಳಿದಿದ್ದು, ಅವರ ಸ್ಥಾನದಲ್ಲಿ ಯಾಯಾ ಆಡಲಿದ್ದಾರೆ.

ಯಾಯಾ ಸೇರ್ಪಡೆ ಕುರಿತು ಮಾತನಾಡಿರುವ ಬಿಎಫ್‌ಸಿ ಕೋಚ್ ಮಾರ್ಕೊ ಪೆಜೌಲಿ 'ಕೋವಿಡ್ ಕಾರಣದಿಂದ ಹಲವು ಆಟಗಾರರು ಅಲಭ್ಯರಾಗಿದ್ದಾರೆ. ಹೀಗಾಗಿ ಯಾಯಾ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ' ಎಂದಿದ್ದಾರೆ.ಸದ್ಯ ಐಎಸ್‌ಎಲ್ ಟೂರ್ನಿಯ ಪಾಯಿಂಟ್ಸ್ ಪಟ್ಟಿಯಲ್ಲಿ ಬಿಎಫ್‌ಸಿ 4ನೇ ಸ್ಥಾನದಲ್ಲಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ನಿರ್ದೇಶಕರ ಕಛೇರಿ, ಬಹುಮಹಡಿಗಳ ಕಟ್ಟಡ, 1ನೇ ಮಹಡಿ, ಬೆಂಗಳೂರು.
ಸಂಖ್ಯೆ: ಮಮಅಇ/ಪತ್ರಿಕಾ ಪ್ರಕಟಣೆ/2021-22 ದಿನಾಂಕ: 01-02-2022

ಅಧಿಸೂಚನೆ

ಭಾರತ ಸರ್ಕಾರವು ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ಮಕ್ಕಳ ಹಕ್ಕುಗಳ ಉಲ್ಲಂಘನೆ ಅಥವಾ ಮಕ್ಕಳ ವಿರುದ್ಧ ಅಪರಾಧಗಳ ತ್ವರಿತ ವಿಲೇವಾರಿಗೆ ಮಕ್ಕಳ ನ್ಯಾಯಾಲಯವನ್ನು ಸ್ಥಾಪಿಸಲು ಮಕ್ಕಳ ಹಕ್ಕುಗಳ ರಕ್ಷಣಾ ಅಧಿನಿಯಮ–2005 ನ್ನು ಜಾರಿಗೆ ತಂದಿದ್ದು, ಪ್ರಕರಣ 17(1)ರಂತೆ ದಿನಾಂಕ: 27–09–2007 ರ ಸರ್ಕಾರಿ ಆದೇಶದನ್ವಯ ಮಕ್ಕಳ ಹಕ್ಕುಗಳ ರಕ್ಷಣೆಯ ಆಯೋಗವನ್ನು ಕರ್ನಾಟಕ ಸರ್ಕಾರವು ಸ್ಥಾಪಿಸಿದ್ದು, ಸದರಿ ಆಯೋಗಕ್ಕೆ ಅಧ್ಯಕ್ಷರನ್ನು ರಾಜ್ಯ ಸರ್ಕಾರವು ನೇಮಿಸಬೇಕಾಗಿರುತ್ತದೆ. ಅಧ್ಯಕ್ಷರ ಅವಧಿಯು 3 ವರ್ಷಗಳಾಗಿದ್ದು, ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸುವವರ ವಯೋಮಿತಿ 62 ವರ್ಷದೊಳಗಿರಬೇಕು.

ಮಕ್ಕಳ ಹಕ್ಕುಗಳು, ರಕ್ಷಣೆ ಮತ್ತು ಮಕ್ಕಳ ಹಕ್ಕುಗಳನ್ನು ಪ್ರತಿಪಾದಿಸುವಲ್ಲಿ (Advocacy) ಈ ಕ್ಷೇತ್ರಗಳಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರಬೇಕು.

ಆಸಕ್ತರು ನಿಗದಿತ ನಮೂನೆಯನ್ನು ಭರ್ತಿ ಮಾಡಿ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಪತ್ರಿಕಾ ಪ್ರಕಟಣೆ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ (**ದಿನಾಂಕ: 03–03–2022ರಂದು ಸಂಜೆ 5.00 ಗಂಟೆಯೊಳಗೆ**) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಕಛೇರಿಗೆ ಸಲ್ಲಿಸಬಹುದಾಗಿರುತ್ತದೆ. (ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿ ಆಯೋಗದ ವೆಬ್‌ಸೈಟ್: **http://www.kscpcr.karnataka.gov.in** ಹಾಗೂ ನಿರ್ದೇಶನಾಲಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ವೆಬ್‌ಸೈಟ್: **http://www.dwcd.karnataka.gov.in** ನಲ್ಲಿ ಲಭ್ಯವಿದೆ). ಅರ್ಜಿಯನ್ನು ಸಲ್ಲಿಸಬೇಕಾದ ವಿಳಾಸ ಮತ್ತು ದೂರವಾಣಿ ಸಂಖ್ಯೆ: **ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, 4ನೇ ಮಹಡಿ, ಕೃಷಿ ಭವನ, ಕಿತ್ತೂರು ರಾಣಿ ಚೆನ್ನಮ್ಮ ವೃತ್ತ (ಹಡ್ಸನ್ ವೃತ್ತ), ಬೆಂಗಳೂರು – 560002. ದೂರವಾಣಿ: 080–22115290/92.**

ಸಹಿ/– ನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು.
ವಾಸಾಸಂಇ/ಬೆಂ.ನ/ಅಡ್ವರ್ಟೋರ್/3146/2021–22

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶಿವಮೊಗ್ಗ ಜಿಲ್ಲೆಗೆ ಏ. 24ಕ್ಕೆ ಮೋದಿ ಭೇಟಿ?

ಶಿವಮೊಗ್ಗ: ಅಂದುಕೊಂಡಂತೆ ಎಲ್ಲವೂ ನಡೆದರೆ ಏ.24ರಂದು 'ಪಂಚಾಯತ್ ರಾಜ್ ದಿವಸ' ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶಿವಮೊಗ್ಗ ಜಿಲ್ಲೆಯ ಯಾವುದಾದರೂ ಒಂದು ಗ್ರಾಮ ಪಂಚಾಯಿತಿಯಲ್ಲಿ ಆಚರಿಸಲಿದ್ದಾರೆ.

ಪ್ರಧಾನಿ ಅವರು ಕರ್ನಾಟಕದಲ್ಲಿ ಪಂಚಾಯತ್ ರಾಜ್ ದಿವಸ ಆಚರಿಸಲು ಇಚ್ಛಿಸಿದರೆ ಜಿಲ್ಲೆಯ ಯಾವ ಗ್ರಾಮ ಪಂಚಾಯಿತಿ ಆಯ್ಕೆ ಮಾಡಿಕೊಳ್ಳಬಹುದು ಎಂಬ ಮಾಹಿತಿ ನೀಡುವಂತೆ ಪ್ರಧಾನಮಂತ್ರಿ ಕಾರ್ಯಾಲಯವು ಜಿಲ್ಲಾಡಳಿತವನ್ನು ಕೋರಿದೆ.

ಕೋರಿಕೆ ಬಂದ ತಕ್ಷಣ ಕಾರ್ಯಪ್ರವೃತ್ತರಾಗಿರುವ ಜಿಲ್ಲಾಡಳಿತವು ಶಿವಮೊಗ್ಗ ಬಳಿಯ ಕೊಮ್ಮನಾಳ್ ಅಥವಾ ಹೊಳಲೂರು ಪಂಚಾಯಿತಿ ಹೆಸರು ಅಂತಿಮಗೊಳಿಸುವ ಕುರಿತು ಚರ್ಚಿಸಿದ್ದಾರೆ. ಕಸ ವಿಲೇವಾರಿ ನಿರ್ವಹಣೆಯಲ್ಲಿ ಹೊಳಲೂರು ಪಂಚಾಯಿತಿ ರಾಷ್ಟ್ರಕ್ಕೆ ಮಾದರಿಯಾಗಿರುವುದೂ ಇದಕ್ಕೆ ಕಾರಣ.

'ಪ್ರಧಾನಮಂತ್ರಿ ಕಚೇರಿ ತೆಗೆದುಕೊಳ್ಳುವ ಅಂತಿಮ ನಿರ್ಧಾರದ ಮೇಲೆ ಜಿಲ್ಲೆಯ ಭೇಟಿ ಖಚಿತವಾಗಲಿದೆ' ಎಂದು ಜಿಲ್ಲಾಧಿಕಾರಿ ಡಾ.ಸೆಲ್ವಮಣಿ ಪ್ರತಿಕ್ರಿಯಿಸಿದರು.

ರಾಜ್ಯಕ್ಕೆ ಬಂಡವಾಳ ರೂಪದಲ್ಲಿ ₹29,000 ಕೋಟಿ

'ನೀರಿನ ಪಾಲು ನಿರ್ಧಾರದ ಬಳಿಕ ನದಿ ಜೋಡಣೆಗೆ ಒಪ್ಪಿಗೆ'

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಬೆಂಗಳೂರು: 'ಬಜೆಟ್‌ನಲ್ಲಿ ಕಾವೇರಿ, ಕೃಷ್ಣಾ ಮತ್ತು ಪೆನ್ನಾರ್ ನದಿ ಜೋಡಣೆ ಪ್ರಸ್ತಾಪಿಸಿದೆ. ಇದು ಸ್ವಾಗತಾರ್ಹ. ಯೋಜನೆಯಲ್ಲಿ ರಾಜ್ಯದ ನೀರಿನ ಪಾಲು ನಿರ್ಧಾರ ಆದ ಬಳಿಕವೇ ಇದಕ್ಕೆ ಒಪ್ಪಿಗೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಯುಪಿಎ ಅವಧಿಯಲ್ಲಿ ರಾಜ್ಯಕ್ಕೆ ಕಡಿಮೆ ನೀರು ಹಂಚಿಕೆ ಮಾಡಲಾಗಿತ್ತು. ಈಗ ಕೇಂದ್ರ ಸರ್ಕಾರ ಹೊಂದಾಣಿ ಸಮಗ್ರ ಯೋಜನಾ ವರದಿ (ಡಿಪಿಆರ್) ಮಾಡಲಿದೆ. ಎಲ್ಲ ರಾಜ್ಯಗಳ ಒಪ್ಪಿಗೆ ಸಿಕ್ಕಿದ ನಂತರ ಮುಂದುವರೆಯುವುದಾಗಿ ತಿಳಿಸಿದೆ. ಇದರಲ್ಲಿ ರಾಜ್ಯದ ಪಾಲು ನಿರ್ಧಾರ ಆಗಬೇಕು' ಎಂದು ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದ ಬಂಡವಾಳ ಖಾತೆಗೆ ಹಿಂದೆ ₹26,000 ಕೋಟಿ ಬರುತ್ತಿತ್ತು. ಈ ಬಾರಿ ₹ 3 ಸಾವಿರ ಕೋಟಿ ಅಧಿಕವಾಗಿ ಬರುವ ನಿರೀಕ್ಷೆ ಇದೆ. ರಾಜ್ಯದ ಹೆದ್ದಾರಿ, ರೈಲ್ವೆ, ಮೂಲಸೌಕರ್ಯ ಯೋಜನೆಗಳು, ಮೆಟ್ರೊಗೆ ಹೆಚ್ಚಿನ ಅನುದಾನ ಸಿಗಲಿದೆ. ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳ ಚೇತರಿಕೆಗೆ ₹50 ಸಾವಿರ ಕೋಟಿಯಿಂದ ₹5 ಲಕ್ಷ ಕೋಟಿ ನೀಡಲಾಗುವುದು. ದೇಶದಲ್ಲಿ ಕರ್ನಾಟಕದಲ್ಲೇ ಅತಿ ಹೆಚ್ಚು ಸಣ್ಣ ಕೈಗಾರಿಕೆಗಳಿವೆ. ಇದರ ಪ್ರಯೋಜನ ರಾಜ್ಯದ ಉದ್ಯಮಿಗಳಿಗೆ ಸಿಗಲಿದೆ' ಎಂದರು.

'ಆರ್ಥಿಕ ಹಿಂಜರಿತದ ನಡುವೆಯೂ, ದೇಶದ ಆರ್ಥಿಕತೆಯನ್ನು ತ್ವರಿತಗತಿಯಲ್ಲಿ ಬೆಳವಣಿಗೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಮೂಲಸೌಕರ್ಯಗಳ ಮೇಲೆ ಬಂಡವಾಳ ಹೂಡಿಕೆ ಹೆಚ್ಚಾಗಿದೆ. ಶೇ 9.2 ರಷ್ಟು ಆರ್ಥಿಕ ಬೆಳವಣಿಗೆ ಗುರಿ ಇದೆ. ರಾಷ್ಟ್ರೀಯ ಹೆದ್ದಾರಿ, ರೈಲ್ವೆ, ಡಿಜಿಟಲ್ ಆರ್ಥಿಕತೆ, ಮಲ್ಟಿ ಮಾಡೆಲ್ ಕನೆಕ್ಟಿವಿಟಿ ಸೇರಿ ಹಲವು ರಂಗಗಳಲ್ಲಿ ಬಂಡವಾಳ ಹೂಡಿಕೆ ಆಗಲಿದೆ' ಎಂದು ಬೊಮ್ಮಾಯಿ ಹೇಳಿದರು.

'ದೇಶಾದ್ಯಂತ ನೋಂದಣಿ ವ್ಯವಸ್ಥೆ ಒಂದೇ ಮಾದರಿ ಇರಬೇಕು ಎಂದು ಒನ್ ನೇಷನ್ ಒನ್ ಪ್ರಾಪರ್ಟಿ ಕಾರ್ಯಕ್ರಮ ರೂಪಿಸಲಾಗಿದೆ. ಬಹುತೇಕ ರಾಜ್ಯಗಳಲ್ಲಿ ನೋಂದಣಿ ವ್ಯವಸ್ಥೆಯಲ್ಲಿ ವ್ಯತ್ಯಾಸ ಇವೆ. ಇವುಗಳನ್ನು ನಿವಾರಿಸಲು ಯೋಜನೆ ರೂಪಿಸಲಾಗಿದೆ' ಎಂದರು.

'ಡಿಜಿಟಲೀಕರಣ, ನಗರ ಯೋಜನೆ ತಜ್ಞರ ಸಮಿತಿಗೆ ಒತ್ತು ನೀಡಲಾಗಿದೆ. ನಗರ ಸಾರಿಗೆಗೂ ದೊಡ್ಡ ಪ್ರಮಾಣದ ಅನುದಾನ ಮೀಸಲಿಡಲಾಗಿದೆ. ದೇಶದ ಕೃಷಿಯಲ್ಲಿ ಸ್ವಾವಲಂಬನೆ ದೃಷ್ಟಿಯಿಂದ ಹಲವು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಬೊಮ್ಮಾಯಿ ತಿಳಿಸಿದರು.

ಕುಕ್ಕೆ: ಸೇವೆಗಳು ಆರಂಭ

ಸುಬ್ರಹ್ಮಣ್ಯ: ಕೋವಿಡ್ ಕಾರಣ ವಿಧಿಸಿದ್ದ ನಿರ್ಬಂಧಗಳನ್ನು ಸರ್ಕಾರ ಹಿಂಪಡೆದಿದ್ದು, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಹಿಂದಿನಂತೆ ಎಲ್ಲ ಸೇವೆ–ದರ್ಶನಗಳನ್ನು ಆರಂಭಿಸಲಾಗಿದೆ.

ಸೋಂಕು ಹೆಚ್ಚಳದ ಕಾರಣ ಸೇವೆಗಳನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿತ್ತು. ಸರ್ಕಾರ ಈಗ ಧಾರ್ಮಿಕ ಸ್ಥಳಗಳನ್ನು ತೆರೆಯಲು ಅನುಮತಿ ನೀಡಿದೆ. ಅಂತೆಯೇ, ಸೇವೆಗಳನ್ನು ನೆರವೇರಿಸಲು ಅವಕಾಶ ಮಾಡಲಾಗಿದೆ ಎಂದು ದೇವಳದ ಪ್ರಕಟಣೆ ತಿಳಿಸಿದೆ.

'ಎಂಬಿಬಿಎಸ್ ಪರೀಕ್ಷೆ ಮುಂದೂಡಿ'

ಬೆಂಗಳೂರು: ಎಂಬಿಬಿಎಸ್ ಅಂತಿಮ ವರ್ಷದ ಪರೀಕ್ಷೆಯನ್ನು ಮುಂದೂಡುವಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಅವರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಯವರಿಗೆ ಪತ್ರ ಬರೆದಿದ್ದಾರೆ. ಈ ಬಗ್ಗೆ ಮಂಗಳವಾರ ಟ್ವೀಟ್ ಮಾಡಿದ್ದಾರೆ.

'ಎಂಬಿಬಿಎಸ್ ಅಂತಿಮ ವರ್ಷದ ಪರೀಕ್ಷೆ ಇದೇ 22ರಂದು ನಿಗದಿಯಾಗಿದೆ. ಕೋವಿಡ್‌ನಿಂದ ಪರೀಕ್ಷೆಗೆ ಸಿದ್ಧತೆ ಕೈಗೊಳ್ಳಲು ವಿದ್ಯಾರ್ಥಿಗಳಿಗೆ ಸಮಯ ಸಿಕ್ಕಿಲ್ಲ ಎಂಬ ದೂರುಗಳಿವೆ. ಹೀಗಾಗಿ ಪರೀಕ್ಷೆಗೆ ಪರಿಷ್ಕೃತ ದಿನಾಂಕ ಪ್ರಕಟಿಸುವಂತೆ ಸೂಚಿಸಿದ್ದೇನೆ' ಎಂದೂ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಪರೀಕ್ಷೆ ಮುಂದೂಡಲು ಕೋರಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ತಮಗೆ ಬರೆದಿರುವ ಪತ್ರದ ಬಗ್ಗೆಯೂ ಅವರು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

'ಅಂತಿಮ ವರ್ಷದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಮೇ ತಿಂಗಳಿನಲ್ಲಿ ತರಗತಿ ಪ್ರಾರಂಭಿಸಲಾಗಿದ್ದು, ಜುಲೈ ವರೆಗೂ ಆನ್‌ಲೈನ್‌ನಲ್ಲೇ ಪಾಠ ಮಾಡಲಾಗಿದೆ. ಕೋವಿಡ್ ಮೂರನೇ ಅಲೆ ವೇಳೆ ಹಲವರು ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಹೀಗಾಗಿ ಪರೀಕ್ಷಾ ಸಿದ್ಧತೆಗೆ ಸಮಯವೇ ಸಿಕ್ಕಿಲ್ಲ ಎಂದು ಎಐಡಿಎಸ್‌ಒ ಪತ್ರದಲ್ಲಿ ಉಲ್ಲೇಖಿಸಿ, ಕಾಲಾವಕಾಶ ನೀಡಲು ಮನವಿ ಮಾಡಿದೆ. ಇದನ್ನು ಪರಿಗಣಿಸಿ' ಎಂದು ಪತ್ರದಲ್ಲಿ ಸುಧಾಕರ್ ವಿವರಿಸಿದ್ದಾರೆ.

ಕಾಂಗ್ರೆಸ್: ಅಶೋಕ ಪಟ್ಟಣಗೆ ನೋಟಿಸ್

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಪಕ್ಷದ ಘನತೆಗೆ ಕುಂದುಂಟಾಗುವಂತೆ ಮಾತನಾಡಿರುವುದಕ್ಕೆ ಸಮಜಾಯಿಷಿ ನೀಡಿ' ಎಂದು ಬೆಳಗಾವಿ ರಾಮದುರ್ಗ ಕ್ಷೇತ್ರದ ಮಾಜಿ ಶಾಸಕ ಅಶೋಕ ಪಟ್ಟಣ ಅವರಿಗೆ ಕೆಪಿಸಿಸಿ ಶಿಸ್ತು ಸಮಿತಿ ನೋಟಿಸ್ ನೀಡಿದೆ.

ಸಮಿತಿ ಅಧ್ಯಕ್ಷ ಕೆ. ರಹಮಾನ್ ಖಾನ್, 'ನಿಮ್ಮ ಮಾತನ್ನು ಪಕ್ಷ ನಿರಾಕರಿಸುತ್ತದೆ. ಪಕ್ಷದ ಘನತೆಗೆ ಕುಂದು ತಂದಿದ್ದೀರಿ. ನಿಮ್ಮ ನಡವಳಿಕೆ ಬಗ್ಗೆ ಏಳು ದಿನಗಳಲ್ಲಿ ಸಮಜಾಯಿಷಿ ನೀಡಬೇಕು' ಎಂದು ಸೂಚಿಸಿದ್ದಾರೆ. ಇದಕ್ಕೆ ಅಶೋಕ ಪಟ್ಟಣ, 'ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿದ್ದು ಪಕ್ಷ ವಿರೋಧಿ ಚಟುವಟಿಕೆ ಮಾಡಿಲ್ಲ. ಈ ಬಗ್ಗೆ ಉತ್ತರಿಸುತ್ತೇನೆ' ಎಂದು ಹೇಳಿದ್ದಾರೆ.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜ.29ರಂದು ನಡೆಸಿದ ಸುದ್ದಿಗೋಷ್ಠಿಗೆ ಮೊದಲು, ಅಶೋಕ ಆಡಿದ್ದ ಪಿಸುಮಾತು ಮಾಧ್ಯಮಗಳಲ್ಲಿ ವರದಿಯಾಗಿತ್ತು.

ನಿಧನ ವಾರ್ತೆ

ಮಾಜಿ ಸಂಸದ ಎಚ್.ಬಿ. ಪಾಟೀಲ



ಬಾಗಲಕೋಟೆ: ಮಾಜಿ ಸಂಸದ ಎಚ್.ಬಿ.ಪಾಟೀಲ (ಹನುಮಂತಗೌಡ ಭೀಮನಗೌಡ ಪಾಟೀಲ) (84) ನಗರದ ತಮ್ಮ ನಿವಾಸದಲ್ಲಿ ವಯೋಸಹಜ ಅಸೌಖ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಹಾಗೂ ಐವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬಾದಾಮಿ ತಾಲ್ಲೂಕಿನ ರಡ್ಡೇರ ತಿಮ್ಮಾಪುರದಲ್ಲಿ ಬುಧವಾರ ಮಧ್ಯಾಹ್ನ 12 ಗಂಟೆಗೆ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರು 1984ರಲ್ಲಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದರು. ಶಿಕ್ಷಕ ವೃತ್ತಿ ತ್ಯಜಿಸಿ ಬಾದಾಮಿ ತಾಲ್ಲೂಕು ಬೋರ್ಡ್ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ಪ್ರವೇಶಿಸಿದ್ದರು. ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ ಆಡಳಿತ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರ ನೂಲಿನ ಗಿರಣಿಗಳ ಮಹಾಮಂಡಳದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಮಾಜಿ ಶಾಸಕ ಎಂ.ಎಂ. ಸಜ್ಜನ



ವಿಜಯಪುರ: ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಕಾಂಗ್ರೆಸ್ ಹಿರಿಯ ಮುಖಂಡ, ವೀರಶೈವ ವಿದ್ಯಾವರ್ಧಕ ಸಂಘದ ಮಾಜಿ ಅಧ್ಯಕ್ಷರಾಗಿದ್ದ ಎಂ.ಎಂ. ಸಜ್ಜನ (92) ಅವರು ವಯೋಸಹಜ ಕಾಯಿಲೆಯಿಂದ ಮಂಗಳವಾರ ನಿಧನರಾದರು.

ಅವರಿಗೆ ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ. ಮುದ್ದೇಬಿಹಾಳ ಕ್ಷೇತ್ರದ ಶಾಸಕರಾಗಿ 1972-78 ರವರೆಗೆ ಕಾರ್ಯನಿರ್ವಹಿಸಿದ್ದರು. ಮುದ್ದೇಬಿಹಾಳ ಪಟ್ಟಣದ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ ಉತ್ತರ ಕನ್ನಡ ಜಿಲ್ಲೆ
ಸಂ: ಕಾ.ನಿ.ಇಂ./ಲೋ.ಇ.ವಿ,ಕಾ/ಪಿ.ಬಿ–4/ಟೆಂಡರ– 26/ 2021–22/4288 ದಿನಾಂಕ: 28 .01.2022

ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವ ಕಾಮಗಾರಿಗಳಿಗಾಗಿ ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕಾರವಾರ ಇವರಿಂದ ಗುತ್ತಿಗೆ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೋಷ್ಟಕದಲ್ಲಿ ಕೊಟ್ಟಿರುವ ಕಾಮಗಾರಿಯ ಗುತ್ತಿಗೆಯನ್ನು ಇ–ಪ್ರೊಕ್ಯೂರಮೆಂಟ್ ಮುಖಾಂತರ ಮಾತ್ರ ಸಲ್ಲಿಸುವದು. ಗುತ್ತಿಗೆಯನ್ನು ವಹಿಸಲು ಅರ್ಹರಾಗಬೇಕಾದಲ್ಲಿ ಗುತ್ತಿಗೆದಾರರು (ಕೆಡಬ್ಲ್ಯೂ–4) ರಲ್ಲಿ ನಿಗದಿಪಡಿಸಿರುವ ಷರತ್ತುಗಳನ್ನು ಗಮನಿಸುವದು

(1) ಗುತ್ತಿಗೆಗೆ ಸಂಬಂಧಿಸಿದ ವಿಚಾರಣೆಗೆ ಕೊನೆಯ ದಿನಾಂಕ: 07.02.2022, 16.30 ಗಂಟೆವರೆಗೆ. (2) ಟೆಂಡರನ್ನು ಸ್ವೀಕರಿಸುವ ಕೊನೆಯ ದಿನಾಂಕ: 08.02.2022, 16.30 ಗಂಟೆವರೆಗೆ. (3) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.02.2022, 17.00 ಗಂಟೆವರೆಗೆ. (4) ಟೆಂಡರ್‌ನ ಆರ್ಥಿಕ ಬಿಡ್ ತೆರೆಯುವ ದಿನಾಂಕ: 11.02.2022, 17.00 ಗಂಟೆವರೆಗೆ.

ಕಾಮಗಾರಿಯ ಹೆಸರು: ಲೆಕ್ಕಶೀರ್ಷಿಕೆ: **H/Ac - 5054 - MDR Improvements (APPENDIX –'E') ವರ್ಕ್ ಇಂಡೆಂಟ್** (1) 147053

(ಕೆಡಬ್ಲೂ–4) ರಲ್ಲಿನ ನಿಬಂಧನೆಗಳನ್ನು ಮುಂದಿನ ದಿನಗಳಲ್ಲಿ e-proc ನಲ್ಲಿ ಸೂಚಿಸಲಾದ ನಿಬಂಧನೆಗಳನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಂದರೆ "eproc.karnataka.gov.in" ನೋಡಬಹುದು. ಹೆಚ್ಚಿನ ಮಾಹಿತಿಗಾಗಿ help desk Bangalore (Phone No. 918025501216 & 918025501227) ಇವರನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ಕಾರವಾರ ವಿಭಾಗ, ಕಾರವಾರ
DIPR/ADK/MCA/741/21-22 dt.31.01.2022

ಕರ್ನಾಟಕ ಸರ್ಕಾರ
ಧಾರ್ಮಿಕದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ
ಶ್ರೀ ಚಾಮುಂಡೇಶ್ವರಿದೇವಸ್ಥಾನ, ಚಾಮುಂಡಿಬೆಟ್ಟ, ಮೈಸೂರು 570 010
ದೂರವಾಣಿ ಸಂ: 0821 –2590027 ಫ್ಯಾಕ್ಸ್ 0821 –2590082
e-mail:- eochamunditemple@gmail.com
ಸಂ: ಎಸ್.ಸಿ.ಟಿ. 5 ಸಿಆರ್. ದಿನಸಿ ಇ ಟೆಂಡರ್/2021–22 ದಿ: 28.01.2022

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಸೂಚಿತ ಅವಧಿಗೆ ಈ ಕೆಳಕಂಡ ಬಾಬ್ತಿಗೆ ಈ ಕಛೇರಿಯಿಂದ ನೀಡುವ ಆದೇಶದ ದಿನಾಂಕದಿಂದ ಮುಂದಿನ 4 ತಿಂಗಳ ಅವಧಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ದಾಖಲೆಯಲ್ಲಿ ತಿಳಿಸಿರುವಂತೆ (Technical qualification criteria)ದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವುದು. ಈ ಕೆಳಕಂಡಂತೆ ನಿಗದಿಪಡಿಸಿದ ಇ.ಎಂ.ಡಿ ಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿಯು ಟೆಂಡರಿನ ನ್ಯಾಯ ಸಮ್ಮತಾ ಮಾನ್ಯತಾ ಅವಧಿಗಿಂತ (Validity period) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು. ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಕ್ರಸಂ.1 ಟೆಂಡರ್ ಹೆಸರು: ಶ್ರೀ ಚಾಮುಂಡೇಶ್ವರಿ ಹಾಗೂ ಸಮೂಹ ದೇವಸ್ಥಾನಗಳಿಗೆ ಲಾಡು ಪ್ರಸಾದ, ನಿತ್ಯ ಅನ್ನದಾಸೋಹ, ಹಾಗೂ ದೇವಸ್ಥಾನದ ದಿನ ನಿತ್ಯದ ಬಳಕೆಗೆ ಬೇಕಾದ ದಿನಸಿ ಸಾಮಾಗ್ರಿಗಳ ಸರಬರಾಜು. **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 50.00 ಲಕ್ಷ. **ಇಎಂಡಿ ಮೊತ್ತ (ರೂ.ಗಳಲ್ಲಿ):** 1,00,000–00 ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ: **1)** ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿ: 31.01.2022ರ ಸಂಜೆ 5.00 ಗಂಟೆಯ ನಂತರ. **2)** ಟೆಂಡರ್‌ಡೌನ್ ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ ದಿ: 14.02.2022ರ ಸಂಜೆ 5.00 ಗಂಟೆ ವರೆಗೆ. **3)** ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿ: 17.02.2022 ಸಂಜೆ 5.00 ನಂತರ. **4)** ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿ: 19.02.2022 ಸಂಜೆ: 05.00 ಗಂಟೆಯ ನಂತರ.

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಚಾಮುಂಡಿಬೆಟ್ಟ
DIPR/DDMYS/MCA/896/2021-22

ಕರ್ನಾಟಕ ಸರ್ಕಾರ
ಪಟ್ಟಣ ಪಂಚಾಯತ್ ಕಾರ್ಯಾಲಯ ತಾವರಗೇರಾ.
ಸಂ:ಪ.ಪಂ.ತಾ/15ನೇ ಹ.ಕಾ&ಎಸ್‌ಎಫ್‌ಸಿ 24.10%/2021–22 ದಿನಾಂಕ:– 27–01–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ತಾವರಗೇರಾ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ್ ತಾವರಗೇರಾ ಇವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅಧಿನಿಯಮ–2000ರನ್ವಯ ಮತ್ತು ಕೆ.ಡಬ್ಲ್ಯೂ. 1&3ರ ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **http://www.eproc.karnataka.gov.in** ನಲ್ಲಿ ಪಿ.ಡಬ್ಲ್ಯೂಡಿ.ಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಫಾರಂ ಬೆಲೆಯನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

ಷರತ್ತುಗಳು: (1) ಪ್ರೀಬಿಡ್ ಮೀಟಿಂಗ್ ದಿನಾಂಕ:– **05–02–2022 ಸಾಯಂಕಾಲ 04.30 ಗಂಟೆಯವರೆಗೆ** (2) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ:– **08–02–2022 ಸಂಜೆ 4.30 ಗಂಟೆಯವರೆಗೆ** (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ:– **10–02–2022 ಸಾಯಂಕಾಲ 04.30 ಗಂಟೆಗೆ** ತಾಂತ್ರಿಕ ಬಿಡ್ ತೆರೆಯಲಾಗುವುದು. (4) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗಸೂಚಿಗಳಂತೆ ದಿನಾಂಕ:– **15–02–2022 ಸಾಯಂಕಾಲ 04.30 ಗಂಟೆಗೆ** ಆರ್ಥಿಕ ಬಿಡ್ ತೆರೆಯಲಾಗುವುದು. (5) ಕಾಮಗಾರಿ ನಿರ್ವಹಿಸಿದ ಪ್ರಮಾಣ ಪತ್ರವನ್ನು (Workdone Certificate) ಲಗತ್ತಿಸತಕ್ಕದ್ದು. ಕೆ.ಡ್ಲ್ಯೂ 1&3ರ ಕಾಮಗಾರಿಗಳಿಗೆ ತಕ್ಕಂತೆ ಅದೇ ತರಹದ (Similar Nature of Work) ಕಾಮಗಾರಿಗಳು ನಿರ್ವಹಿಸಿದ ಪ್ರಮಾಣ ಪತ್ರವನ್ನು (Workdone Certificate) ಲಗತ್ತಿಸತಕ್ಕದ್ದು. (6) ಪ್ಯಾಕೇಜ್‌ಗಳ ವಿವರಗಳು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ಕಾರ್ಯಾಲಯದ ಕಛೇರಿ ವೇಳೆಯಲ್ಲಿ ತಾಂತ್ರಿಕ ವಿಭಾಗವನ್ನು ಅಥವಾ **www.tavarageratown.mrc.gov.in** ನಲ್ಲಿ ಪಡೆಯಬಹುದಾಗಿದೆ. (7) ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿಗದಿಗೊಳಿಸಿರುವ ಕಾಲಾವಧಿ (ಮಳೆಗಾಲ ಸೇರಿ) : ಕೆ.ಡಬ್ಲೂ 3ರ ಕಾಮಗಾರಿಗಳಿಗೆ 06 ತಿಂಗಳು & ಕೆ.ಡಬ್ಲೂ 1ರ ಕಾಮಗಾರಿಗಳಿಗೆ 03 ತಿಂಗಳು & ಪೂರೈಕೆಯನ್ನು ಪೂರೈಸಲು 01 ತಿಂಗಳು (8) ಪಟ್ಟಣ ಪಂಚಾಯತ್ ಕಾರ್ಯಾಲಯ, ತಾವರಗೇರಾ ಟೆಂಡರ್‌ನ್ನು ತಿರಸ್ಕರಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತದೆ. (9) ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://www.eproc.karnataka.gov.in)** ಮೂಲಕ ಪಡೆಯಬಹುದಾಗಿದೆ. (10) As per Govt Order No. PWD65RDF2017, D:11-10-2018 ರನ್ವಯ ಶೇಕಡಾ 12%ರಷ್ಟು ಜಿ.ಎಸ್.ಟಿ. ಗುತ್ತಿಗೆದಾರರಿಗೆ ಪ್ರತ್ಯೇಕವಾಗಿ ಪಾವತಿಸಲಾಗುವುದು.

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್ ತಾವರಗೇರಾ
ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ್ ತಾವರಗೇರಾ ಹಾಗೂ ತಹಶೀಲ್ದಾರ, ತಾವರಗೇರಾ
ವಾ.ಸಾ.ಇ/ಕೊಪ್ಪಳ/513/2021–22/ದೇಶಪಾಂಡೆಪಬ್ಲಿಸಿಟಿ

ಪೌರಾಡಳಿತ ನಿರ್ದೇಶನಾಲಯ
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ|| ಅಂಬೇಡ್ಕರ್ ವೀಧಿ, ಬೆಂಗಳೂರು – 560 001.
ಸಂಖ್ಯೆ: 624028/DMA/EST 1/MISC 40/2021 ದಿನಾಂಕ: 31–01–2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಮುಖ್ಯ ಅಭಿಯಂತರರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರು ಪೌರಾಡಳಿತ ನಿರ್ದೇಶನಾಲಯಕ್ಕೆ **ಗ್ರೂಪ್–ಡಿ/ದಲಾಯತ್ ಮತ್ತು ವಾಹನ ಚಾಲಕರನ್ನು** ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಸಂಬಂಧ ಟೆಂಡರ್ ಆಹ್ವಾನಿಸಿರುತ್ತಾರೆ. (ಇ.ಎಂ.ಡಿ. ಮೊತ್ತ: ರೂ.1,75,000/–) ಆಸಕ್ತಿಯುಳ್ಳ ಏಜೆನ್ಸಿ/ಸಂಸ್ಥೆಗಳು **ದಿನಾಂಕ: 15–02–2022 ರಂದು ಸಂಜೆ 5:30ರ** ಒಳಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ. ಇತರೆ ಮಾಹಿತಿಗಳನ್ನು **ವೆಬ್‌ಸೈಟ್: http://eproc.karnataka.gov.in** ನಿಂದ ಪಡೆಯಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೀಡಲಾಗುವುದು.

ಸಹಿ/–
ಮುಖ್ಯ ಅಭಿಯಂತರರು,
ಪೌರಾಡಳಿತ ನಿರ್ದೇಶನಾಲಯ
ವಾಸಾಸಂಇ/ಯುನಿಕ/ಬೆಂನ/3148/MAA/21–22
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 94/13, 70ನೇ ಅಡ್ಡರಸ್ತೆ, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10
ದೂರವಾಣಿ/ಫ್ಯಾಕ್ಸ್: 080–23155236 । ಇ–ಮೇಲ್: kn-bnu@pmgsy.nic.in/ eeurban2019@gmail.com | ಇ–ಪೋರ್ಟಲ್: http://eproc.karnataka.gov.in
ಸಂಖ್ಯೆ:EE/PD/BNG(U)/Tech/TND/LAb Equpt/2021-22/963-70 ದಿನಾಂಕ: 29.01.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಬೆಂಗಳೂರು ನಗರ ರವರು, ಕರ್ನಾಟಕ ರಾಜ್ಯಪಾಲರ ಪರವಾಗಿ **supply of Laboratory Equipments for PMGSY Quality Control lab** ಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಇಎಂಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೊಸಿಂಗ್ ಬೆಲೆಯನ್ನು ಇ–ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ.

1) ಪೂರ್ವಬಾವಿ ಸಭೆ: **10.02.2022ರ 11:30 ಗಂಟೆಗೆ.** 2) ವಿಚಾರಣೆಯ ಕೊನೆಯ **ದಿನಾಂಕ: 10.02.2022ರ 16:00 ಗಂಟೆಯವರೆಗೆ.** 3) ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ **ದಿನಾಂಕ: 14.02.2022ರ ಸಂಜೆ 16:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 17.02.2022ರ ಬೆಳಿಗ್ಗೆ 11:00 ಗಂಟೆಗೆ.** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ ಹೆಚ್ಚಿನ ಮಾಹಿತಿಗಾಗಿ **http://eproc.karnataka.gov.in**ನ್ನು ಸಂಪರ್ಕಿಸಬಹುದಾಗಿದೆ

ಸಹಿ/–
ಕಾರ್ಯಪಾಲಕ ಅಭಿಯಂತರರು,
ಯೋಜನಾ ವಿಭಾಗ, ಆರ್‌ಡಿಪಿಆರ್ ಇಲಾಖೆ,
ಬೆಂಗಳೂರು ನಗರ
ವಾಸಾಸಂಇ/ಬೆಂ.ನ/ಜಿಎ/3144/2021–22
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ಯೋಜನೆ)
ರಾಜರಾಜೇಶ್ವರಿನಗರ, ಬೆಂಗಳೂರು–98.
ಸಂಖ್ಯೆ: ಕಾಪಾಅ(ಯೋ)/ರಾರಾನ/ಟೆಂಡರ್/16/2021–22 ದಿನಾಂಕ: 01.02.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಯೋಜನೆ) ರಾ.ರಾ. ನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಥವಾ ತತ್ಸಮಾನವಾಗಿ ಸಿಪಿಡಬ್ಲ್ಯೂಡಿ/ಕೆಪಿಡಬ್ಲ್ಯೂಡಿ/ರೈಲ್ವೇಸ್/ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
1.	ರಾಜರಾಜೇಶ್ವರಿನಗರ ವಲಯದ ಯೋಜನೆ ವಿಭಾಗದಡಿ ವಾರ್ಡ್ ಸಂಖ್ಯೆ–72 ಹೇರೋಹಳ್ಳಿಯ ಗೊಲ್ಲರಹಳ್ಳಿಯಲ್ಲಿ ಸಮುದಾಯ ಭವನ ನಿರ್ಮಾಣ ಮಾಡುವುದು (ಬಾಕಿ ಉಳಿಕೆ ಕಾಮಗಾರಿಗಳು)	168.00	2,52,000/–

ಟೆಂಡರ್ ವೇಳಾಪಟ್ಟಿ: (1) ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **04.02.2022**ರಿಂದ. (2) ಟೆಂಡರ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.02.2022**ರ ಸಂಜೆ **4:00** ಗಂಟೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ರಾ.ರಾ ನಗರ ವಲಯದಲ್ಲಿ ದಿನಾಂಕ **11.02.2022**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (4) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15.02.2022**ರ ಸಂಜೆ **4:00** ಗಂಟೆಯವರೆಗೆ. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **16.02.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು **ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರಿಗೆ ತಿಳಿಸಲಾಗುವುದು.** ಟೆಂಡರ್ ತೆರೆಯಲು ನಿರ್ದಿಷ್ಟಪಡಿಸಿದ ದಿನಾಂಕವು ಕಚೇರಿಗೆ ರಜೆ ಎಂದು ಘೋಷಿಸಿದ್ದಲ್ಲಿ ನಿಯೋಜಿತ ಸಮಯ ಮತ್ತು ಸ್ಥಳದಲ್ಲಿ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು.

(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ) ಏಕಲಕೋಟೆ ಪದ್ಧತಿ

ಕ್ರ ಸಂ.	ಕಾಮಗಾರಿಯ ಹೆಸರು/ವರ್ಗೀಕರಣ	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹.ಲಕ್ಷಗಳಲ್ಲಿ)	ಇಎಂಡಿ (₹. ಗಳಲ್ಲಿ)
1.	ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿ ಸಮುದಾಯ ಭವನ ನಿರ್ವಹಣೆ ಮತ್ತು ಸುಧಾರಣೆ ಮಾಡುವುದು. (ಸಾಮಾನ್ಯರಿಗೆ)	5.00	12500.00
2.	ಯಶವಂತಪುರ ಕ್ಷೇತ್ರದಲ್ಲಿ ಸಮುದಾಯ ಭವನ ನಿರ್ವಹಣೆ ಮತ್ತು ಸುಧಾರಣೆ ಮಾಡುವುದು (ಪ.ಜಾತಿ)	5.00	6250.00
3.	ಯಶವಂತಪುರ ಕ್ಷೇತ್ರದಲ್ಲಿ ಶಾಲೆ ಮತ್ತು ಕಾಲೇಜು ಕಟ್ಟಡಗಳಿಗೆ ದುರಸ್ತಿ ಹಾಗೂ ನಿರ್ವಹಣೆ ಮಾಡುವುದು (ಪ.ಪಂಗಡ)	25.00	25000.00
4.	ಯಶವಂತಪುರ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿರ್ವಹಣೆ ಮತ್ತು ದುರಸ್ತಿಗಳನ್ನು ಮಾಡುವುದು. (ಸಾಮಾನ್ಯರಿಗೆ)	50.00	100000.00
5.	ಯಶವಂತಪುರ ಕ್ಷೇತ್ರದಲ್ಲಿ ಬೃ.ಬೆಂ.ಮ.ಪಾಲಿಕೆ ಖಾಲಿ ಜಾಗಗಳಿಗೆ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು ಮತ್ತು ಇತರೆ ಕಾಮಗಾರಿಗಳನ್ನು ಮಾಡುವುದು (2ನೇ ಹಂತ) (ಪ.ಜಾತಿ)	50.00	50000.00
6.	ಯಶವಂತಪುರ ಕ್ಷೇತ್ರದಲ್ಲಿ ಚೈನ್‌ಲಿಂಕ್ ತಂತಿಬೇಲಿ ಒದಗಿಸುವುದು ಮತ್ತು ಇತರೆ ಕಾಮಗಾರಿಗಳನ್ನು ಮಾಡುವುದು (1ನೇ ಹಂತ) (ಸಾಮಾನ್ಯರಿಗೆ)	50.00	100000.00

ಟೆಂಡರ್ ವೇಳಾಪಟ್ಟಿ: (1) ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ದಿನಾಂಕ: **07.02.2022**ರಿಂದ. (2) ಟೆಂಡರ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **09.02.2022**ರ ಸಂಜೆ **4:00** ಗಂಟೆಗೆ. (3) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15.02.2022**ರ ಸಂಜೆ **4:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **16.02.2022**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು **ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ಯೋಜನೆ) ರಾಜರಾಜೇಶ್ವರಿನಗರ ವಲಯ
ಕೋವಿಡ್‌-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರ್ ಟೆಂಡರು ಅಧಿಸೂಚನೆ ಸಂಖ್ಯೆ 06/2021-22 (2ನೇ ಕರೆ) ದಿನಾಂಕ: 27.01.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ ಮೈಸೂರು ಇವರಿಂದ "ಮೈಸೂರಿನಲ್ಲಿ ಯುದ್ಧ ಸ್ಮಾರಕ ಸ್ಥಾಪಿಸುವ ಕಾಮಗಾರಿ" (INDENT NO:144206) (2ನೇ ಕರೆ) ಕಾಮಗಾರಿಗೆ ಲೆಕ್ಕ ಶೀರ್ಷಿಕೆ 8443 ಅಡಿಯಲ್ಲಿ KW-3 ರ ನಿಬಂಧನೆ ಮತ್ತು ಷರತ್ತುಗಳನ್ವಯ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಟೆಂಡರ್‌ನ್ನು (http://eproc.karnataka.gov.in) ಆಹ್ವಾನಿಸಲಾಗಿದ್ದು, ಟೆಂಡರ್‌ನ್ನು ದಿನಾಂಕ: 07.02.2022 ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತ ರೂ. 86.97 ಲಕ್ಷಗಳಾಗಿರುತ್ತದೆ. ಮತ್ತು ಕಾಮಗಾರಿಯ ಇ.ಎಂ.ಡಿ. ಯ ಮೊತ್ತ ರೂ. 1.74 ಲಕ್ಷಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ನಜರ್‌ಬಾದ್, ಮೈಸೂರು.

ಕರಾಸಕೈಅನಿನಿ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನೋಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10. ದೂರವಾಣಿ: 080–23407011–25, ಫ್ಯಾಕ್ಸ್: 91-080-2314 3566, 2338 9070 । ಇ–ಮೇಲ್: kssidcho@karnataka.gov.in / Website: www.kssidc.co.in
ಸಂಖ್ಯೆ:ಸಮನ್ವಯ:ಪ್ರಕಟಣೆ:ಮಳಿಗೆ:ನಿವೇಶನ:ಹಂಚಿಕೆ:ಅವಧಿ ವಿಸ್ತರಣೆ:2022 ದಿನಾಂಕ: 01.02.2022

ನಿಗಮದ ಕೈಗಾರಿಕಾ ವಸಾಹತುಗಳಲ್ಲಿ ಲಭ್ಯವಿರುವ ಮಳಿಗೆ/ನಿವೇಶನ/ಫ್ಲ್ಯಾಟ್/ಗೋದಾಮುಗಳ ಹಂಚಿಕೆಗೆ ಅರ್ಜಿ ಸಲ್ಲಿಸುವ ಕಾಲಾವಧಿಯನ್ನು ವಿಸ್ತರಿಸುವ ಪ್ರಕಟಣೆ

ನಿಗಮದ ವಿವಿಧ ವಿಭಾಗ/ಶಾಖಾ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆಗೆ ಲಭ್ಯವಿರುವ ಮಳಿಗೆ/ಫ್ಲ್ಯಾಟ್/ಗೋದಾಮು/ನಿವೇಶನಗಳ ಹಂಚಿಕೆಗಾಗಿ ನಿಗಮದಿಂದ, **ಸಂಖ್ಯೆ: ಸಮನ್ವಯ: ಪ್ರಕಟಣೆ :ಮಳಿಗೆ: ನಿವೇಶನ: ಹಂಚಿಕೆ: 2021 ದಿನಾಂಕ 17.12.2021**ರಲ್ಲಿ ಪ್ರಕಟಣೆ ನೀಡಲಾಗಿತ್ತು. ಸದರಿ ಪ್ರಕಟಣೆಯಂತೆ, ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಲಾಗಿದ್ದ **ದಿನಾಂಕವನ್ನು 16.02.2022ರ ಸಾಯಂಕಾಲ 5:00 ಗಂಟೆವರೆಗೆ** ವಿಸ್ತರಿಸಲಾಗಿದೆ. ಮುಂದುವರೆದು, ಮೇಲೆ ತಿಳಿಸಿರುವ ಹಂಚಿಕೆ ಪ್ರಕಟಣೆಯಲ್ಲಿ ನಮೂದಿಸಿರುವ ವಿವರ, ಹಂಚಿಕೆ ನಿಯಮ ಹಾಗೂ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹೆಚ್ಚಿನ ವಿವರಗಳಿಗಾಗಿ ನಿಗಮದ ವೆಬ್‌ಸೈಟ್ **www.kssidc.co.in** ನಲ್ಲಿಯೂ ವೀಕ್ಷಿಸಬಹುದಾಗಿದೆ. ಈ ಸದಾವಕಾಶವನ್ನು ಭಾವಿಉದ್ದಿಮೆದಾರರು ಸದುಪಯೋಗಪಡಿಸಿಕೊಳ್ಳಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ವಾಸಾಸಂಇ/ಬೆಂ.ನ/ಜಿಎ/3149/2021–22
ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ,
ವಿಭಾಗ ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/21–22/4597 ದಿನಾಂಕ:17.01.2022

ಅಲ್ಪಾವಧಿ ಟೆಂಡರ ಪ್ರಕಟಣೆ (Through eprocurement portal only)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ 1ನೇ ದರ್ಜೆ ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಅಡಿಯಲ್ಲಿ ಬರುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಕರೆಯಲಾಗಿದೆ. ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರು ದಿನಾಂಕ 27.01.2022 ರಿಂದ 11.02.2022ರ ಸಾಯಂಕಾಲ 4.00 ಗಂಟೆಯವರೆಗೆ www.eproc.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿನಾಂಕ 14.02.2022 ರಂದು ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.

ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರವೆಂಟ್‌ನ ವೆಬ್‌ಸೈಟ್ www.eproc.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ, ರೋಡಲಬಂಡಾ.
ವಾ.ಸಾ.ಸಂ.ಇ/ರಾಯಚೂರು/575/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಲಬುರಗಿ
(ಜಿಲ್ಲಾ ನಗರಾಭಿವೃದ್ಧಿ ಕೋಶ)
ದೂರವಾಣಿ ಸಂಖ್ಯೆ: 08472 – 278604, ಇಮೇಲ್ ವಿಳಾಸ: dudc.glb@gmail.com
ಸಂ:ಜಿನಕೋ/3ನೇ ತಂಡ ನೇಮಕ/80/2021–22 ದಿನಾಂಕ: 31.01.2022

:: ಇ–ಟೆಂಡರ್ ಅಧಿಸೂಚನೆ ::

ಮಾನ್ಯ ಜಿಲ್ಲಾಧಿಕಾರಿಗಳು, ಕಲಬುರಗಿ ಜಿಲ್ಲೆ, ಕಲಬುರಗಿರವರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಾದ ಪುರಸಭೆ ಅಫಜಲಪೂರ, ಆಳಂದ, ಚಿಂಚೋಳಿ, ಪ.ಪಂ.ಕಾಳಗಿ, ಕಮಲಾಪೂರ ಹಾಗೂ ಎನ್.ಎ.ಸಿ.ಶಹಾಬಾದ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಡಿ ತೆಗೆದುಕೊಂಡ ಅಭಿವೃದ್ಧಿ ಕಾಮಗಾರಿಗಳ ಮತ್ತು ನಿರ್ವಹಣಾ ಕಾಮಗಾರಿ/ಕೆಲಸಗಳ ಕುರಿತಾಗಿ 3ನೇ ವ್ಯಕ್ತಿ (ಮೂರನೇ ವ್ಯಕ್ತಿ) ತಪಾಸಣೆ/ಪರಿಶೀಲನೆಗಾಗಿ, ಸರಕು ಮತ್ತು ಸೇವೆಗಳ ಕಾರ್ಯಗಳ ಖರೀದಿಗಾಗಿ ಸಲಹಾ ಸೇವೆಗಳನ್ನು ಒದಗಿಸಲು ISO 9000 :2015ರ ಪ್ರಮಾಣೀಕೃತ ವೃತ್ತಿಪರ ಗುಣಮಟ್ಟದ ಮೇಲ್ವಿಚಾರಣಾ ಸಲಹೆಗಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಸಂಸ್ಥೆಯವರು ಟೆಂಡರ್ ದಾಖಲೆಗಳನ್ನು https://www.eproc.karnataka.gov.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಸದರಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದ್ದು, ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : Providing Consultancy Services as 3rd Party (third Party) Inspection for all Development & Maintenance Works, Procurement of Goods & Services under SFC, 14th Finance, 15th FC, Municipal Fund, Scarcity funds, 24.10% , 7.25% ,5% & any other grants released to ULBs (including Spill-over & On-going Works) in Kalaburagi District **TMC AFZALPUR, ALAND, CHINCHOLI, TP KALAGI, KAMALAPUR AND NAC SHAHABAD. INDENT No: DUDC/Plan/3rd Party Appoint/80/2021-22 (P1),** 2) ಯೋಜನೆಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : ರೂ. **21.50 ಕೋಟಿಗಳು,** 3) ಇ.ಎಂ.ಡಿ. ಮೊತ್ತ (ರೂ.ಲಕ್ಷಗಳಲ್ಲಿ) : ರೂ. 1.61 ಲಕ್ಷಗಳು (ಯೋಜನೆಯ ಅಂದಾಜು ಮೊತ್ತಕ್ಕೆ ಶೇ.0.075%), 4) ಟೆಂಡರ್ ಡಾಕ್ಯೂಮೆಂಟ್ ಮೊತ್ತ : ಇ–ಪೋರ್ಟಲ್ ದಾಖಲೆಯಂತೆ, 5)ಕಾಲಾವಕಾಶ : ಕಾರ್ಯಾದೇಶ ನೀಡಲಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಹಾಗೂ 3ನೇ ತಂಡದ ಕಾರ್ಯಕ್ಷಮತೆಯ ಆಧಾರದ ಮೇಲೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದು.

ಟೆಂಡರ್‌ಗಾಗಿ ನಿಗಧಿಪಡಿಸಲಾದ ದಿನಾಂಕಗಳ ವಿವರ ಕೆಳಗಿನಂತಿದೆ.

ಮೇಲಿನ ಟೆಂಡರ್ ಕುರಿತು ಸಮಗ್ರ ಮಾಹಿತಿಯನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ಅಧಿಕೃತ ಅಂತರ್ಜಾಲ ತಾಣ www.eproc.karnataka.gov.inರ ಮುಖಾಂತರ ದಿನಾಂಕ: 31.01.2022ರಿಂದ ಪಡೆದುಕೊಳ್ಳಬಹುದಾಗಿದೆ. 1) ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪಲೋಡ್ ಮಾಡಲು ಕೊನೆಯ ದಿನಾಂಕ : **16/02/2022ರಂದು ಸಂಜೆ 5.30 ಗಂಟೆವರೆಗೆ,** 2) ಟೆಂಡರ್ ತೆರೆಯುವ ದಿನಾಂಕ : (ತಾಂತ್ರಿಕ ಬಿಡ್) : **18/02/2022ರಂದು ಬೆಳಿಗ್ಗೆ 11.00 ಗಂಟೆಗೆ,** 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **25/02/2022ರಂದು ಬೆಳಿಗ್ಗೆ 11.00 ಗಂಟೆಗೆ**

ಈ ಮೇಲ್ಕಂಡ ನಿಗಧಿತ ದಿನಾಂಕದಲ್ಲಿ ವ್ಯತ್ಯಾಸವಾದಲ್ಲಿ ಅದು ಕೇವಲ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಯಾವುದೇ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/–
ಜಿಲ್ಲಾಧಿಕಾರಿಗಳು ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1031/ಎಂ.ಸಿ.&ಎ/2021–22



ಕರೆಕಳ್ಳರಿದ್ದಾರೆ, ಎಚ್ಚರ!

ಉದಯ ಶಂಕರ ಪುರಾಣಿಕ

'ನಿಮ್ಮ ಬ್ಯಾಂಕ್ ಖಾತೆ ಸ್ಥಗಿತವಾಗಿದೆ. ಅದನ್ನು ಮತ್ತೆ ಸಕ್ರೀಯಗೊಳಿಸಲು ನಿಮ್ಮ ಮೊಬೈಲ್ ಫೋನ್‌ಗೆ ಕಳುಹಿಸಿರುವ ಓಟಿಪಿ ಸಂಖ್ಯೆ ನನಗೆ ಕೊಡಿ', 'ಆದಾಯ ತೆರಿಗೆ ಇಲಾಖೆಯ ಅಧಿಕಾರಿ ಮಾತನಾಡುತ್ತಿರುವುದು; ಹೆಚ್ಚಾಗಿ ಸಂದಾಯ ಮಾಡಿರುವ ಆದಾಯ ತೆರಿಗೆಯನ್ನು ಮರುಪಾವತಿಸಬೇಕು. ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು ನೀಡಿದರೆ, ಇವತ್ತೇ ಹಣ ವರ್ಗಾಯಿಸುತ್ತೇವೆ' – ಈ ರೀತಿ ಗ್ರಾಹಕರನ್ನು ವಂಚಿಸುವ ಕರೆಗಳನ್ನು ನಂಬಿ, ಲಕ್ಷಾಂತರ ರೂಪಾಯಿ ಕಳೆದುಕೊಂಡವರಿದ್ದಾರೆ.

ಒಂದು ಸಮೀಕ್ಷೆಯ ಪ್ರಕಾರ, 2021ರಲ್ಲಿ ₹ 40,000 ಕೋಟಿಗೂ ಹೆಚ್ಚು ಇಂತಹ ದೂರವಾಣಿ ಕರೆಗಳು ವಿಶ್ವದಾದ್ಯಂತ ಗ್ರಾಹಕರನ್ನು ಕಾಡಿವೆ. ಕೊರೊನಾ ಸಂತ್ರಸ್ಥರಿಗೆ ನಿಧಿ ಸಂಗ್ರಹಿಸುತ್ತಿದ್ದೇವೆ ಎಂದು ಕರೆ ಮಾಡಿದವರನ್ನು ನಂಬಿ ಅನೇಕರು ಹಣ ಕಳೆದುಕೊಂಡಿದ್ದಾರೆ. ನಕಲಿ ಕಾಲ್ ಸೆಂಟರ್‌ಗಳಿಂದ ಬರುವ ಕರೆಗಳಿಂದ ನೂರಾರು ಕೋಟಿ ರೂಪಾಯಿಗಳಷ್ಟು ಹಣ ಕಳೆದುಕೊಂಡಿದ್ದಾರೆ. ಹೀಗಾಗಿ ಜನಸಾಮಾನ್ಯರು ಇಂತಹ ಕರೆಗಳ ಕುರಿತು ಜಾಗೃತೆಯಿಂದ ಇರಬೇಕಾಗಿರುವುದು ಅಗತ್ಯ. ಯಾವುದೇ ಬ್ಯಾಂಕು, ವಿಮಾ ಸಂಸ್ಥೆ ಅಥವಾ ಸರ್ಕಾರಿ ಇಲಾಖೆಯ ಅಧಿಕಾರಿ ಗ್ರಾಹಕರಿಗೆ ದೂರವಾಣಿ ಕರೆ ಮಾಡಿ ಅವರ ಬ್ಯಾಂಕ್ ಖಾತೆ ಮಾಹಿತಿ, ಆಧಾರ್/ಪ್ಯಾನ್ ಕಾರ್ಡ್ ಮಾಹಿತಿ, ಓಟಿಪಿ ಇತ್ಯಾದಿಗಳನ್ನು ಕೇಳಿ ಪಡೆಯುವ ಕೆಲಸ ಮಾಡುವುದಿಲ್ಲ. ಇಂತಹ ಕರೆಗಳು ಬಂದರೆ ತಕ್ಷಣ ಸೈಬರ್ ಪೊಲೀಸರಿಗೆ ದೂರು ನೀಡಬೇಕು.

ಕರೆಕಿರಿ ಮತ್ತು ಕರೆಕಳ್ಳತನ ಪ್ರಕರಣಗಳಲ್ಲಿ ನಕಲಿ ಕಾಲ್ ಸೆಂಟರ್‌ಗಳಂತೆ, ಇಂಟರ್‌ನೆಟ್ ಆಧಾರಿತ ಫೋನ್ ಸೌಲಭ್ಯ (ವಿಓಐಪಿ) ಬಳಸುವ ಪ್ರಕರಣಗಳು ಹೆಚ್ಚಾಗುತ್ತಿವೆ. ವಿಓಐಪಿ ಸೌಲಭ್ಯವನ್ನು ಬಳಸಿಕೊಂಡು ನಮ್ಮ ಪರಿಚಿತರ ದೂರವಾಣಿ ಸಂಖ್ಯೆಯಿಂದ ಕರೆ ಮಾಡಿದಂತೆ, ನಮಗೆ ದೂರವಾಣಿ ಕರೆ ಮಾಡಿ ವಂಚಿಸುವ ಅಪರಾಧಿಗಳಿದ್ದಾರೆ. ಮಹಿಳೆಯರಿಗೆ ಫೋನ್ ಮಾಡಿ ಅಸಭ್ಯವಾಗಿ ವರ್ತಿಸುವುದು ಅಥವಾ ಬ್ಲಾಕ್ ಮೇಲ್ ಮಾಡುವಂತಹ ಅಪರಾಧಗಳಲ್ಲಿ ಕೂಡ ವಿಓಐಪಿ ಬಳಕೆಯಾಗುತ್ತಿದೆ. ತಂತ್ರಜ್ಞಾನಗಳ ದುರ್ಬಳಕೆ ಮಾಡಿಕೊಂಡು ಮಾಡುವ ಕರೆಗಳನ್ನು ತನಿಖೆ ಮಾಡಿ, ಅಪರಾಧಿಗಳನ್ನು ಪತ್ತೆ ಮಾಡುವುದು ಸಾಧ್ಯವಿದೆ. ಹೀಗಾಗಿ ಇಂತಹ ಕರೆಗಳು ಬಂದಾಗ, ತಕ್ಷಣ ಸೈಬರ್ ಪೊಲಿಸರಿಗೆ ದೂರು ನೀಡಬೇಕು.

ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕವಾಗಿ ದೊರೆಯುವಂತೆ ಮೊಬೈಲ್ ಫೋನ್ ಸಂಖ್ಯೆಯನ್ನು, ವಿಳಾಸ ಮತ್ತು ಕುಟುಂಬ ಸದಸ್ಯರ ವಿವರಗಳನ್ನು ಹಾಗೂ ಚಿತ್ರಗಳನ್ನು ಹಂಚಿಕೊಳ್ಳಬೇಡಿ. ನಿಮ್ಮ ಮೊಬೈಲ್‌ಗೆ ಬರುವ ಒಟಿಪಿ ಸಂಖ್ಯೆಗಳನ್ನು ಅಪರಿಚಿತರ ಜೊತೆ ಹಂಚಿಕೊಳ್ಳಬೇಡಿ. ನಿಮ್ಮ ಬ್ಯಾಂಕ್ ಖಾತೆ, ಪ್ಯಾನ್ ಕಾರ್ಡ್, ಆಧಾರ್, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ಮಾಹಿತಿಯನ್ನು ಎಂದಿಗೂ ಅಪರಿಚಿತರಿಗೆ ನೀಡಬೇಡಿ.

ಮೊಬೈಲ್ ಫೋನ್ ಮತ್ತು ಇಂಟರ್‌ನೆಟ್ ಸೇವೆಗಳನ್ನು ಬಳಸುವವರು ಕೆಲವು ಮುನ್ನೆಚ್ಚರಿಕೆಗಳನ್ನು ಪಾಲಿಸುವುದರ ಮೂಲಕ, ಇಂತಹ ವಂಚನೆಗಳಿಂದ ರಕ್ಷಿಸಿಕೊಳ್ಳಬಹುದು. ನಿಮ್ಮ ಮೊಬೈಲ್ ಫೋನ್ ಮತ್ತು ಇಂಟರ್‌ನೆಟ್ ಬಳಸಲು ಅಪರಿಚಿತರಿಗೆ ಅವಕಾಶ ನೀಡಬೇಡಿ. ಉಚಿತವಾಗಿ ದೊರೆಯುತ್ತದೆ ಎಂದು ಅನಧಿಕೃತವಾದ ತಂತ್ರಾಂಶಗಳನ್ನು ಮತ್ತು ಪೈರೆಸಿ ಜಾಲತಾಣಗಳಿಂದ ಪುಸ್ತಕಗಳು, ಚಲನಚಿತ್ರಗಳು, ಹಾಡುಗಳನ್ನು ನಿಮ್ಮ ಮೊಬೈಲ್‌ಗೆ ಡೌನ್‌ಲೋಡ್ ಮಾಡಿಕೊಳ್ಳಬೇಡಿ; ಆಗ ವೈರಸ್ ಮೊದಲಾದ ಕುತಂತ್ರಾಂಶಗಳು ನಿಮ್ಮ ಮೊಬೈಲ್‌ಗೆ ಸೇರುವ ಸಾಧ್ಯತೆ ಇರುತ್ತದೆ. ಇಂತಹ ಕುತಂತ್ರಾಂಶಗಳಿಂದ, ನಮ್ಮ ಫೋನ್‌ನಲ್ಲಿರುವ ದೂರವಾಣಿ ಸಂಖ್ಯೆಗಳು, ಚಿತ್ರಗಳು, ದಾಖಲೆಗಳು, ಸಂದೇಶಗಳನ್ನು ಅಪರಾಧಿಗಳು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಕೆಲವೊಮ್ಮೆ, ನಾವು ಬೇರೆಯವರೊಡನೆ ಕರೆ ಮಾಡಿ ಮಾತನಾಡುವಾಗ, ಕರೆಗಳನ್ನು ಕದ್ದಾಲಿಸಬಹುದು, ರೆಕಾರ್ಡ್ ಮಾಡಿಕೊಳ್ಳಬಹುದು. ನಮಗೆ ಗೊತ್ತಿಲ್ಲದಂತೆ ಮೊಬೈಲ್ ಫೋನ್ ಕ್ಯಾಮೆರಾ ಬಳಸಿ ಚಿತ್ರಗಳನ್ನು ಅಥವಾ ವಿಡಿಯೊಗಳನ್ನು ತೆಗೆದು ದುರ್ಬಳಕೆ ಮಾಡಿಕೊಳ್ಳುತ್ತಾರೆ. ಎಚ್ಚರಿಕೆ ಇರಲಿ.



ಹೇನಿನ ಅಂಟು ಸಾವಿರಾರು ವರ್ಷಗಳಾದ ಮೇಲೂ ನಿಮ್ಮ ಗುಟ್ಟನ್ನು ರಟ್ಟು ಮಾಡುತ್ತದಂತೆ!

ಚರಿತ್ರೆ ಹೇಳಿದ ಸೀರಿನಂಟು!

ಕೊಳ್ಳೇಗಾಲ ಶರ್ಮ

ಹೇನು ಕಾಡಿದರೆ ಏನು ಮಾಡುತ್ತೀರಿ? ಛೇ, ಎನ್ನುತ್ತಾ ಕೂದಲಿನಿಂದ ಸೆಳೆದು ಉಗುರಿನ ಮೇಲಿಟ್ಟು, ಇನ್ನೊಂದು ಉಗುರಿನಿಂದ 'ಚಟಕ್' ಎಂದು ಸದ್ದಾಗುವಂತೆ ಒತ್ತಿ ಕೊಂದುಬಿಡುತ್ತೀರಿ, ಅಲ್ಲವೇ? ಪೀಡೆ ಎನ್ನಿಸಿಕೊಂಡ ಹೇನಿನ ಕಾಟ ಅಷ್ಟಕ್ಕೇ ಮುಗಿಯಲಿಕ್ಕಿಲ್ಲವಂತೆ. ಸಾವಿರಾರು ವರ್ಷಗಳು ಕಳೆದರೂ ನೀವು ಚಿಟಕ್ಕೆಂದು ಕೊಂದ ಆ ಪುಟ್ಟ ಕೀಟ, ನಿಮ್ಮ ಇಡೀ ಚರಿತ್ರೆಯನ್ನು ಜಗತ್ತಿಗೆ ಬಿಟ್ಟು ಕೊಡಬಹುದು ಎನ್ನುತ್ತದೆ, ಮೊನ್ನೆ ಮಾಲೆಕ್ಯುಲಾರ್ ಬಯಾಲಜಿ ಅಂಡ್ ಎವೊಲ್ಯೂಶನ್ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಶೋಧ. ಇಂಗ್ಲೆಂಡಿನ ರೀಡಿಂಗ್ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನಿ ಹಾಗೂ ಜೀವವಿಕಾಸ ತಜ್ಞೆ ಅಲೆಹಾಂಡ್ರಾ ಪೆರೋಟ್ಟಿ ಮತ್ತು ಸಂಗಡಿಗರು ಹೀಗೊಂದು ಶೋಧವನ್ನು ಮಾಡಿದ್ದಾರೆ. ಸುಮಾರು ಸಾವಿರದಿಂದ ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಹೇನಿನ ಸೀರಿನಿಂದ ಮನುಷ್ಯನ ಡಿಎನ್‌ಎಯನ್ನು ಹೆಕ್ಕಿ ಪರೀಕ್ಷಿಸುವುದು ಸಾಧ್ಯ ಎಂದು ನಿರೂಪಿಸಿದ್ದಾರೆ.

ಮನುಷ್ಯನ ಡಿಎನ್‌ಎಗೂ, ಹೇನಿಗೂ ಸಂಬಂಧವೇನು ಎಂದು ನೀವು ಕೇಳಬಹುದು. ಸುಪ್ರಸಿದ್ಧ ಜುರಾಸಿಕ್ ಪಾರ್ಕ್ ಸಿನಿಮಾ ನೋಡಿದ್ದವರಿಗೆ ಇದು ಸ್ವಯಂ ವೇದ್ಯ. ಆ ಸಿನಿಮಾದಲ್ಲಿ ಡೈನೊಸಾರಿನ ರಕ್ತ ಕುಡಿದ ಸೊಳ್ಳೆಯೊಂದರ ಹೊಟ್ಟೆಯಿಂದ ಡೈನೊಸಾರಿನ ಡಿಎನ್‌ಎಯನ್ನು ತೆಗೆದು ಅಳಿದು ಹೋದ ಡೈನೊಸಾರನ್ನು ಮತ್ತೆ ಸೃಷ್ಟಿಸಿದ ಅದ್ಭುತ ಕಲ್ಪನೆ ಇದೆ. ಡೈನೊಸಾರ್ ಸೃಷ್ಟಿಸಬಹುದೋ ಇಲ್ಲವೋ. ಪ್ರಾಣಿಗಳ ರಕ್ತ ಕುಡಿದ ಕೀಟಗಳಿಂದ ಡಿಎನ್‌ಎ ಹೆಕ್ಕುವುದು ಖಂಡಿತ ಸಾಧ್ಯ. ಸೊಳ್ಳೆಯಂತೆಯೇ ಹೇನೂ ಕೂಡ ಮನುಷ್ಯನ ರಕ್ತವನ್ನು ಹೀರುವುದರಿಂದ, ಹೇನಿನಿಂದ ಡಿಎನ್‌ಎ ಹೆಕ್ಕಿ ಅದು ಕುಡಿದ ರಕ್ತದ ಒಡೆಯ ಅಥವಾ ಒಡತಿಯ ಬಗ್ಗೆ ತಿಳಿದುಕೊಳ್ಳುವ ಜಾಸೂಸಿ ಕೆಲಸ ಇದು.

ಎಂದೋ ಕಣ್ಮರೆಯಾಗಿ ಹೋದವರ ಚರಿತ್ರೆಯನ್ನು ಬೆದಕುವುದು ಹೊಸ ವಿಷಯವೇನಲ್ಲ. ಆದರೆ ಅದಕ್ಕಾಗಿ ನವನವೀನ ಡಿಎನ್‌ಎ ತಂತ್ರವನ್ನು ಬಳಸುವುದು ಹೊಸತು. ಪುರಾತನ ಡಿಎನ್‌ಎ ವಿಶ್ಲೇಷಣೆ ಅಥವಾ ಆರ್ಕಿಯಾಲಾಜಿಕಲ್ ಡಿಎನ್‌ಎ ಟೆಕ್ನಾಲಜಿ ಎನ್ನುವ ಈ ತಂತ್ರದಿಂದ ಮಾನವ ಚರಿತ್ರೆಯಲ್ಲಿ ಹಲವು ಹೊಸ ಅಧ್ಯಾಯಗಳನ್ನು ವಿಜ್ಞಾನಿಗಳು ಸೇರಿಸಿದ್ದಾರೆ. ಉದಾಹರಣೆಗೆ, ಎರಡು ದಶಕಗಳ ಹಿಂದೆ ಹರಿಯಾಣದಲ್ಲಿ ರಾಖಿಘಡ ಎಂಬಲ್ಲಿ ದೊರೆತ ಐದು ಸಾವಿರ ವರ್ಷ ಹಳೆಯ ಮಹಿಳೆಯ ಡಿಎನ್‌ಎ, ಆಕೆಯ ವಂಶವಾಹಿ ಭಾರತೀಯರೆಲ್ಲರಲ್ಲೂ ಒಂದಿಷ್ಟು ಇದ್ದೇ ಇದೆ ಎಂದು ತೋರಿಸಿತ್ತು.

ಕೇಶವಾಸಿ, ಶಿರವಾಸಿ ಹೇನಿನ ಜೊತೆಗೆ ಮನುಷ್ಯರ ಸಂಬಂಧ ಬಹಳ ಅನ್ಯೋನ್ಯವಾದದ್ದು. ಮನುಷ್ಯರ ಹೇನು ಬೇರೆ ಯಾವ ಜೀವಿಯಲ್ಲಿಯೂ ಬೆಳೆಯುವುದಿಲ್ಲ. ಮನುಷ್ಯರ ತಲೆಯಲ್ಲಿಯೇ ಹುಟ್ಟಿ, ಅಲ್ಲಿಯೇ ಬೆಳೆದು, ಅಲ್ಲಿಯೇ ಸಾಯುವ ಜೀವಿ ಇದು. ಮೊಟ್ಟೆ ಇಡುವ ಸಮಯದಲ್ಲಿ ಕೂದಲಿನ ಬುಡದತ್ತ ಸರಿದು, ಅಲ್ಲಿ ಕೂದಲಿಗೆ ಭದ್ರವಾಗಿ ಮೊಟ್ಟೆಯನ್ನು ಅಂಟಿಸಿ ಬಿಡುತ್ತದೆ. ಹೇನು ತಲೆಯ ಚರ್ಮದ ಹೊರಪದರವನ್ನೇ ಹರಿದು, ಜೀರ್ಣಿಸಿ ಅಂಟನ್ನು ತಯಾರಿಸುತ್ತದೆ. ಹೀಗೆ ಚರ್ಮದ ಭಾಗವಿರುವ ಮೊಟ್ಟೆಯ ಅಂಟು ಪುರಾತನ ಮಾನವನ ಗುಟ್ಟನ್ನು ಬಿಟ್ಟು ಕೊಡಬಲ್ಲ ಡಿಎನ್‌ಎಯ ಸಮೃದ್ಧ ನಿಧಿಯಾಗಿ ಬಿಡುತ್ತದೆ ಎನ್ನುತ್ತಾರೆ ಅಲೆಹಾಂಡ್ರಾ.



ಅಲೆಹಾಂಡ್ರಾ ಮತ್ತು ಸಂಗಡಿಗರು ದಕ್ಷಿಣ ಅಮೆರಿಕದ ಅರ್ಜೆಂಟೀನಾ ದೇಶದಲ್ಲಿ ದೊರೆತ ಸುಮಾರು ಎರಡು ಸಾವಿರ ವರ್ಷಗಳಷ್ಟು ಹಳೆಯ, ಕಾದಿಟ್ಟ ಶವದ ತಲೆಗೂದಲನ್ನು ಪರೀಕ್ಷಿಸಿದರು. ಈ ಮಮ್ಮಿಯ ಕೂದಲಿನಲ್ಲಿ ಸೀರೂ ಇರಲಿಲ್ಲ, ಹೇನೂ ಇರಲಿಲ್ಲವೆನ್ನಿ. ಆದರೆ ಅವುಗಳು ಮೊಟ್ಟೆಯನ್ನು ಅಂಟಿಸಿಟ್ಟಿದ್ದ ಗೋಂದು ಹೇರಳವಾಗಿತ್ತು. ಇದನ್ನೇ ಸಂಗ್ರಹಿಸಿ, ಅದರಿಂದ ಡಿಎನ್‌ಎಯನ್ನು ಪ್ರತ್ಯೇಕಿಸಿ, ಡಿಎನ್‌ಎಯ ಪ್ರಮಾಣ ಹಾಗೂ ಅದರ ಸ್ವರೂಪವನ್ನು ಅಧ್ಯಯನ ಮಾಡಿದ್ದಾರೆ. ಸೀರಂಟಿನಲ್ಲಿ ಹುಡುಕಾಡಿದಾಗ ಆ ಶವದ ಚರ್ಮದಲ್ಲಿದ್ದಿರಬಹುದಾದ ವೈರಸ್ ಒಂದರ ಕುರುಹೂ ಇವರಿಗೆ ಸಿಕ್ಕಿತಂತೆ.

ಡಿಎನ್‌ಎ ಸಿಕ್ಕ ಮೇಲೆ ಇನ್ನೇನು. ಅದರಲ್ಲಿರುವ ರಾಸಾಯನಿಕಗಳನ್ನು ವಿಶ್ಲೇಷಿಸಿದರೆ, ಮನುಷ್ಯನಲ್ಲಿದ್ದ ಗುಣಗಳನ್ನೂ ಪತ್ತೆ ಮಾಡಬಹುದಾದ ತಂತ್ರಗಳು ಈಗಾಗಲೇ ಇವೆ. ಅವನ್ನು ಬಳಸಿಕೊಂಡು ಆ ವ್ಯಕ್ತಿ ಎಲ್ಲಿಯವ, ಅವನ ಸಂಬಂಧಿಗಳು ಯಾರಿರಬಹುದು, ಮುಂತಾದುವನ್ನು ಗಣಿಸಬಹುದು. ಸದ್ಯಕ್ಕೆ ಅಲೆಹಾಂಡ್ರಾ ಅವರು ಸೀರಂಟು ಹೆಕ್ಕಿದ ವ್ಯಕ್ತಿಯ ಮೂಲವನ್ನು ಹುಡುಕಿದ್ದಾರೆ. ಇವರು ಹೆಕ್ಕಿದ ಡಿಎನ್‌ಎ ಆ ವ್ಯಕ್ತಿ ಇದ್ದಲ್ಲಿಂದಲೂ ಸಾಕಷ್ಟು ಉತ್ತರ ಭಾಗದಲ್ಲಿ ಇದ್ದ ವ್ಯಕ್ತಿಗಳ ಡಿಎನ್‌ಎಯಲ್ಲಿನ ಅಂಶಗಳಿಗೆ ಹೋಲಿಕೆ ತೋರಿತ್ತು. ಅರ್ಥಾತ್, ಈ ಮನುಷ್ಯ ಅಥವಾ ಅವನ ಪೂರ್ವಜರು ಅಲ್ಲಿಗೆ ಬೇರೆಲ್ಲಿಂದಲೋ ವಲಸೆ ಬಂದು ನೆಲೆಸಿದವರಾಗಿರಬೇಕು. ಇದು ಕೇವಲ ತರ್ಕವಲ್ಲ ಎನ್ನುವುದಕ್ಕೆ ಆ ವ್ಯಕ್ತಿಯ ತಲೆಯಲ್ಲಿದ್ದ ಹೇನಿನ ಡಿಎನ್‌ಎ ಕೂಡ, ಅಲ್ಲಿಗೆ ಉತ್ತರದಲ್ಲಿರುವ ಪ್ರದೇಶದಲ್ಲಿ ಕಾಣಸಿಗುವ ಹೇನಿನಲ್ಲಿಯಷ್ಟೆ ಇರುವ ಡಿಎನ್‌ಎಯಂತೆ ಇತ್ತು!

ಸೀರನ್ನು ಕುಕ್ಕುವ ಮುನ್ನ ಯೋಚಿಸಿ. ಅದು ಸತ್ತರೂ ಅದರ ಅಂಟು ನಿಮ್ಮನ್ನು ಬಿಡದು. ನಿಮ್ಮ ಕುರುಹನ್ನು, ಚರಿತ್ರೆಯನ್ನು ಸಾವಿರಾರು ವರ್ಷಗಳ ಕಾಲ ಕೂಡಿಟ್ಟುಕೊಳ್ಳಬಲ್ಲುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣ ಜೋಡಿಗಳು

ಗಣಿತ

ಎಸ್ಸೆಸ್ಸೆಲ್ಸಿ

- **ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣ:** $ax + by + c = 0$ ರೂಪದಲ್ಲಿ ಬರೆಯಬಹುದಾದ a, b ಮತ್ತು c ವಾಸ್ತವ ಸಂಖ್ಯೆಗಳಾಗಿರುವ, **a ಮತ್ತು b ಈ ಎರಡೂ ಸೊನ್ನೆ ಅಲ್ಲದಿರುವ** ಯಾವುದೇ ಸಮೀಕರಣವನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣ ಎನ್ನುತ್ತೇವೆ.
- ಒಂದು ಸಮತಲದ ಮೇಲೆ ಎರಡು ಸರಳ ರೇಖೆಗಳನ್ನು ಕೊಟ್ಟಾಗ, ಕೆಳಗಿನ ಮೂರು ಸಾಧ್ಯತೆಗಳಲ್ಲಿ ಯಾವುದಾದರೂ ಒಂದು ಸಾಧ್ಯತೆ ಮಾತ್ರ ಇರುತ್ತದೆ.
  (i) ಎರಡು ರೇಖೆಗಳು ಒಂದು ಬಿಂದುವಿನಲ್ಲಿ ಛೇದಿಸುತ್ತವೆ.
  (ii) ಎರಡು ರೇಖೆಗಳು ಒಂದನ್ನೊಂದು ಛೇದಿಸುವುದಿಲ್ಲ. ಅಂದರೆ ಅವುಗಳು ಸಮಾಂತರ.
  (iii) ಎರಡು ರೇಖೆಗಳು ಐಕ್ಯಗೊಂಡಿರುತ್ತವೆ.
- ಪ್ರತಿಯೊಂದು ರೇಖಾತ್ಮಕ ಸಮೀಕರಣಕ್ಕೂ ಅಪರಿಮಿತ ಪರಿಹಾರಗಳಿರುತ್ತವೆ.
- ಪರಿಹಾರ ಇಲ್ಲದೇ ಇರುವ ಒಂದು ಜೊತೆ ರೇಖಾತ್ಮಕ ಸಮೀಕರಣಗಳನ್ನು, ರೇಖಾತ್ಮಕ ಸಮೀಕರಣಗಳ ಅಸ್ಥಿರ ಜೋಡಿ ಎನ್ನುತ್ತೇವೆ. ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳು ಒಂದು ಪರಿಹಾರವನ್ನು ಹೊಂದಿದ್ದರೆ, ಅವುಗಳನ್ನು ರೇಖಾತ್ಮಕ ಸಮೀಕರಣಗಳ ಸ್ಥಿರ ಜೋಡಿ ಎನ್ನುತ್ತೇವೆ. ಒಂದು ಜೊತೆ ರೇಖಾತ್ಮಕ ಸಮೀಕರಣಗಳ ಬೆಲೆಗಳು ಸಮಾನವಾಗಿದ್ದರೆ, ಅವುಗಳಿಗೆ ಅಪರಿಮಿತ ಸಂಖ್ಯೆಯ ವಿಭಿನ್ನ ಸಾಮಾನ್ಯ ಪರಿಹಾರಗಳಿರುತ್ತವೆ. ಇಂತಹ ಜೋಡಿಯನ್ನು ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಅವಲಂಬಿತ ಜೋಡಿ ಎನ್ನುತ್ತೇವೆ.
- $a1x + b1y + c1 = 0$ ಮತ್ತು $a2x + b2y + c2 = 0$ ಎಂಬ ಎರಡು ಸಮೀಕರಣಗಳಿಗೆ,

ಅನುಪಾತಗಳ ಹೋಲಿಕೆ	ನಕ್ಷಾ ರೂಪದ ಪ್ರತಿನಿಧಿಸುವಿಕೆ	ಬೀಜಗಣಿತೀಯ ಪ್ರತಿನಿಧಿಸುವಿಕೆ
$\frac{a_1}{a_2} \neq \frac{b_1}{b_2}$	ಛೇದಿಸುವ ರೇಖೆಗಳು	ನಿಖರವಾಗಿ ಒಂದು ಪರಿಹಾರ (ಅನನ್ಯ)
$\frac{a_1}{a_2} = \frac{b_1}{b_2} = \frac{c_1}{c_2}$	ಐಕ್ಯಗೊಳ್ಳುವ ರೇಖೆಗಳು	ಅಪರಿಮಿತ ಸಂಖ್ಯೆಯ ಪರಿಹಾರಗಳು
$\frac{a_1}{a_2} = \frac{b_1}{b_2} \neq \frac{c_1}{c_2}$	ಸಮಾಂತರ ರೇಖೆಗಳು	ಪರಿಹಾರ ಇಲ್ಲ

- **ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸುವ ಬೀಜಗಣಿತೀಯ ವಿಧಾನಗಳು:**

1. **ಆದೇಶ ವಿಧಾನ :** ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸಲು ನಾವು ಒಂದು ಚರಾಕ್ಷರವನ್ನು ಇನ್ನೊಂದು ಚರಾಕ್ಷರದಲ್ಲಿ ವ್ಯಕ್ತಪಡಿಸಿ, ಅದರ ಬೆಲೆಯನ್ನು ಆದೇಶಿಸುತ್ತೇವೆ. ಆದ್ದರಿಂದ ಈ ವಿಧಾನವನ್ನು 'ಆದೇಶ ವಿಧಾನ' ಎನ್ನಲಾಗುತ್ತದೆ.
2. **ವರ್ಜಿಸುವ ವಿಧಾನ:** ಒಂದು ಚರಾಕ್ಷರವನ್ನು ಮೊದಲು ವರ್ಜಿಸಿ, ಒಂದೇ ಚರಾಕ್ಷರದ ರೇಖಾತ್ಮಕ ಸಮೀಕರಣವನ್ನು ಪಡೆಯುತ್ತೇವೆ. ಆದ್ದರಿಂದ ಈ ವಿಧಾನವನ್ನು ವರ್ಜಿಸುವ ವಿಧಾನ ಎನ್ನುತ್ತೇವೆ.
3. **ಓರೆ - ಗುಣಾಕಾರ ವಿಧಾ:** ಈ ವಿಧಾನದಿಂದ ರೇಖಾತ್ಮಕ ಸಮೀಕರಣಗಳ ಜೋಡಿಯನ್ನು ಬಿಡಿಸಲು, ನಾವು ಕೆಳಗಿನ ಹಂತಗಳನ್ನು ಅನುಸರಿಸುತ್ತೇವೆ.

ಹಂತ 1: ದತ್ತ ಸಮೀಕರಣಗಳನ್ನು $a_1x+b_1y+c_1=0$ ಮತ್ತು $a_2x+b_2y+c_2=0$ ರೂಪದಲ್ಲಿ ಬರೆಯಿರಿ.



ಹಂತ 2: ಮೇಲಿನ ಚಿತ್ರದ ಸಹಾಯದಿಂದ, ಸಮೀಕರಣಗಳನ್ನು

$$\frac{x}{b_1c_2 - b_2c_1} = \frac{y}{c_1a_2 - c_2a_1} = \frac{z}{a_1b_2 - a_2b_1}$$ ರೂಪದಲ್ಲಿ ಬರೆಯಿರಿ.

ಹಂತ 3: $a_1 b_2 - a_2 b_1 \neq 0$ ಆದಾಗ, x ಮತ್ತು y ಗಳನ್ನು ಕಂಡುಹಿಡಿಯಿರಿ. ಈ ವಿಧಾನವನ್ನು ಓರೆ ಗುಣಕಾರ ವಿಧಾನ ಎಂದು ಏಕೆ ಕರೆಯುತ್ತೇವೆ ಎಂಬುದನ್ನು ಮೇಲೆ ನೀಡಿದ ಹಂತ 2 ಸೂಚಿಸುತ್ತದೆ.

ಪ್ರಶ್ನೋತ್ತರಗಳು

1. $a_1x+b_1y+c_1=0$ ಮತ್ತು $a_2x+b_2y+c_2=0$ ಜೋಡಿ ರೇಖಾತ್ಮಕ ಸಮೀಕರಣಗಳಲ್ಲಿ $\frac{a_1}{a_2} \neq \frac{b_1}{b_2}$ ಆದರೆ,

ಎ. ಸಮೀಕರಣಗಳಿಗೆ ಪರಿಹಾರಗಳು ಇರುವುದಿಲ್ಲ.
ಬಿ. ಸಮೀಕರಣಗಳು ಅನನ್ಯ ಪರಿಹಾರವನ್ನು ಹೊಂದಿರುತ್ತವೆ.
ಸಿ. ಸಮೀಕರಣಗಳು ಮೂರು ಪರಿಹಾರಗಳನ್ನು ಹೊಂದಿರುತ್ತವೆ.
ಡಿ. ಸಮೀಕರಣಗಳು ಅಪರಿಮಿತ ಸಂಖ್ಯೆಯ ಪರಿಹಾರಗಳನ್ನು ಹೊಂದಿರುತ್ತವೆ.

ಉತ್ತರ: ಬಿ. ಸಮೀಕರಣಗಳು ಅನನ್ಯ ಪರಿಹಾರವನ್ನು ಹೊಂದಿರುತ್ತವೆ.

2. **$x + y = 5$ ಮತ್ತು $2x - 3y = 4$ ಆದರೆ x ಮತ್ತು y ಬೆಲೆಗಳನ್ನು ಕಂಡುಹಿಡಿಯಿರಿ.**

ಪರಿಹಾರ: $x + y = 5$ ---------- (1)

$2x - 3y = 4$ ---------- (2)

ಸಮೀಕರಣ (1) ನ್ನು $y = 5 - x$ ಎಂದು ಬರೆಯಬಹುದು

$y = 5 - x$ ನ್ನು ಸಮೀಕರಣ (2) ರಲ್ಲಿ ಆದೇಶಿಸಿದಾಗ,

$2x - 3(5 - x) = 4$ ----(3)

$2x - 15 + 3x = 4$

$5x = 19$

$\boxed{x = \frac{19}{5}}$

$x = \frac{19}{5}$, ಇದನ್ನು ಸಮೀಕರಣ (1) ರಲ್ಲಿ ಆದೇಶಿಸಿದಾಗ,

$\frac{19}{5} + y = 5$

$19 + 5y = 25$

$5y = 25 - 19$

$\boxed{y = \frac{6}{5}}$ ಆದ್ದರಿಂದ $x = \frac{19}{5}$ ಮತ್ತು $y = \frac{6}{5}$

ಶ್ರೀನಿವಾಸ ಡಿ. ಶೆಟ್ಟಿ, ಶಿಕ್ಷಣ ಸಂಯೋಜಕರು ಬಿಇಒ ಕಚೇರಿ, ಅರಕಲಗೂಡು

ಹತ್ತನೇ ತರಗತಿ ಗಣಿತಶಾಸ್ತ್ರದ 'ಪೇರ್ ಆಫ್ ಲೀನಿಯರ್ ಇಕ್ವೇಷನ್ ಇನ್ ಟು ವೇರಿಯೇಬಲ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರಜಾವಾಣಿ ನೋಡಿಯೊ

ಮಾತೃಕೆಗಳು

(ಹಿಂದಿನ ಸಂಚಿಕೆಯಿಂದ...)

ಗಣಿತ

ಪಿಯುಸಿ

ಅದಿಶ ಸಂಖ್ಯೆಯಿಂದ ಮಾತೃಕೆಯ ಗುಣಾಕಾರದ ಗುಣಲಕ್ಷಣಗಳು
(Properties of scalar multiplication of a matrix)

$A = [a_{ij}]$ ಮತ್ತು $B = [b_{ij}]$ ಗಳು ಒಂದೇ ದರ್ಜೆಯ ಅಂದರೆ $m \times n$ ಮಾತೃಕೆಗಳು ಮತ್ತು k, l ಗಳು ಸ್ಥಿರಾಂಕಗಳಾದಲ್ಲಿ,

(i) $k(A+B) = kA + kB$, (ii) $(k+l)A = kA + lA$

(ii) $k(A+B) = k([a_{ij}] + [b_{ij}]) = k[a_{ij} + b_{ij}]$

$= [k(a_{ij} + b_{ij})] = [(k a_{ij}) + (k b_{ij})]$

$= [k a_{ij}] + [k b_{ij}] = k[a_{ij}] + k[b_{ij}] = kA + kB$

(iii) $(k+l)A = (k+l)[a_{ij}]$

$= [(k+l) a_{ij}] + [k a_{ij}] + [l a_{ij}]$

$= k[a_{ij}] + l[a_{ij}]$

$= kA + lA$

ಸಮಸ್ಯೆ ಮತ್ತು ಪರಿಹಾರ

1) $A = \begin{bmatrix} 8 & 0 \\ 4 & -2 \\ 3 & 6 \end{bmatrix}$ ಮತ್ತು $A = \begin{bmatrix} 2 & -2 \\ 4 & 2 \\ -5 & 1 \end{bmatrix}$

ಆದರೆ, $2A + 3X = 5B$ ಇರುವಂತೆ ಮಾತೃಕೆಯನ್ನು ಕಂಡುಹಿಡಿಯಿರಿ.

ಪರಿಹಾರ:-

ದತ್ತ ಸಮೀಕರಣವು $2A + 3X = 5B$ ಆಗಿದೆ.
ಅಥವಾ $2A + 3X - 2A = 5B - 2A$

ಅಥವಾ $2A - 2A + 3X = 5B - 2A$ (ಮಾತೃಕೆಯ ಸಂಕಲನವು ಪರಿವರ್ತನೀಯವಾಗಿದೆ)

ಅಥವಾ $O + 3X = 5B - 2A$ ($-2A$ ಯು $2A$ ದ ಸಂಕಲನೀಯ ಪ್ರತಿಲೋಮವಾಗಿದೆ)

ಅಥವಾ $3X = 5B - 2A$ (O ಸಂಕಲನದ ಅನನ್ಯತಾ ಮಾತೃಕೆ ಆಗಿದೆ)
ಅಥವಾ $X = 13(5B - 2A)$

ಅಥವಾ $X = \frac{1}{3}\left(5\begin{bmatrix} 2 & -2 \\ 4 & 2 \\ -5 & 1 \end{bmatrix} - 2\begin{bmatrix} 8 & 0 \\ 4 & -2 \\ 3 & 6 \end{bmatrix}\right) = \frac{1}{3}\left(\begin{bmatrix} 10 & -10 \\ 20 & 10 \\ -25 & 5 \end{bmatrix} + \begin{bmatrix} -16 & 0 \\ -8 & 4 \\ -6 & -12 \end{bmatrix}\right)$

$= \frac{1}{3}\begin{bmatrix} 10-16 & -10+0 \\ 20-8 & 10+4 \\ -25-6 & 5-12 \end{bmatrix} = \frac{1}{3}\begin{bmatrix} -6 & -10 \\ 12 & 14 \\ -31 & -7 \end{bmatrix} = \begin{bmatrix} -2 & \frac{-10}{3} \\ 4 & \frac{14}{3} \\ \frac{-31}{3} & \frac{-7}{3} \end{bmatrix}$

2) $X + Y = \begin{bmatrix} 5 & 2 \\ 0 & 9 \end{bmatrix}$ ಮತ್ತು $X - Y = \begin{bmatrix} 3 & 6 \\ 0 & -1 \end{bmatrix}$

ಆದರೆ, X ಮತ್ತು Y ಗಳನ್ನು ಕಂಡುಹಿಡಿಯಿರಿ.

ಪರಿಹಾರ: ಈಗ $(X+Y)+(X-Y) = \begin{bmatrix} 5 & 2 \\ 0 & 9 \end{bmatrix} + \begin{bmatrix} 3 & 6 \\ 0 & -1 \end{bmatrix}$

ಅಥವಾ $(X+X)+(Y-Y) = \begin{bmatrix} 8 & 8 \\ 0 & 8 \end{bmatrix} \Rightarrow 2X = \begin{bmatrix} 8 & 8 \\ 0 & 8 \end{bmatrix}$

ಅಥವಾ $X = \frac{1}{2}\begin{bmatrix} 8 & 8 \\ 0 & 8 \end{bmatrix} = \begin{bmatrix} 4 & 4 \\ 0 & 4 \end{bmatrix}$

ಹಾಗೂ $(X+Y)-(X-Y) = \begin{bmatrix} 5 & 2 \\ 0 & 9 \end{bmatrix} - \begin{bmatrix} 3 & 6 \\ 0 & -1 \end{bmatrix}$

ಅಥವಾ $(X-X)+(Y+Y) = \begin{bmatrix} 5-3 & 2-6 \\ 0 & 9+1 \end{bmatrix} \Rightarrow 2Y = \begin{bmatrix} 2 & -4 \\ 0 & 10 \end{bmatrix}$

$\therefore \quad Y = \frac{1}{2}\begin{bmatrix} 2 & -4 \\ 0 & 10 \end{bmatrix} = \begin{bmatrix} 1 & -2 \\ 0 & 5 \end{bmatrix}$

3) ಕೊಟ್ಟಿರುವ ಸಮೀಕರಣದಿಂದ x ಮತ್ತು y ಗಳ ಬೆಲೆಗಳನ್ನು ಕಂಡುಹಿಡಿಯಿರಿ.

$$2\begin{bmatrix} x & 5 \\ 7 & y-3 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$$

ಪರಿಹಾರ: ಈಗ $2\begin{bmatrix} x & 5 \\ 7 & y-3 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$

$\Rightarrow \begin{bmatrix} 2x & 10 \\ 14 & 2y-6 \end{bmatrix} + \begin{bmatrix} 3 & -4 \\ 1 & 2 \end{bmatrix} = \begin{bmatrix} 7 & 6 \\ 15 & 14 \end{bmatrix}$

$\begin{bmatrix} 2x+3 & 10-4 \\ 14+1 & 2y-6+2 \end{bmatrix} = \begin{bmatrix} 7 & 6 \\ 15 & 14 \end{bmatrix}$

$\Rightarrow \begin{bmatrix} 2x+3 & 6 \\ 15 & 2y-4 \end{bmatrix} = \begin{bmatrix} 7 & 6 \\ 15 & 14 \end{bmatrix}$

$\Rightarrow \quad 2x + 3 = 7$ ಮತ್ತು $2y - 4 = 14$ (ಏಕೆ ?)

$\Rightarrow \quad 2x = 7 - 3$ ಮತ್ತು $2y = 18$

$\Rightarrow \quad x = \frac{4}{2}$ ಮತ್ತು $y = \frac{18}{2}$

i.e. $x = 2$ ಮತ್ತು $y = 9$

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ ಬೆಂಗಳೂರು

ದ್ವಿತೀಯ ಪಿಯುಸಿ ಗಣಿತಶಾಸ್ತ್ರದ 'ಡಿಟರ್ಮಿನೆಂಟ್ಸ್' ಅಧ್ಯಾಯದ ಓದಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪ್ರಜಾವಾಣಿ ನೋಡಿಯೊ

ಸುಭಾಷಿತ

ಹಣ ಹೂಡುವವರಿಗೆ ಇರಬೇಕಾದ ಅತ್ಯಂತ ಮುಖ್ಯವಾದ ಗುಣವೆಂದರೆ ಮನೋಧರ್ಮವೇ ವಿನಾ ಬುದ್ಧಿಶಕ್ತಿಯಲ್ಲ.
-ವಾರನ್ ಬಫೆಟ್

ಮೂಲಸೌಕರ್ಯ ವಲಯಕ್ಕೆ ಒತ್ತು ವೇತನ ವರ್ಗದ ನಿರೀಕ್ಷೆ ಹುಸಿ

ಕೇಂದ್ರ ಸರ್ಕಾರದ ಈ ಬಾರಿಯ ಬಜೆಟ್‌ನಲ್ಲಿ ಮೂಲಸೌಕರ್ಯ ಯೋಜನೆಗಳಲ್ಲಿ ಭಾರಿ ಮೊತ್ತದ ಹೂಡಿಕೆಗೆ ಒತ್ತು ಸಿಕ್ಕಿದೆ. ಆದರೆ ಮಧ್ಯಮ, ಕೆಳಮಧ್ಯಮ ವರ್ಗದವರ ಸಂಕಷ್ಟಗಳ ನಿವಾರಣೆಗೆ ಅಗತ್ಯ ಆದ್ಯತೆ ಸಿಕ್ಕಿಲ್ಲ. ಉತ್ತರಪ್ರದೇಶ, ಪಂಜಾಬ್, ಉತ್ತರಾಖಂಡ, ಗೋವಾ, ಮಣಿಪುರ ವಿಧಾನಸಭಾ ಚುನಾವಣೆಗಳು ಹೊಸ್ತಿಲಿನಲ್ಲೇ ನಿಂತಿದ್ದರೂ ಆ ಚುನಾವಣೆಗಳನ್ನು ಪ್ರಭಾವಿಸುವ ಘೋಷಣೆಗಳು ಬಜೆಟ್‌ನಲ್ಲಿ ಇಲ್ಲ. ಮೂಲಸೌಕರ್ಯ, ಸ್ವಚ್ಛ ಇಂಧನ ಹಾಗೂ ಡಿಜಿಟಲ್ ಅರ್ಥವ್ಯವಸ್ಥೆ- ಬಜೆಟ್‌ನಲ್ಲಿ ಹೆಚ್ಚಿನ ಮಹತ್ವ ಪಡೆದಿರುವ ಮೂರು ವಲಯಗಳು. ಇವುಗಳ ನಾಗಾಲೋಟದಲ್ಲಿ ಆರೋಗ್ಯ, ಶಿಕ್ಷಣ, ಕೃಷಿಯಂತಹ ಆದ್ಯತಾ ವಲಯಗಳು ಹಿಂದೆ ಬಿದ್ದಿರುವುದು ಮೇಲ್ನೋಟಕ್ಕೇ ಎದ್ದು ಕಾಣುತ್ತದೆ. ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಲ್ಲಿ ಸರ್ಕಾರ ಮಾಡಲಿರುವ ಹೂಡಿಕೆ ಪ್ರಮಾಣವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಲು ನಿರ್ಧರಿಸಲಾಗಿದೆ. ಬಜೆಟ್‌ನ ಈ ಸಂದೇಶವು ಕಾರ್ಪೊರೇಟ್ ವಲಯದ ಉತ್ಸಾಹವನ್ನಂತೂ ಇಮ್ಮಡಿಗೊಳಿಸಿದೆ. ಕೋವಿಡ್‌ನಿಂದ ತೆವಳುತ್ತಿರುವ ಅರ್ಥವ್ಯವಸ್ಥೆಗೆ ವೇಗ ತುಂಬಲು ಈ ಕ್ರಮ ಅತ್ಯಂತ ಅಗತ್ಯವಾಗಿತ್ತು. ಆ ದಿಸೆಯಲ್ಲಿ ₹ 10.68 ಲಕ್ಷ ಕೋಟಿಯಷ್ಟು ದೊಡ್ಡ ಮೊತ್ತವನ್ನು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಲ್ಲಿ ಹೂಡಿಕೆ ಮಾಡಲು ಹೊರಟಿರುವುದು ಸ್ವಾಗತಾರ್ಹ ಕ್ರಮ. ಈ ಹೂಡಿಕೆಯಿಂದ ಬೃಹತ್ ಪ್ರಮಾಣದಲ್ಲಿ ಉದ್ಯೋಗಗಳೂ ಸೃಷ್ಟಿಯಾಗಲಿವೆ ಎಂಬ ಕನಸನ್ನು ಸರ್ಕಾರ ತೇಲಿಬಿಟ್ಟಿದೆ. ಹಿಂದಿನ ಹುಸಿ ಭರವಸೆಗಳ ಕಹಿನೆನಪು ಹಸಿಯಾಗಿರುವ ಹೊತ್ತಿನಲ್ಲಿ ಈ ಕನಸು ದೇಶದ ಯುವ ಸಮುದಾಯದ ಪಾಲಿಗೆ ಬರೀ ಕನಸಾಗಿ ಉಳಿಯದಿದ್ದರೆ ಸಾಕು. ಕಾರ್ಪೊರೇಟ್ ವಲಯದ ಉತ್ಸಾಹ ಹೆಚ್ಚಿರುವುದಕ್ಕೆ ಇನ್ನೂ ಕೆಲವು ಕಾರಣಗಳಿವೆ. ಅವರ ಸಂಪತ್ತಿನ ಮೇಲೆ ಯಾವುದೇ ಹೊಸ ತೆರಿಗೆಯನ್ನು ಹೇರಲಾಗಿಲ್ಲ. ರಕ್ಷಣಾ ಇಲಾಖೆಯು ಮಾಡಲಿರುವ ಖರೀದಿಯ ಬಂಡವಾಳ ವೆಚ್ಚದಲ್ಲಿ ಶೇ 68ರಷ್ಟು ಮೊತ್ತವನ್ನು ಸ್ವದೇಶಿ ಕಂಪನಿಗಳಿಂದಲೇ ಸಲಕರಣೆ ಖರೀದಿಸಲು ಮೀಸಲಿಡಲಾಗಿದೆ.

ಬಜೆಟ್, ಕಾರ್ಪೊರೇಟ್ ವಲಯಕ್ಕೆ ಉತ್ಸಾಹ ತುಂಬಿದೆ. ಆದರೆ ಜನಸಾಮಾನ್ಯರ ಬವಣೆ ನಿವಾರಣೆಯತ್ತ ಲಕ್ಷ್ಯ ವಹಿಸಿಲ್ಲ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ ಈ ಬಜೆಟ್‌ನಿಂದ ಹೆಚ್ಚಿನ ನಿರಾಸೆ ಅನುಭವಿಸಿದ್ದು ಮಾತ್ರ ಮಧ್ಯಮವರ್ಗ ಹಾಗೂ ಕೃಷಿಕ ಸಮುದಾಯ. ಕೋವಿಡ್‌ನಿಂದ ದೇಶದ ಅರ್ಥವ್ಯವಸ್ಥೆ ಕುಂಟುತ್ತಿರುವ ಈ ಸನ್ನಿವೇಶದಲ್ಲಿ ಅದರ ಹೆಚ್ಚಿನ ಬಿಸಿಯನ್ನು ಅನುಭವಿಸಿದ್ದು ಮಧ್ಯಮವರ್ಗ. ಉದ್ಯೋಗ ನಷ್ಟ, ವೇತನ ಕಡಿತ, ಬೆಲೆ ಏರಿಕೆಯಿಂದ ಬಸವಳಿದಿರುವ ಈ ವರ್ಗವು ಆದಾಯ ತೆರಿಗೆಯಿಂದ ಒಂದಿಷ್ಟು ವಿನಾಯಿತಿಯನ್ನು ನಿರೀಕ್ಷಿಸಿತ್ತು. ಒಂದಿಷ್ಟು 'ಕೊಡುಗೆ'ಗಳನ್ನೂ ಅಪೇಕ್ಷಿಸಿತ್ತು. ಆದರೆ, ಹಣಕಾಸು ಸಚಿವರು ಆ ನಿರೀಕ್ಷೆಯನ್ನು ಹುಸಿಗೊಳಿಸಿದ್ದಾರೆ. ದೇಶದ ಆರ್ಥಿಕ ಚೇತರಿಕೆಗೆ ದೀರ್ಘಾವಧಿ ಯೋಜನೆಗಳತ್ತ ಒತ್ತು ನೀಡುವ ಭರದಲ್ಲಿ ಜನಸಾಮಾನ್ಯರಿಗೆ ತುರ್ತಾಗಿ ಬೇಕಿದ್ದ 'ಆರ್ಥಿಕ ಶಕ್ತಿ' ತುಂಬುವಲ್ಲಿ ಬಜೆಟ್ ನಿರ್ಲಕ್ಷ್ಯ ತಾಳಿದೆ. ಜನರ ಕೈಯಲ್ಲಿ ಸ್ವಲ್ಪವಾದರೂ ದುಡ್ಡು ಉಳಿಯುವಂತೆ ನೋಡಿಕೊಳ್ಳುವ ಇಚ್ಛಾಶಕ್ತಿಯನ್ನೂ ಪ್ರದರ್ಶಿಸಲಾಗಿಲ್ಲ. ಸಂಕಷ್ಟದಲ್ಲಿರುವ ಬಡವರ ಅದರಲ್ಲೂ ಕಾರ್ಮಿಕರ ಕಣ್ಣೀರು ಒರೆಸುವಂತಹ ಯಾವ ಯೋಜನೆಯೂ ಬಜೆಟ್‌ನಲ್ಲಿ ಕಾಣುತ್ತಿಲ್ಲ. ಉದ್ಯೋಗ ನಷ್ಟದಿಂದ ಹಳ್ಳಿಗಳಿಗೆ ಆಗಿರುವ ಮರುವಲಸೆಯನ್ನು ಸಚಿವರು ಗಣನೆಗೆ ತೆಗೆದುಕೊಂಡಂತಿಲ್ಲ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಮುಂಬರುವ ಹಣಕಾಸು ವರ್ಷದಲ್ಲಿ ಪ್ರಸಕ್ತ ಸಾಲಿಗಿಂತಲೂ ಶೇ 25.51ರಷ್ಟು ಕಡಿಮೆ ಅನುದಾನವನ್ನು ತೆಗೆದಿರಿಸಿರುವುದು ಇದಕ್ಕೆ ನಿದರ್ಶನ. ಗ್ರಾಮಾಂತರ ಭಾಗದಲ್ಲಿ ಹೆಚ್ಚಿರುವ ನಿರುದ್ಯೋಗ ಸಮಸ್ಯೆಗೆ ಪರಿಹಾರ ಒದಗಿಸುವ ಬಗ್ಗೆ ಸರ್ಕಾರ ಯಾವುದೇ ಸ್ಪಷ್ಟ ಯೋಜನೆ ಹೊಂದಿರುವಂತೆ ಕಾಣುತ್ತಿಲ್ಲ. ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯ ಕುರಿತು ರೈತರು ಹಲವು ನಿರೀಕ್ಷೆಗಳನ್ನು ಹೊಂದಿದ್ದರು. ಆದರೆ, ಅವರ ಹೆಚ್ಚಿನ ಬೇಡಿಕೆಗಳಿಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ. ತಂತ್ರಜ್ಞಾನ ಆಧಾರಿತ ಕೆಲವು ಯೋಜನೆಗಳನ್ನು ಪ್ರಕಟಿಸಲಾಗಿದ್ದು, ರೈತರಿಗೆ ಇದರಿಂದ ಭವಿಷ್ಯದ ಲಾಭವಷ್ಟೇ ಮಾತ್ರ ಸಿಗಲಿದೆ. ರಾಷ್ಟ್ರೀಯ ಟೆಲಿಮೆಡಿಸಿನ್ ಕಾರ್ಯಕ್ರಮವನ್ನು ಹೊರತುಪಡಿಸಿದರೆ ಆರೋಗ್ಯ ವಲಯದಲ್ಲೂ ಯಾವುದೇ ಪ್ರಮುಖ ಹೊಸ ಯೋಜನೆಯ ಘೋಷಣೆ ಇಲ್ಲ. ಶಿಕ್ಷಣ ವಲಯದ ಅನುದಾನವನ್ನು ಪ್ರಸಕ್ತ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, ಮುಂಬರುವ ಹಣಕಾಸು ವರ್ಷದಲ್ಲಿ ಶೇ 18.49ರಷ್ಟು ಹೆಚ್ಚಿಸಲಾಗಿದೆ ಎಂಬುದೇನೋ ನಿಜ. ಆದರೆ, ದೇಶದ ಶೈಕ್ಷಣಿಕ ಸೌಲಭ್ಯಗಳಿಗೆ ಇರುವ ಬೇಡಿಕೆಯನ್ನು ಗಮನಿಸಿದಾಗ ಈ ಬಾಬತ್ತು ಸಾಲದಾಗಿದೆ.

ಇಂಧನ ಕ್ಷಮತೆಯ 400 'ವಂದೇ ಭಾರತ' ರೈಲುಗಳು ಮುಂದಿನ ಮೂರು ವರ್ಷಗಳಲ್ಲಿ ಪ್ರಯಾಣಿಕರ ಸೇವೆಗೆ ಲಭ್ಯವಾಗಲಿವೆ ಎಂದು ಪ್ರಕಟಿಸಲಾಗಿದೆ. ಎಲೆಕ್ಟ್ರಿಕ್ ವಾಹನಗಳ ಬಳಕೆ ಇನ್ನೂ ಹೆಚ್ಚಲೆಂದು, ಬ್ಯಾಟರಿ ಬದಲಾಯಿಸುವ ಸೇವೆ ನೀಡುವ ಉದ್ಯಮಕ್ಕೆ ಉತ್ತೇಜನ ನೀಡುವ ಭರವಸೆಯನ್ನೂ ನೀಡಲಾಗಿದೆ. ಅಂದಹಾಗೆ, ಡಿಜಿಟಲ್ ಅರ್ಥವ್ಯವಸ್ಥೆ ಕುರಿತು ಬಜೆಟ್‌ನಲ್ಲಿ ಹೆಚ್ಚಿನ ಪ್ರಸ್ತಾಪ ಇದೆ. 'ಡಿಜಿಟಲ್ ಆಸ್ತಿ' ವಹಿವಾಟಿನ ಮೇಲೆ ಶೇ 30ರಷ್ಟು ತೆರಿಗೆ ವಿಧಿಸಲು ನಿರ್ಧರಿಸಲಾಗಿದೆ. ಈ 'ಡಿಜಿಟಲ್ ಆಸ್ತಿ'ಯ ಅರ್ಥವ್ಯಾಖ್ಯಾನ ಇನ್ನೂ ಆಗಬೇಕಿದೆ. ಕ್ರಿಪ್ಟೊಕರೆನ್ಸಿ ಮಾತ್ರ ಈ ಅರ್ಥವ್ಯಾಪ್ತಿಯಲ್ಲಿ ಬರುತ್ತದೆ ಎಂದು ಜನ ಭಾವಿಸಿರಬಹುದು. ಆದರೆ, ಅದರ ಹರವು ದೊಡ್ಡದಿದೆ. ಆರ್‌ಬಿಐನಿಂದ 'ಡಿಜಿಟಲ್ ರುಪಿ' ಸೃಷ್ಟಿಸಲಾಗುವುದು ಎಂದು ಪ್ರಕಟಿಸಿರುವುದು ಜಗತ್ತಿನ 'ಡಿಜಿಟಲ್' ಆರ್ಥಿಕ ದಾರಿಯಲ್ಲಿ ಭಾರತವೂ ಹೆಜ್ಜೆ ಹಾಕಲು ಹೊರಟಿರುವುದರ ಸಂಕೇತವಾಗಿದೆ. ಆರ್ಥಿಕ ಬೆಳವಣಿಗೆಗೆ ಎಲ್ಲ ಸಾಧ್ಯತೆಗಳನ್ನೂ ಬಳಸಿಕೊಳ್ಳುವ ಆಯ್ಕೆ ಬಜೆಟ್‌ಗೆ ಮುಕ್ತವಾಗಿದೆ. ಆದರೆ, ದೇಶದ ಅರ್ಥವ್ಯವಸ್ಥೆಯ ಆಧಾರಸ್ತಂಭಗಳಾದ ಜನಸಾಮಾನ್ಯರ ಬವಣೆಗಳು ಕಡೆಗಣನೆಗೆ ಒಳಗಾಗಬಾರದು.

ದಿನದ ಟ್ವೀಟ್

ಹೀಗೆ ಮಾಡಿ...

ನೀವು ಉದ್ಯೋಗಗಳನ್ನು ಸೃಷ್ಟಿಸಲು ಮತ್ತು ಭಾರತೀಯ ಆರ್ಥಿಕತೆಯನ್ನು ಬೆಳೆಸಲು ಬಯಸುವಿರಾ? ಹಾಗಿದ್ದರೆ ಆಸ್ಪತ್ರೆಗಳನ್ನು ನಿರ್ಮಿಸಿ, ಆರೋಗ್ಯ ಸೇವಾ ಕ್ಷೇತ್ರದಲ್ಲಿ ಹೂಡಿಕೆ ಮಾಡಿ! ಆಸ್ಪತ್ರೆಯ ಒಂದು ಹಾಸಿಗೆಯು 6-7 ಜನರಿಗೆ ಉದ್ಯೋಗ ನೀಡುತ್ತದೆ. ಆರೋಗ್ಯ ಮೂಲಸೌಕರ್ಯಕ್ಕೆ ನಾವು ಹೆಚ್ಚು ಹೂಡಿಕೆ ಮಾಡದಿರುವುದು ಅಪರಾಧವೇ ಸರಿ. #Budget2022

ಡಾ. ಅನ್ವಿತ್ ಮಂಜುನಾಥ್, ವೈದ್ಯ

ಕಿಡಿನುಡಿ

ನಾರಿ ಶಕ್ತಿಯು ನಮ್ಮ ಉಜ್ವಲ ಭವಿಷ್ಯದ ಸೂಚಿಯಾಗಿರುತ್ತದೆ. ಆದರೆ, ಒಟ್ಟು ಬಜೆಟ್‌ನಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಕ್ಕೆ 2021- 22ರಲ್ಲಿ ಶೇ 0.701ರಷ್ಟು ಪಾಲು ಸಿಕ್ಕಿದ್ದರೆ, ಈ ವರ್ಷ ಅದನ್ನು ಶೇ 0.638ಕ್ಕೆ ಇಳಿಸಲಾಗಿದೆ. ಇದು ಯಾವ ಬಗೆಯ ಸಬಲೀಕರಣ? #Budget2022

ಕ್ರಿಸ್ಟಿನಾ ಸಾಮಿ, ಅಧ್ಯಕ್ಷೆ, ಸ್ವರಾಜ್ ಇಂಡಿಯಾ ಪಕ್ಷ

25 ವರ್ಷಗಳ ಹಿಂದೆ

ಭಾನುವಾರ, 2-2-1997

• ಉತ್ತರ ಪತ್ರಿಕೆ ಫೋಟೊ ಪ್ರತಿಗಳ ನೀಡಿಕೆಗೆ ಯೋಜನೆ

ಬೆಂಗಳೂರು, ಫೆ. 1– ಮೌಲ್ಯಮಾಪನ ಕಾರ್ಯ ಪಾರದರ್ಶಕವಾಗಿರುವಂತೆ ಮಾಡಲು ದ್ವಿತೀಯ ಪಿಯುಸಿ ಮಟ್ಟದಲ್ಲಿ ಪ್ರಸಕ್ತ ಸಾಲಿನ ವಾರ್ಷಿಕ ಪರೀಕ್ಷೆಯಿಂದಲೇ ಪ್ರಾಯೋಗಿಕವಾಗಿ ವಿಜ್ಞಾನ ವಿಷಯಗಳ ಉತ್ತರ ಪತ್ರಿಕೆಗಳ ಫೋಟೊ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ನೀಡುವುದಲ್ಲದೆ, ಮರು ಮೌಲ್ಯಮಾಪನ ವ್ಯವಸ್ಥೆ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ.

ಈ ವಿಚಾರವನ್ನು ಸುದ್ದಿಗಾರರಿಗೆ ತಿಳಿಸಿದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಚ್.ಜಿ. ಗೋವಿಂದೇಗೌಡ ಅವರು, ಈ ರೀತಿ ವ್ಯವಸ್ಥೆ ಜಾರಿಗೊಳಿಸುತ್ತಿರುವುದು ದೇಶದಲ್ಲಿಯೇ ಪ್ರಥಮವಾಗಿ ಎಂದರು.

50 ವರ್ಷಗಳ ಹಿಂದೆ

ಬುಧವಾರ, 2-2-1972

• ಆಡಳಿತ ಕಾಂಗ್ರೆಸ್ ಸೇರಿದ ಎಲ್ಲ ಮಾಜಿ ಸಚಿವರಿಗೂ ಟಿಕೆಟ್

ನವದೆಹಲಿ, ಫೆ. 1– ಲೋಕಸಭೆಗೆ ನಡೆದ ಮಧ್ಯಂತರ ಚುನಾವಣೆಗಳಿಗೆ ಸ್ವಲ್ಪ ಮೊದಲು ಮೈಸೂರು ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್‌ಗೆ ಸೇರಿದ ಸಂಸ್ಥಾ ಕಾಂಗ್ರೆಸ್ಸಿನ ಮಾಜಿ ಸಚಿವರಿಗೆಲ್ಲರಿಗೂ ವಿಧಾನಸಭೆ ಚುನಾವಣೆಗೆ ಪಕ್ಷದ ಕೇಂದ್ರ ಚುನಾವಣೆ ಸಮಿತಿ ಟಿಕೆಟ್ ನೀಡಿದೆ.

ಮೈಸೂರು ರಾಜ್ಯದ 136 ವಿಧಾನಸಭೆ ಕ್ಷೇತ್ರಗಳಿಗೆ ಆಡಳಿತ ಕಾಂಗ್ರೆಸ್ ಅಭ್ಯರ್ಥಿಗಳ ಹೆಸರುಗಳನ್ನು ಅನುಮೋದಿಸಲಾಯಿತು.

• ನೂತನ ರಾಜ್ಯಪಾಲರಾಗಿ ಸುಖಾಡಿಯಾ

ಬೆಂಗಳೂರು, ಫೆ. 1– ಬೆಳಿಗ್ಗೆ ನಗರಕ್ಕೆ ಆಗಮಿಸಿದ ಮೋಹನ್ ಲಾಲ್ ಸುಖಾಡಿಯಾ ಅವರು 11.45 ಸಮಯದಲ್ಲಿ ನೂತನ ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕಾರ ಮಾಡಿದರು.

ಸಮಾರಂಭ ನಡೆದ ರಾಜಭವನದ ಔತಣ ಮಂದಿರಕ್ಕೆ ಸುಖಾಡಿಯಾ ಅವರು ಶ್ರೇಷ್ಠ ನ್ಯಾಯಮೂರ್ತಿ ಎ. ನಾರಾಯಣ ಪೈ, ಮುಖ್ಯ ಕಾರ್ಯದರ್ಶಿ ಆರ್.ಜೆ. ರೆಬೆಲ್ಲೊ ಅವರೊಡನೆ ಮೆರವಣಿಗೆಯಲ್ಲಿ ಬಂದರು.

ಏರ್ ಇಂಡಿಯಾ ಯಶಸ್ಸು ಕಾಣಲು, ಗತವೈಭವ ಮರುಕಳಿಸಲು ಮಾಡಬೇಕಾದುದೆಂದರೆ...

ಸಮಸ್ಯೆ ಇದಕ್ಕಿಂತ ಸಂಕೀರ್ಣವಾಗಲು ಸಾಧ್ಯವೇ?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಏರ್ ಇಂಡಿಯಾ ವಿಮಾನಯಾನ ಕಂಪನಿಯು ಟಾಟಾ ಸಮೂಹಕ್ಕೆ ಮರಳಿದೆ. ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದಾಗ, 1953ರಲ್ಲಿ ಏರ್ ಇಂಡಿಯಾವನ್ನು ರಾಷ್ಟ್ರೀಕರಣದ ಮೂಲಕ ಟಾಟಾ ಸಮೂಹದಿಂದ ಕಸಿದುಕೊಳ್ಳಲಾಗಿತ್ತು. ಆ ಹೊತ್ತಿನಲ್ಲಿ ಏರ್ ಇಂಡಿಯಾ ಆಕರ್ಷಕ ಕಂಪನಿಯಾಗಿತ್ತು. ಅದು ಲಾಭದಾಯಕವಾಗಿಯೂ ಇತ್ತು.

ಕಂಪನಿ ಈಗ ಹಳೆಯದಾಗಿದೆ, ಸಾಲದ ಹೊರೆ ಹೊತ್ತಿದೆ. ಸಿಬ್ಬಂದಿ ಸಂಖ್ಯೆ ಅಗತ್ಯಕ್ಕಿಂತ ಜಾಸ್ತಿಯಾಗಿದೆ. ವಿಮಾನಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗಿದೆ. ಏರ್ ಇಂಡಿಯಾವನ್ನು ಸರಿದಾರಿಗೆ ತರುವುದು ಬಹಳ ದೊಡ್ಡ ಸವಾಲು. ಟಾಟಾ ಸಮೂಹದ ಕಡೆಯಿಂದ ಬಂದಿರುವ ಮೊದಲ ಸಂದೇಶವು ಅದರ ಆದ್ಯತೆಗಳನ್ನು ಸೂಚಿಸುತ್ತಿದೆ. ಏರ್ ಇಂಡಿಯಾದ ಪ್ರಮುಖ ಮಾರ್ಗಗಳಲ್ಲಿ ನೀಡುವ ಊಟದ ಗುಣಮಟ್ಟ ಹೆಚ್ಚಿಸಲಾಗುತ್ತದೆ, ಗ್ರಾಹಕ ಸೇವೆ ಉತ್ತಮಪಡಿಸಲಾಗುತ್ತದೆ. ಇವು ಏರ್ ಇಂಡಿಯಾದ ಸೇವೆಗಳಿಂದ ಮರೆಯಾಗಿದ್ದವು.

ಇವೆಲ್ಲ ಸರಿಯಾಗಬೇಕು, ಗ್ರಾಹಕರ ನಿರೀಕ್ಷೆಗೂ ಮೀರಿದ ಸೇವೆಯನ್ನು ಒದಗಿಸಬೇಕು ಎಂದಾದರೆ, ತೆರೆಯಮರೆಯಲ್ಲಿ ಹಲವು ಕೆಲಸಗಳನ್ನು ಮಾಡಬೇಕಾಗುತ್ತದೆ. ಅತ್ಯುತ್ತಮ ಎಂಜಿನಿಯರಿಂಗ್ ಕೆಲಸಗಳು ಆಗಬೇಕು, ಒಳಾಂಗಣವು ಸುಸ್ಥಿತಿಯಲ್ಲಿ ಇರಬೇಕು, ವಿಮಾನ ಹಾರಾಟದಲ್ಲಿ ಲೋಪಗಳು ಆಗಲೇಬಾರದು, ವಿಮಾನಗಳ ನಿರ್ವಹಣೆ ಚೆನ್ನಾಗಿರಬೇಕು, ವಿಮಾನಯಾನ ಜಾಲವನ್ನು ಚೆನ್ನಾಗಿ ಯೋಜಿಸಬೇಕು, ಹಣಕಾಸು ನಿಭಾಯಿಸುವಿಕೆ ಚೆನ್ನಾಗಿರಬೇಕು. ಇವನ್ನೆಲ್ಲ ಸಾಧಿಸುವ ಶಕ್ತಿ ಟಾಟಾಗೆ ಇದೆ. ಆಡಳಿತ ನಿರ್ವಹಣೆಗೆ ಅವರಲ್ಲಿ ಸಂಪನ್ಮೂಲವಿದೆ, ಅತ್ಯುತ್ತಮ ವೃತ್ತಿಪರರನ್ನು ಜಗತ್ತಿನ ಯಾವುದೇ ಭಾಗದಿಂದ ನೇಮಕ ಮಾಡಿಕೊಳ್ಳಬಲ್ಲರು. ಆದರೆ, ಏರ್ ಇಂಡಿಯಾದ ಲೋಪಗಳನ್ನು ಸರಿಪಡಿಸಿದರಷ್ಟೇ ಸಾಕಾಗದು.

ಇಲ್ಲಿ ಕೆಲವು ರಾಚನಿಕ ಸಮಸ್ಯೆಗಳು ಇವೆ. ಟಾಟಾ ಆಡಳಿತ ಮಂಡಳಿಯ ಅಡಿಯಲ್ಲಿ ಈಗ ಮೂರು ವಿಮಾನಯಾನ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಏರ್ ಇಂಡಿಯಾ, ಏರ್ ಏಷ್ಯಾ ಮತ್ತು ವಿಸ್ತಾರಾ ಆ ಕಂಪನಿಗಳು. ಒಬ್ಬ ಪ್ರವರ್ತಕ ಮೂರು ವಿಮಾನಯಾನ ಕಂಪನಿಗಳ ಮಾಲೀಕತ್ವ ಹೊಂದಿರುವುದು ಹಾಗೂ ಮೂರೂ ಕಂಪನಿಗಳು ಭಾರಿ ನಷ್ಟ ಅನುಭವಿಸುತ್ತಿರುವುದು ಭಾರತದಲ್ಲಿ ಮಾತ್ರವೇ ಇರಬೇಕು. ಮೂರು ಭಿನ್ನ ಕಂಪನಿಗಳಿಗೆ ತಕ್ಷಣಕ್ಕೆ ಪರಿಹಾರ ಬೇಕಾಗಿದೆ.

ಆಸ್ಕರ್ ವೈಲ್ಡ್ ತನ್ನದೇ ಆದ ಶೈಲಿಯಲ್ಲಿ ಒಮ್ಮೆ, 'ಜಗತ್ತಿನಲ್ಲಿ ದುರಂತಗಳು ಎರಡು ಬಗೆಯವು ಮಾತ್ರ. ವ್ಯಕ್ತಿಗೆ ಅವನು ಬಯಸಿದ್ದು ಸಿಗದಿರುವುದು ಒಂದು ಬಗೆ. ಬಯಸಿದ್ದು ಸಿಗುವುದು ಇನ್ನೊಂದು ಬಗೆ. ಬಯಸಿದ್ದು ಹೆಚ್ಚು ಸಿಕ್ಕಷ್ಟೂ ಸಮಸ್ಯೆ ಜಾಸ್ತಿ. ಇದೇ ನಿಜವಾದ ದುರಂತ!' ಎಂದು ಹೇಳಿದ್ದ. ಏರ್ ಇಂಡಿಯಾ ಕಂಪನಿಯನ್ನು ತನ್ನದಾಗಿಸಿಕೊಳ್ಳಬೇಕು ಎಂದು ಟಾಟಾ ಸಮೂಹ ಹೊಂದಿದ್ದ ಬಯಕೆಯು, ಅವರು ವಿಸ್ತಾರಾ ಮತ್ತು ಏರ್ ಏಷ್ಯಾ ಕಂಪನಿಗಳನ್ನು ಆರಂಭಿಸುವ ಮುನ್ನವೇ ಸಾಕಾರಗೊಂಡಿದ್ದರೆ ಎಷ್ಟು ಒಳ್ಳೆಯದಿತ್ತು?! ಏರ್ ಇಂಡಿಯಾ ಬಿಡ್‌ನಲ್ಲಿ ಟಾಟಾ ಸಮೂಹ ಸೋತಿದ್ದರೆ ಒಂದಿಷ್ಟು ನಿರಾಸೆ ಆಗುತ್ತಿತ್ತಾದರೂ, ಅದೊಂದು ರೀತಿಯಲ್ಲಿ ವರವೇ ಆಗುತ್ತಿತ್ತಲ್ಲವೇ? ಏರ್ ಇಂಡಿಯಾ ಖಾಸಗೀಕರಣಕ್ಕೆ ಸರ್ಕಾರಗಳಿಗೆ ರಾಜಕೀಯ ಇಚ್ಛಾಶಕ್ತಿ ಇಲ್ಲ ಎಂಬುದನ್ನು ಅರ್ಥ ಮಾಡಿಕೊಂಡ ಟಾಟಾ, ಏರ್ ಇಂಡಿಯಾ ಬಗ್ಗೆ ಆಗಲೂ ಭಾವನಾತ್ಮಕ ಸಂಬಂಧವನ್ನು ಉಳಿಸಿಕೊಂಡೇ ಎರಡೆರಡು ವಿಮಾನಯಾನ ಕಂಪನಿಗಳನ್ನು ಆರಂಭಿಸಿತು. ಆ ಕ್ರಮವೇ ಸರಿಯಾದುದಾಗಿರಲಿಲ್ಲ. ಏರ್ ಏಷ್ಯಾ ಪ್ರಯಾಣದರ ಕಡಿಮೆ ಇರುವಾಗ, ಎರಡೂ ಕಂಪನಿಗಳ ವಿಮಾನಗಳು ಒಂದೇ ಬಗೆಯಲ್ಲಿ ಇರುವಾಗ ವಿಸ್ತಾರಾ ಪ್ರಯಾಣವನ್ನು ಏಕೆ ಆಯ್ಕೆ ಮಾಡಿಕೊಳ್ಳುತ್ತಾರೆ?

ಈಗ ಈ ಸಮಸ್ಯೆಗಳ ಜೊತೆಯಲ್ಲಿ, ಮೂರು ಬೇರೆ ಬೇರೆ ಹಿನ್ನೆಲೆಯ ಕಂಪನಿಗಳು ಮಾರುಕಟ್ಟೆ ಪಾಲಿಗಾಗಿ ಪರಸ್ಪರ ಸ್ಪರ್ಧಿಸಲಿವೆ. ಮೂರೂ ಕಂಪನಿಗಳಿಗೆ ಪ್ರತ್ಯೇಕ ಆಡಳಿತ ಮಂಡಳಿ, ಪ್ರತ್ಯೇಕ ಸಿಇಒಗಳು ಇರಲಿದ್ದಾರೆ. ವ್ಯವಸ್ಥೆ ಇದಕ್ಕಿಂತ ಹೆಚ್ಚು ಸಂಕೀರ್ಣವಾಗಲು ಸಾಧ್ಯವಿಲ್ಲ. ಒಂದು ಶತಮಾನಕ್ಕೂ ಹೆಚ್ಚಿನ ಅವಧಿಯಲ್ಲಿ ಹತ್ತು ಹಲವು ಸವಾಲುಗಳನ್ನು ಎದುರಿಸಿ ಬಂದಿರುವ ಟಾಟಾದಂತಹ ಅತ್ಯಂತ ಗೌರವಾನ್ವಿತ, ಯಶಸ್ವಿ ಉದ್ಯಮ ಸಮೂಹಕ್ಕೆ ಸಲಹೆ ಕೊಡುವುದು ದುರಹಂಕಾರ ಆಗಬಹುದು. ಈ ಎಲ್ಲ ಸಂಗತಿಗಳು ಅವರಿಗೆ ಗೊತ್ತಿರುತ್ತವೆ. ಈ ಸಮಸ್ಯೆಗಳನ್ನು ಬಗೆಹರಿಸುವುದು ಸುಲಭವಲ್ಲ. ಏರ್ ಏಷ್ಯಾ ಜೊತೆ ಏರ್ ಇಂಡಿಯಾ ವಿಲೀನ ಸುಲಭವಲ್ಲ. ವಿಸ್ತಾರಾ ಜೊತೆ ಕೂಡ ಏರ್ ಇಂಡಿಯಾ ವಿಲೀನ ಸುಲಭದ್ದಲ್ಲ. ಆದರೆ, ಏರ್ ಇಂಡಿಯಾ ಎಕ್ಸ್‌ಪ್ರೆಸ್ ಕಂಪನಿಯನ್ನು ಏರ್ ಏಷ್ಯಾ ಜೊತೆ ವಿಲೀನ ಮಾಡಬಹುದು ಎಂಬ ವರದಿಗಳು ಇವೆ. ಆ ರೀತಿ ಆದರೂ, ತಮ್ಮತಮ್ಮಲ್ಲಿಯೇ ಸ್ಪರ್ಧೆ ಒಡ್ಡಿಕೊಳ್ಳುವ ಮೂರು ವಿಮಾನಯಾನ ಕಂಪನಿಗಳು ಟಾಟಾ ಸಮೂಹದಲ್ಲಿ ಉಳಿದುಕೊಳ್ಳುತ್ತವೆ.

ಏರ್ ಡೆಕ್ಕನ್ ಮತ್ತು ಕಿಂಗ್‌ಫಿಷರ್ ವಿಲೀನಗೊಂಡಾಗ ವಿಜಯ್ ಮಲ್ಯ ಜೊತೆ ನಡೆದ ತೀವ್ರ ಚರ್ಚೆಯೊಂದನ್ನು ಇಲ್ಲಿ ಉಲ್ಲೇಖಿಸಬಹುದು. ದೇಶಿ ಯಾನಗಳು ಕಡಿಮೆ ವೆಚ್ಚದ ಏರ್ ಡೆಕ್ಕನ್ ಬ್ರ್ಯಾಂಡ್ ಅಡಿಯಲ್ಲಿ, ಪೂರ್ಣ ಪ್ರಮಾಣದ ಕಿಂಗ್‌ಫಿಷರ್ ಸೇವೆಗಳು ಅಂತರರಾಷ್ಟ್ರೀಯ ಮಾರ್ಗಗಳಲ್ಲಿ (ಬ್ಯುಸಿನೆಸ್ ಮತ್ತು ಎಕಾನಮಿ ವರ್ಗದ ಸೇವೆಗಳನ್ನು ಒದಗಿಸುತ್ತ) ಸಂಚರಿಸಬೇಕು ಎಂದು ನಮ್ಮ ನಡುವೆ ತಾತ್ವಿಕ ಒಪ್ಪಿಗೆ ಆಗಿತ್ತು. ಆದರೆ ವಿಲೀನದ ನಂತರ, ಮಲ್ಯ ಅವರು ಆಡಳಿತ ಮಂಡಳಿಯನ್ನು ಒಪ್ಪಿಸಿ ಎರಡು ವಿಮಾನಯಾನ ಕಂಪನಿಗಳನ್ನು ಸೃಷ್ಟಿಸಿದರು– ಪೂರ್ಣ ಪ್ರಮಾಣದ ಸೇವೆಗಳನ್ನು ಒದಗಿಸುವ ಕಿಂಗ್‌ಫಿಷರ್ ಏರ್‌ಲೈನ್ಸ್ ಮತ್ತು ಹಲವು ಉಚಿತ ಸೇವೆಗಳನ್ನು ನೀಡುವ ಕಿಂಗ್‌ಫಿಷರ್ ರೆಡ್ (ಏರ್ ಡೆಕ್ಕನ್ ಅನ್ನು ಈ ಹೆಸರಿಗೆ ಪರಿವರ್ತಿಸಲಾಯಿತು).

ಬೆಲೆಯ ಬಗ್ಗೆ ಹೆಚ್ಚು ಗಮನ ನೀಡುವವರು ಕಿಂಗ್‌ಫಿಷರ್ ಏರ್‌ಲೈನ್ಸ್‌ನಿಂದ ಕಿಂಗ್‌ಫಿಷರ್ ರೆಡ್ ಕಡೆ ಮುಖ ಮಾಡಿದರು. ಕಿಂಗ್‌ಫಿಷರ್ ರೆಡ್ ಬೆಲೆ ಜಾಸ್ತಿಯಾಯಿತು ಎಂದು ಭಾವಿಸಿದವರು ಇಂಡಿಗೊ ಮತ್ತು ಸ್ಪೈಸ್ ಕಡೆ ನಡೆದರು. ಎರಡೂ ಕಂಪನಿಗಳು ನಷ್ಟ ಅನುಭವಿಸಿದವು. ಕಡಿಮೆ ಆದಾಯ ವರ್ಗದವರನ್ನು ಗ್ರಾಹಕರನ್ನಾಗಿ ಸೆಳೆದುಕೊಂಡರೆ, ಎಂದೂ ಬತ್ತದ ಗ್ರಾಹಕರ ನೆಲೆ ಸಿಗುತ್ತದೆ ಎಂದು ಮಲ್ಯ ಅವರಲ್ಲಿ ಹೇಳಿದ್ದೆ. ಜನರನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅತ್ಯಂತ ಸುರಕ್ಷಿತವಾಗಿ, ಅತ್ಯಂತ ಕಡಿಮೆ ಬೆಲೆಯಲ್ಲಿ, ಸ್ವಚ್ಛವಾದ ವಿಮಾನದಲ್ಲಿ, ನಿಗದಿತ ಸಮಯಕ್ಕೆ ಸರಿಯಾಗಿ ಕರೆದೊಯ್ಯುವ ವೃತ್ತಿಯಲ್ಲಿ ನಾವು ಇದ್ದೇವೆ ಎಂದು ಹೇಳಿದೆ. ನಾಲ್ಕು ದಶಕಗಳಿಂದ ನಿರಂತರವಾಗಿ ಲಾಭದಲ್ಲಿ ಇರುವ ಸೌತ್‌ವೆಸ್ಟ್ ಏರ್‌ಲೈನ್ಸ್ ಬಗ್ಗೆಯೂ ಹೇಳಿದ್ದೆ. ಬ್ರಿಟಿಷ್ ಏರ್‌ವೇಸ್, ಏರ್ ಫ್ರಾನ್ಸ್, ಲುಫ್ತಾನ್ಸಾ ವಿಮಾನಯಾನ ಕಂಪನಿಗಳ ಉದಾಹರಣೆಯನ್ನು ನೀಡಿದ್ದೆ. ಈ ಕಂಪನಿಗಳು ಅಂತರರಾಷ್ಟ್ರೀಯ ಮಾರ್ಗದಲ್ಲಿ ಮಾತ್ರ ಬ್ಯುಸಿನೆಸ್ ಹಾಗೂ ಎಕಾನಮಿ ವರ್ಗದ ಆಸನಗಳನ್ನು ಹೊಂದಿವೆ. ಯುರೋಪಿನ ಒಳಗಿನ ಮಾರ್ಗಗಳಲ್ಲಿ ಇವು ಎಕಾನಮಿ ವರ್ಗದ ಆಸನಗಳನ್ನು ಮಾತ್ರ ಒದಗಿಸುತ್ತವೆ. ನಮ್ಮ ವಾದ–ಪ್ರತಿವಾದದಿಂದ ಏನೂ ಪ್ರಯೋಜನ ಆಗಲಿಲ್ಲ. ನಾನು ಆಡಳಿತ ಮಂಡಳಿಯಲ್ಲಿ ವಾದದಲ್ಲಿ ಸೋತೆ.

ಟಾಟಾ ಸಮೂಹ ಮುಂದೆ ಏನು ಮಾಡಬಹುದು? ಮೂರೂ ಕಂಪನಿಗಳನ್ನು ವಿಲೀನಗೊಳಿಸಲು ಎಲ್ಲ ಪ್ರಯತ್ನಗಳನ್ನು ಅವರು ಮಾಡಬೇಕು. ಗ್ರಾಹಕರಲ್ಲಿ ಬ್ರ್ಯಾಂಡ್ ವಿಚಾರವಾಗಿ ಗೊಂದಲ ಆಗದಂತೆ ನೋಡಿಕೊಳ್ಳಲು, 1940 ಹಾಗೂ 1950ರ ದಶಕದಲ್ಲಿ ಇದ್ದಂತೆ, ಒಂದೇ ಬ್ರ್ಯಾಂಡ್ ಉಳಿಸಿಕೊಳ್ಳಬೇಕು. ದೇಶಿ ಮಾರ್ಗಗಳಲ್ಲಿ ಸಂಚರಿಸುವ ಏರ್ ಇಂಡಿಯಾ, ಕಡಿಮೆ ವೆಚ್ಚದಲ್ಲಿ ಸೇವೆ ಒದಗಿಸಬೇಕು. ಅಂತರರಾಷ್ಟ್ರೀಯ ಮಾರ್ಗಗಳಲ್ಲಿ ಸಂಚರಿಸುವ ಏರ್ ಇಂಡಿಯಾ ಇಂಟರ್‌ನ್ಯಾಷನಲ್, ಎಕಾನಮಿ ಹಾಗೂ ಬ್ಯುಸಿನೆಸ್ ಆಸನಗಳನ್ನು ಒದಗಿಸಬೇಕು. ಜೆಆರ್‌ಡಿ ಟಾಟಾ ಅವರಿದ್ದ ಸಂದರ್ಭದಲ್ಲಿ ಕಡಿಮೆ ವೆಚ್ಚದಲ್ಲಿ ಸೇವೆ ನೀಡುವ ವಿಮಾನಯಾನ ಕಂಪನಿಗಳು ಇರಲಿಲ್ಲ. ದೇಶಿ ವಿಮಾನಯಾನ ಮಾರುಕಟ್ಟೆ ಚಿಕ್ಕದಾಗಿತ್ತು. ಇಂದು ಇಂಡಿಗೊ, ಸ್ಪೈಸ್, ಗೋ ಫಸ್ಟ್ ಕಂಪನಿಗಳು ಇವೆ. ಆಕಾಸಾ ಕಂಪನಿ ಕಾರ್ಯಾಚರಣೆ ಆರಂಭಿಸಲಿದೆ. ಏರ್ ಇಂಡಿಯಾ ಯಶಸ್ಸು ಕಾಣಬೇಕು ಮತ್ತು ತನ್ನ ಗತವೈಭವವನ್ನು ಮರಳಿ ಪಡೆಯಬೇಕು. ಅದರಿಂದ ಗ್ರಾಹಕರಿಗೆ, ನೌಕರರಿಗೆ, ಅರ್ಥ ವ್ಯವಸ್ಥೆಗೆ ಹಾಗೂ ದೇಶಕ್ಕೆ ಒಳ್ಳೆಯದಾಗುತ್ತದೆ.

ಲೇಖಕ: ಏರ್ ಡೆಕ್ಕನ್ ಕಂಪನಿಯ ಸಂಸ್ಥಾಪಕ

ಚುರುಮುರಿ



ಊಟಗೋಷ್ಠಿ

• ಮಣ್ಣೆರಾಜು

ಅತೃಪ್ತ ಶಾಸಕರು ಹೋಟೆಲ್‌ನಲ್ಲಿ ಸಂತೃಪ್ತಿಯಾಗಿ ಊಟ ಮಾಡಿ ತೇಗುತ್ತಾ ಹೊರ ಬರುತ್ತಿದ್ದಂತೆ ಸುತ್ತುವರಿದ ಪತ್ರಕರ್ತರು, 'ಊಟಗೋಷ್ಠಿಯಲ್ಲಿ ಏನೇನು ಚರ್ಚೆಯಾಯ್ತು ಸಾರ್?' ಎಂದು ಕೇಳಿದರು.

'ಏನಿಲ್ಲಾ, ಮುದ್ದೆ-ಸೊಪ್ಪಿನ ಸಾರು, ರೊಟ್ಟಿ-ಪಲ್ಯ, ಅನ್ನ-ರಸಂ ಬಗ್ಗೆ ಚರ್ಚೆ ಮಾಡಿದ್ವಿ ಅಷ್ಟೇ...' ಶಾಸಕರೊಬ್ಬರು ಹೇಳಿದರು.

'ಹೋಟೆಲ್ ಊಟ ಏಕೆ ಸಾರ್, ಪಕ್ಷದ ಅಡುಗೆ ಹದಗೆಟ್ಟಿದೆಯೇ?'

'ಹೌದು, ಅಡುಗೆಗೆ ವಿಪರೀತ ಹುಳಿ ಹಿಂಡಲಾಗಿದೆ. ಉಪ್ಪುಖಾರ ಏರುಪೇರಾಗಿದೆ. ಸೀದು ಹೋದ ಒಗ್ಗರಣೆ ಘಾಟು ಉಸಿರುಕಟ್ಟಿಸಿದೆ...' ಇನ್ನೊಬ್ಬ ಶಾಸಕರು ಬೇಸರಗೊಂಡರು.

'ನೀವು ಬೇರೆ ಪಕ್ಷದ ನಾಯಕರ ಸಂಪರ್ಕದಲ್ಲಿದ್ದೀರಾ?'

'ಸಂಪರ್ಕ, ಸಂಬಂಧವೇನಿಲ್ಲ, ನಮ್ಮ ನೋವಿಗೆ ಮರುಗಿದ ಆ ನಾಯಕರು, ಬೆಳ್ಳಿತಟ್ಟೆ ಭೋಜನದ ವ್ಯವಸ್ಥೆ ಮಾಡ್ತೀವಿ ಬನ್ನಿ ಎಂದು ತಮ್ಮ ಪಕ್ಷಕ್ಕೆ ಆಹ್ವಾನಿಸಿದ್ದಾರೆ'.

'ನಿಮ್ಮ ಬಗ್ಗೆ ಬೇರೆ ಪಕ್ಷದವರಿಗೆ ಇರುವಷ್ಟು ಕಾಳಜಿ ನಿಮ್ಮ ಪಕ್ಷದವರಿಗೆ ಇಲ್ಲವಲ್ಲಾ ಸಾರ್...'

'ಹೌದು, ನಮ್ಮ ಪಕ್ಷದಲ್ಲಿ ನಮಗೆ ಮೇಯ್ನ್ ಮೆನು ಸ್ಥಾನವಿಲ್ಲ, ಊಟದ ಉಪ್ಪಿನಕಾಯಿ ಆಗಿದ್ದೇವೆ. ನಾವೇನು ಬಕೆಟ್ ಮೀಲ್ಸ್ ಕೇಳುತ್ತಿಲ್ಲ, ನಮ್ಮ ಸೀನಿಯಾರಿಟಿ, ಸಿನ್ಸಿಯಾರಿಟಿಗೆ ತಕ್ಕಂತಹ ಪ್ಲೇಟ್ ಮೀಲ್ಸ್‌ನಷ್ಟಾದರೂ ಸ್ಥಾನಮಾನ ಬೇಡ್ವಾ?...' ಶಾಸಕರಿಗೆ ಸಿಟ್ಟು.

'ಬೇರೆ ಪಕ್ಷದ ಭೋಜನಕ್ಕೆ ಹೋಗ್ತೀರಾ ಸಾರ್?'

'ಹೋಗಬೇಕು ಅನ್ನಿಸಿದೆ. ಅಲ್ಲಿ ನಮಗೆ ಮೊದಲ ಪಂಕ್ತಿಗೆ ಅವಕಾಶ ಸಿಗುವುದು ಅನುಮಾನ, ಕೊನೆ ಪಂಕ್ತಿವರೆಗೂ ಕಾಯಬೇಕು. ಆ ಪಕ್ಷದ ಅಗ್ರಪಂಕ್ತಿಯ ಘಟಾನುಘಟಿಗಳು ನಮಗೆ ಉಳಿಸದಂತೆ ಪ್ರಥಮ ಪಂಕ್ತಿಯಲ್ಲೇ ಉಂಡು ಖಾಲಿ ಮಾಡ್ತಾರೇನೋ...ಆಫ್ ದಿ ರೆಕಾರ್ಡ್ ಒಂದು ಮಾತು ಹೇಳ್ತೀನಿ ಕೇಳ್ರಿ... ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ ಅನ್ನುವಂತಾಗಿ ಹೋಟೆಲ್ ಊಟ ನಂಬಿಕೊಂಡು ಅತಂತ್ರ ಆಗಿಬಿಡ್ತೀವೇನೋ ಅಂತ ಆತಂಕವೂ ಇದೆ ಕಣ್ರೀ...' ಎಂದು ಹೇಳಿ ಶಾಸಕರು ಕಾರು ಹತ್ತಿದರು.

ಸಂಗತ

ಜೀವವೈವಿಧ್ಯದ ಮ್ಯೂಸಿಯಂ

ಆರ್ಥಿಕ ಆಯಾಮಗಳಿಂದಾಗಿ ತರಿಭೂಮಿ ಇಂದು ಹೆಚ್ಚು ಅಪಾಯದಲ್ಲಿದೆ

• ಶ್ರೀಗುರು

ವಿಶ್ವದ ಕಾಲು ಭಾಗದಷ್ಟು ಸಸ್ಯ ಹಾಗೂ ಜೀವಿಪ್ರಭೇದಗಳಿಗೆ ನೆಲೆನೀಡಿ ನಿತ್ಯ ಹರಿದ್ವರ್ಣ ಕಾಡುಗಳಿಗಿಂತ ಹೆಚ್ಚಿನ ಜೀವಸಂಕುಲವನ್ನು ಸಲಹುವ ತರಿಭೂಮಿ (ಜೌಗು) ಪ್ರದೇಶಗಳನ್ನು ಜೀವವೈವಿಧ್ಯದ ಮ್ಯೂಸಿಯಂ ಎನ್ನುತ್ತೇವೆ. ವ್ಯವಸಾಯ, ಮೀನುಕೃಷಿ, ಪ್ರವಾಸೋದ್ಯಮ, ಶಕ್ತಿ ಉತ್ಪಾದನೆ, ನೀರು ಶೇಖರಣೆ–ಸರಬರಾಜು, ಜಲಸಾರಿಗೆ, ಮನರಂಜನೆಯಂತಹ ಅನೇಕ ಆರ್ಥಿಕ ಆಯಾಮಗಳಿಂದಾಗಿ ಹಿಂದೆಂದಿಗಿಂತ ಈ ಪ್ರದೇಶ ಇಂದು ಹೆಚ್ಚು ಅಪಾಯದಲ್ಲಿದೆ.

ಅರಣ್ಯಗಳಿಗಿಂತ ಹೆಚ್ಚಿನ ಸಂಕಷ್ಟ ಎದುರಿಸುತ್ತಿರುವ ಪ್ರಪಂಚದ 21 ಲಕ್ಷ ಚದರ ಕಿ.ಮೀ. ನಷ್ಟು ವ್ಯಾಪ್ತಿಯ ಜೌಗು ಪ್ರದೇಶಗಳನ್ನು ಉಳಿಸಲೆಂದೇ ಮೀಸಲಾದ 'ವಿಶ್ವ ತರಿಭೂಮಿ ದಿನ' (ಫೆ. 2) ಈ ಸಲ 'ವೆಟ್‌ಲ್ಯಾಂಡ್ಸ್ ಆ್ಯಕ್ಷನ್ ಫಾರ್ ಪೀಪಲ್ ಆ್ಯಂಡ್ ನೇಚರ್' ಎಂಬ ಧ್ಯೇಯವಾಕ್ಯದೊಂದಿಗೆ ಮತ್ತೆ ಬಂದಿದೆ.

ಸದಾ ನೀರಿನಿಂದ ಹಸಿಯಾಗಿರುವ, ನೀರು ಮತ್ತು ನೆಲ ಎರಡನ್ನೂ ಒಳಗೊಂಡ ಭೂಪ್ರದೇಶವನ್ನು ಜೌಗು ಅಥವಾ ತರಿಭೂಮಿ ಎನ್ನುತ್ತೇವೆ. ಇದು ಭೂಮಿಯ ಶೇ 6.4ರಷ್ಟು ಭೂಪ್ರದೇಶವನ್ನು ಆವರಿಸಿಕೊಂಡಿದೆ. ಅಸಂಖ್ಯ ಜಲಚರ, ಸರೀಸೃಪ, ಕೀಟ, ಸ್ತನಿ, ಶಿಲೀಂಧ್ರಗಳಿಗೆ ಆಶ್ರಯ ನೀಡುವ ತರಿಭೂಮಿ ಆಯಾ ಭೂಪ್ರದೇಶಗಳ ನೀರಿನ ಚಕ್ರ, ವಾಯುಗುಣ, ಕಾಡಿನ ಸಂರಚನೆ ಮತ್ತು ಮಣ್ಣಿನ ವೈವಿಧ್ಯಕ್ಕೆ ಅನುಗುಣವಾಗಿ ರೂಪುಗೊಳ್ಳುತ್ತದೆ. ನೈಸರ್ಗಿಕ ತರಿಭೂಮಿಗಳು ಮಳೆ ಪ್ರವಾಹವನ್ನು ತಡೆದು, ನೀರಿಂಗಿಸಿ, ಅಂತರ್ಜಲ ಹೆಚ್ಚಿಸಿ, ಹೆಚ್ಚಿನ ನೀರನ್ನು ಶೇಖರಿಸಿ ಇಟ್ಟುಕೊಂಡು ನದಿಗಳಿಗೆ ನೀರು ಹರಿಸುತ್ತಾ ಮಣ್ಣು ಮತ್ತು ಪೋಷಕಾಂಶ ಸವಕಳಿಯನ್ನು ತಡೆಯುತ್ತವೆ. ಹೊಲ-ಗದ್ದೆಗಳಿಂದ ಹರಿದು ಬರುವ ಭಾರವಾದ ಲೋಹ, ಕೆಸರು, ಸಾರಜನಕ, ರಂಜಕಗಳನ್ನು ಸೋಸಿ ತೆಗೆದು ನೀರನ್ನು ಶುದ್ಧೀಕರಿಸುತ್ತವೆ.

ಒಟ್ಟು ಐದು ಬಗೆಯ ಜೌಗು ಪ್ರದೇಶಗಳನ್ನು ಗುರುತಿಸಲಾಗಿದ್ದು ಮಾನವನಿರ್ಮಿತ ಗದ್ದೆ, ಸರೋವರ, ಜಲಾಶಯ, ಅಣೆಕಟ್ಟು, ನೀರು ನಿಲ್ಲುವ ಗಣಿಗುಂಡಿ, ತೋಡುಗಳನ್ನು ಕೃತಕ ತರಿಭೂಮಿ ಎನ್ನುತ್ತಾರೆ. ನೈಸರ್ಗಿಕವಾಗಿ ರೂಪುಗೊಂಡ ತರಿಭೂಮಿಗಳನ್ನು 'ರಾಮಸರ್' ತಾಣ ಅಥವಾ 'ರಾಮ್‌ಸರ್ ಸೈಟ್' ಎಂದು ಗುರುತಿಸುತ್ತಾರೆ. ತರಿಭೂಮಿಗಳನ್ನು ಉಳಿಸಲು 1971ರ ಫೆಬ್ರುವರಿ 2ರಂದು ಇರಾನ್‌ನ ಕ್ಯಾಸ್ಪಿಯನ್ ಸಮುದ್ರ ತೀರದ 'ರಾಮ್‌ಸರ್'ನಲ್ಲಿ ಪ್ರಥಮ ಬಾರಿಗೆ ಒಪ್ಪಂದವೇರ್ಪಟ್ಟಿದ್ದರಿಂದ ಆ ಹೆಸರು ಬಂದಿದೆ.

ನಮ್ಮಲ್ಲಿರುವ ಅರವತ್ತೈದು ಸಾವಿರ ಕೃತಕ ಮತ್ತು ಎರಡು ಸಾವಿರದ ಇನ್ನೂರು ನೈಸರ್ಗಿಕ ಜೌಗು ಪ್ರದೇಶಗಳ ಪೈಕಿ 44 ಅನ್ನು ರಾಮ್‌ಸರ್ ತಾಣಗಳೆಂದು ಗುರುತಿಸಲಾಗಿದೆ. ಒಡಿಶಾದ ಚಿಲ್ಕಾ ಲೇಕ್, ಬಂಗಾಳದ ಸುಂದರ್‌ಬನ್, ಆಂಧ್ರಪ್ರದೇಶದ ಕೊಲ್ಲೇರು, ಕೇರಳದ ಅಷ್ಟಮುಡಿ ಸರೋವರ ಪ್ರಮುಖವಾದವು. ಸಂರಕ್ಷಣೆ ಮತ್ತು ನಿರ್ವಹಣೆಗಾಗಿ 'ಕೇಂದ್ರೀಯ ಜೌಗು ಭೂಮಿ ನಿಯಂತ್ರಣ ಪ್ರಾಧಿಕಾರ' ರಚಿಸಲಾಗಿದ್ದು, ತರಿಭೂಮಿ ನಾಶ, ಒತ್ತುವರಿ ಮತ್ತು ದುರ್ಬಳಕೆ ತಡೆಯಲು ಹಲವು ಕಾನೂನುಗಳಿವೆ.

ದೇಶದ 20 ಕೋಟಿ ಜನ ಏಳೂವರೆ ಸಾವಿರ ಕಿ.ಮೀ. ಉದ್ದವಿರುವ ಕರಾವಳಿ ತೀರದಲ್ಲಿ ವಾಸವಿದ್ದು, ವಿವಿಧ ಬಗೆಯ ತರಿಭೂಮಿಯ ಮೇಲೆ ಅವಲಂಬಿತರಾಗಿದ್ದಾರೆ. ನೈಸರ್ಗಿಕ ತರಿಭೂಮಿಯಲ್ಲಿ ಮೀನು, ಸೀಗಡಿ ಕೃಷಿ ನಡೆದರೆ ಮಾನವ ನಿರ್ಮಿತ ಕೃತಕ ತರಿಭೂಮಿ ಪ್ರದೇಶವು ಪ್ರವಾಸೋದ್ಯಮ, ಕೆರೆ, ಉಪ್ಪುಕಟ್ಟೆಗಳಿಗೆ ಬಳಕೆಯಾಗುತ್ತಿದೆ. ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಮೀಕ್ಷೆಯ ಪ್ರಕಾರ, ಗಂಗಾನದಿ ಪಾತ್ರದ ಮುಕ್ಕಾಲು ಭಾಗ ಸಿಹಿ ನೀರಿನ ಜೌಗುಪ್ರದೇಶಗಳು ಕಳೆದ ಐವತ್ತು ವರ್ಷಗಳಲ್ಲಿ ನಾಶಗೊಂಡಿವೆ. ಭೂ ಸವಕಳಿ, ಹೂಳು, ನೀರಾವರಿ, ಬೇಟೆ, ಮಾನವ ವಾಸ್ತವ್ಯ, ಮೀನು-ಸೀಗಡಿ ಕೃಷಿ, ಜಲಾನಯನ ಪ್ರದೇಶದ ಹಸಿರು ನಾಶ, ಕಾಲುವೆ, ವಸತಿ ಸಮುಚ್ಚಯ, ಬಡಾವಣೆ, ಆಟದ ಮೈದಾನ, ಉದ್ಯಾನ ನಿರ್ಮಾಣ, ಕಾರ್ಖಾನೆ ಮಾಲಿನ್ಯಗಳಿಂದಾಗಿ ಅರ್ಧದಷ್ಟು ತರಿಭೂಮಿ ಪ್ರದೇಶಗಳು ಶಾಶ್ವತವಾಗಿ ಕಣ್ಮರೆಯಾಗಿವೆ.

ಕರ್ನಾಟಕದಲ್ಲಿ 682 ಜೌಗು ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವು ಬಹುಜಾತಿಯ ಮೀನು ಮತ್ತು ವಲಸೆ ಹಕ್ಕಿಗಳ ತಾಣಗಳೆನಿಸಿವೆ. ಹನ್ನೊಂದಕ್ಕೆ ರಾಮ್‌ಸರ್ ಸೈಟ್ ಮಾನ್ಯತೆ ನೀಡುವಂತೆ ಸಂಬಂಧಿಸಿದ ಪ್ರಾಧಿಕಾರಕ್ಕೆ ಬೇಡಿಕೆ ಸಲ್ಲಿಸಿ ವರ್ಷಗಳೇ ಆಗಿವೆ. ಕರ್ನಾಟಕ ತನ್ನ ಜಲಮೂಲಗಳನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಎಂದು ನೀತಿ ಆಯೋಗ ವರದಿ ನೀಡಿದೆ. ಬೆಂಗಳೂರಿನ ಹೊರವಲಯದ ಬಹುಸಂಖ್ಯೆಯ ಕೆರೆಗಳು ಘನತ್ಯಾಜ್ಯ ಮತ್ತು ಕೊಳಚೆ ನೀರಿನಿಂದ ಶುದ್ಧೀಕರಿಸಲಾರದಷ್ಟು ಹಾಳಾಗಿವೆ.

ತರಿಭೂಮಿಗಳು ನೀರಿಗೆ ಸಂಬಂಧಿಸಿದ ಏಳೆಂಟು ಇಲಾಖೆಗಳ ವ್ಯಾಪ್ತಿಗೆ ಬರುತ್ತವೆ. ನೋಡಿಕೊಳ್ಳಲು ಸಾವಿರಾರು ಅಧಿಕಾರಿಗಳು, ನೂರಾರು ಜನಪ್ರತಿನಿಧಿಗಳು ಇದ್ದಾರೆ. ಜಾಗೃತಿ ಮೂಡಿಸಲು ಬೇಕಾದ ದೊಡ್ಡ ಪಡೆಯೇ ಇದೆ. ವಾರ್ತಾ ಇಲಾಖೆಯೂ ಇದೆ. ಇಂದಿನವರೆಗೆ ತರಿಭೂಮಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಒಂದೇ ಒಂದು ಜಾಹೀರಾತು ಪತ್ರಿಕೆಗಳಲ್ಲಿ ಪ್ರಕಟವಾಗಿಲ್ಲ. ಕಾರ್ಯಕ್ರಮದ ಮಾಹಿತಿ ಇಲ್ಲ.

ಕನಿಷ್ಠಪಕ್ಷ ತರಿಭೂಮಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಪಠ್ಯಪುಸ್ತಕದ ಕೊನೆಯಲ್ಲಿ ರಾಷ್ಟ್ರಗೀತೆ ಮತ್ತು ನಾಡಗೀತೆಯ ಜೊತೆ ತರಿಭೂಮಿಯ ಮಹತ್ವದ ಬಗ್ಗೆ ಮಾಹಿತಿ ಹಾಕಬೇಕಿದೆ. ಯಾರಿಗೆ ಹೇಳುವುದು?

ವಾಚಕರ ವಾಣಿ

ಸರ್ಕಾರಿ ನೌಕರರಿಗೆ ಆತ್ಮಸ್ಥೈರ್ಯ ತುಂಬಿ

ಬೀದರ್ ಜಿಲ್ಲೆಯ ಹುಮನಾಬಾದ್‌ನಲ್ಲಿ ತಹಶೀಲ್ದಾರ್ ಮೇಲೆ ಕೆಲವರು ನಡೆಸಿರುವ ಹಲ್ಲೆಯು ಸಮಾಜ ತಲೆತಗ್ಗಿಸುವಂತಹದ್ದು. ತಾಲ್ಲೂಕು ದಂಡಾಧಿಕಾರಿ ಮೇಲೆಯೇ ಈ ರೀತಿಯ ಹಲ್ಲೆ ನಡೆದರೆ ಇನ್ನು ಕೆಳಹಂತದ ನೌಕರರು ಹೇಗೆ ಕೆಲಸ ಮಾಡಬೇಕು? ನೌಕರರು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗಳನ್ನು ತಲುಪಿಸುವ ಜವಾಬ್ದಾರಿ ಹೊತ್ತು ಕೆಲಸ ಮಾಡುತ್ತಿರುತ್ತಾರೆ. ಅಂತಹವರ ಮೇಲೆ ಈ ಬಗೆಯಲ್ಲಿ ಹಲ್ಲೆಗಳು ನಡೆದರೆ ನೌಕರರು ಭಯದಿಂದ ಕರ್ತವ್ಯ ನಿರ್ವಹಿಸುವಂತೆ ಆಗುತ್ತದೆ. ಹಲ್ಲೆ ಮಾಡಿದವರ ಮೇಲೆ ಸರ್ಕಾರ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು. ಈ ಮೂಲಕ ನೌಕರರಲ್ಲಿ ಆತ್ಮಸ್ಥೈರ್ಯ ತುಂಬಬೇಕು. ಸಾರ್ವಜನಿಕರು ಸರ್ಕಾರಿ ನೌಕರರೊಂದಿಗೆ ಸೌಜನ್ಯಯುತವಾಗಿ ವರ್ತಿಸಬೇಕು.

ಶಿವಾನಂದ, ಹಂಡಿ, ವಿಜಯಪುರ

ಬೇಕಿತ್ತು ಬಡ್ಡಿಯ ಬಾಂಡು

ಈ ಹಣಕಾಸು ವರ್ಷದಲ್ಲಿ ಗುರಿಗಿಂತ ಹೆಚ್ಚಿನ ತೆರಿಗೆ ಸಂಗ್ರಹವಾದುದರಿಂದ ಅದನ್ನು ಭರಿಸಿದ ತೆರಿಗೆದಾರರಿಗೆ ಬಹಳಷ್ಟು ವಿನಾಯಿತಿಗಳನ್ನು ಹಣಕಾಸು ಸಚಿವೆ ನೀಡಿಯಾರೆಂಬ ನಿರೀಕ್ಷೆ ಹುಸಿಯಾಗಿದೆ. ಸ್ಟ್ಯಾಂಡರ್ಡ್ ಡಿಡಕ್ಷನ್‌ನಲ್ಲಿ ಹೆಚ್ಚಿನ ಕಡಿತ, ತೆರಿಗೆ ವಿನಾಯಿತಿಯ ಮಿತಿ ಹೆಚ್ಚಳ, ಸೆಕ್ಷನ್ 80ಸಿ ಮಿತಿ ಹೆಚ್ಚಳ, ಠೇವಣಿಗಳ ಬಡ್ಡಿಯ ಮೇಲಿನ ತೆರಿಗೆಯಲ್ಲಿ ವಿನಾಯಿತಿಯಂತಹ ಯಾವುದೇ ಪ್ರಸ್ತಾವಗಳಿಲ್ಲದೆ ತೆರಿಗೆದಾರರಿಗೆ ತೀವ್ರ ನಿರಾಸೆಯಾದದ್ದಂತೂ ಹೌದು. ಲೋಕಸಭೆ ಚುನಾವಣೆ ಇನ್ನೂ ದೂರವಿರುವುದು ಇದಕ್ಕೆ ಕಾರಣವಾಗಿರಲೂಬಹುದು.

ಮೂಲಸೌಕರ್ಯ ವಲಯಕ್ಕೆ ಒತ್ತು ನೀಡಿರುವಾಗ ಹೆಚ್ಚಿನ ಬಡ್ಡಿಯ ಬಾಂಡುಗಳನ್ನು ಘೋಷಿಸಿದ್ದರೆ ಸರ್ಕಾರಕ್ಕೂ ಸಂಪನ್ಮೂಲ ದೊರಕುತ್ತಿತ್ತು, ಜನಸಾಮಾನ್ಯರಿಗೂ ಹೆಚ್ಚಿನ ಬಡ್ಡಿ ಸಿಗುತ್ತಿತ್ತು.

ಭರತ್ ಬಿ.ಎನ್., ಬೆಂಗಳೂರು

ನಿಮ್ಹಾನ್ಸ್‌ಗೆ ಸೇರುವುದೆಂದರೆ...

ರಾಜಕಾರಣಿಗಳು ಇತ್ತೀಚೆಗೆ ಪರಸ್ಪರ ಬೈದಾಡಿಕೊಳ್ಳುವ ಭರದಲ್ಲಿ 'ನಿಮ್ಹಾನ್ಸ್‌ಗೆ ಸೇರಿಸಬೇಕು' ಎನ್ನುವುದು ಹೆಚ್ಚಾಗಿದೆ. ನಿಮ್ಹಾನ್ಸ್‌ಗೆ ಸೇರುವವರೆಲ್ಲಾ ಈ ರಾಜಕಾರಣಿಗಳು ಭಾವಿಸಿದಂತಹವರೇ ಆಗಿರಬೇಕೆಂದಿಲ್ಲ. ಸಣ್ಣ ಪ್ರಮಾಣದ ಆಪ್ತಸಮಾಲೋಚನೆಗೂ ಅಲ್ಲಿಗೆ ಹೋಗುವವರಿದ್ದಾರೆ. ಅದರ ಹೊರತಾಗಿ ನರಸಂಬಂಧಿ ರೋಗಗಳ ಚಿಕಿತ್ಸೆಗೂ ಅದು ಹೆಸರುವಾಸಿಯಾಗಿದೆ. ರಸ್ತೆ ಅಪಘಾತದಲ್ಲಿ ತಲೆಗೆ ಬಲವಾದ ಪೆಟ್ಟು ಬಿದ್ದರೆ ಮೊದಲು ನೆನಪಾಗುವುದೇ ನಿಮ್ಹಾನ್ಸ್. ಈ ಸಣ್ಣ ಸೂಕ್ಷ್ಮವನ್ನೂ ಅರಿಯದೆ, ಬೈಗುಳಕ್ಕೆ ನಿಮ್ಹಾನ್ಸ್ ಸಂಸ್ಥೆಯನ್ನು ಪದೇ ಪದೇ ಎಳೆದುತರುವುದು ಇವರ ಮಾನಸಿಕ ಆರೋಗ್ಯದ ಬಗೆಗೇ ಅನುಮಾನ ಮೂಡಿಸುತ್ತದೆ.

ರವಿಕಿರಣ್ ಶೇಖರ್, ಬೆಂಗಳೂರು

ಗೌರವ ಇಮ್ಮಡಿಸಿದ ಆದೇಶ

ಐದು ವರ್ಷಗಳ ಹಿಂದೆ ತುಮಕೂರು ನಗರದ ಸೇತುವೆಯೊಂದರ ಬಳಿ ನಸುಕಿನಲ್ಲಿ ಬುದ್ಧಿಮಾಂದ್ಯ ಮಹಿಳೆ ಮೇಲೆ ಕರ್ತವ್ಯನಿರತ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಒಬ್ಬರು, ಸಹಾಯ ಮಾಡುವ ನೆಪದಲ್ಲಿ ಅತ್ಯಾಚಾರ ಎಸಗಿದ್ದ ಹೇಯ ಪ್ರಕರಣ ರಾಜ್ಯದಾದ್ಯಂತ ಭಾರಿ ಸುದ್ದಿಯಾಗಿತ್ತು. ರಕ್ಷಣೆ ಕೊಡಬೇಕಾಗಿದ್ದ ಪೊಲೀಸ್ ಅಧಿಕಾರಿಯೇ ಇಂತಹ ನೀಚ ಕೃತ್ಯ ಎಸಗಿದ್ದು ಪೊಲೀಸ್ ಇಲಾಖೆಗೆ ತೀವ್ರ ಮುಜುಗರ ಉಂಟುಮಾಡಿತ್ತು. ಈ ಘೋರ ಪ್ರಕರಣಕ್ಕೆ ಸಂಬಂಧಿಸಿದಂತೆ ತುಮಕೂರಿನ ಎರಡನೇ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿರುವುದರಿಂದ ಇಡೀ ರಾಜ್ಯದ ಜನತೆ ನ್ಯಾಯಾಂಗದ ಬಗ್ಗೆ ಭಾರಿ ಹೆಮ್ಮೆ ಪಡುವಂತಾಗಿದೆ. ಇದು ಮಹಿಳಾ ದೌರ್ಜನ್ಯದ ವಿರುದ್ಧ ಸಿಕ್ಕ ಭಾರಿ ಗೆಲುವು ಕೂಡ. ಸಂತ್ರಸ್ತೆ ಪರ ವಾದಿಸಿ ಕಾನೂನು ಜಯ ದೊರಕಿಸಿಕೊಟ್ಟ ಸರ್ಕಾರಿ ಅಭಿಯೋಜಕಿ ಅಭಿನಂದನಾರ್ಹರು.

ಜಿ.ರಾಜಣ್ಣ, ದಾವಣಗೆರೆ

ಅನಿವಾರ್ಯವಾಗಿ ನೀಡಿದ ಕೊರತೆ ಬಜೆಟ್

'ಬಜೆಟ್ ಮಂಡನೆಗೆ ಸಂಜೆಯೇ ಸೂಕ್ತ ಎಂಬ ರಾಮಚಂದ್ರ ಎಸ್. ಕುಲಕರ್ಣಿ ಅವರ ಪತ್ರ (ವಾ.ವಾ., ಜ. 28) ಓದಿ ಆಶ್ಚರ್ಯವಾಯಿತು. ಅದು ವಿರಾಮವಾಗಿ ಸವಿಯುವ ವಸ್ತುವೇ? ಆರ್ಥಿಕ ವಿಶ್ಲೇಷಣೆಯ ಸ್ಥಿತಿಯನ್ನು ತಿಳಿಸುತ್ತದೆ. ಈ ಆರ್ಥಿಕ ವರ್ಷದ ಉಳಿದ ಅವಧಿಯಲ್ಲಿ ಅಂದಾಜುಗಳನ್ನು ಪುನರ್ವಿಮರ್ಶಿಸಲು, ಮುಂದೆ ಏನು ಮಾಡುತ್ತೇವೆ ಎಂದು ಹೇಳಲು ಬಜೆಟ್ ಭಾಷಣ ಒಂದು ಸಂದರ್ಭ ಅಷ್ಟೇ. ಈಗ ಬೆಳಿಗ್ಗೆ ಮಂಡಿಸಿದ್ದಾರೆ- ಸುಮಾರು ತೊಂಬತ್ತು ನಿಮಿಷಗಳಲ್ಲಿ (ಸ್ಪೀಕರ್ ಮೊದಲಿನಿಂದಲೇ ಗಡಿಯಾರದತ್ತ ನೋಡುತ್ತ ಗಮನ ಸೆಳೆಯುತ್ತಿದ್ದರು!). ಮಹಾಭಾರತದ ಶಾಂತಿಪರ್ವದ ಸಾಲುಗಳ ಸಾರಾಂಶವಷ್ಟೇ ಉಲ್ಲೇಖಗೊಂಡದ್ದು ಒಳ್ಳೆಯದಾಯಿತು.

ಬಜೆಟ್‌ನಿಂದ ಬದುಕು ಬದಲಾಗುವುದೇ ಎನ್ನುವುದು ಮುಖ್ಯ. ಕೇಂದ್ರದ ಮಟ್ಟದಲ್ಲಿ ಆಗಬೇಕಾದ ವಿಷಯಗಳಿರುತ್ತವೆ. ಉದಾಹರಣೆಗೆ, ಏರ್ ಇಂಡಿಯಾದ ಖಾಸಗೀಕರಣ ಮುಗಿಯಿತು, ಮುಂದಿನ ಸರತಿ ಎಲ್‌ಐಸಿ ಮತ್ತು ನೀಲಾಚಲ್ ಇಸ್ಪಾತ್. ರಾಜ್ಯಗಳು ಮಾಡುವ ಕೆಲಸಗಳಿಗೆ ಬೆಂಬಲ ನೀಡುವ ಕ್ರಮಗಳಿರುತ್ತವೆ. ಬಡ್ಡಿರಹಿತ ದೀರ್ಘಕಾಲದ ಸಾಲ ₹ 1500 ಕೋಟಿ ಇರುವುದನ್ನು ₹ 1 ಲಕ್ಷ ಕೋಟಿಗೆ ಏರಿಸಲಾಗಿದೆ. ಆದರೆ ಇದರ ಸದುಪಯೋಗವನ್ನು ಎಷ್ಟು ರಾಜ್ಯಗಳು ಮಾಡಿಕೊಳ್ಳುವವೋ ನೋಡಬೇಕು. ಸಂಸ್ಥೆಗಳ ಹೊಣೆಗಾರಿಕೆಯೂ ಇದೆ. ಸಹಕಾರಿ ಸೊಸೈಟಿಗಳಲ್ಲಿ ಒಂದು ವರ್ಗಕ್ಕೆ ತೆರಿಗೆ ಭಾರ ಇಳಿಸಲಾಗಿದೆ. ಕೃಷಿ ವಿಶ್ವವಿದ್ಯಾಲಯಗಳ ಪಠ್ಯ ಬದಲಾಗಬೇಕು- ಅದನ್ನು ಸರ್ಕಾರಗಳು ಮಾಡುವುದಲ್ಲ. ಒಟ್ಟಾರೆ ಸಮಸ್ಯೆಗಳು ಇವೆ ಎಂದು ಒಪ್ಪಿಕೊಂಡು ಅನಿವಾರ್ಯವಾಗಿ ಕೊರತೆ ಬಜೆಟ್ ನೀಡಲಾಗಿದೆ. ಕರಗಳನ್ನು ಹೆಚ್ಚಿಸಲು ಹೋಗಿಲ್ಲ. ಸಾರ್ವಜನಿಕ ಬಂಡವಾಳ ಹೂಡಿಕೆಯನ್ನು ಶೇ 35ರಷ್ಟು ಹೆಚ್ಚಿಸಿದರೂ ಖಾಸಗಿ ರಂಗವೂ ಹಾಗೆ ಮಾಡುವುದೇ ಹೇಳಲಾಗದು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಂಗ್ರೆಸ್ ಮುಖಂಡ ಕಾಂಗ್ ಎಎಪಿಗೆ

ಚಂಡೀಗಡ (ಪಿಟಿಐ): ಕಾಂಗ್ರೆಸ್ ಮುಖಂಡ ಮತ್ತು ಪಂಜಾಬ್‌ನ ಮಾಜಿ ಸಚಿವ ಜಗಮೋಹನ್ ಸಿಂಗ್ ಕಾಂಗ್ ಅವರು ಎಎಪಿಗೆ ಮಂಗಳವಾರ ಸೇರ್ಪಡೆಯಾಗಿದ್ದಾರೆ. ಖರರ್ ವಿಧಾನಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಅವರಿಗೆ ಕಾಂಗ್ರೆಸ್ ಪಕ್ಷವು ಟಿಕೆಟ್ ನಿರಾಕರಿಸಿತ್ತು.

ಕಾಂಗ್ ಅವರ ಮಕ್ಕಳಾದ ಯಾದವಿಂದ್ರ ಸಿಂಗ್ ಕಾಂಗ್ ಮತ್ತು ಅಮರಿಂದರ್ ಸಿಂಗ್ ಕಾಂಗ್ ಅವರೂ ಎಎಪಿಗೆ ಸೇರಿದ್ದಾರೆ.

'ಮೂರು ಬಾರಿ ಸಚಿವರಾಗಿದ್ದ ಕಾಂಗ್ ಅವರು ಪಂಜಾಬ್ ಕಾಂಗ್ರೆಸ್‌ನಿಂದ ಭ್ರಮನಿರಸನಗೊಂಡು ಎಎಪಿ ಸೇರಿದ್ದಾರೆ. ಯುವ ಕಾಂಗ್ರೆಸ್ ಮುಖಂಡರಾಗಿದ್ದ ಯಾದವಿಂದ್ರ ಮತ್ತು ಅಮರಿಂದರ್ ಅವರೂ ಎಎಪಿಗೆ ಸೇರ್ಪಡೆಯಾಗಿದ್ದಾರೆ. ಈ ಮೂವರನ್ನು ಅರವಿಂದ ಕೇಜ್ರಿವಾಲ್ ಅವರು ಪಕ್ಷಕ್ಕೆ ಬರಮಾಡಿಕೊಂಡಿದ್ದಾರೆ. ದಿನ ಕಳೆದಂತೆ ಪಂಜಾಬ್ ಎಎಪಿ ಬಲಯುತವಾಗುತ್ತಲೇ ಸಾಗುತ್ತಿದೆ' ಎಂದು ಪಂಜಾಬ್ ಎಎಪಿ ಉಸ್ತುವಾರಿ ರಾಘವ ಛಡ್ಡಾ ಟ್ವೀಟ್ ಮಾಡಿದ್ದಾರೆ.

ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ತಮಗೆ ಟಿಕೆಟ್ ನೀಡುವುದಕ್ಕೆ ವಿರುದ್ಧವಾಗಿದ್ದರು ಕಾಂಗ್ ಆರೋಪಿಸಿದ್ದಾರೆ.

ಬಿಜೆಪಿ, ಎಸ್‌ಪಿಯಿಂದ ವಂಚನೆ: ಯಾವ ಪಕ್ಷಕ್ಕೂ ಮತ ಹಾಕದಿರುವ ಬಗ್ಗೆ ಚಿಂತನೆ

ನೋಟಾದತ್ತ ಲಖಿಂಪುರ ರೈತರ ಚಿತ್ತ

ಮತದಾನ ಮಾಡುವಂತೆ ಜನರಲ್ಲಿ ಜಾಗೃತಿಗಾಗಿ ಶಿಕ್ಷಕರು ಉತ್ತರ ಪ್ರದೇಶದ ಮೊರಾದಾಬಾದ್‌ನಲ್ಲಿ ಮಂಗಳವಾರ ದ್ವಿಚಕ್ರ ವಾಹನ ರ‍್ಯಾಲಿ ನಡೆಸಿದರು –ಪಿಟಿಐ ಚಿತ್ರ

ಲಖಿಂಪುರ ಖೇರಿ (ಉತ್ತರ ಪ್ರದೇಶ) (ಪಿಟಿಐ): ಕಳೆದ ಅಕ್ಟೋಬರ್‌ನಲ್ಲಿ ಎಸ್‌ಯುವಿ ಹರಿಸಿ ನಾಲ್ವರು ರೈತರ ಹತ್ಯೆ ಪ್ರಕರಣದ ಆಘಾತ ಲಖಿಂಪುರ ಖೇರಿಯ ರೈತರ ಮನಸ್ಸಿನಿಂದ ಇನ್ನೂ ಮಾಸಿಲ್ಲ. ಈ ಪ್ರದೇಶದ ರೈತರು ಈ ಬಾರಿ ನೋಟಾ (ಯಾರಿಗೂ ಮತ ಇಲ್ಲ) ಮತ ಹಾಕುವ ಯೋಚನೆಯಲ್ಲಿ ಇದ್ದಾರೆ.

ರಾಜ್ಯದ ಎರಡು ಮುಖ್ಯ ರಾಜಕೀಯ ಪಕ್ಷಗಳಾದ ಬಿಜೆಪಿ ಮತ್ತು ಎಸ್‌ಪಿ ತಮಗೆ ಮೋಸ ಮಾಡಿವೆ. ಇತರ ಪಕ್ಷಗಳು ಲೆಕ್ಕಕ್ಕೆ ಇಲ್ಲ ಎಂದು ಇಲ್ಲಿನ ರೈತರು ಹೇಳಿದ್ದಾರೆ.

ಲಖಿಂಪುರ ಖೇರಿ ಜಿಲ್ಲೆಯ ಜನರಲ್ಲಿ ಹೆಚ್ಚಿನವರು ರೈತರು. ಕೃಷಿ ಕಾಯ್ದೆಗಳ ಕಾರಣಕ್ಕಾಗಿ ಬಿಜೆಪಿಗೆ ಮತ ಹಾಕಲು ಇಲ್ಲಿನ ರೈತರಿಗೆ ಮನಸ್ಸಿಲ್ಲ. ಸಕ್ಕರೆ ಕಾರ್ಖಾನೆಯ ಮಾಲೀಕರು ರೈತರಿಗೆ ನೀಡಬೇಕಿದ್ದ ₹2,000 ಕೋಟಿ ಬಡ್ಡಿಯನ್ನು ಈ ಹಿಂದೆ ಅಧಿಕಾರದಲ್ಲಿ ಇದ್ದ ಎಸ್‌ಪಿ ಸರ್ಕಾರ ರದ್ದು ಮಾಡಿತ್ತು. ಹಾಗಾಗಿ, ಆ ಪಕ್ಷಕ್ಕೂ ಮತ ಹಾಕುವುದಿಲ್ಲ ಎಂದು ರೈತರು ಹೇಳುತ್ತಿದ್ದಾರೆ.

ಚುನಾವಣೆ ಸಮಯದಲ್ಲಿ ಭರವಸೆ ನೀಡುವ ರಾಜಕಾರಣಿಗಳು, ಚುನಾವಣೆಯ ಬಳಿಕ ಯಾವುದೇ ಕೆಲಸ ಮಾಡುವುದಿಲ್ಲ. ಹಾಗಾಗಿ, ಈ ಬಾರಿ ನೋಟಾ ಮತ ಚಲಾಯಿಸುವುದಾಗಿ ಹಲವು ರೈತರು ಹೇಳಿದ್ದಾರೆ.

ಬಿಜೆಪಿ, ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಪಕ್ಷಗಳು ಹುಸಿ ಭರವಸೆ ಕೊಡುತ್ತವೆ. ಚುನಾವಣೆ ಸಮಯದಲ್ಲಿ ತಮ್ಮನ್ನು ವಸ್ತುಗಳ ರೀತಿ ಬಳಸುತ್ತವೆ ಎಂದು ಮರೌಚ ಗ್ರಾಮದ ರೈತರ ಜಗಪಾಲ್ ಧಿಲ್ಲೋನ್ ಹೇಳುತ್ತಾರೆ.

'ಯಾವುದೇ ರಾಜಕೀಯ ಪಕ್ಷದ ಮೇಲೆ ನಮಗೆ ಭರವಸೆ ಇಲ್ಲ. ಅಕ್ಟೋಬರ್ 3ರಂದು ತಿಕೋನಿಯಾದಲ್ಲಿ ನಡೆದ ಘಟನೆಯ ಫಲವನ್ನು ಬಿಜೆಪಿ ಅನುಭವಿಸಲೇಬೇಕು' ಎಂದು ಅವರು ಹೇಳಿದ್ದಾರೆ.

ಲಖಿಂಪುರ ಖೇರಿಯ ತಿಕೋನಿಯಾ ಗ್ರಾಮದಲ್ಲಿ ಅಕ್ಟೋಬರ್ 3ರಂದು ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಎಸ್‌ಯುವಿ ಹರಿಸಿ ನಾಲ್ವರು ರೈತರು ಹತ್ಯೆ ಮಾಡಲಾಗಿತ್ತು. ಕೇಂದ್ರ ಸಚಿವ ಅಜಯ್ ಮಿಶ್ರಾ ಅವರ ಮಗ ಆಶಿಶ್ ಮಿಶ್ರಾ ಅವರು ಈ ಎಸ್‌ಯುವಿ ಚಲಾಯಿಸುತ್ತಿದ್ದರು ಎಂದು ಹೇಳಲಾಗಿದೆ.

ಕೇವಲ್ ಸಿಂಗ್ ಮತ್ತು ಅವರ ಇಬ್ಬರು ಸಹೋದರರಿಗೆ ಜತೆಯಾಗಿ 45 ಎಕರೆ ಜಮೀನು ಇದೆ. ಸಕ್ಕರೆ ಕಾರ್ಖಾನೆ ಮಾಲೀಕರು ರೈತರಿಗೆ ನೀಡಬೇಕಿದ್ದ ₹2,000 ಕೋಟಿ ಬಡ್ಡಿಯನ್ನು ಅಖಿಲೇಶ್ ಯಾದವ್ ನೇತೃತ್ವದ ಸರ್ಕಾರವು ರದ್ದು ಮಾಡಿದ್ದನ್ನು ಮರೆಯಲು ಸಾಧ್ಯವೇ ಇಲ್ಲ ಎಂದು ಕೇವಲ್ ಸಿಂಗ್ ಹೇಳಿದ್ದಾರೆ.

ಆದರೆ, ರೈತರ ಆದಾಯವನ್ನು ದುಪ್ಪಟ್ಟು ಮಾಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದ ಬಿಜೆಪಿ ಆಳ್ವಿಕೆಯಲ್ಲಿ ರೈತರ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಯಿತು ಎಂದು ಕೇವಲ್ ಸಿಂಗ್ ವಿವರಿಸಿದ್ದಾರೆ.

1966ರ ಕಬ್ಬು ನಿಯಂತ್ರಣ ಆದೇಶದ ಪ್ರಕಾರ, ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿ ಮಾಡಬೇಕಿರುವ ಮೊತ್ತವನ್ನು 14 ದಿನದಲ್ಲಿ ಪಾವತಿ ಮಾಡದೇ ಇದ್ದರೆ ಅದಕ್ಕೆ ಶೇ 15ರಷ್ಟು ಬಡ್ಡಿ ಪಾವತಿಸಬೇಕು. ವಿವಿಧ ಕಾರ್ಖಾನೆಗಳು ಪಾವತಿಸಬೇಕಿದ್ದ ಮೊತ್ತವು ₹2,000 ಕೋಟಿ ಆಗಿತ್ತು. ಸಕ್ಕರೆ ಕಾರ್ಖಾನೆಗಳು ಸಂಕಷ್ಟದ ಸ್ಥಿತಿಯಲ್ಲಿವೆ ಎಂಬ ಕಾರಣಕ್ಕೆ ಬಡ್ಡಿಯನ್ನು ಮನ್ನಾ ಮಾಡಿ ಸರ್ಕಾರ ಆದೇಶಿಸಿತ್ತು.

ಈ ಬಾರಿ ಯಾರಿಗೆ ಮತ ಹಾಕುತ್ತೀರಿ ಎಂಬ ಪ್ರಶ್ನೆಗೆ ಕೇವಲ್ ಸಿಂಗ್ ಉತ್ತರಿಸಿದ್ದು ಹೀಗೆ: 'ಬಿಜೆಪಿ ಮತ್ತು ಎಸ್‌ಪಿಯ ವಿಚಾರದಲ್ಲಿ ಯಾವುದೇ ಭರವಸೆ ಉಳಿದಿಲ್ಲ. ಉಳಿದ ಪಕ್ಷಗಳಿಗೆ ಅರ್ಥವೇ ಇಲ್ಲ. ದೊಡ್ಡ ಸಂಖ್ಯೆಯ ರೈತರು ಮತ ಹಾಕದೇ ಇರಲು ನಿರ್ಧರಿಸಿದ್ದಾರೆ. ನೋಟಾ ಮತ ಹಾಕುವ ಬಗ್ಗೆ ಯೋಚನೆ ಇದೆ'.

ಬಿಜೆಪಿ ಮತ್ತು ಎಸ್‌ಪಿ ರೈತರನ್ನು ವಂಚಿಸಿವೆ ಎಂದು ರಾಷ್ಟ್ರೀಯ ಕಿಸಾನ್ ಮಜ್ದೂರ್ ಸಂಘಟನೆಯ ವಿ.ಎಂ. ಸಿಂಗ್ ಅವರೂ ಹೇಳಿದ್ದಾರೆ.

ಲಖಿಂಪುರ ಖೇರಿಯ ಶೇ 75ರಷ್ಟು ರೈತರು ಕಬ್ಬು ಬೆಳೆಯುತ್ತಾರೆ. ಇಲ್ಲಿ ಒಂಬತ್ತು ಸಕ್ಕರೆ ಕಾರ್ಖಾನೆಗಳಿವೆ.

'ನಮ್ಮ ಬಾಕಿ ನಮಗೆ ದೊರೆಯಲಿದೆ ಎಂದು ನರೇಂದ್ರ ಮೋದಿ ಅವರು ಭರವಸೆ ಕೊಟ್ಟಿದ್ದರು. ಬಾಕಿ ದೊರೆಯುವುದನ್ನು ತಮ್ಮ ಪಕ್ಷವು ಖಚಿತಪಡಿಸಲಿದೆ ಎಂದಿದ್ದರು. ಆದರೆ, ಐದು ವರ್ಷವಾದರೂ ಈ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ' ಎಂದು ರೈತ ನಾಯಕ ಅಂಜನಿ ದೀಕ್ಷಿತ್ ಅವರು ಹೇಳಿದ್ದಾರೆ.

ವಿಶೇಷ ವೀಕ್ಷಕರಾಗಿ ನಿವೃತ್ತ ಅಧಿಕಾರಿಗಳ ನೇಮಕ

ನವದೆಹಲಿ (ಪಿಟಿಐ): ಐದು ರಾಜ್ಯಗಳ ವಿಧಾನಸಭಾ ಚುನಾವಣೆಗೆ ವಿಶೇಷ ವೀಕ್ಷಕರನ್ನಾಗಿ 15 ಮಂದಿ ಮಾಜಿ ಅಧಿಕಾರಿಗಳನ್ನು ನೇಮಿಸಿ ಚುನಾವಣಾ ಆಯೋಗವು ಮಂಗಳವಾರ ಆದೇಶ ಹೊರಡಿಸಿದೆ.

ಈ ವೀಕ್ಷಕರು ಅವರನ್ನು ನಿಯೋಜಿಸಿರುವ ರಾಜ್ಯದಲ್ಲಿ ಚುನಾವಣಾ ಕೆಲಸಗಳ ಮೇಲೆ ನಿಗಾ ಇರಿಸಲಿದ್ದಾರೆ. ಗುಪ್ತಚರ ಮಾಹಿತಿ ಮತ್ತು ದೂರುಗಳ ಆಧಾರದಲ್ಲಿ ಅವರು ಕಠಿಣ ಕ್ರಮಗಳನ್ನು ಕೈಗೊಳ್ಳಲಿದ್ದಾರೆ. ಮುಕ್ತ, ನ್ಯಾಯಸಮ್ಮತ ಮತ್ತು ಮತದಾರಸ್ನೇಹಿಯಾಗಿ ಚುನಾವಣೆ ನಡೆಯಲು ಈ ವೀಕ್ಷಕರು ಆಯೋಗದ ಕಣ್ಣು ಮತ್ತು ಕಿವಿಗಳಾಗಿ ಕೆಲಸ ಮಾಡಲಿದ್ದಾರೆ ಎಂದು ಆಯೋಗವು ಹೇಳಿದೆ.

ಈ 15 ವೀಕ್ಷಕರು ಸಾಮಾನ್ಯ, ಪೊಲೀಸ್ ಮತ್ತು ವೆಚ್ಚ ವೀಕ್ಷಕರಾಗಿ ಗೋವಾ, ಮಣಿಪುರ, ಪಂಜಾಬ್, ಉತ್ತರಾಖಂಡ ಮತ್ತು ಉತ್ತರ ಪ್ರದೇಶದಲ್ಲಿ ಕೆಲಸ ಮಾಡಲಿದ್ದಾರೆ.

ಈ ವೀಕ್ಷಕರು ತಮ್ಮ ನಿಯೋಜಿತ ರಾಜ್ಯಗಳಿಗೆ ಭೇಟಿ ನೀಡಿ, ಅಲ್ಲಿನ ಮುಖ್ಯ ಚುನಾವಣಾಧಿಕಾರಿ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಜತೆಗೆ ಕೆಲಸ ಮಾಡಲಿದ್ದಾರೆ.

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 34

ಪಂಚಾಕ್ಷರೀಮಂತ್ರ ಬೋಧಿಸಿದ ಶಿವ

ಜಗದ್ಗುರುವಾದ ಪಾರ್ವತೀಸಹಿತನಾದ ಶಿವನು ಬ್ರಹ್ಮವಿಷ್ಣು ಇಬ್ಬರನ್ನೂ ಉತ್ತರಮುಖವಾಗಿ ನಿಲ್ಲಿಸಿ, ಯಾರಿಗೂ ಕಾಣದಿರುವಂತೆ ಅವರ ಮೇಲೆ ಬಟ್ಟೆಗಳನ್ನು ಹೊದಿಸಿದ ನಂತರ, ಆ ಬ್ರಹ್ಮ-ವಿಷ್ಣು ಶಿರಸ್ಸಿನ ಮೇಲೆ ತನ್ನ ಕಮಲದಂತಿರುವ ಕೈಯನ್ನಿಟ್ಟು ಅವರಿಗೆ ಪಂಚಾಕ್ಷರೀಮಂತ್ರವನ್ನು ಉಪದೇಶಿಸಿದ. ಗುರುವಾದ ಪರಮೇಶ್ವರನು ಪೂರ್ವಮುಖವಾಗಿ ಕುಳಿತು, ಶಿಷ್ಯರಾದ ಬ್ರಹ್ಮವಿಷ್ಣು ಇಬ್ಬರನ್ನು ಉತ್ತರಾಭಿಮುಖವಾಗಿ ಕುಳ್ಳಿರಿಸಿ ಅವರಿಗೆ ಶಿವಪಂಚಾಕ್ಷರೀ ಮಂತ್ರೋಪದೇಶವನ್ನು ಮಾಡಿದ.

ಮಂತ್ರಯಂತ್ರಗಳೊಡನೆ ಅವರಿಗೆ ಬಾಯಿಪಾಠ ಮಾಡಿಸಿದ ಬಳಿಕ, ತನ್ನ ಶಿಷ್ಯರಾದ ಬ್ರಹ್ಮವಿಷ್ಣು ಇಬ್ಬರನ್ನು ತನ್ನ ಬಲಭಾಗದಲ್ಲಿರಿಸಿಕೊಂಡ. ನಂತರ ಬ್ರಹ್ಮವಿಷ್ಣು ಇಬ್ಬರೂ ಶಿವನ ಬಳಿಯಲ್ಲಿ ನಿಂತು, 'ನಿರಾಕಾರ ರೂಪವುಳ್ಳ ಓ ಶಿವನೇ! ನಿನಗೆ ನಮಸ್ಕಾರವು. ನಿರಾಕಾರ ಪ್ರಕಾಶಸ್ವರೂಪನಾದ ನಿನಗೆ ನಮಿಸುವೆವು. ಜಗತ್ತಿಗೆಲ್ಲಾ ಒಡೆಯನೂ, ಸಾಕಾರವಾದ ಈಶ್ವರ-ಸ್ವರೂಪನೂ ಆದ ನಿನಗೆ ನಮಸ್ಕಾರವು. ಓಂಕಾರಾರ್ಥ ಸ್ವರೂಪನಾದ ನಿನಗೆ ನಮಸ್ಕಾರವು. ಓಂಕಾರಾಭಿಮಾನಿ ದೇವನಾದ ನಿನಗೆ ನಮಿಸುವೆವು. ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವವನಾಗಿ, ಐದು ಮುಖಗಳುಳ್ಳವನೂ ಆದ ನಿನಗೆ ನಮಸ್ಕಾರ.'

'ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಈ ಐದು ವಿಧವಾದ ಬ್ರಹ್ಮಸ್ವರೂಪನೂ, ಬ್ರಹ್ಮನಂತೆ ಸೃಷ್ಟಿಯನ್ನು ಪ್ರವರ್ತಿಸುವ ಪಂಚಭೂತಸ್ವರೂಪನೂ, ಸೃಷ್ಟಿ, ಸ್ಥಿತಿ, ಸಂಹಾರ, ನಿಗ್ರಹ, ಅನುಗ್ರಹ ಎಂಬ ಐದು ಕೃತ್ಯಗಳುಳ್ಳವನೂ ಆದಂತಹ ನಿನಗೆ ನಮಸ್ಕಾರ. ಆತ್ಮಸ್ವರೂಪನೂ, ಜೀವಾತ್ಮಾಭಿನ್ನನಾದ ಬ್ರಹ್ಮಸ್ವರೂಪನೂ ಆದಂತಹ ಮತ್ತು ಅನಂತರವಾದ ಸತ್ಯಕಾಮತ್ವ, ಸರ್ವಜ್ಞತ್ವ ಮೊದಲಾದ ಮಂಗಳಕರವಾದ ಗುಣಗಳುಳ್ಳ ಈಶ್ವರಸ್ವರೂಪವಾದ ನಿನಗೆ ನಮಸ್ಕಾರ.'

'ಪಂಚಬ್ರಹ್ಮಸ್ವರೂಪವನ್ನು ಯಜುರ್ವೇದದ ತೈತ್ತಿರೀಯ ಉಪನಿಷತ್ತು ವರ್ಣಿಸಿರುವಂತೆ ಅಂದರೆ ಪ್ರಾಣಿಗಳಿಗಿರುವ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ಐದು ಕೋಶಗಳೂ ಬ್ರಹ್ಮಸ್ವರೂಪವೆಂದೇ ಉಪನಿಷತ್ತುಗಳಲ್ಲಿ ಪ್ರತಿಪಾದಿಸಲ್ಪಟ್ಟಿರುವುದು. ಸಾಕಾರ ಮತ್ತು ನಿರಾಕಾರ ಸ್ವರೂಪನೂ, ಸುಖವನ್ನು ಕೊಡುವವನೂ ಜಗದ್ಗುರುವೂ ಆದಂತಹ ನಿನಗೆ ನಮಸ್ಕಾರವು' ಎಂದು ಸ್ತುತಿಸಿ ಬ್ರಹ್ಮವಿಷ್ಣು ತಮ್ಮ ಗುರುವಾದ ಶಿವನಿಗೆ ವಂದಿಸಿದರು.

ಬ್ರಹ್ಮವಿಷ್ಣು ಇಬ್ಬರ ಸ್ತುತಿಯಿಂದ ಮತ್ತಷ್ಟು ಸಂತೋಷಿತನಾದ ಈಶ್ವರ 'ನಿಮಗೆ ಸಕಲ ತತ್ತ್ವವನ್ನೂ ತಿಳಿಸಿರುವೆ. ಅದು ಹೇಗೆಂದು ತೋರಿಸಿ, ನಿಮಗೆ ವಿವರಿಸಿಯೂ ಇರುವೆ. ನನ್ನ ದೇವಿಯಾದ ಪಾರ್ವತಿಯು ಅನುಗ್ರಹಿಸಿದ ನನ್ನ ಸ್ವರೂಪವಾದ ಓಂಕಾರವನ್ನೂ, ಪಂಚಾಕ್ಷರೀಮಂತ್ರವನ್ನೂ ಜಪಿಸಿದರೆ, ಸ್ಥಿರವಾದ ಜ್ಞಾನವೂ ಭಾಗ್ಯವೂ ಲಭಿಸುವುದು. ಚತುರ್ದಶಿಯಲ್ಲಿ ಆರ್ದ್ರಾನಕ್ಷತ್ರದಲ್ಲಿ ಜಪಿಸಿದರೆ ಅಕ್ಷಯವಾದ ಫಲವು ಸಿಗುವುದು, ಮುಕ್ತಿಯೂ ಲಭಿಸುವುದು' ಎನ್ನುತ್ತಾನೆ.

ಸೂರ್ಯನು ಆರ್ದ್ರಾನಕ್ಷತ್ರದಲ್ಲಿರುವಾಗ ಈ ಮಂತ್ರಗಳನ್ನು ಜಪಿಸಿದರೆ, ಒಂದು ಜಪದಿಂದ ಕೋಟಿ ಫಲ ಸಿಗುವುದು. ಮೃಗಶಿರಾನಕ್ಷತ್ರದ ಕೊನೆಯ ಭಾಗವೂ, ಪುನರ್ವಸುನಕ್ಷತ್ರದ ಆದಿಭಾಗವು ಸಹ ಆರ್ದ್ರಾನಕ್ಷತ್ರದಂತೆ ಶಿವಪೂಜೆ, ಹೋಮ, ತರ್ಪಣಗಳಿಗೆ ಯೋಗ್ಯವಾದುದು. ನನ್ನ ಲಿಂಗ ಮತ್ತು ವಿಗ್ರಹಗಳ ದರ್ಶನವನ್ನು ಉದಯಕಾಲ, ಪ್ರಾತಃಕಾಲ ಮತ್ತು ಸಂಗಮಕಾಲ(ಪ್ರಾತಃಕಾಲಕ್ಕೂ ಮಧ್ಯಾಹ್ನಕ್ಕೂ ಮಧ್ಯೆ ಇರುವ ಐದು ಗಳಿಗೆಗಳು)ಗಳಲ್ಲಿ ಮಾಡಬೇಕು. ಅರ್ಧ ರಾತ್ರಿಯವರೆಗೆ ವ್ಯಾಪಿಸಿರುವ ಚತುರ್ದಶೀ ನನ್ನ ಪೂಜೆಗೆ ಉತ್ತಮವಾದುದು. ಪ್ರದೋಷಕಾಲವನ್ನು ವ್ಯಾಪಿಸಿದ್ದು ಮುಂದಣ ತಿಥಿ ಸಂಪರ್ಕವುಳ್ಳ ಚತುರ್ದಶಿಯು ಅತ್ಯುತ್ತಮವಾದುದು.

ಲಿಂಗವೂ ಮೂರ್ತಿಯೂ ನನಗೆ ಸಮವಾದುದು. ಆದರೂ ಪೂಜೆಗೆ ಲಿಂಗವೇ ಉತ್ತಮವಾದುದು. ಮುಕ್ತಿಯನ್ನು ಅಪೇಕ್ಷಿಸುವವರು ಲಿಂಗವನ್ನೇ ಮುಖ್ಯವಾಗಿ ಪೂಜಿಸಬೇಕು. ಲಿಂಗವನ್ನು ಓಂಕಾರದಿಂದಲೂ, ವಿಗ್ರಹವನ್ನು ಪಂಚಾಕ್ಷರೀಮಂತ್ರದಿಂದಲೂ, ಜೊತೆಗೆ ಉತ್ತಮ ದ್ರವ್ಯಗಳಿಂದ ಪ್ರತಿಷ್ಠಾಪಿಸಬೇಕು. ಪುರೋಹಿತರಿಲ್ಲದಿದ್ದರೆ, ಒಳ್ಳೆ ಗುಣ-ನಡವಳಿಕೆ ಇರುವ ಯಾವುದೇ ಸಾಮಾನ್ಯ ವ್ಯಕ್ತಿ ಸಹ ಲಿಂಗ ಪ್ರತಿಷ್ಠೆ ಮಾಡಬಹುದು. ಬಳಿಕ ಸಕಲೋಪಚಾರಗಳಿಂದ ಲಿಂಗವನ್ನು ಪೂಜಿಸಬೇಕು. ಹಾಗೆ ಮಾಡಿದರೆ ನನ್ನ ಸ್ಥಾನವು ನಿಮಗೆ ಸುಲಭವಾಗಿ ಲಭಿಸುವುದು – ಎಂದು ಶಿಷ್ಯರಾದ ಬ್ರಹ್ಮವಿಷ್ಣುವಿಗೆ ಉಪದೇಶಿಸಿ, ಪಾರ್ವತಿಯೊಂದಿಗೆ ಶಿವನು ಅಂತರ್ಧನನಾದ ಎಂಬಲ್ಲಿಗೆ ಶ್ರೀಶಿವಪುರಾಣದ ವಿದ್ಯೇಶ್ವರ ಸಂಹಿತೆಯ ಹತ್ತನೆಯ ಅಧ್ಯಾಯ ಮುಗಿಯುತ್ತದೆ.

ಕನ್ಹಯ್ಯಾ ಮೇಲೆ ಮಸಿ ದಾಳಿ



ಲಖನೌ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಯುವ ಸಂಸತ್ ಕಾರ್ಯಕ್ರಮದಲ್ಲಿ, ಕಾಂಗ್ರೆಸ್ ಮುಖಂಡ ಕನ್ಹಯ್ಯಾ ಕುಮಾರ್ ಅವರು ಯುವ ಘೋಷಣಾ ಪತ್ರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ಲಖನೌ: ಕಾಂಗ್ರೆಸ್ ಮುಖಂಡ ಕನ್ಹಯ್ಯಾ ಕುಮಾರ್ ಅವರ ಮೇಲೆ ಯುವಕನೊಬ್ಬ 'ರಾಸಾಯನಿಕ' ಮಿಶ್ರಿತ ಮಸಿ ಎಸೆದಿದ್ದಾರೆ. ಮಸಿಯು ಕನ್ಹಯ್ಯಾ ಕುಮಾರ್ ಅವರ ಮೇಲೆ ಬಿದ್ದಿಲ್ಲ. ಆದರೆ, ಇಬ್ಬರು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಮಸಿ ಬಿದ್ದು, ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಮಸಿ ಎಸೆದ ಯುವಕನನ್ನು ಲಖನೌ ನಿವಾಸಿ ದೇವಾಂಶ ಬಾಜ್‌ಪೈ ಎಂದು ಗುರುತಿಸಲಾಗಿದೆ. ಕಾಂಗ್ರೆಸ್ ಕಾರ್ಯಕರ್ತರ ನಡುವಲ್ಲಿಯೇ ಇದ್ದ ಅವರು ಕನ್ಹಯ್ಯಾ ಅವರತ್ತ ಹಠಾತ್ ಮಸಿ ಎಸೆದರು. ಕನ್ಹಯ್ಯಾ ಅವರು ಮಾತನಾಡಲು ಎದ್ದು ನಿಂತಾಗ ಇದು ನಡೆಯಿತು. ಮಸಿಯಲ್ಲಿ ರಾಸಾಯನಿಕ ಮಿಶ್ರ ಮಾಡಲಾಗಿತ್ತು ಎಂಬುದು ನಂತರ ತಿಳಿಯಿತು ಎಂದು ಪೊಲೀಸರು ಹೇಳಿದ್ದಾರೆ.

ಗಾಯಗೊಂಡ ಇಬ್ಬರು ಕಾಂಗ್ರೆಸ್ ಕಾರ್ಯಕರ್ತರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ.

ದೇವಾಂಶ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಹಿಡಿದು ಥಳಿಸಿದ್ದಾರೆ. ಬಳಿಕ ಅವರನ್ನು ಪೊಲೀಸರಿಗೆ ಒಪ್ಪಿಸಲಾಗಿದೆ. ಮಸಿಯಲ್ಲಿ ರಾಸಾಯನಿಕ ಬೆರೆಸಿದ್ದಾಗಿ ಅವರು ಒಪ್ಪಿಕೊಂಡಿದ್ದಾರೆ. ಕನ್ಹಯ್ಯಾ ಕುಮಾರ್ ಅವರು 'ದೇಶದ್ರೋಹಿ'. ಹಾಗಾಗಿ ಅವರ ಮೇಲೆ ದಾಳಿ ನಡೆಸಿದ್ದಾಗಿಯೂ ದೇವಾಂಶ್ ಹೇಳಿದ್ದಾರೆ.

ಬಿಜೆಪಿ ವಿದ್ಯಾರ್ಥಿ ಘಟಕವಾದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್‌ನ ಕೈವಾಡ ಈ ಘಟನೆಯ ಹಿಂದೆ ಇದೆ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದಾರೆ. ಆದರೆ, ಈ ಆರೋಪವನ್ನು ಬಿಜೆಪಿ ತಳ್ಳಿ ಹಾಕಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು ತನಿಖೆ ಮುಂದುವರಿದಿದೆ.

10 ಅಭ್ಯರ್ಥಿಗಳ ಎಸ್‌ಪಿ ಪಟ್ಟಿ ಪ್ರಕಟ

ಅಪರ್ಣಾ ಯಾದವ್

ಲಖನೌ (ಪಿಟಿಐ): ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಗೆ 10 ಅಭ್ಯರ್ಥಿಗಳ ಪಟ್ಟಿಯನ್ನು ಸಮಾಜವಾದಿ ಪಕ್ಷವು ಮಂಗಳವಾರ ಬಿಡುಗಡೆ ಮಾಡಿದೆ. ಸಮಾಜವಾದಿ ಪಕ್ಷದ ಸ್ಥಾಪಕ ಮುಲಾಯಂ ಸಿಂಗ್ ಯಾದವ್ ಅವರ ಮಗಳು ಅಪರ್ಣಾ ಯಾದವ್ ಅವರು 2017ರಲ್ಲಿ ಸ್ಪರ್ಧಿಸಿ ಸೋತಿದ್ದ ಲಖನೌ ಕಂಟೋನ್ಮೆಂಟ್ ಕ್ಷೇತ್ರಕ್ಕೆ ರಾಜು ಗಾಂಧಿ ಅವರಿಗೆ ಟಿಕೆಟ್ ನೀಡಲಾಗಿದೆ.

ಲಖನೌ ಉತ್ತರ ಕ್ಷೇತ್ರದಿಂದ ಪೂಜಾ ಶುಕ್ಲಾ ಅವರಿಗೆ ಟಿಕೆಟ್ ನೀಡಲಾಗಿದೆ. ಇದೇ ಮೊದಲಿಗೆ ಪೂಜಾ ಅವರು ಸ್ಪರ್ಧಿಸುತ್ತಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ 2017ರಲ್ಲಿ ಕಪ್ಪು ಬಾವುಟ ಪ್ರದರ್ಶಿಸಿದ್ದ ಪೂಜಾ ಅವರು ಸುದ್ದಿಯಾಗಿದ್ದರು.

2017ರಲ್ಲಿ ಲಖನೌ ಕಂಟೋನ್ಮೆಂಟ್ ಕ್ಷೇತ್ರದಿಂದ ಬಿಜೆಪಿಯ ರೀಟಾ ಬಹುಗುಣ ಜೋಶಿ ಗೆದ್ದಿದ್ದರು. ಬಳಿಕ ಅವರು ಅಲಹಾಬಾದ್ ಲೋಕಸಭಾ ಕ್ಷೇತ್ರದಿಂದ ಗೆದ್ದರು. ಉಪ ಚುನಾವಣೆಯಲ್ಲಿ ಬಿಜೆಪಿಯ ಸುರೇಶ್ ಚಂದ್ರ ತಿವಾರಿ ಅವರು ಗೆದ್ದರು.

ಯೋಗಿ ಅವರು ಲಖನೌ ವಿಶ್ವವಿದ್ಯಾಲಯದ ಕಾರ್ಯಕ್ರಮವೊಂದರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲು ಹೋಗಿದ್ದರು. ಸಮಾಜವಾದಿ ಪಕ್ಷದ ಚಾತ್ರ ಸಭಾ ಘಟಕ ಮತ್ತು ಇತರ ವಿದ್ಯಾರ್ಥಿ ಸಂಘಟನೆಗಳು ರಸ್ತೆ ತಡೆ ನಡೆಸಿ ಮುಖ್ಯಮಂತ್ರಿಗೆ ಕಪ್ಪು ಬಾವುಟ ತೋರಿಸಿದ್ದವು.

ಬಳಿಕ, ಮುಖ್ಯಮಂತ್ರಿಯ ಭದ್ರತೆಯಲ್ಲಿ ಲೋಪ ಆಗಿದೆ ಎಂಬ ಕಾರಣಕ್ಕೆ ಪೂಜಾ ಸೇರಿ ಎಂಟು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯವು ಅಮಾನತು ಮಾಡಿತ್ತು.

ಚುನಾವಣಾ ಕಣದಲ್ಲಿ

ಅಮರಿಂದರ್ ಸಿಂಗ್

'ಬಿಜೆಪಿಯಿಂದ ರಕ್ಷಣೆಯ ಖಾತರಿ': ಪಂಜಾಬ್ ಲೋಕ ಕಾಂಗ್ರೆಸ್ ಮತ್ತು ಬಿಜೆಪಿ ಮೈತ್ರಿಕೂಟ ಮಾತ್ರವೇ ಗಡಿ ರಾಜ್ಯವಾದ ಪಂಜಾಬ್‌ನ ಭದ್ರತೆಯನ್ನು ಖಾತರಿಪಡಿಸಬಲ್ಲುದು ಎಂದು ಪಂಜಾಬ್ ಲೋಕ ಕಾಂಗ್ರೆಸ್ ಮುಖ್ಯಸ್ಥ ಕ್ಯಾಪ್ಟನ್ ಅಮರಿಂದರ್ ಸಿಂಗ್ ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮೈತ್ರಿಕೂಟದ ಪರವಾಗಿ ಪ್ರಚಾರ ನಡೆಸಲು ಪಂಜಾಬ್‌ಗೆ ಶೀಘ್ರವೇ ಭೇಟಿ ನೀಡಲಿದ್ದಾರೆ ಎಂದು ಅವರು ತಿಳಿಸಿದ್ದಾರೆ. ಪಟಿಯಾಲಾದ ರಾಮಲೀಲಾ ಮೈದಾನದಲ್ಲಿ ಸಾರ್ವಜನಿಕ ಸಮಾವೇಶ ಉದ್ದೇಶಿಸಿ ಅಮರಿಂದರ್ ಅವರು ಮಾತನಾಡಿದ್ದಾರೆ.

ರಾಜೀನಾಮೆ: ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಇಕ್ಬಾಲ್ ಸಿಂಗ್ ಲಾಲ್‌ಪುರ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಪಂಜಾಬ್‌ನ ರೂಪನಗರ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಅವರನ್ನು ಕಣಕ್ಕೆ ಇಳಿಸಿದೆ. ಐಪಿಎಸ್ ಅಧಿಕಾರಿಯಾಗಿದ್ದ ಲಾಲ್‌ಪುರ ಅವರು ನಿವೃತ್ತಿ ಬಳಿಕ ಬಿಜೆಪಿ ಸೇರಿದ್ದರು. ಬಿಜೆಪಿಯ ವಕ್ತಾರರೂ ಆಗಿದ್ದರು.

ಪ್ರಕರಣ ದಾಖಲು: ಪಂಜಾಬ್‌ನ ನವನ್‌ಶಹರ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಅಂಗದ್ ಸೈನಿ ಅವರಿಗೆ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆರೋಪದಲ್ಲಿ ನೋಟಿಸ್ ನೀಡಲಾಗಿದೆ. ಕಾಂಗ್ರೆಸ್‌ನಿಂದ ಅವರಿಗೆ ಈ ಬಾರಿ ಟಿಕೆಟ್ ನೀಡಲಾಗಿಲ್ಲ. ಹಾಗಾಗಿ, ಅವರು ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಸಲ್ಲಿಕೆಯ ಸಂದರ್ಭದಲ್ಲಿ ಅವರೊಂದಿಗೆ ಭಾರಿ ಸಂಖ್ಯೆಯಲ್ಲಿ ಜನರು ಇದ್ದರು ಎಂದು ನವನ್‌ಶಹರ್ ಉಪ ವಿಭಾಗಾಧಿಕಾರಿ ಮತ್ತು ಚುನಾವಣಾಧಿಕಾರಿ ಬಲ್ಜಿಂದರ್ ಸಿಂಗ್ ಧಿಲ್ಲೋನ್ ಹೇಳಿದ್ದಾರೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ನಡೆ-ನುಡಿ ಸಮನ್ವಯ

ತಿಳಿವಿಗೊಳಿತೆನಿಸಿದುದು ನಡೆಯೊಳೇತಕ್ಕರಿದು ? |
ಕುಳಿ ಮೇಡು ದೂರ ಮತಿಮನಸುಗಳ ನಡುವೆ ||
ಒಳಗಿನಾಯೆಣ್ಣೆಬತ್ತಿಗಳೆರಡುಮೊಡವೆರೆಯೆ |
ಬೆಳಕು ಜೀವೋನ್ನತಿಗೆ – ಮಂಕುತಿಮ್ಮ || 554 ||

ಪದ-ಅರ್ಥ: ತಿಳಿವಿಗೊಳಿತೆನಿಸಿದುದು = ತಿಳಿವಿಗೆ- + ಒಳಿತು + ಎನಿಸಿದುದು, ನಡೆಯೊಳೇತಕ್ಕರಿದು = ನಡೆಯೊಳು + ಏತಕ್ಕೆ + ಅರಿದು(ಸಾಧ್ಯವಾಗದು), ಕುಳಿ = ಹಳ್ಳ, ಮೇಡು = ಬೆಟ್ಟ, ಒಳಗಿನಾಯೆಣ್ಣೆಬತ್ತಿಗಳೆರಡುಮೊಡವೆರೆಯೆ = ಒಳಗಿನ + ಆ + ಎಣ್ಣೆ + ಬತ್ತಿಗಳೆರಡು + ಒಡವೆರೆಯೆ(ಒಂದುಗೂಡಿದರೆ)

ವಾಚ್ಯಾರ್ಥ: ಬುದ್ಧಿಗೆ ಒಳಿತು ಎನ್ನಿಸಿದ್ದು ನಡೆಯಲ್ಲಿ ಏಕೆ ತೋರುವುದಿಲ್ಲ? ಬುದ್ಧಿ ಮತ್ತು ಮನಸ್ಸುಗಳ ನಡುವೆ ಗಿರಿ ಕಂದರಗಳ ದೂರ. ಅಂತರ್ಯದಲ್ಲಿದ್ದ ಬುದ್ಧಿ ಮತ್ತು ಮನಸ್ಸುಗಳು ಎಣ್ಣೆ ಬತ್ತಿಗಳ ಹಾಗೆ ಹೊಂದಾಣಿಕೆಯಾದರೆ ಜೀವದ ಉನ್ನತಿಗೆ ಬೆಳಗಾಗುತ್ತದೆ

ವಿವರಣೆ: ಬಸವಣ್ಣನವರು ಹೇಳಿದರು,
ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿರ್ದ ಲಿಂಗವು ಘಟಸರ್ಪದಂತೆ
ದಿಟವ ನುಡಿವುದು, ನುಡಿದಂತೆ ನಡೆವುದು
ಹುಸಿಯ ನುಡಿದು ತಪ್ಪುವ ಪ್ರಪಂಚಿಯನೊಲ್ಲ
ಕೂಡಲಸಂಗಮದೇವ.

ನಡೆ-ನುಡಿಗಳಲ್ಲಿ ವ್ಯತ್ಯಾಸ ಕಂಡರೆ ಭಾವ-ಶುದ್ಧಿಯೆಂಬುದು ನಾಟಕವಾಗುತ್ತದೆ. ಬಸವಣ್ಣ ಅಪೇಕ್ಷಿಸಿದ ಅಂತರಂಗ-ಬಹಿರಂಗ ಶುದ್ಧಿ ಸಾಧ್ಯವಾಗುವುದು ನಡೆ-ನುಡಿಗಳು ಒಂದಾದಾಗ. ಈ ಮಾತನ್ನು ಕಗ್ಗ ಕೇಳುತ್ತದೆ. ಬುದ್ಧಿಗೆ ಒಳಿತೆನ್ನುವುದು ನಡೆಯೊಳಗೇಕೆ ಕಾಣುವುದಿಲ್ಲ? ಮಾತು ಮತ್ತು ನಡೆಗಳ ನಡುವೆ ಗಿರಿ ಕಂದರಗಳ ಅಂತರ ಏಕೆ ಇರುತ್ತದೆ? ಇದಕ್ಕೆ ಮುಖ್ಯ ಕಾರಣ ಮನುಷ್ಯನ ಅಪೇಕ್ಷೆಗಳು ನೂರಾರು. ಅವು ಎಂಟು ದಿಕ್ಕಿಗೂ ಚಾಚಿಕೊಂಡಿವೆ. ನಮ್ಮ ಪ್ರೀತಿಗಳು ಯಾವುದನ್ನೂ ಬಿಡಲೊಪ್ಪುವುದಿಲ್ಲ. ಜನರ ಮುಂದೆ ಆದರ್ಶವ್ಯಕ್ತಿ ಎನ್ನಿಸಿಕೊಳ್ಳುವ ಆಸೆ ಆದರೆ ಪ್ರಪಂಚದ ಸಕಲ ಭೋಗಗಳನ್ನು ಪಡೆದುಕೊಳ್ಳುವ ಬಯಕೆ.

ನನಗೆ ಪರಿಚಯವಿದ್ದ ಆಚಾರ್ಯರೊಬ್ಬರು ತಮ್ಮ ವಿದ್ವತ್ತು, ಉಪನ್ಯಾಸದ ಶೈಲಿಗಳಿಗೆ ಬಹಳ ಪ್ರಖ್ಯಾತರಾಗಿದ್ದರು. ಅವರ ಮಾತೆಂದರೆ ಅಮೃತವೇ. ಅದಷ್ಟೇ ಅಲ್ಲ, ಅವರು ತುಂಬ ಕರ್ಮನಿಷ್ಠರು. ಪೂಜೆ, ಪುನಸ್ಕಾರಗಳು, ವ್ರತ, ಉಪವಾಸಗಳನ್ನು ತಪ್ಪದೆ ಮಾಡುವವರು. ಅವರು ಮಾತು ಮಾತಿಗೂ ನಾರಾಯಣ ನಾರಾಯಣ ಎನ್ನುವರು. ಏಕಾದಶೀ ವ್ರತವನ್ನಂತೂ ಶ್ರದ್ಧೆಯಿಂದ, ಒಂದು ಹನಿ ನೀರನ್ನೂ ಸೇವಿಸದೆ ಮಾಡುತ್ತಾರೆಂಬುದು ಜನಜನಿತವಾಗಿತ್ತು. ಒಂದು ದಿನ ಒಬ್ಬ ವೃದ್ಧ ಮಹಿಳೆ ದೇವರ ತೀರ್ಥವನ್ನು ತೆಗೆದುಕೊಳ್ಳಬೇಕೆಂದು ಅವರ ಮನೆಗೆ ಹೋದಳು. ಸಾಮಾನ್ಯವಾಗಿ ಆಚಾರ್ಯರ ಹೆಂಡತಿ ಬಾಗಿಲಲ್ಲೇ ಕುಳಿತು ಯಾರನ್ನೂ ಆಚಾರ್ಯರನ್ನು ನೋಡಲು ಬಿಡುತ್ತಿರಲಿಲ್ಲ. ನಿರಾಹಾರ ಏಕಾದಶೀ ಉಪವಾಸ ಮಾಡುವವರಿಗೆ ವಿಶ್ರಾಂತಿ ಬೇಡವೆ? ಈ ಮಹಿಳೆ ಅಲ್ಲಿಗೆ ಹೋದಾಗ ಆಚಾರ್ಯರ ಹೆಂಡತಿ ಬಾಗಿಲಿನಲ್ಲಿರಲಿಲ್ಲ. ಈಕೆ ನೇರವಾಗಿ ಒಳಗೆ ಹೋದರೆ ಆಚಾರ್ಯರು ತಟ್ಟೆತುಂಬ ತಿಂಡಿ ಇಟ್ಟುಕೊಂಡು ತಮಗೆ ಪ್ರಿಯವಾದ(?) ಪೇಯವನ್ನು ಕುಡಿಯುತ್ತಿದ್ದರು! ಇಬ್ಬರಿಗೂ ಆಘಾತವಾಗಿತ್ತು. ಆಚಾರ್ಯರಿಗೆ ಒಂದು ಸುಂದರವಾದ, ಧಾರ್ಮಿಕ ಮುಖವಾಡವೂ ಬೇಕು, ತನ್ನ ಸುಖಕ್ಕೆ ಭೋಗಗಳೂ ಬೇಕು. ಈ ದ್ವಂದ್ವವೇ ನಡೆ-ನುಡಿಗಳ ನಡುವಿನ ವ್ಯತ್ಯಾಸಕ್ಕೆ ಕಾರಣ.

ಕಗ್ಗದ ಅಪೇಕ್ಷೆಯೆಂದರೆ ಎಣ್ಣೆಯಂತಿರುವ ಬುದ್ಧಿ, ಬತ್ತಿಯಂತಿರುವ ನಡತೆ ಎರಡೂ ಸರಿಯಾಗಿ ಮೇಳವಿಸಿದರೆ ಮನುಷ್ಯನ ಜೀವನದ ಉನ್ನತಿಗೆ ಬೆಳಕು ದೊರೆಯುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ ಕಮ್ಮರಡಿ — ಬುಧವಾರ ಫೆಬ್ರುವರಿ 2, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ – ಶಿಶಿರ ಋತು ಮಕರ ಮಾಸದ 19 ನೇ ದಿನ
ತಿಥಿ: (ಮಾಘ ಶುಕ್ಲ) ಪ್ರತಿಪದ್ ಗಂ. 08-32 ನಂತರ ದ್ವಿತೀಯ ಗಂ 30-16 ನಕ್ಷತ್ರ: ಧನಿಷ್ಠಾ ಗಂ. 17-53 ಯೋಗ: ವರಿಯಾನ್ ಗಂ. 23-58, ಕರಣ: ಬವ ಗಂ. 08-32. ರಾಹುಕಾಲ : ಮಧ್ಯಾಹ್ನ 12:00 – 01:30 ಸೂರ್ಯೋದಯ : 07-01 ಸೂರ್ಯಾಸ್ತ : 06-28 ಮುಸ್ಲಿಂ ದಿನಾಂಕ : 29 ಜುಮಾದುಸ್ಸಾನಿ ದಿನ ವಿಶೇಷ : ಮಾಘ ಶುಕ್ಲಾದಿ ಅದೃಷ್ಟ ಸಂಖ್ಯೆ : 4, 9

ಮೇಷ: ಕೆಲವು ಪ್ರಭಾವಿತ ವ್ಯಕ್ತಿಗಳನ್ನು ನೀವು ಸಂಧಿಸಬೇಕಾಗಬಹುದು ಹಾಗೂ ಅವರಿಂದ ಹೆಚ್ಚಿನ ಮಾಹಿತಿಗಳನ್ನು ಪಡೆಯುವಿರಿ. ಇಂದಿನ ದಿನದ ಪ್ರಾರಂಭದಲ್ಲಿ ಉಂಟಾಗುವ ವಿಫಲತೆಯ ಬಗ್ಗೆ ನೀವು ನಿರಾಶೆಗೊಳ್ಳಬಾರದು.

ವೃಷಭ: ಮೇಲಧಿಕಾರಿಗಳು ಹಾಗೂ ಹಿರಿಯರು ಇಂದಿನ ನಿಮ್ಮ ಕೆಲಸಗಳಲ್ಲಿ ಸಹಕಾರ ನೀಡುತ್ತಾರೆ. ಹಿರಿಯರ ಆರೋಗ್ಯ ಸುಧಾರಿಸುವುದರಿಂದ ಹೆಚ್ಚಿನ ಸಂತಸ. ಈ ದಿನ ಸ್ನೇಹಿತರೊಂದಿಗೆ ಭೂಮಿ ಖರೀದಿಗಾಗಿ ಪ್ರಯತ್ನ ನಡೆಸುವಿರಿ.

ಮಿಥುನ: ನಿಮ್ಮ ಉತ್ತಮ ಗುಣಗಳು ನಿಮ್ಮನ್ನು ಪರಿಸ್ಥಿತಿಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಲು ಸಹಾಯ ಮಾಡುವುದು. ಯಾವುದೇ ವಿಷಯವನ್ನು ಆಲಸ್ಯದಿಂದಾಗಲಿ ಮುಂದೂಡುವುದು ಸರಿಯಲ್ಲ.

ಕರ್ಕಾಟಕ: ಅಡುಗೆ ಕೆಲಸ ಮಾಡುವವರಿಗೆ ಈ ದಿನ ಹೆಚ್ಚಿನ ಕೆಲಸ ಹಾಗೂ ಲಾಭವಿರುವುದು. ನಿಮ್ಮ ವಿರೋಧಿಗಳು ಇಂದು ರಾಜಿಯಾಗುವರು. ಉನ್ನತ ಶಿಕ್ಷಣ ಮುಂದುವರೆಸಲು ಬಂಧುಗಳ ಸಹಾಯ ಹಸ್ತ ದೊರಕುವುದು.

ಸಿಂಹ: ಲೇಖಕರಿಗೆ ತಮ್ಮ ಲೇಖನಗಳಿಗೆ ಉತ್ತಮ ವಿಷಯಗಳು ಸಿಗುವುದು. ನಾಯಕತ್ವ ಪ್ರಾಪ್ತಿಯಾಗಲಿದೆ. ಮಗಳ ವಿವಾಹಕ್ಕಾಗಿ ಪ್ರಯತ್ನ ನಡೆಸುವಿರಿ. ಹೊಸ ಉದ್ಯೋಗದ ಬಗ್ಗೆ ಯೋಚನೆ ಬೇಡ. ಅದೇ ಕೆಲಸದಲ್ಲಿ ಭಡ್ತಿ ಸಿಗಲಿದೆ.

ಕನ್ಯಾ: ಹಳೆಯ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಹಿರಿಯರ ಆಸ್ಪತ್ರೆ, ಔಷಧಿಗಳಿಗಾಗಿ ಖರ್ಚು ಮಾಡಬೇಕಾದರೂ ಆದಾಯಕ್ಕೇನೂ ಕೊರತೆ ಇರದು. ವ್ಯಾಪಾರದಲ್ಲಿ ಇಂದು ಮಿಶ್ರಫಲ.

ತುಲಾ: ಇಂದಿನ ಬದುಕಲ್ಲಿ ನಡೆಯುವ ಕೆಲವು ವಿಷಯಗಳು ಬೇಸರ ಹುಟ್ಟಿಸಬಹುದು. ವಿವಾಹ ಸಂಬಂಧ ಕೂಡಿ ಬರಲಿದೆ. ಯಾವುದೇ ರೀತಿಯ ವಸ್ತುಗಳನ್ನು ಖರೀದಿ ಮಾಡಿದರೂ ಎಚ್ಚರವಿರಲಿ, ಮೋಸ ಹೋಗುವ ಸಂಭವ.

ವೃಶ್ಚಿಕ: ನಿರ್ಮಾಣ ಕಾರ್ಯದಲ್ಲಿ ತೊಡಗಿರುವವರಿಗೆ ಒಂದು ಆಶಾಕಿರಣ ದೊರಯುತ್ತದೆ. ನಿಮ್ಮ ಕೆಲಸದಲ್ಲಿ ತೊಡಕು ತಾಪತ್ರಯವನ್ನುಂಟು ಮಾಡುವ ಶತ್ರುಗಳ ಪ್ರಯತ್ನ ವಿಫಲವಾಗುವುದು. ಸಾಲದ ಹಣ ಹಿಂತಿರುಗಿಸುವಿರಿ.

ಧನು: ಕಠಿಣ ಪರಿಶ್ರಮದಿಂದ ಇಂದು ಬಿಡುಗಡೆ ಬೇಕೆನಿಸಿದೆ. ಇಂದು ನೀವು ಬೇರೆ ಯಾರಿಗೂ ನಿಮ್ಮ ಯೋಜನೆಯ ಸುಳಿವು ನೀಡಬಾರದು. ನಿಮ್ಮ ಸಾಮರ್ಥ್ಯದ ಅರಿವು ನಿಮಗಿರಲಿ. ಒಪ್ಪಂದ ಮುರಿಯದಂತೆ ಎಚ್ಚರ ವಹಿಸಿ.

ಮಕರ: ನಿಮ್ಮ ಮನದಲ್ಲಿರುವ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸಲು ಬೇಕಾದ ಸಕಲ ಸಿದ್ಧತೆಯನ್ನು ಮಾಡಿಕೊಳ್ಳಿರಿ. ಕಚೇರಿ ಕೆಲಸಗಳು ಸುಗಮವಾಗಿ ನೆರವೇರಬಹುದು. ವಿದ್ಯಾರ್ಥಿಗಳಿಗೆ ಸರ್ವತೋಮುಖ ಅಭಿವೃದ್ಧಿ.

ಕುಂಭ: ಇಂದು ಸೂಕ್ತ ಸಮಯದಲ್ಲಿ ಸರಿಯಾದ ಕೆಲಸ ಮಾಡುವುದರಿಂದ ಅದೃಷ್ಟ ಖುಲಾಯಿಸಲಿದೆ. ರೈತರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಿರಿ. ಜಮೀನು ಕೊಡುಕೊಳ್ಳುವಿಕೆ ವ್ಯವಹಾರಗಳು ಹೆಚ್ಚಲಿದೆ.

ಮೀನ: ಹೆಂಡತಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣುವಿರಿ. ನಿತ್ಯದ ಜೀವನಕ್ರಮವನ್ನು ಬದಲಿಸದೆ ಮುಂದುವರಿಯುವಿರಿ. ನಿಮ್ಮನ್ನು ಅನುಮಾನಿಸುತ್ತಿರುವವರೇ ಇಂದು ನಿಮ್ಮ ಸಹಾಯ ಕೋರಿ ಬರಲಿದ್ದಾರೆ.

ಪದಬಂಧ 4857

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಪ್ರತಿಜ್ಞೆಯಲ್ಲಿರುವ ಎಚ್ಚರ ಗೊತ್ತಾಯಿತೇ? (2)
5.ತಣ್ಣಗಾದ ಅನ್ನ (3)
6.ಹನ್ನೆರಡು ಅಂಗುಲ ಅಳತೆ (2)
7.ಸೀರೆಯ ಹೊದೆಯುವ ಭಾಗ (3)
9.ಗಡಿ ಬಳಿ ತಲೆದೋರಿದ ಶೀತ (3)
10.ಹೊಣೆಗಾರಿಕೆಯಿದು (5)
11.ಆಳವಾದ ಗುಂಡಿ (3)
12.ಗೆಳೆಯನೊಡನೆ ಬಂದಿರುವ ಸ್ನೇಹಿತೆ (3)
15.ಸಂಬಂಧ ಅಥವಾ ನಂಟಸ್ತಿಕೆ (2)
16.ಕೂಸಿನ ತಲೆಗೆ ಕಟ್ಟುವ ಟೋಪಿ (3)
17.ವಾದಕನು ಮಾಡಿದ ಚರ್ಚೆ (2)

ಮೇಲಿಂದ ಕೆಳಕ್ಕೆ
1.ತನ್ನನ್ನು ತಾನೇ ಹೊಗಳಿಕೊಳ್ಳುವುದು (4)
2.ತನಗೆ ತಾನೇ ಮಾತಾಡಿಕೊಳ್ಳುವುದು (3)
3.ಅವಸರವನ್ನು ಹೀಗೆ ಹೇಳಿ (4)
8.ಹಳೆ ಸಾಮಾನುಗಳನ್ನು ಮಾರುವ ಸ್ಥಳ (3)
9.ಸುಕ್ಕನ್ನು ಹೀಗೂ ಹೇಳುವರು (3)
11.ಕಣದಲ್ಲಿ ಹಾಕಿದ ಲಗಾಮು (4)
13.ಎಳ್ಳು ನೀರು ಬಿಡುವಿಕೆ (4)
14.ಬಟ್ಟೆಯನ್ನು ಎಣ್ಣೆಯಲ್ಲಿ ಅದ್ದಿ ಉರಿಸುವ ಕೈದೀಪ (3)



4856ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿದ್ರೋಹ 3.ಶಾಪ 5.ವರ 6.ಮಡಿವಂತ 7.ಸ್ವಕಪೋಲಕಲ್ಪಿತ 10.ಆಕಸ್ಮಿಕ 11.ತೋಪು 13.ಯತ್ನ 14.ನಕ್ಷತ್ರ
ಮೇಲಿಂದ ಕೆಳಕ್ಕೆ: 1. ವಿತ್ತ 2.ಹಗುರ 4.ಪರಾತ 5.ವಭಾಸ್ವ 6.ಮರುಕ 8.ಪೋಷಕ 9.ನೆನಪು 10.ಆಲಯ 11.ತೋಲನ 12.ಪಾತ್ರ

ಸುಡೊಕು 5243

2				9		7		
	1		4		7		5	2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5242 ಸುಡೊಕು

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಂಪ್ಲೇಟ್‌ಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಟಿ.ವಿ ಮಾರುತಿ
ಜನನ–16.11.1935 ಮರಣ–22.01.2022
ಸದಸ್ಯರು, ಜನತಾ ಶಿಕ್ಷಣ ಸಂಸ್ಥೆ
ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವ
ಆಡಳಿತ ಮಂಡಳಿ, ಜನತಾ ಶಿಕ್ಷಣ ಸಂಸ್ಥೆ,
ಪ್ರಾಂಶುಪಾಲರು, ಮುಖ್ಯೋಪಾಧ್ಯಾರು
ಮತ್ತು ಸಿಬ್ಬಂದಿ ವರ್ಗ
ವಿವೇಕಾನಂದ ಶಾಲಾ ಕಾಲೇಜುಗಳು
ಬೆಂಗಳೂರು–560055

LOOKING FOR JOB OPPORTUNITY
Refer Classifieds on Wednesday

ಪ್ರಧಾನಿ ಯೂಟ್ಯೂಬ್ ವಾಹಿನಿಗೆ 1 ಕೋಟಿ ಚಂದಾದಾರರು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಯೂಟ್ಯೂಬ್ ಚಂದಾದಾರರ ಸಂಖ್ಯೆ ಒಂದು ಕೋಟಿ ದಾಟಿದೆ. ವಿವಿಧ ವೇದಿಕೆಗಳಲ್ಲಿ ಭಾರಿ ಅನುಯಾಯಿಗಳನ್ನು ಹೊಂದುವ ಮೂಲಕ ಪ್ರಧಾನಿ ಮೋದಿ ಸಾಮಾಜಿಕ ಮಾಧ್ಯಮದಲ್ಲಿ ಗಮನ ಸೆಳೆದಿದ್ದಾರೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಯೂಟ್ಯೂಬ್ ವಾಹಿನಿಯಲ್ಲಿ 7 ಲಕ್ಷ ಅನುಯಾಯಿಗಳು, ಬ್ರೆಜಿಲ್ ಅಧ್ಯಕ್ಷ ಜೈರ್ ಬೊಲ್ಸೊನಾರೊ 36 ಲಕ್ಷ, ಮೆಕ್ಸಿಕೊದ ಅಧ್ಯಕ್ಷ ಆಂಡ್ರೆಸ್ ಮಾನ್ಯುಯೆಲ್ ಲೋಪೆಜ್ ಒಬ್ರಾಡೊರ್ 30.7 ಲಕ್ಷ ಅನುಯಾಯಿಗಳನ್ನು ಹೊಂದಿದ್ದಾರೆ.

ಮುಂಬೈ ಧಾರಣೆ

ಶೇಂಗಾ

1-2-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	9850-9900
ದಪ್ಪ ಗುಜರಾತ್(ಹೊಸ)	8700-8750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1340 (1350)
ಒಂದು ವಾರದ ಡೆಲಿವರಿ	1335 (1345)
ಸೋಯಾ ಕಚ್ಚಾ	1212 (1212)
ಪಾಮ್ ವಾರದ ಡೆಲಿವರಿ	1220 (1223)
ಸೂರ್ಯಕಾಂತಿ ಎಣ್ಣೆ ಕಚ್ಚಾ	1210 (1215)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	48,000 (47,650)
ಬೆಳ್ಳಿ ಕೆ.ಜಿ	61,650 (61,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1330 (1340)
ಸೋಯಾ (ರಿಫೈನ್ಡ್)	₹1260 (1265)
ಸೂರ್ಯಕಾಂತಿ (ರಿಫೈನ್ಡ್)	₹1280 (1285)
ಪಾಮೋಲಿನ್	₹1225 (1225)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಕೆ.ಆರ್.ಪೇಟೆ	₹8800-8800
ತುಮಕೂರು	---
ತುರುವೇಕೆರೆ	₹17100-17200

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1500-2000
ಮಧ್ಯಮ	₹1000-1500
ಸಣ್ಣ	₹500-1000

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ, ಊರು ಬೇಡ.

- **ಪ್ರಶ್ನೆ: ನಾನು 65 ವರ್ಷ ವಯಸ್ಸಿನ ನಿವೃತ್ತ ಸರ್ಕಾರಿ ನೌಕರ. ನನಗೆ ಮಾಸಿಕ ₹ 24,600 ನಿವೃತ್ತಿ ವೇತನ ಬರುತ್ತದೆ. ನನ್ನ ಹೆಸರಲ್ಲಿ 65X41 ಚದರ ಅಡಿಯ ನಿವೇಶನದಲ್ಲಿ ಈಗಾಗಲೇ ನೆಲ ಅಂತಸ್ತಿನ ಮನೆ ಕಟ್ಟಿಸಿ ವಾಸವಾಗಿದ್ದೇವೆ. ನನಗೆ ಒಬ್ಬ ಗಂಡು ಹಾಗೂ ಇಬ್ಬರು ವಿವಾಹಿತ ಹೆಣ್ಣು ಮಕ್ಕಳಿದ್ದಾರೆ. ನನ್ನ ಪತ್ನಿಯ ಹೆಸರಿನಲ್ಲಿ 60X45 ಚದರ ಅಡಿಯ ನಿವೇಶನವಿದ್ದು ಅದನ್ನು ಮಾರಿದರೆ ಸುಮಾರು ₹ 35 ಲಕ್ಷ ಬರಬಹುದು. ಈ ಹಣದಿಂದ ನನ್ನ ಹೆಸರಿನಲ್ಲಿರುವ ಮನೆಯ ಮೇಲೆ ಇನ್ನೊಂದು ಅಂತಸ್ತಿನ ಮನೆ ಕಟ್ಟಬೇಕೆಂದಿದ್ದೇನೆ. ಈ ನಿವೇಶನ ಬಿಟ್ಟರೆ ಬೇರಾವುದೇ ಆಸ್ತಿ ಇರುವುದಿಲ್ಲ. ಮಗನಿಗೆ ಉದ್ಯೋಗ ಇರುವುದಿಲ್ಲ. ನಿವೇಶನ ಮಾರಾಟದಿಂದ ಸಿಗುವ ಹಣಕ್ಕೆ ಬರುವ ಆದಾಯ ವೃದ್ಧಿ ತೆರಿಗೆಯ ಬಗ್ಗೆ ಸೂಕ್ತ ಸಲಹೆ ನೀಡಬೇಕಾಗಿ ಕೋರುತ್ತೇನೆ.**

ಉತ್ತರ: ನಿಮ್ಮ ಪತ್ನಿಯ ಹೆಸರಿನಲ್ಲಿರುವ ನಿವೇಶನ ಮೂರು ವರ್ಷಗಳಿಗಿಂತ ಹಿಂದೆಯೇ ಖರೀದಿಸಿದ್ದೀರೆಂದು ಭಾವಿಸಿದ್ದೇನೆ. ಇದರ ಮೂಲ ಖರೀದಿ ಬೆಲೆಯ ಮೇಲೆ ಆಯಾ ವರ್ಷಕ್ಕೆ ಅನ್ವಯವಾಗುವ ಹಣದುಬ್ಬರ ಸೂಚ್ಯಂಕವನ್ನಾಧರಿಸಿ ಬೆಲೆಯನ್ನು ಮರುಹೊಂದಾಣಿಕೆ ಮಾಡಲಾಗುತ್ತದೆ. ಉದಾಹರಣೆಗೆ, ನಿಮ್ಮ ಮೂಲ ಖರೀದಿ ಬೆಲೆ ₹ 5 ಲಕ್ಷ ಎಂದಾದರೆ, ಹಣದುಬ್ಬರ ಪ್ರಮಾಣದಂತೆ ಮರು ಹೊಂದಾಣಿಕೆ ಮಾಡಲಾದ ಅಸಲು ಮೊತ್ತ ₹ 15 ಲಕ್ಷ ಎಂದಿಟ್ಟುಕೊಳ್ಳಿ. ಸುಮಾರು ₹ 35 ಲಕ್ಷಕ್ಕೆ ಮಾರಾಟ ಮಾಡುವ ಈ ಆಸ್ತಿಯ ಮೇಲೆ ಹಣದುಬ್ಬರ ಸೂಚ್ಯಂಕದ ಅಧಾರದ ಮೇಲೆ ನೀವು ಗಳಿಸುವ ಲಾಭ ₹ 20 ಲಕ್ಷ. ಈ ಮೌಲ್ಯವನ್ನು ಬಂಡವಾಳ ಲಾಭವೆಂದು ಪರಿಗಣಿಸಿ ಅದರ ಮೇಲೆ ಬಂಡವಾಳ ವೃದ್ಧಿ ತೆರಿಗೆಯನ್ನು ಶೇಕಡ 20ರ ದರದಲ್ಲಿ ಪಾವತಿಸಬೇಕಾಗುತ್ತದೆ.

ತೆರಿಗೆಯ ನಿರ್ಧಾರದ ದೃಷ್ಟಿಯಿಂದ ನಿಮಗೆ ಎರಡು ಸಲಹೆಗಳಿವೆ. ಪ್ರಸ್ತುತ ನಿಮ್ಮ ಪತ್ನಿಯ ಹೆಸರಲ್ಲಿರುವ ನಿವೇಶನವನ್ನು ನಿಮ್ಮ ಹೆಸರಿಗೆ ದಾನ ಪತ್ರದ ಮೂಲಕ ವರ್ಗಾಯಿಸಿ ಆ ನಿವೇಶನವನ್ನು ನೀವೇ ಮಾರಾಟ ಮಾಡುವುದು. ಮತ್ತು ನಿಮಗೆ ಬರುವ ಹಣವನ್ನು ಮೇಲಂತಸ್ತಿನ ಮನೆಗೆ ನೀವೇ ವಿನಿಯೋಗಿಸಬಹುದು. ಇದು ಸಾಧ್ಯವಾಗದಿದ್ದಲ್ಲಿ, ನೀವು ಪ್ರಸ್ತುತ ವಾಸವಿರುವ ಮನೆಯ ಭೂಮಿಯ ಭಾಗಶಃ ಹಕ್ಕನ್ನು ನಿಮ್ಮ ಪತ್ನಿಗೆ ದಾನ ಪತ್ರದ ಮೂಲಕ ವರ್ಗಾಯಿಸಿ ತದನಂತರ, ಅವರ ಹೆಸರಲ್ಲಿರುವ ನಿವೇಶನ ಮಾರಾಟ ಮಾಡಿ ಮೇಲಂತಸ್ತಿನ ಮನೆಯನ್ನು ಅವರ ಹೆಸರಲ್ಲಿ ಕಟ್ಟಿಕೊಳ್ಳಬಹುದು. ಇಲ್ಲಿ ಇಬ್ಬರ ಹೆಸರಲ್ಲೂ ಆಸ್ತಿ ರಚನೆಯಾಗುವ ಕಾರಣ ಸೂಕ್ತ ದಾಖಲೆಗಳನ್ನು ಪ್ರತ್ಯೇಕವಾಗಿ ಇರಿಸಬೇಕಾಗುತ್ತದೆ.

ಆದಾಯ ತೆರಿಗೆಯ ನಿಯಮ 54(ಎಫ್) ಪ್ರಕಾರ, ತೆರಿಗೆ ವಿನಾಯಿತಿಯ ಪ್ರಯೋಜನ ಪಡೆಯಲು, ಆಸ್ತಿ ಮಾರಾಟ ಮಾಡುವ ವ್ಯಕ್ತಿಯ ಹೆಸರಲ್ಲೇ ಹೊಸ ಮನೆಯ ಖರೀದಿ ಅಥವಾ ನಿರ್ಮಾಣ ಮಾಡಬೇಕಾಗಿರುತ್ತದೆ. ನೀವು ಸ್ವತಃ ಮನೆ ಕಟ್ಟಿಸುವುದಾದರೆ, ನಿವೇಶನ ಮಾರಾಟ ಮಾಡಿದ ಮೂರು ವರ್ಷದೊಳಗೆ ನಿರ್ಮಾಣ ಪೂರೈಸಬೇಕು. ತಾತ್ಕಾಲಿಕವಾಗಿ, ಮಾರಾಟದಿಂದ ಬಂದ ಹಣವನ್ನು ಯಾವುದೇ ಬ್ಯಾಂಕ್‌ನಲ್ಲಿ ಬಂಡವಾಳ ವೃದ್ಧಿ ಉಳಿತಾಯ ಖಾತೆಯಲ್ಲಿ ನಿಮ್ಮ ಆ ವರ್ಷದ ತೆರಿಗೆ ರಿಟರ್ನ್ ಸಲ್ಲಿಸುವ ಮೊದಲು ಹೂಡಬಹುದು ಹಾಗೂ ನಿರ್ಮಾಣಕ್ಕೆ ಉಪಯೋಗಿಸಬಹುದು. ನೀವು ಸಂಪೂರ್ಣ ಹಣವನ್ನು ಹೊಸ ಮನೆಗೆ ಹೂಡಿಕೆ ಮಾಡಿದರೆ ಒಟ್ಟು ಮೊತ್ತಕ್ಕೆ ತೆರಿಗೆ ವಿನಾಯಿತಿ ಇದೆ. ಭಾಗಶಃ ಹೂಡಿಕೆ ಮಾಡಿದರೆ, ಅಂಶಿಕವಾಗಿ ತೆರಿಗೆ ವಿನಾಯಿತಿ ಸಿಗುತ್ತದೆ.

ವೆಂಕಟರಮಣ, ಸಿದ್ದಾಪುರ

- **ಪ್ರಶ್ನೆ: ನನ್ನ ಮಗನಿಗೆ ಈಗ ಒಂದು ವರ್ಷ ವಯಸ್ಸು. ಅವನ ಉಜ್ವಲ ಭವಿಷ್ಯಕ್ಕಾಗಿ ಸಾಂಪ್ರದಾಯಿಕ ಹೂಡಿಕೆ ಹಾಗೂ ಷೇರು/ಮ್ಯೂಚುವಲ್ ಫಂಡ್ ಹೂಡಿಕೆ ಆಯ್ಕೆಗಳ ಬಗ್ಗೆ ತಿಳಿಸಿ. ಅವು ಮಗನ ಓದಿಗೆ, ಅವನಿಗೆ ಸಂಬಂಧಿಸಿದ ಸಣ್ಣಪುಟ್ಟ ಖರ್ಚುಗಳಿಗೆ ನೆರವಾಗುವಂತೆ ಇರಬೇಕು.**

ಉತ್ತರ: ನಿಮ್ಮ ಮಗನ ವಯಸ್ಸು ಈಗ ಕೇವಲ ಒಂದು ವರ್ಷ ಆಗಿರುವುದರಿಂದ ಉನ್ನತ ಶಿಕ್ಷಣಕ್ಕಾಗಿ ಹಾಗೂ ಸಣ್ಣ ವೆಚ್ಚಗಳಿಗಾಗಿ ಸಾಂಪ್ರದಾಯಿಕ ಹೂಡಿಕೆ, ಉತ್ತಮ ಗುಣಮಟ್ಟದ ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಸಾಂಪ್ರದಾಯಿಕ ಹೂಡಿಕೆಗಳು ನಿಮಗೆ ಏಕಪ್ರಕಾರದ ಆದಾಯ ಕೊಡಬಲ್ಲವು. ಇದರಲ್ಲಿ ನಿಮ್ಮ ಅಸಲು ಮೊತ್ತಕ್ಕೆ ಭದ್ರತೆ ಹೆಚ್ಚು. ಆದರೆ ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳು ದೇಶದ ಆರ್ಥಿಕ ಪರಿಸ್ಥಿತಿ, ಷೇರು ಮಾರುಕಟ್ಟೆಯ ಸ್ಥಿತಿಗತಿ ಅವಲಂಬಿಸಿ ಏರಿಳಿತವಾಗುತ್ತಿರುತ್ತವೆ.

ಉತ್ತಮ ಕಂಪನಿಗಳ ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳು ಸಾಂಪ್ರದಾಯಿಕ ಹೂಡಿಕೆಗಳಿಗಿಂತ ದುಪ್ಪಟ್ಟು ವಾರ್ಷಿಕ ಆದಾಯ ನೀಡಬಲ್ಲವು. ಈ ಬಗ್ಗೆ ನಿರ್ದಿಷ್ಟ ಮಾಹಿತಿಗಾಗಿ ಮಾರುಕಟ್ಟೆ ತಜ್ಞರಿಂದ ಸಲಹೆ ತೆಗೆದುಕೊಳ್ಳಿ. ನೀವು 15 ವರ್ಷಗಳ ಪಬ್ಲಿಕ್ ಪ್ರಾವಿಡೆಂಟ್ ಫಂಡ್ (ಪಿಪಿಎಫ್) ಖಾತೆಯನ್ನು ಸಮೀಪದ ಅಂಚೆ ಇಲಾಖೆ ಅಥವಾ ಬ್ಯಾಂಕ್‌ನಲ್ಲಿ ತೆರೆಯಬಹುದು. ತಿಂಗಳ ಆದಾಯದಲ್ಲಿ ಒಂದಿಷ್ಟು ಮೊತ್ತವನ್ನು ಬ್ಯಾಂಕ್ ರೆಕರಿಂಗ್ ಡೆಪಾಸಿಟ್‌ನಲ್ಲೂ (ಆರ್.ಡಿ) ಇರಿಸಬಹುದು. ಗುಣಮಟ್ಟದ ಕಂಪನಿಯ ಷೇರುಗಳಲ್ಲಿ ಅಥವಾ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯನ್ನು ಮಾರುಕಟ್ಟೆ ಕುಸಿದಾಗಲೆಲ್ಲ ಹೆಚ್ಚಿಸುತ್ತ ಇರಿ. ಒಂದೇ ವಲಯದ ಷೇರು ಅಥವಾ ಮ್ಯೂಚುವಲ್ ಫಂಡ್‌ಗಳಿಗಿಂತ ವಿವಿಧ ವಲಯಗಳಲ್ಲಿ ಹೂಡಿಕೆ ಮಾಡಿ ದೀರ್ಘಾವಧಿ ಹೂಡಿಕೆಯ ಲಾಭ ಪಡೆಯಬಹುದು. ಸಣ್ಣ ಪುಟ್ಟ ಖರ್ಚುಗಳಿಗೆ ಅಲ್ಪಾವಧಿ ನಿಶ್ಚಿತ ಠೇವಣಿ ಅಥವಾ ಲಿಕ್ವಿಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡಿ. ಮೂರು ವರ್ಷ ಅವಧಿಯ ತೆರಿಗೆ ಉಳಿತಾಯ ಲಾಭದ (ಇಎಲ್‌ಎಸ್‌ಎಸ್) ಮ್ಯೂಚುವಲ್ ಫಂಡ್‌ಗಳಲ್ಲೂ ಹೂಡಿಕೆ ಮಾಡಬಹುದು. ಮಕ್ಕಳ ವಿದ್ಯಾಭ್ಯಾಸದ ಉದ್ದೇಶದಿಂದ ವಿಮಾ ಯೋಜನೆಯಲ್ಲೂ ದೀರ್ಘಾವಧಿ ಹೂಡಿಕೆಯನ್ನು ಮುಂದಿನ ದಿನಗಳಲ್ಲಿ ಯೋಚಿಸಬಹುದು. ಇದರಿಂದ ಜೀವ ವಿಮಾ ಸೌಲಭ್ಯ ಹಾಗೂ ತೆರಿಗೆ ಉಳಿತಾಯಕ್ಕೂ ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,340
ಇಂದಿನ ಅಂತ್ಯ	17,577
▲	237
ದಿನದ ಗರಿಷ್ಠ	17,622

ವಿನಿಮಯ ದರ

$ ಡಾಲರ್	74.82
£ ಪೌಂಡ್	100.16
€ ಯುರೊ	83.69
¥ ಯೆನ್ (100ಕ್ಕೆ)	65

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹64
ಮೈಸೂರು	
100 ಮೊಟ್ಟೆಗೆ	₹470

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	450
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000
ಕಾರ್ಕಳ	
ಹೊಸತು	40000-45000
ಹಳತು	46000-53000
ಪುತ್ತೂರು	
ಕೋಕ	11000-26000
ಹೊಸತು	27500-45000
ಸಿದ್ದಾಪುರ	
ಬಿಳಿಗೋಟು	22699-28212
ಚಾಲಿ	46099-47599
ಕೋಕ	21199-28469
ಹೊಸಚಾಲಿ	33599-40099
ಕೆಂಪುಗೋಟು	23099-33909
ರಾಶಿ	44819-47509
ತಟ್ಟಿಬೆಟ್ಟೆ	36199-45009
ಶಿರಸಿ	
ಬೆಟ್ಟೆ	22099-45899
ಬಿಳಿಗೋಟು	21299-41503
ಚಾಲಿ	32099-44000
ರಾಶಿ	26719-48099
ಯಲ್ಲಾಪುರ	
ಬಿಳಿಗೋಟು	26899-31799
ಕೋಕ	20499-28499
ಹಳೆಚಾಲಿ	45601-47401
ಹೊಸಚಾಲಿ	36017-40899
ಕೆಂಪುಗೋಟು	30000-36699
ರಾಶಿ	45000-52039
ತಟ್ಟಿಬೆಟ್ಟೆ	38199-44801

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15600	15750	235.10 ಸೆಂಟ್ಸ್
ಎಸಿ	---	7000	7200	
ಆರ್‌ಪಿ	---	7015	7325	ಲಂಡನ್
ಆರ್‌ಸಿ	---	3850	3900	---ಡಾಲರ್ಸ್

ಜನವರಿಯಲ್ಲಿ ತಗ್ಗಿದ ತಯಾರಿಕಾ ಚಟುವಟಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಡಿಸೆಂಬರ್‌ಗೆ ಹೋಲಿಸಿದರೆ ಜನವರಿಯಲ್ಲಿ ಅಲ್ಪ ಇಳಿಕೆ ಕಂಡಿದೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆಯು ಹೇಳಿದೆ.

ಕೋವಿಡ್‌ನ ಹೊಸ ಅಲೆಯಿಂದಾಗಿ ಬೆಳವಣಿಗೆಗೆ ಅಡ್ಡಿಯಾಗಿದ್ದು ಮತ್ತು ವಹಿವಾಟು ನಡೆಸುವ ವಿಶ್ವಾಸವು 19 ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿತ ಕಂಡಿದ್ದರಿಂದ ಹೊಸ ಯೋಜನೆಗಳು ಮತ್ತು ತಯಾರಿಕೆಯ ಬೆಳವಣಿಗೆಯು ನಿಧಾನಗತಿಯಲ್ಲಿ ಇದೆ ಎಂದು ತಿಳಿಸಿದೆ.

ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್ (ಪಿಎಂಐ) ಡಿಸೆಂಬರ್‌ನಲ್ಲಿ 55.5ರಷ್ಟು ಇದ್ದಿದ್ದು ಜನವರಿಯಲ್ಲಿ 54ಕ್ಕೆ ಇಳಿಕೆ ಕಂಡಿದೆ. ತಯಾರಿಕಾ ವೆಚ್ಚವು ಗಣನೀಯ ಏರಿಕೆ ಕಂಡಿದೆ. ಹಣದುಬ್ಬರದ ಒಟ್ಟಾರೆ ದರವು ನಾಲ್ಕು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿದಿದೆಯಾದರೂ ಅದರ ದೀರ್ಘಾವಧಿಯ ಸರಾಸರಿಗಿಂತ ಮೇಲ್ಮಟ್ಟದಲ್ಲಿಯೇ ಇದೆ. ವಹಿವಾಟು ನಡೆಸುವ ವಿಶ್ವಾಸವು ಕುಸಿತ ಕಂಡಿರುವುದರಿಂದ ಉದ್ಯೋಗಾವಕಾಶವು ಇಳಿಕೆ ಕಂಡಿದೆ. ಈಗಿರುವ ತಯಾರಿಕಾ ಅಗತ್ಯಗಳನ್ನು ಪೂರೈಸಲು ಹಾಲಿ ಇರುವ ಸಿಬ್ಬಂದಿ ಸಂಖ್ಯೆಯೂ ಸಾಕಾಗುತ್ತದೆ ಎಂದು ಹಲವು ಕಂಪನಿಗಳು ಹೇಳಿವೆ.

ಕಂಪನಿಗಳು ಹೆಚ್ಚುವರಿ ಕಚ್ಚಾ ಸಾಮಗ್ರಿಗಳು ಮತ್ತು ಅರೆ-ಸಿದ್ಧ ವಸ್ತುಗಳನ್ನು ಖರೀದಿಸುವ ಮೂಲಕ ತಮ್ಮ ದಾಸ್ತಾನು ಮರುನಿರ್ಮಾಣ ಮಾಡಲು ಪ್ರಯತ್ನಿಸಿವೆ. ಆದರೆ ಬೆಳವಣಿಗೆಯ ಸುತ್ತಲಿನ ಅನಿಶ್ಚಿತತೆಯು ಮತ್ತಷ್ಟು ಉದ್ಯೋಗಕಡಿತಕ್ಕೆ ಕಾರಣವಾಯಿತು ಎಂದು ಸಂಸ್ಥೆಯ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನ ಡಿ. ಲಿಮಾ ಹೇಳಿದ್ದಾರೆ.

ಉಡುಪಿ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಹಿಜಾಬ್ ಧರಿಸಿ ಬಂದ ವಿದ್ಯಾರ್ಥಿನಿಯರಿಗೆ ತರಗತಿ ಪ್ರವೇಶ ನಿರ್ಬಂಧಿಸಲಾಯಿತು.

‘ಹಿಜಾಬ್ ಧರಿಸಿದ್ದಕ್ಕೆ ಪ್ರವೇಶ ನಿರಾಕರಣೆ’

ಉಡುಪಿ: ‘ಹಿಜಾಬ್ ಧರಿಸಿ ಬಂದರೆ ಕಾಲೇಜಿನೊಳಗೆ ಪ್ರವೇಶ ನೀಡುವುದಿಲ್ಲ’ ಎಂದು ಉಡುಪಿ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಅಭಿವೃದ್ಧಿ ಸಮಿತಿ ನಿರ್ಣಯ ತೆಗೆದುಕೊಂಡರೂ, ಅದನ್ನು ಲೆಕ್ಕಿಸದೆ ಹಿಜಾಬ್ ಧರಿಸಿ ಬಂದಿದ್ದ ಆರು ವಿದ್ಯಾರ್ಥಿನಿಯರಿಗೆ ಮಂಗಳವಾರ ತರಗತಿ ಪ್ರವೇಶವನ್ನು ನಿರಾಕರಿಸಲಾಯಿತು.

ಕಾಲೇಜು ಆವರಣದಿಂದ ಹೊರ ಹೋಗಲು ಸಿಬ್ಬಂದಿ ಸೂಚಿಸಿದರೂ ವಿದ್ಯಾರ್ಥಿನಿಯರು ಮಧ್ಯಾಹ್ನದವರೆಗೂ ಕಾಲೇಜು ಆವರಣದಲ್ಲಿ ಕುಳಿತು ಮನೆಗೆ ವಾಪಸಾದರು. ಕಾಲೇಜಿನೊಳಗೆ ಸಾರ್ವಜನಿಕರಿಗೆ ಹಾಗೂ ಮಾಧ್ಯಮದವರಿಗೆ ಪ್ರವೇಶಕ್ಕೆ ನಿರ್ಬಂಧ ಹಾಕಲಾಗಿತ್ತು. ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಪ್ರತಿಭಟನನಿರತ ವಿದ್ಯಾರ್ಥಿನಿಯರು ಮಾತನಾಡಿ, ‘ಸಂವಿಧಾನ ನಮಗೆ ಹಿಜಾಬ್ ಧರಿಸುವ ಸ್ವಾತಂತ್ರ್ಯ ನೀಡಿದೆ. ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಹಿಜಾಬ್ ಧರಿಸಲು ಅವಕಾಶ ಕೋರಿ ಕಾಲೇಜು ಪ್ರಾಂಶುಪಾಲರಿಂದ ಹಿಡಿದು ಸಂಬಂಧಪಟ್ಟವರಿಗೆಲ್ಲ ಮನವಿ ಮಾಡಿದರೂ ಸ್ಪಂದನ ಸಿಗಲಿಲ್ಲ. ಅಂತಿಮವಾಗಿ ಕಾನೂನು ಹೋರಾಟಕ್ಕೆ ನಿರ್ಧರಿಸಿದ್ದು, ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೇವೆ’ ಎಂದು ತಿಳಿಸಿದರು.

‘ಹಿಜಾಬ್ ಧರಿಸಿದರೆ ಕಾಲೇಜು ಪ್ರವೇಶಿಸುವಂತಿಲ್ಲ. ಬಂದರೆ ಗೇಟ್‌ನಿಂದ ಹೊರಗೆ ನಿಲ್ಲಬೇಕಾಗುತ್ತದೆ. ಶಿಸ್ತು ಕ್ರಮ ತೆಗೆದುಕೊಳ್ಳುವುದಾಗಿ ಕಾಲೇಜು ಅಭಿವೃದ್ಧಿ ಸಮಿತಿ ಸಭೆಯು ನಿರ್ಣಯಿಸಿದೆ. ಇದು, ಏಕಪಕ್ಷೀಯ ನಿರ್ಣಯ. ನಮಗೂ ಒಪ್ಪಿತವಲ್ಲ’ ಎಂದು ವಿದ್ಯಾರ್ಥಿನಿಯರಾದ ಶಿಫಾ, ಆಲಿಯಾ ಅಸಾದಿ ಹೇಳಿದರು.

ಕೇಸರಿ ಶಾಲು ಧರಿಸಿ ವಿದ್ಯಾರ್ಥಿಗಳ ಪ್ರತಿಭಟನೆ

ಭದ್ರಾವತಿ: ಹಿಜಾಬ್ ಧರಿಸಿ ಕಾಲೇಜಿಗೆ ಬಂದಿದ್ದ ವಿದ್ಯಾರ್ಥಿನಿಯರ ವಿರುದ್ಧವಾಗಿ, ಇನ್ನೊಂದು ಗುಂಪು ಮಂಗಳವಾರ ಕೇಸರಿ ಶಾಲು ಹಾಕಿಕೊಂಡು ಕಾಲೇಜಿಗೆ ಹಾಜರಾಗಿದೆ. ಇದರಿಂದಾಗಿ ಇಲ್ಲಿನ ನ್ಯೂಟೌನ್ ಸರ್ ಎಂವಿ ಕಲಾ ಮತ್ತು ವಾಣಿಜ್ಯ ಕಾಲೇಜಿ ನಲ್ಲಿ ಕೆಲ ಕಾಲ ಬಿಗುವಿನ ಸ್ಥಿತಿ ನಿರ್ಮಾಣವಾಗಿತ್ತು.

ಪರಿಸ್ಥಿತಿಯನ್ನು ತಿಳಿಗೊಳಿಸಲು ಅಧ್ಯಾಪಕರು ಇನ್ನಿಲ್ಲದ ಕಸರತ್ತು ನಡೆಸಿದರು. ‘ಸಮವಸ್ತ್ರ ಕಡ್ಡಾಯವಿದ್ದರೆ ಹಿಜಾಬ್ ಧರಿಸಿ ಬರುವುದನ್ನು ನಿಷೇಧಿಸಿ. ಇಲ್ಲವಾದರೆ ನಮಗೂ ಕೇಸರಿ ಶಾಲು ಹಾಕಿಕೊಂಡು ಕಾಲೇಜಿಗೆ ಬರಲು ಅವಕಾಶ ನೀಡಿ’ ಎಂದು ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆಗೆ ಮುಂದಾದರು. ಕೂಡಲೇ ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ಕುರಿತು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವಂತೆ ಅಧ್ಯಾಪಕ ವರ್ಗದವರಿಗೆ ಸೂಚಿಸಿದರು.

ಪ್ರಾಂಶುಪಾಲ ಉಮಾಶಂಕರ್ ಹಾಗೂ ಇತರ ಅಧ್ಯಾಪಕರು ವಿದ್ಯಾರ್ಥಿಗಳನ್ನು ಕೂರಿಸಿಕೊಂಡು ಮಾತುಕತೆ ನಡೆಸಿದರು.

‘ಸಮವಸ್ತ್ರ ಧರಿಸಿ ಬರುವುದು ಗುರುವಾರದಿಂದ ಕಡ್ಡಾಯ. ಇದರ ಹೊರತಾಗಿ ಯಾವುದೇ ದಿರಿಸಿಗೆ ಅನುಮತಿ ಇಲ್ಲ. ಹಿಜಾಬ್ ಧರಿಸಿ ಬರುವವರು ಕಾಲೇಜಿನ ನಿರೀಕ್ಷಣಾ ಕೊಠಡಿಯಲ್ಲಿ ಅದನ್ನು ತೆಗೆದಿಟ್ಟು ತರಗತಿಗೆ ಹಾಜರಾಗಬೇಕು’ ಎಂದು ಆಡಳಿತ ಮಂಡಳಿ ಪರವಾಗಿ ಪ್ರಾಂಶುಪಾಲರು ಘೋಷಿಸಿದರು.

‘ಸಮವಸ್ತ್ರ ಕಡ್ಡಾಯ ಮುಂಚಿನಿಂದಲೂ ಇದೆ. ಇದರಿಂದ ಹೊರಗಿನ ಮಂದಿ ಅನವಶ್ಯಕವಾಗಿ ಕಾಲೇಜು ಪ್ರವೇಶಿಸುವುದನ್ನು ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಎರಡೂ ಕಡೆಯ ವಿದ್ಯಾರ್ಥಿಗಳ ಮನವೊಲಿಸಲಾಗಿದೆ. ಪೋಷಕರಿಗೂ ಮಾಹಿತಿ ನೀಡಲಾಗುವುದು’ ಎಂದು ತಿಳಿಸಿದರು.

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME
ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8139955155/ 8139988588

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಡಿಪ್ಲೊಮಾದವರು 16,600 -62000/- (ಮನೆಯಲ್ಲಿಯೇಕೆಲಸ) ವಸತಿಯೂಟದೊಂದಿಗೆ 8123884588, 8123884788

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್ಸ ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000-60,000 /- ವಸತಿಯೂಟವಿದೆ. 7795837319, 9901312461

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹೋಂನರ್ಸ್‌ಗಳು ಹುಡುಗಿಯರು ಬೇಕಾಗಿದ್ದಾರೆ. ಊಟವಸತಿಯಿದೆ. 10.000 - 15,000. 8951315839, 9880545002

ಬೆಂಗಳೂರಿನ CF CNC-TECH ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಲು 28ವರ್ಷದೊಳಗಿನ ಯುವಕ ಯುವತಿಯರು ಬೇಕಾಗಿದ್ದಾರೆ. ಉಚಿತಊಟ ವಸತಿಯೊಂದಿಗೆ 12000-18000. ಸಂಪರ್ಕಿಸಿ: 9964640333/ 9743430011

ಖಾಸಗಿ ಬ್ಯಾಂಕ್‌ಗಳಲ್ಲಿ ಕೆಲಸಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ ssIc puc degree ಸಂಬಳ15000 to 28000 ಸಂಪರ್ಕಿಸಿರಿ 9980814578,9980812378

Marketing & Sales

WANTED SALES Executives with Good Industrial Knowledge. Bike Must. Jain Bearings 09986781877, 09741966767

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Receptionist/ Secretary

ವಸತಿ ಗೃಹಕ್ಕೆ ಇಂಗ್ಲೀಷ್ ತಿಳಿದ ಸ್ವಾಗತಕಾರರು (Receptionist) ಬೇಕಾಗಿದ್ದಾರೆ. ಬೆಳಿಗ್ಗೆ 8-10 ಗಂಟೆಯೊಳಗೆ ಖುದ್ದಾಗಿ ಸಂಪರ್ಕಿಸಿ: ಶ್ರೀ ಕಮಲ್ ಹೋಟೆಲ್ (ಲಾಡ್ಜ್) ಕಬ್ಬನ್ ಪೇಟೆ ಮುಖ್ಯ ರಸ್ತೆ, ಮೈಸೂರು ಬ್ಯಾಂಕ್ ಸರ್ಕಲ್ ಹತ್ತಿರ ಅವಿನ್ಯೂ ರಸ್ತೆ, ಬೆಂಗಳೂರು - 080 - 22215903

Wanted

ಚಲನಚಿತ್ರ, ಧಾರಾವಾಹಿಗಾಗಿ ನಟ- ನಟಿ ಪೋಷಕರು, ಮಕ್ಕಳು ಅಭಿನಯಿಸಲು ಹೊಸ ಕಲಾವಿದರಿಗೆ ಅವಕಾಶವಿದೆ ಮೊದಲು ಭಾವಚಿತ್ರದೊಂದಿಗೆ ಸಂಪರ್ಕಿಸಿ: 9353637689, 9035541461

CONNECT

ಫ್ಯಾಮಿಲಿ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್
FAMILY MULTIPURPOSE CO-OPERATIVE SOCIETY LIMITED INVESTING FOR LIFE....
(OTS - 1:190:HOT:44075/2013-14)
email: familymcsl@gmail.com
11% Interest on Fixed Deposit
for all the members of our Society
Senior Citizens 11.5%
91-9008473910
1 Year 10%
2 Year 12%
RECURRING DEPOSIT
NEW BEL ROAD 91-7353699933
MALLESHWARAM 91-7899322665
YELAHANKA 91-7618789143
TUMKUR ROAD 91-7899335394
RAJAJINAGAR 91-9606600973
www.familymcsl.com
* Terms and Conditions Applied

ಭವಿಷ್ಯ

Astrology

★ಓಂದುರ್ಗಾ ಅಂಜನಂ★ ಜ್ಯೋತಿಷ್ಯ ಮತ್ತು ವಾಸ್ತುಕೇಂದ್ರ, ವಿಶ್ವವಿಖ್ಯಾತ ದಕ್ಷಿಣಕನ್ನಡ ಕೇರಳಿಯ ದೈವಸಂಭೂತ ಮಹಾಮಾಂತ್ರಿಕ ಜ್ಯೋತಿಷ್ಯ ವಾಸ್ತು ವಿದ್ವಾನ್ ಗುರು ಶ್ರೀದೇವನಂದನ್ ರವರಿಂದ ನಿಮ್ಮ ಜೀವನದ ಸರ್ವತೋಮುಖ ಅಭಿವೃದ್ಧಿ,ಸುಖಶಾಂತಿ ನೆಮ್ಮದಿಗಾಗಿ,ಸಿರಿಸಂಪತ್ತು,ಸ್ತ್ರೀ ಪುರುಷ,ದಾಂಪತ್ಯ,ಮದುವೆ, ಸಂತಾನ,ಆರೋಗ್ಯಕ್ಕೆ ಬೇಕಾಗುವ ಸರ್ವಮನಇಚ್ಛಾ ಅತಿಘೋರ,ನಿಗೂಡ 100008 ಪಂಚಭೂತ ಅತೀಂದ್ರಿಯ ಪ್ರಬಲ ಮಹಾವಶೀಕರಣ ಆಕರ್ಷಣ ಸಂಮೋಹನ,ದುಷ್ಟಶಕ್ತಿಗಳು ಉಚ್ಚಾಟನೆ ಮತ್ತು ಶತ್ರು ಸಂಬಂಧಿತ ಮಾಟ,ದೃಷ್ಟಿಶಾಪಗಳಿಗೆ ಇಲ್ಲೇ ಇಂದೇ_ಪರಿಹಾರಕ್ಕೆ ಸಂಪರ್ಕಿಸಿರಿ: 8217437023 ನಿಮ್ಮ ಇಚ್ಛೆಗೆ 24ಘಂಟೆಗಳು ಮಾತ್ರ.

'ನಂ.1 ಸ್ತ್ರೀಪುರುಷ ವಶೀಕರಣ' ಸ್ಪೆಷಲಿಸ್ಟ್ ನಿಮ್ಮ ಯಾವುದೇ ಸಮಸ್ಯೆಗಳಿದ್ದರು ಶ್ರೀಕ್ಷೇತ್ರದಿಂದ ಪಂಡಿತ್.ದೇವೇಂದ್ರಭಟ್ ಅವರಿಂದ ನೇರಪರಿಹಾರ ಒಮ್ಮೆ ಕರೆಮಾಡಿ.ನಿಮ್ಮ ಜೀವನ ಬದಲಾಯಿಸಿಕೊಳ್ಳಿ. 9845919804

ಕೆಲಸದ ನಂತರ ಕಾಣಿಕೆ. ಸ್ತ್ರೀ-ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತ-ಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ:9591580089.

ಸ್ತ್ರೀ ಪುರುಷ ವಶೀಕರಣ ಇಷ್ಟಪಟ್ಟವರು ನಿಮ್ಮಂತಾಗಲು ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಕಡಿಮೆ ಖರ್ಚಿನಲ್ಲಿ ಒಂದು ದಿನದಲ್ಲಿ ಕೇರಳದಿಂದ ನೇರಪರಿಹಾರ 9148890039

ಪ್ರವಾಸ

Travel

16.03.2022, 28.03.2022, 11 ದಿನಗಳ ಕಾಶಿಯಾತ್ರೆ. 07.04.2022, 11 ದಿನಗಳ ನೇಪಾಳ. ಪೊಖ್ರಾ, ಮುಕ್ತಿನಾಥ್,ಕಾಶಿ. 21.04.2022, 12 ದಿನಗಳ ವೈಷ್ಣೊದೇವಿ, ಕುಲುಮನಾಲಿ, ಪಂಚಶಕ್ತಿಪೀಠಗಳು. 04.05.2022, 18.05.2022, 15 ದಿನಗಳ ಚಾರ್‌ಧಾಮ್ ಯಾತ್ರೆ. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ತ್ಯಾಗರಾಜನಗರ, ಬೆಂಗಳೂರು-70. 9342287551, 8050629305

Travel Accessories

10/03/2022, 11/15 ದಿನಗಳು ದೆಹಲಿ, ಆಗ್ರ, ಅಲಹಾಬಾದ್,ಕಾಶಿ, ಗಯಾ, ಅಯೋಧ್ಯ, ಹರಿದ್ವಾರ, ಇತ್ಯಾದಿ. (ಕೆಲವೇ ಸೀಟುಗಳಿವೆ) ಫೆಬ್ರವರಿ, ಮಾರ್ಚ ಏಪ್ರಿಲ್‌ನಲ್ಲಿ ಅಂಡಮಾನ್ ಹವಳದ್ವೀಪ Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9845560219/ 9739847429.

ವ್ಯಾಪಾರ

Business Offers

General

Cropex FertiMart Fertilizer Store
Start a Profitable & Sustainable Fertilizer Business in Any Town.
www.Cropex.in
Please Call / WhatsApp 73494 23613

ಪ್ರತಿತಿಂಗಳು 65,000/ to 90,000/ ಗಳಿಸಿರಿ. ಪೇಪರ್ ಬ್ಯಾಗ್ಸ್, LEDಬಲ್ಬ್ಸ್, ಟೀಕಪ್ಸ್‌ಗಳ ಉತ್ಪಾದನಾ ಘಟಕವನ್ನು ಮನೆಯಲ್ಲಿಯೇ ಅಳವಡಿಸಿ. ನಾವು ಮರುಖರೀದಿಯ ಒಪ್ಪಂದದ ಜೊತೆಗೆ, ಉಚಿತವಾಗಿ ರಾಮೆಟಿರಿಯಲ್ ಗಳನ್ನು ನೀಡುತ್ತೇವೆ. ವಿವರಗಳಿಗಾಗಿ: 9958628785

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916551457, 9916544057, 9620761222

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH DECCAN HERALD BOOK YOUR CLASSIFIEDS ONLINE ಪ್ರಜಾವಾಣಿ
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
condition apply*
WWW.DHCLASSIFIEDS.COM
For more information Contact:
9880856233 | 9731810277 | 9901641752 | 9845114560 | 9886213331
Email: dhclassifieds@deccanherald.co.in

ಬೆಂಗಳೂರಿನಲ್ಲಿ ಫೆ 12ರಿಂದ ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆ

ಭಾರಿ ಮೌಲ್ಯದ ನಿರೀಕ್ಷೆಯಲ್ಲಿ ಶಿಖರ್

ನವದೆಹಲಿ (ಪಿಟಿಐ): ಇದೇ ತಿಂಗಳು ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಆಟಗಾರರ ಹರಾಜು ಪ್ರಕ್ರಿಯೆಯಲ್ಲಿ ಶಿಖರ್ ಧವನ್, ಶ್ರೇಯಸ್ ಅಯ್ಯರ್ ಮತ್ತು ಆರ್. ಅಶ್ವಿನ್ ಸೇರಿದಂತೆ ಪ್ರಮುಖ ಆಟಗಾರರು ಗರಿಷ್ಠ ಮೂಲಬೆಲೆ ವಿಭಾಗದಲ್ಲಿ ಸ್ಥಾನ ಪಡೆದಿದ್ದಾರೆ.

ಇದೇ 12 ಮತ್ತು 13ರಂದು ಬೆಂಗಳೂರಿನಲ್ಲಿ ಮೆಗಾ ಹರಾಜು ಪ್ರಕ್ರಿಯೆ ನಡೆಯಲಿದೆ. ಇದರಲ್ಲಿ ಬಿಡ್ ಆಗುವ 590 ಆಟಗಾರರ ಅಂತಿಮ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಲಾಗಿದೆ. ಹೋದ ತಿಂಗಳು ಬಿಡುಗಡೆಯಾಗಿದ್ದ ಪಟ್ಟಿಯಲ್ಲಿ 1214 ಆಟಗಾರರು ನೋಂದಣಿಯಾಗಿದ್ದರು.

ಗರಿಷ್ಠ ಮೂಲಬೆಲೆಯಾದ ಎರಡು ಕೋಟಿ ರೂಪಾಯಿ ವಿಭಾಗದಲ್ಲಿ ಖ್ಯಾತನಾಮ ಆಟಗಾರರಿದ್ದಾರೆ. ಅದರಲ್ಲಿ ಭಾರತ ತಂಡದ ಆರಂಭಿಕ ಬ್ಯಾಟರ್ ಶಿಖರ್, ಮಧ್ಯಮಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್, ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಇದ್ದಾರೆ. ಯುವ ಆಟಗಾರರಾದ ಕರ್ನಾಟಕದ ದೇವದತ್ತ ಪಡಿಕ್ಕಲ್, ವಾಷಿಂಗ್ಟನ್ ಸುಂದರ್, ದೀಪಕ್ ಚಾಹರ್, ಹೋದ ಸಲದ ಐಪಿಎಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ಹರ್ಷಲ್ ಪಟೇಲ್, ಸ್ಪಿನ್ನರ್ ಯಜುವೇಂದ್ರ ಚಾಹಲ್, ಮಧ್ಯಮವೇಗಿ ಶಾರ್ದೂಲ್ ಠಾಕೂರ್, ಅನುಭವಿಗಳಾದ ಅಜಿಂಕ್ಯ ರಹಾನೆ, ಇಶಾಂತ್ ಶರ್ಮಾ, ಮೊಹಮ್ಮದ್ ಶಮಿ ಮತ್ತು ಭುವನೇಶ್ವರ್ ಕುಮಾರ್ ಅವರು ಇದೇ ವಿಭಾಗದಲ್ಲಿದ್ದಾರೆ.

ದೇಶ ಮತ್ತು ವಿದೇಶದ ಒಟ್ಟು 48 ಆಟಗಾರರು ಈ ವಿಭಾಗದಲ್ಲಿದ್ದಾರೆ. ನ್ಯೂಜಿಲೆಂಡ್‌ನ ವೇಗಿ ಟ್ರೆಂಟ್ ಬೌಲ್ಟ್, ದಕ್ಷಿಣ ಆಫ್ರಿಕಾದ ಕಗಿಸೊ ರಬಾಡ, ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಮತ್ತು ಮಿಚೆಲ್ ಮಾರ್ಷ್ ಪ್ರಮುಖರಾಗಿದ್ದಾರೆ.

ಕನ್ನಡಿಗ ರಾಬಿನ್ ಉತ್ತಪ್ಪ ಮತ್ತು ಅನುಭವಿ ಆಟಗಾರ ಸುರೇಶ್ ರೈನಾ ಕೂಡ ₹ 2 ಕೋಟಿ ಮೂಲಬೆಲೆ ವಿಭಾಗದಲ್ಲಿ ಕೊನೆಯ ಸ್ಥಾನಗಳಲ್ಲಿದ್ದಾರೆ. ಒಟ್ಟು 20 ಆಟಗಾರರು ₹ 1.5 ಕೋಟಿ ಮತ್ತು 34 ಆಟಗಾರರು ಒಂದು ಕೋಟಿ ರೂಪಾಯಿ ವಿಭಾಗದಲ್ಲಿದ್ದಾರೆ.

19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ನಾಯಕತ್ವ ವಹಿಸಿರುವ ಯಶ್ ಧುಳ್, ವಿಕ್ಕಿ ಓಸ್ವಾಲ್ ಅವರಿಗೆ ತಲಾ ₹ 20 ಲಕ್ಷ ಮತ್ತು ರಾಜವರ್ಧನ್ ಹಂಗರಗೇಕರ್ ಅವರಿಗೆ ₹ 30 ಲಕ್ಷ ಮೂಲಬೆಲೆ ನಿಗದಿಯಾಗಿದೆ. ಅವರಿಗೆ ಉತ್ತಮ ಬೇಡಿಕೆ ಕುದುರುವ ನಿರೀಕ್ಷೆ ಇದೆ. ತಮಿಳುನಾಡಿನ ಶಾರೂಖ್ ಖಾನ್, ದೀಪಕ್ ಹೂಡಾ ಮತ್ತು ಆವೇಶ್ ಖಾನ್ ಕೂಡ ಉತ್ತಮ ಮೌಲ್ಯ ಗಿಟ್ಟಿಸುವ ನಿರೀಕ್ಷೆಯಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ 42 ವರ್ಷದ ಇಮ್ರಾನ್ ತಾಹೀರ್ ಬಿಡ್‌ನಲ್ಲಿರುವ ಅತಿ ಹಿರಿಯ ಆಟಗಾರ.

ಶಿಖರ್ ಧವನ್

ಪರ್ಸ್‌ನಲ್ಲಿ ಪಂಜಾಬ್ 'ಕಿಂಗ್'

ಪಂಜಾಬ್ ಕಿಂಗ್ಸ್ ತಂಡವು 23 ಆಟಗಾರರನ್ನು ಖರೀದಿಸುವ ಅವಕಾಶ ಹೊಂದಿದೆ. ಇದು ಉಳಿದೆಲ್ಲ ತಂಡಗಳಿಗಿಂತ ಹೆಚ್ಚು. ತಂಡದ ಪರ್ಸ್‌ನಲ್ಲಿ ಅತಿ ಹೆಚ್ಚು ಹಣ (₹ 72 ಕೋಟಿ) ಕೂಡ ಹೊಂದಿದೆ. ಡೆಲ್ಲಿ ತಂಡದ ಪರ್ಸ್ (₹ 47.5 ಕೋಟಿ) ಅತಿ ಕಡಿಮೆ ಹಣ ಹೊಂದಿದೆ.

ಚೆನ್ನೈ ಸೂಪರ್ ಕಿಂಗ್ಸ್, ಡೆಲ್ಲಿ ಕ್ಯಾಪಿಟಲ್ಸ್, ಕೋಲ್ಕತ್ತ ನೈಟ್ ರೈಡರ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ತಲ 21 ಆಟಗಾರರನ್ನು ಖರೀದಿಸಲಿವೆ. ಉಳಿದ ತಂಡಗಳಲ್ಲಿ ತಲಾ 22 ಸ್ಥಾನಗಳು ತೆರವಾಗಿವೆ.

ಆಸ್ಟ್ರೇಲಿಯಾದ 47 ಆಟಗಾರರು

ವಿದೇಶಿ ಆಟಗಾರರು ದೊಡ್ಡ ಮೌಲ್ಯ ಪಡೆಯುವ ನಿರೀಕ್ಷೆಯಲ್ಲಿದ್ದಾರೆ. ಇದರಲ್ಲಿ ಆಸ್ಟ್ರೇಲಿಯಾದ ಆಟಗಾರರು ಅತಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಒಟ್ಟು 47 ಆಟಗಾರರು ಪೈಪೋಟಿಯಲ್ಲಿದ್ದಾರೆ. ವೆಸ್ಟ್ ಇಂಡೀಸ್ (34), ದಕ್ಷಿಣ ಆಫ್ರಿಕಾ (33), ಇಂಗ್ಲೆಂಡ್ (24), ನ್ಯೂಜಿಲೆಂಡ್ (24) ಶ್ರೀಲಂಕಾ (23) ಮತ್ತು ಅಫ್ಘಾನಿಸ್ಥಾನ (17) ಆಟಗಾರರೂ ಸ್ಪರ್ಧೆಯಲ್ಲಿದ್ದಾರೆ.

ಪ್ರಮುಖ ಅಂಶಗಳು

590 ಹರಾಜು ಕಣದಲ್ಲಿರುವ ಒಟ್ಟು ಆಟಗಾರರು

370 ಕಣದಲ್ಲಿ ಭಾರತದ ಆಟಗಾರರು

220 ಸ್ಪರ್ಧೆಯಲ್ಲಿರುವ ವಿದೇಶಗಳ ಒಟ್ಟು ಆಟಗಾರರು

72 ಕೋಟಿ ಪಂಜಾಬ್ ಕಿಂಗ್ಸ್ ಪರ್ಸ್‌ನಲ್ಲಿರುವ ಹಣ

10 ಮೆಗಾ ಹರಾಜಿನಲ್ಲಿ ಆಟಗಾರರನ್ನು ಖರೀದಿಸಲಿರುವ ತಂಡಗಳು

ಕ್ರೀಡಾ ಬಜೆಟ್: ₹ 305 ಕೋಟಿ ಹೆಚ್ಚಳ

ನವದೆಹಲಿ (ಪಿಟಿಐ): ಮಂಗಳವಾರ ಮಂಡನೆಯಾದ ಕೇಂದ್ರ ಬಜೆಟ್‌ನಲ್ಲಿ ಕ್ರೀಡೆಗೆ ₹ 3062.60 ಕೋಟಿಯನ್ನು ನೀಡಲಾಗಿದೆ. ಹೋದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಭಾರಿ ₹ 305.58 ಕೋಟಿ ಹೆಚ್ಚಳವಾಗಿದೆ.

ಹೋದ ವರ್ಷದ ಬಜೆಟ್‌ನಲ್ಲಿ ₹ 2596 ಕೋಟಿಯನ್ನು ನೀಡಲಾಗಿತ್ತು. ನಂತರ ಅದನ್ನು ₹ 2757.02 ಕೋಟಿಗೆ ಪರಿಷ್ಕರಿಸಲಾಗಿತ್ತು.

ಹೋದ ವರ್ಷ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾರತದ ಅಥ್ಲೀಟ್‌ಗಳು ಏಳು ಪದಕಗಳನ್ನು ಗೆದ್ದು ಚಾರಿತ್ರಿಕ ಸಾಧನೆ ಮಾಡಿದ್ದರು. ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿಮೊದಲ ಬಾರಿಗೆ ಚಿನ್ನದ ಪದಕವೂ ಒಲಿದಿತ್ತು.

2022ರಲ್ಲಿ ಪ್ರಮುಖ ಅಂತರರಾಷ್ಟ್ರೀಯ ಕ್ರೀಡಾಕೂಟಗಳು ನಡೆಯಲಿವೆ. ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಕೂಡ ಮತ್ತು ಹ್ಯಾಂಗ್ಝು ಏಷ್ಯನ್ ಗೇಮ್ಸ್ ನಡೆಯಲಿವೆ. ಆದ್ದರಿಂದ ಕ್ರೀಡಾಪಟುಗಳ ತರಬೇತಿ, ಮೂಲಸೌಲಭ್ಯಗಳ ಅಭಿವೃದ್ಧಿಯನ್ನು ಗುರಿಯಾಗಿರಿಸಿಕೊಂಡು ಬಜೆಟ್ ಹೆಚ್ಚಳ ಮಾಡಲಾಗಿದೆ ಎನ್ನಲಾಗಿದೆ.

ಅದರಲ್ಲಿ ಖೇಲೊ ಇಂಡಿಯಾಗೆ ಹೋದ ಬಾರಿ ₹ 657.71 ಕೋಟಿ ನೀಡಲಾಗಿತ್ತು. ಇದೀಗ ಅದು ₹ 974 ಕೋಟಿಗೆ ಹೆಚ್ಚಳವಾಗಿದೆ. ಆದರೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಬಜೆಟ್‌ನಲ್ಲಿ ಕಡಿತ ಮಾಡಲಾಗಿದೆ. ₹ 7.41 ಕೋಟಿ ಕಡಿಮೆ ಮಾಡಿದ್ದು, ₹ 653 ಕೋಟಿ ನೀಡಲಾಗಿದೆ.

ದೇಶದಲ್ಲಿ ಕ್ರೀಡೆಗಳ ತರಬೇತಿ ಶಿಬಿರಗಳು, ಮೂಲಸೌಲಭ್ಯ, ಸಲಕರಣೆಗಳು ಮತ್ತು ಕ್ರೀಡಾಪಟುಗಳ ಪ್ರಯಾಣ, ಸರಕು ಸಾಗಣೆಗಳನ್ನು ನಿರ್ವಹಿಸುವ ಮಹತ್ವದ ಇಲಾಖೆ ಇದಾಗಿದೆ. ಇದಲ್ಲದೇ ರಾಷ್ಟ್ರೀಯ ಕ್ರೀಡಾಭಿವೃದ್ಧಿ ನಿಧಿಯಲ್ಲಿ ಒಂಬತ್ತು ಕೋಟಿ ಕಡಿಮೆ ನೀಡಲಾಗಿದೆ.

ಆದರೆ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಗೆ ಭರ್ಜರಿ ಬಜೆಟ್ ನೀಡಲಾಗಿದೆ. ಈ ಮೊದಲಿದ್ದ ₹ 165 ಕೋಟಿಯಿಂದ ₹ 283.50 ಕೋಟಿಗೆ ಹೆಚ್ಚಳ ಮಾಡಲಾಗಿದೆ.

ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳಿಗೆ(ಎನ್‌ಎಸ್‌ಎಫ್) ನೀಡುವ ₹ 280 ಕೋಟಿ ಅನುದಾನವನ್ನು ಯಥಾಸ್ಥಿತಿಯಲ್ಲಿ ಉಳಿಸಲಾಗಿದೆ.

ಕ್ರೀಡಾಪಟುಗಳಿಗೆ ನೀಡುವ ಪ್ರೋತ್ಸಾಹಧನಕ್ಕಾಗಿ ₹ 55 ಕೋಟಿಯ ಕನಿಷ್ಠ ಏರಿಕೆಯನ್ನು ಬಜೆಟ್‌ನಲ್ಲಿ ಪ್ರಸ್ತಾಪ ಮಾಡಲಾಗಿದೆ.

ಏಕದಿನ ಸರಣಿಗೆ ಪ್ರೇಕ್ಷಕರ ನಿರ್ಬಂಧ

ಅಹಮದಾಬಾದ್ (ಪಿಟಿಐ): ಭಾರತ ಮತ್ತು ವೆಸ್ಟ್ ಇಂಡೀಸ್ ನಡುವಣ ಇದೇ 6ರಿಂದ 11ರವರೆಗೆ ನಡೆಯಲಿರುವ ಏಕದಿನ ಕ್ರಿಕೆಟ್ ಸರಣಿಯ ಪಂದ್ಯಗಳಿಗೆ ಪ್ರೇಕ್ಷಕರ ಪ್ರವೇಶ ನಿರ್ಬಂಧಿಸಲಾಗಿದೆ.

'ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯಗಳು ನಡೆಯಲಿವೆ. 6ರಂದು ಮೊದಲ ಪಂದ್ಯ ನಡೆಯಲಿದೆ. ಭಾರತಕ್ಕೆ ಇದು ಐತಿಹಾಸಿಕ ಪಂದ್ಯವಾಗಿದೆ. ಭಾರತಕ್ಕೆ ಒಂದು ಸಾವಿರನೇ ಪಂದ್ಯ ಇದಾಗಿದೆ. ಈ ಸಾಧನೆ ಮಾಡುತ್ತಿರುವ ಮೊದಲ ತಂಡ ಇದಾಗಿದೆ. ಈ ಹಣಾಹಣಿಗೆ ಆತಿಥ್ಯ ವಹಿಸುವುದು ಹೆಮ್ಮೆಯ ಸಂಗತಿ' ಎಂದು ಗುಜರಾತ್ ಕ್ರಿಕೆಟ್ ಸಂಸ್ಥೆ (ಜಿಸಿಎ) ಟ್ವೀಟ್ ಮಾಡಿದೆ.

'ಕೋವಿಡ್ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು ಪ್ರೇಕ್ಷಕರನ್ನು ನಿರ್ಬಂಧಿಸಲಾಗುತ್ತಿದೆ' ಎಂದೂ ಜಿಸಿಎ ತಿಳಿಸಿದೆ.

ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಮಹಿಳಾ ಕ್ರಿಕೆಟ್

ಭಾರತ ತಂಡಕ್ಕೆ ಆಸ್ಟ್ರೇಲಿಯಾ ಎದುರಾಳಿ

ದುಬೈ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ 24 ವರ್ಷಗಳ ಬಳಿಕ ಕ್ರಿಕೆಟ್ ಪಂದ್ಯಗಳನ್ನು ನಡೆಸಲಾಗುತ್ತಿದೆ. ಬರ್ಮಿಂಗ್‌ಹ್ಯಾಮ್‌ನಲ್ಲಿ ನಿಗದಿಯಾಗಿರುವ ಈ ಬಾರಿಯ ಕೂಟದಲ್ಲಿ ಮೊದಲ ಪಂದ್ಯದಲ್ಲಿ ಜುಲೈ 29ರಂದು ಭಾರತ ಮಹಿಳಾ ತಂಡವು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಮಹಿಳಾ ಟಿ20 ಪಂದ್ಯಗಳು ನಾಕೌಟ್ ಮಾದರಿಯಲ್ಲಿ ನಡೆಯಲಿದ್ದು, ಆಗಸ್ಟ್ 7ರಂದು ಚಿನ್ನ ಮತ್ತು ಕಂಚಿನ ಪದಕದ ಸುತ್ತಿನ ಪಂದ್ಯಗಳು ನಿಗದಿಯಾಗಿವೆ. ಶ್ರೀಲಂಕಾ ತಂಡವು ಟೂರ್ನಿಗೆ ಎಂಟನೇ ತಂಡವಾಗಿ ಅರ್ಹತೆ ಪಡೆದಿದೆ' ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮಂಗಳವಾರ ತಿಳಿಸಿದೆ.

ಕಾಮನ್‌ವೆಲ್ತ್ ಕ್ರೀಡಾಕೂಟವು ಜುಲೈ 28ರಿಂದ ಆಗಸ್ಟ್ 8ರವರೆಗೆ ನಿಗದಿಯಾಗಿದೆ. 72 ದೇಶಗಳಿಂದ 4,500ಕ್ಕೂ ಹೆಚ್ಚು ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ಮೊದಲ ಬಾರಿ ಕಾಮನ್‌ವೆಲ್ತ್ ಕೂಟಕ್ಕೆ ಪ್ರವೇಶ ಪಡೆದಿರುವ ಮಹಿಳಾ ಟೂರ್ನಿಯಲ್ಲಿ ಆಸ್ಟ್ರೇಲಿಯಾ, ಬಾರ್ಬಡೀಸ್, ಇಂಗ್ಲೆಂಡ್, ಭಾರತ, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನ ತಂಡಗಳು ಆಡಲಿವೆ.

1998ರಲ್ಲಿ ಕ್ವಾಲಾಲಂಪುರದಲ್ಲಿ ನಡೆದ ಕ್ರೀಡಾಕೂಟದಲ್ಲಿ ಪುರುಷರ ಕ್ರಿಕೆಟ್ ಪಂದ್ಯಗಳನ್ನು ಆಡಿಸಲಾಗಿತ್ತು. ಆಗ ಶಾನ್ ಪೋಲಾಕ್ ನಾಯಕತ್ವದ ದಕ್ಷಿಣ ಆಫ್ರಿಕಾ ತಂಡವು ನಾಲ್ಕು ವಿಕೆಟ್‌ಗಳಿಂದ ಆಸ್ಟ್ರೇಲಿಯಾ ತಂಡವನ್ನು ಸೋಲಿಸಿ ಚಿನ್ನದ ಪದಕ ಗೆದ್ದಿತ್ತು.

ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರು– ರಾಯಿಟರ್ಸ್ ಚಿತ್ರ

ಉದ್ಯೋಗ ವಾಣಿ

HAL EDUCATION COMMITTEE®

Facilities Management Division Building, Hindustan Aeronautics Limited Bangalore – 560017

Invites applications for the following posts (Tenure) at **HAL Schools (CBSE / ICSE), Bangalore** for the Academic Year 2022-23.

Post	TGT	PRT	Nursery
Kannada	2	3	
Hindi	1		
English	3	1	
Mathematics	1	1	
Science (Physics & Chemistry)	1		
Social Studies		1	
Geography	1		
Computer Science		1	
Physical Education (Female)		1	
Music		1	
Kindergarten			3

Applications should be submitted only through online Portal **(https://career.halec.co.in)**. Further, detailed notification regarding qualification, pay, age limit etc can be had by visiting School Websites **(www.halec.co.in, www.halnewpublicschool.co.in, www.halgnanajyotischool.co.in)** and HAL website **(www.hal-india.co.in)**. The last date for submission of online applications is **20.02.2022.** Corrigendum / Addendum, if any, will be hosted on the HAL / School websites only.

Secretary

RASHTROTTHANA CBSE SCHOOLS

Keshava Shilpa, Kempegowdanagar, Bengaluru-560 019

Website: www.rvkcbse.in

OPPORTUNITY

Rashtrotthana Parishat is running CBSE Syllabus Schools at Bengaluru and other parts of Karnataka. Applications are invited for the posts of Principal and Teaching Staff for Nursery to Std. 12 for its institutions to meet the growing demand under their expansion programme for the Academic year 2022-23.

1	**Principal for CBSE School at Mysore:** PG with 10+ years of teaching experience in core subject and Minimum 5 years of experience as Principal of CBSE School
2	**PGT:** Postgraduate in the relevant subject with B.Ed. Preference will be given to experienced person who can prepare students for KCET / COMED.K
3	**TGT - English / Kannada / Hindi / Sanskrit / Maths / Science / Soc. Science:** Postgraduate / Graduate in the relevant subjects with B.Ed.
4	**PRT - English / Kannada / Hindi / Sanskrit / Maths / Science / Soc. Science:** Graduate in the relevant subjects with B.Ed., / D.Ed.
5	**P.P.T - Kindergarten Teachers Montessori Teachers:** NTT / Montessori Diploma
6	**P.E.T:** M. P.Ed. / B.P.Ed., (Preference will be given to Ladies)
7	**Performing Arts Teachers, Karate, Dance, Yoga, Vocal Music, Flute, Tabla, Key Board:** Proficiency Certificate with experience in the respective subjects
8	**Visual Art:** B.F.A. / B.V.A.
9	**Swimming Coach & Life Guard:** Certificate in relevant area (Preference will be given to Ladies)
10	**Computer Instructor:** BCA / MCA
11	**Librarian:** M.L. & I.Sc. / B.L. & I.Sc.
12	**Counselor:** M.Sc. in Child & Adult Psychology
13	**Special Educator:** Certificate from Rehabilitation Council of India

Preference will be given to postgraduates and experienced teachers in creative and technology aided teaching.
Remuneration is not constraint for a deserving candidates.

Send your application through e-mail separately to Respective Schools within 10 days.

RASHTROTTHANA VIDYA KENDRA (CBSE)
Arkavathy Layout, Thanisandra Main Road, Bengaluru-560 077
Ph.: 28465972, 9880651978, E-mail: info@rvkb.edu.in

RASHTROTTHANA VIDYA KENDRA (CBSE)
Banashankari 6th Stage, 8th Block, Near NICE Office, Bengaluru-560 060. Ph.: 9945202661, 9945582661
E-mail: rvkbsk@gmail.com

JAIGOPAL GARODIA RASHTROTTHANA VIDYA KENDRA (CBSE)
Main Road, Ramamurthynagar, Bengaluru-560 016
Ph.: 25665133 / 34, E-mail: jgrvkb@gmail.com

RASHTROTTHANA VIDYA KENDRA (CBSE)
Nituvalli, Davangere-577 004. Ph.: 9480766501, 9449320601
E-mail: rvkdvgcbse@gmail.com

RASHTROTTHANA VIDYA KENDRA (CBSE)
Kudligi Road, Hagaribommanahalli-583 212, Bellary District
Ph.: 0839 - 7238413 / 9964747979, E-mail: rvkhbhcbse@gmail.com

RASHTROTTHANA VIDYA KENDRA (CBSE) BOYS RESIDENTIAL SCHOOL
Garag Road, Madhavanagar, Dharwad-580 011. Ph.: 0836 - 2485124 / 127, 9731845212, E-mail: principalrvkd@yahoo.com

RASHTROTTHANA VIDYA KENDRA (CBSE)
Vijayanagara 4th Stage, Belawadi, Mysore.
Ph.: 7022039491, Email: rvkmy1@rashtrotthana.org

RASHTROTTHANA VIDYA KENDRA (CBSE)
Near Shree Nagara, Mandakalli, Mysore.
Ph.: 7022039491, Email: rvkmy2@rashtrotthana.org

SCHOOL TEXT BOOK WRITERS (CLASS 1 TO 8)
(SOCIAL SCIENCE / ENGLISH / SCIENCE / MATHS)
Experienced Postgraduates in relevant Subject with B.Ed. and 5+ years of teaching experience and having flare for research based content writing may apply.
CONTACT: 9845182880
E-mail: textbookwriters.recruitment@gmail.com

General Secretary

ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಗ್ರಾಮೀಣ ಕುಟುಂಬಗಳ ಆರ್ಥಿಕ ಭದ್ರತೆಗೆ ಉದ್ಯೋಗ ಖಾತ್ರಿ

ಕಾಯಕದೊಂದಿಗೆ ಫೆಬ್ರವರಿ 02
ನರೇಗಾ ದಿನಾಚರಣೆ

ಕುರಿ ಶೆಡ್ ನಿರ್ಮಾಣ

ತೋಟಗಾರಿಕೆ

ಶ್ರೀ ಕೆ.ಎಸ್ ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಕಾಮಗಾರಿಯನ್ನು ಪರಿಶೀಲಿಸುತ್ತಿರುವುದು.



ದಿವ್ಯಾಂಗರಿಗೆ ಕೆಲಸ

ಮಹಿಳಾ ಸ್ವಾವಲಂಬನೆ

- 32 ಲಕ್ಷ ಕುಟುಂಬಗಳಿಗೆ ₹ 3,957 ಕೋಟಿ ಕೂಲಿ ನೀಡಿಕೆ
- 8.8 ಲಕ್ಷ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಕೆಲಸ
- ಮಹಿಳಾ ಸ್ವಾವಲಂಬನೆಗೆ 6.97 ಕೋಟಿ ಮಾನವ ದಿನಗಳ ಕೆಲಸ
- 22,441 ದಿವ್ಯಾಂಗರಿಗೆ ಕೈ ತುಂಬಾ ಕೆಲಸ
- 4.84 ಲಕ್ಷ ಮಳೆ ನೀರು ಕೊಯ್ಲು ಕಾಮಗಾರಿಗಳು
- 12 ಸಾವಿರ ಎಕರೆಯಲ್ಲಿ ರೇಷ್ಮೆ ಬೆಳೆ ವಿಸ್ತರಣೆ
- 53 ಸಾವಿರ ರೈತರಿಗೆ 62,450 ಎಕರೆಯಲ್ಲಿ ತೋಟಗಾರಿಕೆ ಮಾಡಲು ₹ 346 ಕೋಟಿ ನೆರವು
- 41,739 ಜಾನುವಾರು ಶೆಡ್ ಗಳ ನಿರ್ಮಾಣ

ಕೆಲಸಕ್ಕಾಗಿ / ಕಾಮಗಾರಿಗಾಗಿ ಉಚಿತ ಸಹಾಯವಾಣಿ
1800-4258-666

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

RDPRKarnataka | MgnregsK | MgnregsKar

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ

19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಟೂರ್ನಿ: ಸೆಮಿಫೈನಲ್ ಇಂದು

ಭಾರತಕ್ಕೆ ಆಸ್ಟ್ರೇಲಿಯಾ ಸವಾಲು

ಯಶ್ ಧುಳ್

ಕೂಲಿಡ್ಜ್, ಆ್ಯಂಟಿಗಾ (ಪಿಟಿಐ): ಯಶ್ ಧುಳ್ ನಾಯಕತ್ವದ ಭಾರತ ಯುವಪಡೆಯು 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್ ಜಯದ ಕನಸು ಕಾಣುತ್ತಿದೆ.

ಈ ಹಾದಿಯಲ್ಲಿ ಬುಧವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಕೋವಿಡ್‌ನಿಂದ ಚೇತರಿಸಿಕೊಂಡ ನಾಯಕ ಯಶ್ ಮತ್ತು ಇನ್ನುಳಿದ ನಾಲ್ವರು ಆಟಗಾರರು ಕ್ವಾರ್ಟರ್‌ಫೈನಲ್‌ನಲ್ಲಿ ತಂಡಕ್ಕೆ ಮರಳಿದ್ದರು. ಆ ಪಂದ್ಯದಲ್ಲಿ ಬಾಂಗ್ಲಾದೇಶ ತಂಡದ ಎದುರು ಜಯಿಸಿತ್ತು.

ನಾಲ್ಕು ಬಾರಿಯ ಚಾಂಪಿಯನ್ ಭಾರತ ತಂಡವು ಈಗ ಮತ್ತೊಮ್ಮೆ ಪ್ರಶಸ್ತಿ ಸಂಭ್ರಮ ಆಚರಿಸುವತ್ತ ಚಿತ್ತ ನೆಟ್ಟಿದೆ. ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಆಸ್ಟ್ರೇಲಿಯಾವನ್ನು ಯಶ್ ತಂಡವು ಮಣಿಸಿತ್ತು. ಇದರಿಂದಾಗಿ ಆತ್ಮವಿಶ್ವಾಸ ಹೆಚ್ಚಿದೆ. ತಂಡದ ಇನ್ನೊಬ್ಬ ಆಟಗಾರ ನಿಶಾಂತ್ ಸಿಂಧು ಕೂಡ ಕೋವಿಡ್‌ನಿಂದ ಚೇತರಿಸಿಕೊಂಡು ಮರಳಿದ್ದಾರೆ. ಇದರಿಂದಾಗಿ ತಂಡದ ಬಲ ಹೆಚ್ಚಿದೆ.

ಬ್ಯಾಟರ್ ಹರ್ನೂರ್ ಸಿಂಗ್, ಅಂಗಕ್ರಿಷ್ ರಘುವಂಶಿ ಮತ್ತು ರಾಜ್ ಬಾವಾ ಅವರು ಅಮೋಘ ಲಯದಲ್ಲಿದ್ದಾರೆ. ಟೂರ್ನಿಯ ಮೊದಲ ಪಂದ್ಯದಲ್ಲಿ ಯಶ್ ಧುಳ್ ಕೂಡ ಭರ್ಜರಿ ಅರ್ಧಶತಕ ಹೊಡೆದಿದ್ದರು. ಬೌಲಿಂಗ್‌ನಲ್ಲಿ ಎಡಗೈ ಸ್ಪಿನ್ನರ್ ರವಿಕುಮಾರ್, ವೇಗಿ ರಾಜವರ್ಧನ್ ಹಂಗರಗೇಕರ್, ಸ್ಪಿನ್ನರ್ ವಿಕಿ ಓಸ್ವಾಲ್ ಮತ್ತು ಕುಶಾಲ್ ತಾಂಬೆ ಕೂಡ ಪಂದ್ಯ ಜಯಿಸಿಕೊಡಬಲ್ಲ ಸಮರ್ಥರಾಗಿದ್ದಾರೆ.

ಆಸ್ಟ್ರೇಲಿಯಾ ತಂಡದಲ್ಲಿರುವ 17 ವರ್ಷದ ಟೀಗ್ ವೈಲಿ ಟೂರ್ನಿಯುದ್ದಕ್ಕೂ ಉತ್ತಮವಾಗಿ ಆಡಿ ಗಮನ ಸೆಳೆದಿದ್ದಾರೆ. ಬೌಲರ್ ಟಾಮ್ ವೈಟ್ನಿ ಮತ್ತು ವಿಲಿಯಮ್ ಸಾಲ್ಜ್‌ಮನ್ ಕೂಡ ಅಮೋಘ ಲಯದಲ್ಲಿದ್ದಾರೆ.

ಭಾರತದ ಬ್ಯಾಟಿಂಗ್‌ಗೆ ಸವಾಲೊಡ್ಡಬಲ್ಲ ಸಮರ್ಥರಾಗಿದ್ದಾರೆ.

ತಂಡಗಳು: ಭಾರತ: ಯಶ್ ಧುಳ (ನಾಯಕ), ಅಂಗಕ್ರಿಷ್ ರಘುವಂಶಿ, ಹರ್ನೂರ್ ಸಿಂಗ್, ರಾಜ್ ಬಾವಾ, ಕುಶಾಲ್ ತಾಂಬೆ, ದಿನೇಶ್ ಬಾನ, ನಿಶಾಂತ್ ಸಿಂಧು, ವಿಕಿ ಓಸ್ವಾಲ್, ರಾಜವರ್ಧನ ಹಂಗರಗೇಕರ್, ವಾಸು ವತ್ಸ, ರವಿಕುಮಾರ್

ಆಸ್ಟ್ರೇಲಿಯಾ: ಕೂಪರ್ ಕೊನೊಲಿ (ನಾಯಕ), ಕ್ಯಾಂಪ್‌ಬೆಲ್ ಕೆಲ್ಲಾವೇ, ಟೀಗ್ ವೈಲಿ, ಏಡನ್ ಶಹಿಲ್, ಕೊರಿ ಮಿಲ್ಲರ್, ಜ್ಯಾಕ್ ಸಿನ್‌ಫೀಲ್ಡ್, ತೊಬಿಯಾಸ್ ಸ್ನೆಲ್, ವಿಲಿಯಮ್ ಸಾಲ್ಜಮನ್, ಜ್ಯಾಕ್ ನಿಸ್ಬೆಟ್, ಲಚ್ಲಾನ್ ಶಾ, ಟಾಮ್ ವೈಟ್ನಿ.

ಪಂದ್ಯ ಆರಂಭ: ಸಂಜೆ 6.30

ಚಳಿಗಾಲದ ಒಲಿಂಪಿಕ್ಸ್‌ಗೆ ಆರಿಫ್ ನೇತೃತ್ವದ ಭಾರತ ತಂಡ

ಆರಿಫ್ ಖಾನ್– ಎಎಫ್‌ಪಿ ಚಿತ್ರ

ನವದೆಹಲಿ (ಪಿಟಿಐ): ಈ ಬಾರಿಯ ಚಳಿಗಾಲದ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಲಿರುವ ಭಾರತದ ಏಕೈಕ ಅಥ್ಲೀಟ್, ಸ್ಕೀಯಿಂಗ್ ಪಟು ಆರಿಫ್ ಖಾನ್ ನೇತೃತ್ವದ ಭಾರತ ತಂಡವು ಚೀನಾದ ಬೀಜಿಂಗ್‌ಗೆ ಸೋಮವಾರ ರಾತ್ರಿ ಪ್ರಯಾಣ ಬೆಳೆಸಿತು.

ಆರಿಫ್ ಖಾನ್ ಅವರೊಂದಿಗೆ ಚೆಫ್ ಡಿ ಮಿಶನ್ ಹರ್ಜಿಂದರ್ ಸಿಂಗ್ ಮತ್ತು ನೆರವು ಸಿಬ್ಬಂದಿ ಒಲಿಂಪಿಕ್ಸ್ ನಡೆಯಲಿರುವ ಚೀನಾದ ರಾಜಧಾನಿಗೆ ತೆರಳಿದರು. ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಅಧ್ಯಕ್ಷ ನರಿಂದರ್ ಬಾತ್ರಾ ತಂಡಕ್ಕೆ ಶುಭ ಹಾರೈಸಿದರು. ಶುಕ್ರವಾರದಿಂದ ಕ್ರೀಡಾಕೂಟ ಆರಂಭವಾಗಲಿದೆ.

ಎರಡು ವಿಭಾಗಗಳಲ್ಲಿ ಸ್ಪರ್ಧಿಸಲಿರುವ ಆರಿಫ್ ಖಾನ್ ಅಗ್ರ 30ರೊಳಗೆ ಸ್ಥಾನ ಗಳಿಸುವ ಗುರಿ ಇಟ್ಟುಕೊಂಡಿದ್ದಾರೆ. ಫೆಬ್ರುವರಿ 20ರಂದು ಒಲಿಂಪಿಕ್ಸ್ ಮುಕ್ತಾಯಗೊಳ್ಳಲಿದ್ದು, 19ರಂದು ಭಾರತ ತಂಡವು ತವರಿಗೆ ಮರಳಲಿದೆ.

ಜಮ್ಮು ಮತ್ತು ಕಾಶ್ಮೀರದ ಗುಲ್ಮಾರ್ಗ್‌ನ ಆರಿಫ್, ಬೀಜಿಂಗ್‌ನಲ್ಲಿ ಸ್ಲಾಲೋಮ್ ಮತ್ತು ಜೈಂಟ್ ಸ್ಲಾಲೋಮ್ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಈ ಸ್ಪರ್ಧೆಗಳು ಫೆಬ್ರುವರಿ 13 ಮತ್ತು 16ರಂದು ನಡೆಯಲಿವೆ.

31 ವರ್ಷದ ಆರಿಫ್, ಈ ಹಿಂದೆ ಸಪ್ಪೊರೊದಲ್ಲಿ ನಡೆದ 2017ರ ಏಷ್ಯನ್ ಚಳಿಗಾಲದ ಗೇಮ್ಸ್‌ನಲ್ಲಿ ಸ್ಪರ್ಧಿಸಿದ್ದರು.

ಕಳೆದ ಡಿಸೆಂಬರ್‌ನಲ್ಲಿ ಐಒಎ ಚಳಿಗಾಲದ ಒಲಿಂಪಿಕ್ಸ್‌ಗಾಗಿ ತಂಡದ ಚೆಫ್ ಡಿ ಮಿಷನ್ ಆಗಿ ಭಾರತ ಐಸ್ ಹಾಕಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹರ್ಜಿಂದರ್ ಅವರನ್ನು ನೇಮಿಸಿತ್ತು.

ವಿಶ್ವ ಈಜು ಮುಂದಕ್ಕೆ

ಪ್ಯಾರಿಸ್ (ಎಎಫ್‌ಪಿ): ಜಪಾನ್‌ನ ಫುಕುವೊಕಾ ನಗರದಲ್ಲಿ ಮೇನಲ್ಲಿ ನಿಗದಿಯಾಗಿದ್ದ ವಿಶ್ವ ಈಜು ಚಾಂಪಿಯನ್‌ಷಿಪ್‌ಅನ್ನು ಕೋವಿಡ್–19 ಅಪಾಯದ ಕಾರಣ 2023ರ ಜುಲೈಗೆ ಮುಂದೂಡಲಾಗಿದೆ. ಟೂರ್ನಿಯ ಆಯೋಜಕರು ಮಂಗಳವಾರ ಈ ವಿಷಯ ತಿಳಿಸಿದ್ದಾರೆ.

ಈ ಚಾಂಪಿಯನ್‌ಷಿಪ್ ಬಳಿಕ ಕತಾರ್ ರಾಜಧಾನಿ ದೋಹಾದಲ್ಲಿ ನಿಗದಿಯಾಗಿದ್ದ ವಿಶ್ವ ಚಾಂಪಿಯನ್‌ಷಿಪ್‌ಗಳು ವಿಳಂಬವಾಗಲಿವೆ